ಕರ್ನಾಟಕ ಜಾನಪದ ಅಕಾಡೆಮಿ

# ಲೋಕ ಜಾನಪದ

ಕರ್ನಾಟಕ ಜಾನಪದ ಅಕಾಡೆಮಿ ತ್ರೈಮಾಸಿಕ ಪತ್ರಿಕೆ
ಏಪ್ರಿಲ್-ಜೂನ್ ೨೦೧೫ - ಸಂಪುಟ ೦೨ : ಸಂಚಿಕೆ ೦೨



- ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಜಾನಪದ
- ತತ್ವತರು
- ಆಯಗಾರರಾಗಿ ಮಾದಿಗರು
- ಬಾಲಬಸಪ್ಪಗಳ ಸಂಪ್ರದಾಯ
- ಸೂರ್ಯವಾದ್ಯ ಮತ್ತು ಚಂದ್ರವಾದ್ಯ



# ಲೋಕ ಜಾನಪದ

ಕರ್ನಾಟಕ ಜಾನಪದ ಅಕಾಡೆಮಿ ತ್ರೈಮಾಸಿಕ

ಏಪ್ರಿಲ್-ಜೂನ್, ೨೦೧೫ - ಸಂಪುಟ ೨ ಸಂಚಿಕೆ ೨.

ಪ್ರಧಾನ ಸಂಪಾದಕರು

**ಪಿಚ್ಚಳ್ಳಿ ಶ್ರೀನಿವಾಸ**

ಸಂಪಾದಕರು

**ಲಕ್ಷ್ಮೀಪತಿ ಕೋಲಾರ**

ವಿನ್ಯಾಸ

**ಮಂಜು**

ಪ್ರಕಾಶಕರು

**ಸಿದ್ರಾಮ ಸಿಂಧೆ,** ರಿಜಿಸ್ಟ್ರಾರ್ (ಪ್ರ)

ಕರ್ನಾಟಕ ಜಾನಪದ ಅಕಾಡೆಮಿ

ಕನ್ನಡಭವನ, ೨ನೇ ಮಹಡಿ, ಜೆಸಿ ರಸ್ತೆ, ಬೆಂಗಳೂರು-೦೨

# ಲೋಕ ಜಾನಪದ :

ಕರ್ನಾಟಕ ಜಾನಪದ ಅಕಾಡೆಮಿ ತ್ರೈಮಾಸಿಕ ಪತ್ರಿಕೆ

ಏಪ್ರಿಲ್-ಜೂನ್, ೨೦೧೫ - ಸಂಪುಟ ೨ ಸಂಚಿಕೆ ೨.

| | |
|---|---|
| ಪ್ರಧಾನ ಸಂಪಾದಕರು | ಪಿಚ್ಚಳ್ಳಿ ಶ್ರೀನಿವಾಸ |
| ಸಂಪಾದಕರು | ಲಕ್ಷ್ಮೀಪತಿ ಕೋಲಾರ |
| ಪ್ರಕಾಶಕರು | ಸಿದ್ರಾಮ ಸಿಂಧೆ, ರಿಜಿಸ್ಟ್ರಾರ್ (ಪ್ರ) ಕರ್ನಾಟಕ ಜಾನಪದ ಅಕಾಡೆಮಿ |
| ಪುಟಗಳು | |
| ಪ್ರಕಟಣೆ ವರ್ಷ | ೨೦೧೫ |
| ಬಳಸಿದ ಕಾಗದ | ಎನ್.ಎಸ್.ಮ್ಯಾಪ್ಲಿತೊ ೭೦ ಜಿಎಸ್ಎಂ |
| ಹಕ್ಕುಗಳು | ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ |
| ಮುಖಪುಟ | ಮಂಜು |

ಮುದ್ರಣ

ಕ್ರಿಯಾ ಪ್ರಕಾಶನ



## ಕರ್ನಾಟಕ ಜಾನಪದ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೦೨

ಅಧ್ಯಕ್ಷರು

ಪಿಚ್ಚಳ್ಳಿ ಶ್ರೀನಿವಾಸ

: ಸದಸ್ಯರು :

| | |
|---|---|
| ಡಾ. ಕೆ.ಎಂ.ಮೇತ್ರಿ | ಶ್ರೀ ಬಸವೇಗೌಡ |
| ಶ್ರೀಮತಿ ರಾಧಾಬಾಯಿ ಮಾರುತಿ ಮಾದಾರ | ಡಾ. ಆನಂದಪ್ಪ ಬಿ.ಹೆಚ್. |
| ಶ್ರೀ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ | ಶ್ರೀ ಶಹಜಹಾನ್ ಮುದಕವಿ |
| ಮೈಸೂರು ಕಂಸಾಳೆ ಕುಮಾರಸ್ವಾಮಿ | ಶ್ರೀ ಶರಣಪ್ಪ ಗೋನಾಳ |
| ಶ್ರೀ ಮಡಿವಾಳಪ್ಪ ಮ.ಕರಡಿ | ಶ್ರೀ ಜಿ.ಆರ್.ಚಂದ್ರಶೇಖರ್ |
| ಶ್ರೀ ಎಸ್.ಕೆ.ಬಿರಾದರ | ಶ್ರೀ ಕೆ.ರಾಮು |
| ಶ್ರೀಮತಿ ಜುನ್ನೈನಾ | ಶ್ರೀಮತಿ ಶ್ವೇತಾ ಎಲ್.ಎಂ. |
| ಶ್ರೀಮತಿ ಜೂಲಿಯಾನ ಫೆದ್ರು ಫರ್ನಾಂಡಿಸ್ | ಕುಮಾರಿ ಶ್ರುತಿ.ಎಚ್. |



ಮುಖಪುಟ ಚಿತ್ರ ಕೃಪೆ : ಡಾ.ಕೆ.ಎಂ.ಮೇತ್ರಿ

ಒಳಪುಟ ಚಿತ್ರ ಕೃಪೆ : ಅಂತರ್ಜಾಲ


ಇಲ್ಲಿನ ಲೇಖನಗಳಲ್ಲಿನ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರು

# ಲೋಕ ಜಾನಪದ

ಕರ್ನಾಟಕ ಜಾನಪದ ಅಕಾಡೆಮಿ ತ್ರೈಮಾಸಿಕ ಪತ್ರಿಕೆ
ಏಪ್ರಿಲ್-ಜೂನ್, ೨೦೧೫ - ಸಂಪುಟ ೨ ಸಂಚಿಕೆ ೨.



ಸುಕ್ರಿ ಬೊಮ್ಮಗೌಡ ಎಂಬ ತುಂಬು ಹೊಳೆಗೆ ಅಭಿನಂದನೆ / ೦೭
ಡಾ.ಹಿ.ಚಿ.ಬೋರಲಿಂಗಯ್ಯ




ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಜಾನಪದ / ೨೨
ಎಚ್.ದಂಡಪ್ಪ



ನೀಡುವವನೇ ಬೇಡುವವನಾಗಿದ್ದ ಕೋನಿಗ ಹನುಮಪ್ಪ / ೨೮
ಆರ್. ವಿಜಯರಾಘವನ್



ಕರಾವಳಿ ಕರ್ನಾಟಕದ ಜನಪದ ಕಲೆಗಳು / ೩೨
ಪ್ರೊ.ಎಸ್.ಎ.ಕೃಷ್ಣಯ್ಯ



ಹಾಡು ಹಾಡುತ್ತಲೇ ಕಾಲವಶರಾದ ಕಲಾವಿದ ನೀಲಗಾರ ಮೋಳೆ
ರಾಜಶೆಟ್ಟರ ರೋಚಕ ಕತೆ / ೫೭
ಡಾ.ವೆಂಕಟೇಶ ಇಂದ್ವಾಡಿ





ಮುಖ್ಯಾಮುಖ್ಯತೆಯನ್ನು ದಾಟಿದ ರೂಪಾಂತರದ ನೇಯ್ಗೆ/ ೬೨
ಡಾ. ಜಯಪ್ರಕಾಶ್ ಶೆಟ್ಟಿ ಹೆಚ್

ಮುಕುಟವಾದ್ಯಗಳಾದ ಸೂರ್ಯವಾದ್ಯ ಮತ್ತು ಚಂದ್ರ ವಾದ್ಯ / ೬೮
ಪ್ರೊ.ಎಸ್.ಎ.ಕೃಷ್ಣಯ್ಯ



ಆದಿಜಾಂಬವ ಮಾತಂಗ ಪರಂಪರೆಯಲ್ಲಿ ವರ್ಣಸಂಕರ ಹಾಗೂ ಅಂತರ್ಜಾತಿ ವಿವಾಹಗಳು / ೭೧
ಡಾ.ವಡ್ಡಗೆರೆ ನಾಗರಾಜಯ್ಯ



ಬಾಲ ಬಸಪ್ಪಗಳ ಸಂಪ್ರದಾಯ ವಚನ ಪರಂಪರೆಯ ವಿಭಿನ್ನ ದಾರಿಗಳು / ೮೮
ಡಾ.ವೆಂಕಟೇಶ ಇಂದ್ವಾಡಿ



ತತ್ವತರು / ೯೨
ಸಂ: ಎಸ್ ನಟರಾಜ ಬೂದಾಳು /ಉಜ್ಜಜ್ಜಿ ರಾಜಣ್ಣ



## ಧನ್ಯವಾದ


ಪ್ರೀತಿಯ ಜಾನಪದ ಮನಸ್ಸುಗಳೇ...

ಬಹುಶಃ ಇದು ನನ್ನ ಅವಧಿಯ ಕೊನೆಯ 'ಲೋಕ ಜಾನಪದ' ಸಂಚಿಕೆ. ಬಹುಶಃ ಭಾರತದಲ್ಲೇ ಮೊದಲ ಬಾರಿಗೆ ಪದ್ಮಶ್ರೀ ಪ್ರಶಸ್ತಿ ಪಡೆದ ನಮ್ಮ ಬುಡಕಟ್ಟು ಮಹಿಳೆ ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರ ಗೌರವಾರ್ಥ ವಿಶೇಷ ಸಂಚಿಕೆಯೂ ಹೌದು. ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರಿಗಿರುವ ಜಾನಪದ ನಂಟಿನ ಕುರಿತ ಅಪರೂಪದ ಲೇಖನವೂ ಈ ಸಂಚಿಕೆಯ ವಿಶೇಷತೆಗಳಲ್ಲೊಂದು.

'ಲೋಕ ಜಾನಪದ' ಪತ್ರಿಕೆಯನ್ನು ಹೊಸ ವಿನ್ಯಾಸ ಹಾಗೂ ಭಿನ್ನ ತಾತ್ವಿಕ ಹಿನ್ನೆಲೆಯಲ್ಲಿ ರೂಪಿಸಿದ ಗೆಳೆಯ ಲಕ್ಷ್ಮೀಪತಿ ಕೋಲಾರ ಹಾಗೂ ಮುದ್ರಿಸಿದ ಕ್ರಿಯಾ ಪ್ರಕಾಶನದ ಚಂದ್ರು ಅವರಿಗೆ ಧನ್ಯವಾದಗಳು. ಸಹಕರಿಸಿದ ಲೇಖಕ ಮಿತ್ರರಿಗೂ ವಂದನೆಗಳು.

ಈ ಸಂಚಿಕೆಯೂ ನಿಮಗೆ ಇಷ್ಟವಾಗಬಲ್ಲದೆಂಬ ನಂಬಿಕೆ ನಮ್ಮದು.

ಪಿಚ್ಚಳ್ಳಿ ಶ್ರೀನಿವಾಸ್
ಅಧ್ಯಕ್ಷರು





# ಸುಕ್ರಿ ಬೊಮ್ಮಗೌಡ ಎಂಬ ತುಂಬು ಹೊಳೆಗೆ ಅಭಿನಂದನೆ

ಡಾ.ಹಿ.ಚಿ.ಬೋರಲಿಂಗಯ್ಯ

ಅಂದು ಉತ್ತರ ಕನ್ನಡ ಜಿಲ್ಲೆ ಅಂಕೋಲದಲ್ಲಿ ಎಲ್ಲಿಲ್ಲದ ಸಂಭ್ರಮ ಮನೆಮಾಡಿತ್ತು. ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಕರ್ನಾಟಕದ ಬುಡಕಟ್ಟು ಪ್ರತಿಭೆಯೊಂದಕ್ಕೆ ರಾಷ್ಟ್ರದ ಉನ್ನತ ಗೌರವವೆನಿಸಿದ ಪದ್ಮಶ್ರೀ ಪುರಸ್ಕಾರ ಲಭಿಸಿತು. ನಮ್ಮ ಜ್ಞಾನ ಪರಂಪರೆಯ ಅಖಂಡ ಅನುಭವದ ಪ್ರತೀಕದಂತಿರುವ ಅಂಕೋಲಾ ತಾಲ್ಲೂಕಿನ ಬಡಗೇರಿಯ ಶ್ರೀಮತಿ ಸುಕ್ರಿಬೊಮ್ಮುಗೌಡ ಅವರು ಪ್ರಪ್ರಥಮ ಬಾರಿಗೆ ಈ ಪುರಸ್ಕಾರ ಪಡೆದಿದ್ದರು. ನಿಜ ಅರ್ಥದಲ್ಲಿ "ಬಡಿಗೇರಿಯೇ" ಆದ ಆ ಬುಡುಕಟ್ಟಿನ ಕೊಪ್ಪದಲ್ಲಿ ಬಾಳಿಬದುಕಿದ ಸುಕ್ರಿ " ನೀವು ನಮ್ಮನ್ನು ಇಟ್ಟಲ್ಲಿಯೇ ಇಟ್ಟಿರಬಹುದು ಆದರೆ ನಮ್ಮ ಪರಂಪರೆಯ ಶ್ರೀಮಂತಿಕೆಗೆ ನೀವಾದರೂ ಸಮವಲ್ಲ' ಎಂದು ಅಣಕಿಸುವಂತೆ ತನ್ನ ಮತ್ತು ಹಾಲಕ್ಕಿ ಸಮುದಾಯದ ಸಾಂಸ್ಕೃತಿಕ ತುಂಬು ಹೊಳೆಯನ್ನು ಬತ್ತದಂತೆ ಕಾಪಾಡಿಕೊಂಡು ಬಂದಿದ್ದರು. ಕೇವಲ ಹಾಡು ಕಲೆಗೆ ಸೀಮಿತರಾಗದೆ ಸಮಾಜದ ಅನಿಷ್ಟಗಳನ್ನು ತೊಡೆಯುವ ಅಂಕುಡೊಂಕುಗಳನ್ನು ತಿದ್ದುವ ಸಾಮಾಜಿಕ ಹೋರಾಟಕ್ಕೂ ಕೈಜೋಡಿಸಿದರು. ಪದ್ಮಶ್ರೀ ಪುರಸ್ಕೃತ ಇದೀಗ 82ರ ಹರೆಯದ ಈ ಸುಕ್ರಜ್ಜಿಗೆ ಜಾನಪದ ಅಕಾಡೆಮಿಯಿಂದ ಅಭಿನಂದನೆ, ವಿಚಾರ ಸಂಕಿರಣ, ಸಂವಾದ ಹಾಗೂ ಕಲಾ ಪ್ರದರ್ಶನಗಳ ಅರ್ಥ ಪೂರ್ಣ ಕಾರ್ಯಕ್ರಮವೊಂದು ದಿನಾಂಕ: 06.02.2017ರಂದು ಏರ್ಪಾಟುಗೊಂಡಿತ್ತು. ನಾನೀಗಾಗಲೇ ಪ್ರಸ್ತಾಪಿಸಿದಂತೆ ಕರ್ನಾಟಕದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಈ ಗೌರವಕ್ಕೆ ಭಾಜನರಾದ ಸುಕ್ರಿಯನ್ನು ಅವರ ನೆಲದಲ್ಲಿಯೇ ಸನ್ಮಾನಿಸುವ ಹುಮ್ಮಸ್ಸಿನಿಂದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಅವರು ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದ್ದರು. ಜಾನಪದ ಕಲಾವಿದರ ಬಗ್ಗೆ ಅಪಾರ ಪ್ರೀತಿ ಮತ್ತು ಗೌರವವನ್ನು ಇಟ್ಟುಕೊಂಡು ಅವರ ಪರವಾದ ಕೆಲಸವನ್ನು ನಿಷ್ಕಲ್ಮಷವಾಗಿ ಮಾಡುತ್ತಿರುವ

ನಮ್ಮ ಪಿಚ್ಚಳ್ಳಿ ಶ್ರೀನಿವಾಸ ಅವರು ಸುಕ್ರಿಯ ಪದ್ಮಶ್ರೀ ಪ್ರಶಸ್ತಿಗೆ ಸಹಜವಾಗಿಯೇ ಪುಲಕಗೊಂಡಿದ್ದರು. ಅವರ ಪ್ರೀತಿಯೆಂತೋ ಅಂತೆಯೇ ಆ ಸಮಾರಂಭವು ಅಪೂರ್ವ ಸ್ವರೂಪದಲ್ಲಿ ನೆರವೇರಿತು. ಅಂಕೋಲೆಯ ಸ್ವಾತಂತ್ರ್ಯ ಸಂಗ್ರಾಮದ ನೆನಪಿನ ಭವನದಲ್ಲಿ ನಡೆದ ಆ ಹೃದಯ ಸ್ಪರ್ಶಿ ಕಾರ್ಯಕ್ರಮದ ವಿವರ ನೀಡುವ ಮೊದಲು ಉತ್ತರ ಕನ್ನಡ ಜಿಲ್ಲೆಯ ಸೊಗಸನ್ನು, ಅಲ್ಲಿಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು, ಹಾಲಕ್ಕಿ ಸಮುದಾಯದ ಮಹತ್ವವನ್ನು, ಆ ಸಮುದಾಯದ ಅನುಭವ ಪರಂಪರೆಯಲ್ಲಿ ಮಿಂದು ತನ್ನನ್ನು ತಾನೇ ಜಗತ್ತಿಗೆ ಅರ್ಪಿಸಿಕೊಂಡ ಸುಕ್ರಿಯ ಜೀವನ ಗಾಥೆಯನ್ನು ನಿಮಗೆ ವಿವರಿಸಲೇ ಬೇಕು.

1986ರಲ್ಲಿ ಪ್ರಥಮ ಬಾರಿಗೆ ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಕೊಪ್ಪಗಳಿಗೆ ಭೇಟಿಕೊಟ್ಟಾಗ ಬರೆದ ಪ್ರವಾಸ ಕಥನದ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ. ಹೆಚ್ಚಿನ ವಿವರಗಳಿಗೆ ನನ್ನ "ಗಿರಿಜನ ನಾಡಿಗೆ ಪಯಣ" ಪುಸ್ತಕ ನೋಡಿ.

ಇಂಚು ಇಂಚಿಗೂ ರೂಪ ಬದಲಿಸಿ ಚಲಿಸಬಲ್ಲ ಶಕ್ತಿ ಇರುವುದು ನೀರಿಗೆ ಮಾತ್ರ. ಜಗತ್ತಿನ ಮತ್ತಾವ ಚೇತನಕ್ಕೂ ಇಷ್ಟು ಅಗಾಧ ಶಕ್ತಿ ಇಲ್ಲ. ಶಾಂತ ಸರೋವರ, ಉಕ್ಕಿ ಹರಿಯುವ ಪ್ರವಾಹ, ಭೋರ್ಗರೆವ ಸಾಗರ, ಈ ಎಲ್ಲ ಅಮುಖಗಳ ನಡುವೆ ನೀರಿಗೆ ನೂರಾರು ರೂಪಗಳಿವೆ. ಶಿವಮೊಗ್ಗದ ಅಂಬು ತೀರ್ಥದಲ್ಲಿ ಹುಟ್ಟಿ ಉತ್ತರ ಕನ್ನಡದ ಹೊನ್ನಾವರದಲ್ಲಿ ಸಾಗರ ಸೇರುವ ನಮ್ಮ ಪ್ರಿಯ ಶರಾವತಿ ಈ ಎಲ್ಲಾ ರೂಪಗಳನ್ನು ತಾಳುತ್ತಾಳೆ. ಕೇವಲ 128 ಕಿ.ಮಿ. ಉದ್ದದ ನದಿ ಇದಾದರೂ ಇದು ಪಡೆದುಕೊಳ್ಳುವ ನೂರೆಂಟು ರೂಪಗಳು ನಮ್ಮನ್ನು ದಂಗುಬಡಿಸುತ್ತದೆ. ಲಿಂಗನಮಕ್ಕಿಯಲ್ಲಿ ಉಂಗುರದ ಅಲೆಯ ಸರೋವರವಾಗಿ ಜೋಗದಲ್ಲಿ ದುಮ್ಮಿಕ್ಕುವ ಮಹಾನ್ ಜಲಪಾತವಾಗಿ, ಸಹ್ಯಾದ್ರಿಯ ಪ್ರಪಾತಗಳಲ್ಲಿ ಅಗೋಚರ ಗುಪ್ತಗಾಮಿನಿಯಾಗಿ, ಗೇರುಸೊಪ್ಪೆಯಿಂದ ಹೊನ್ನಾವರದವರೆಗೆ ವಿಶಾಲ ಜಲಮಾರ್ಗವಾಗಿ, ಈ ಜಲಮಾರ್ಗದ ಉದ್ದಗಲಕ್ಕೂ ಹಲವು- ಹತ್ತು ನಡುಗಡ್ಡೆಗಳನ್ನು ಹೊತ್ತು ನಮ್ಮನ್ನು ವಿಸ್ಮಯಗೊಳಿಸುವ ಈ ಗಂಗೆ ಸಹಸ್ರ ರೂಪಿಣಿ, ಹೆಣ್ಣಿನಂತೆ ಪ್ರೀತಿಯ ಆಸರೆ ನೀಡುವ ಸದಾ ನವನವೋನ್ಮೇಷ ಶಾಲಿನಿ! ಈ ಪ್ರಿಯೆ, ಶರಾವತಿಯ ಬೆನ್ನೇರಿ ಹೊರಡುವುದೆಂದರೆ ಅದೊಂದು ಉಲ್ಲಸಿತ ಘಟನೆ, ಅವಿಸ್ಮರಣೀಯ ಅನುಭವ.

ಜೋಗದಲ್ಲಿ ಏಕಾಏಕಿ ಹಾರಿ ಪಾತಾಳ ಮುಟ್ಟುವ ಶರಾವತಿ ಅನಂತರ ಹಲವು ತಿರುವುಗಳಲ್ಲಿ ಪ್ರವಹಿಸುತ್ತಾ ಗೇರುಸೊಪ್ಪೆಗೆ ಬಂದು ಕರಾವಳಿಯ ನೆಲ ಮುಟ್ಟುತ್ತಾಳೆ. ಗೇರುಸೊಪ್ಪೆ ಕರಾವಳಿಗೂ ಸಹ್ಯಾದ್ರಿಗೂ ನಡುವೆ ಇರುವ ಸುಂದರಹಳ್ಳಿ. ಈ ವಿಶಾಲ ಕಣಿವೆಯಲ್ಲಿ ಸಮುದ್ರದ ಹಿನ್ನೀರಿನ ಜೊತೆ ಸೇರಿಕೊಂಡು ವೈಶಾಲ್ಯ ಪಡೆದು ಏಕಾ ಏಕಿ ತನ್ನ ಸ್ವರೂಪವನ್ನೇ ಬದಲಿಸಿ ಗಂಗಾ ನದಿಗೆ ಸಮಾನವಾಗುವ ಶರಾವತಿ ಇಲ್ಲಿಂದ ಮುಂದಕ್ಕೆ ಗಜಗಂಭೀರೆ. ಗೇರುಸೊಪ್ಪೆಗೂ ಹೊನ್ನಾವರಕ್ಕೂ ನಲವತ್ತು ಕಿ.ಮೀ ಗಳ ಅಂತರ. ಇಷ್ಟು ಉದ್ದಕ್ಕೂ ತನ್ನ ದಂಡೆಯ ಹಲವು ಹಳ್ಳಿಗಳನ್ನು ಸಮೃದ್ಧಗೊಳಿಸುತ್ತಾ ಹರಡಿಕೊಂಡ ಇವಳ ವಿಫುಲ ಸೌಂದರ್ಯವನ್ನು ಅರಿಯಬೇಕಾದರೆ ದೋಣಿ ಏರಲೇಬೇಕು. ವಾಸ್ತವವಾಗಿ ಗೇರುಸೊಪ್ಪೆಯಿಂದ ಹೊನ್ನಾವರ ಅಂಥ ದೂರವಲ್ಲವಾದರೂ ಈ ನದಿಯ ಪಯಣ ಐದಾರು ಗಂಟೆಗಳನ್ನೇ ತೆಗೆದುಕೊಳ್ಳುತ್ತದೆ. ಗೇರುಸೊಪ್ಪೆಯಲ್ಲಿ 'ಲಾಂಚ್' (ದೊಡ್ಡ ಯಾಂತ್ರೀಕೃತ ದೋಣಿ) ಹತ್ತಬೇಕಾದರೆ ಬೆಳಗಿನ ಜಾವಕ್ಕೆ ಅಲ್ಲಿ ಹಾಜರಿರಬೇಕು. ಏಕೆಂದರೆ ಒಂದೇ ಲಾಂಚ್ ದಿನಕ್ಕೆ ಎರಡು ಬಾರಿ ಮಾತ್ರ ಈ ಜಲಮಾರ್ಗದಲ್ಲಿ ಪ್ರಯಾಣ ಮಾಡುತ್ತದೆ.

ಬೆಳಗಿನ ಜಾವಕ್ಕೇ ಎದ್ದು ಜೋಗ್ ಮಾರ್ಗವಾಗಿ ಗೋಕರ್ಣದ ಕಡೆ ಹೊರಟಿದ್ದ ಸರ್ಕಾರಿ ಬಸ್ ಹಿಡಿದು ಕಿಟಕಿಯ ಪಕ್ಕಕ್ಕೇ ಕುಳಿತ ನನಗೆ ಸಹ್ಯಾದ್ರಿಯ ಇಂಚು ಇಂಚನ್ನೂ ಮನಸ್ಸಿನ ಕ್ಯಾಮರದಲ್ಲಿ ಸೆರೆಹಿಡಿಯುವ ಆಸೆ. ಜೋಗದಲ್ಲಿ ಧುಮ್ಮಿಕ್ಕುವ ಮೊದಲು ರಸ್ತೆಗೆ ಅಡ್ಡವಾಗುವ ಶರಾವತಿಗೆ ಕಟ್ಟಲಾದ ಸೇತುವೆಯನ್ನು ದಾಟಿ, ಕಾಡನ್ನು ಸೀಳಿಕೊಂಡು ಬಸ್ ಹೊರಟಾಗ ಮಬ್ಬಿನ ತಂಪು ಹವೆ. ಸೋನೆ ಮಳೆಗೆ ಇಡೀ ರಾತ್ರಿ ಮೈ ಒಡ್ಡಿ ಜಡ್ಡು ಹಿಡಿದ ಕೋಟ್ಯಾಂತರ ಸಸ್ಯರಾಶಿ, ಪರ್ವತಗಳ ಬೆನ್ನನ್ನೇ ಗೀರಿ ಮಾಡಿದ ಚಿಕ್ಕ ರಸ್ತೆ ಹಲವು ತಿರುವುಗಳನ್ನು ಪಡೆದುಕೊಂಡು ಏರುತ್ತಾ, ಇಳಿಯುತ್ತಾ ಸಾಗುತ್ತದೆ. ಅಲ್ಲಲ್ಲಿ ದೂರಬೆಟ್ಟದ ಮುಡಿಯಿಂದ ಜಿಲ್ಲೆನ್ನುತ್ತಾ ಜಿನುಗುವ ಸಣ್ಣ ಪುಟ್ಟ ಜಲಧಾರೆಗಳು. ಹೀಗೆ ಸಾಗುತ್ತಿದ್ದಂತೆ ಟಾರ್ ರಸ್ತೆ ಬಿಟ್ಟು ಎಡ ಪಕ್ಕದ ಮಣ್ಣಿ ರಸ್ತೆಗೆ ಬಸ್ ಹೊರಳಿದಾಗ ಗೇರುಸೊಪ್ಪೆ ಹತ್ತಿರವಾಯಿತೆಂದು ಸೂಚನೆ. ಪುಟ್ಟ ಹೋಟೆಲ್‌ವೊಂದರಲ್ಲಿ 'ಸಿರ'( ಕೇಸರಿಬಾತ್) ತಿಂದು, ಟೀ ಕುಡಿದು ಶರಾವತಿಯ ದಂಡೆಯ ಕಡೆಗೆ ಹೊರಟ ನನಗೆ ಶರಾವತಿಯ ವಿಶಾಲತೆಯ ಕಲ್ಪನೆಯೇ ಇರಲಿಲ್ಲ. ಏಕೆಂದರೆ

ಲಿಂಗನಮಕ್ಕಿಯಲ್ಲಿ ಶರಾವತಿಯನ್ನು ಬಂಧಿಸಿ, ಅವಳ ನಿಟ್ಟುಸಿರಿನ ಇಷ್ಟೇ ನೀರನ್ನು ಬಿಟ್ಟಾಗ ಜೋಗದಲ್ಲಿ ಸೊರಗಿ ಸೊರಗಿ ಧುಮುಕುವ ಶರಾವತಿ ಇನ್ನೆಷ್ಟು ಮಾತ್ರ ವಿಶಾಲವಾಗಿದ್ದಾಳು ಎಂಬ ಕಲ್ಪನೆ ನನಗೆ. ಆದರೆ ಗೇರುಸೊಪ್ಪೆಯಿಂದ ಪಶ್ಚಿಮಕ್ಕೆ ಸ್ವಲ್ಪವೇ ಅಂತರದಲ್ಲಿ ಧುತ್ತೆಂದು ಎದುರಾದ ಶರಾವತಿ ನನ್ನಲ್ಲಿ ವಿಸ್ಮಯವನ್ನೇ ಹುಟ್ಟಿಸಿದಳು. ತುಂಬಿ ಹರಿಯುತ್ತಾ ಸಣ್ಣ ಪುಟ್ಟ ದೋಣಿಗಳನ್ನು ಒಡಲಲ್ಲಿ ಇಟ್ಟುಕೊಂಡು ತೇಲಾಡುತ್ತಿದ್ದ ಶರಾವತಿ ಹಸಿರಿನ ನಡುವೆ ಗಾಜಿನಂತೆ ಹೊಳೆಯುವ ಅಂಕುಡೊಂಕು ಸೀರೆಯನ್ನೇ ಹಾಸಿದ್ದಳು.

ಲಾಂಚ್ ಆಗಲೇ ತಯಾರಾಗಿ ನಿಂತಿತ್ತು. ಸಣ್ಣಪುಟ್ಟ ಚೀಲಗಳು, ತರಕಾರಿ ಇತ್ಯಾದಿ ಸರಕುಗಳೊಡನೆ ಲಾಂಚ್ ಹತ್ತಿ ಹೊರಟಿದ್ದ ಮಲೆನಾಡು ಮತ್ತು ಕರಾವಳಿ ಎರಡನ್ನೂ ಕಂಡ ಗೇರುಸೊಪ್ಪೆಯ ಜನ ಬೆಳಗಿನ ಜಾವಕ್ಕೇ ಎಲೆ ಅಡಿಕೆ ಜಗಿದು ತುಟಿಯನ್ನು ವರ್ಣಮಯ ಮಾಡಿಕೊಂಡಿದ್ದರು. ತುಳು, ಕೊಂಕಣಿ ಈ ಯಾವ ಭಾಷೆಯು ಬಾರದ ಅಚ್ಚ ಕನ್ನಡ ಪ್ರದೇಶದ ಆ ಜನ ಅವರದೇ ಆದ ವರಸೆಯಲ್ಲಿ ಎಲೆ ಅಡಿಕೆ ರಸ ಕೆಳಬೀಳದಂತೆ ಮುಖ ಮೇಲೆತ್ತಿ ಮಾತನ್ನಾಡುತ್ತಿದ್ದರು.

ನಮ್ಮ ದೋಣಿ ಮುಂಬರಿಯತೊಡಗಿದಂತೆ ಅಕ್ಕಪಕ್ಕದಲ್ಲಿ ಅಡಿಕೆ ತೆಂಗುಗಳ ತೂಗುವ ತೋಟಗಳು ಕೈಬೀಸಿ ಕರೆದವು. ನಮ್ಮ ಪಯಣ ನೇರವಾದುದಲ್ಲ, ಶರಾವತಿಯ ಬಳಕುಗಳನ್ನು ಅನುಸರಿಸಿ ಗುಡ್ಡಗಳನ್ನು ಸುತ್ತುತ್ತಾ ಹೋಗುವುದಷ್ಟೇ ಅಲ್ಲದೇ ಆಚೀಚೆ ದಡದಲ್ಲಿ ಸಿಗುವ ಗ್ರಾಮಗಳಿಗೂ ಭೇಟಿ. ಈ ಬದಿಯಲ್ಲಿ ಹತ್ತಿದ ಜನರನ್ನು ಆ ಬದಿಗೆ ಇಳಿಸುತ್ತಾ ಆ ದಂಡೆಯವರನ್ನು ಈ ದಂಡೆಗೆ ಬಿಡುತ್ತಾ ಸಾಗಿತ್ತು ನಮ್ಮ ಪಯಣ. ನೇರವಾಗಿ ಹೊನ್ನಾವರಕ್ಕೆ ದೋಣಿ ಹತ್ತುತ್ತಿದ್ದವರು ತೀರ ಕಡಿಮೆ. ಮಧ್ಯೆಮಧ್ಯೆ ಮೀನುಗಾರರ ದೋಣಿಗಳನ್ನು ನೀರು ಸೀಳಿಕೊಂಡು ಮುಂಬರಿಯುತ್ತಿದ್ದ ನಮ್ಮ ದೋಣಿಯ ಲೋಕವೇ ಬೇರೆ. ಅಲ್ಲಲ್ಲಿ ಹತ್ತುತ್ತಿದ್ದ ಸುಂದರ ಹೆಣ್ಣು ಮಕ್ಕಳು ಮುಗುಳ್ನಗೆ ಸೂಸಿ ನಮ್ಮ ಮನ ತುಂಬಿಕೊಳ್ಳುತ್ತಿದ್ದಂತೆ ಮತ್ತೊಂದು ದಡದಲ್ಲಿ ಇಳಿದುಬಿಡುತ್ತಿದ್ದರು, ಬಾಳೆಗೊನೆ ಅಡಿಕೆ ಹೊಂಬಾಳೆ, ತರಕಾರಿ ಹಾಗೂ ಮೀನು ಬುಟ್ಟಿಗಳನ್ನು ತುಂಬಿಕೊಂಡ ನಮ್ಮ ದೋಣಿ ವಿಚಿತ್ರವಾದ ಆದರೂ ಇಷ್ಟವಾಗುವ ವಾಸನೆಯನ್ನು ತುಂಬಿಕೊಂಡಿತ್ತು.

ಶರಾವತಿಯ ವಿಶೇಷವೆಂದರೆ ಒಂದಾಗಿ ಓಡುತ್ತಿದ್ದ ಹೊಳೆ ಇದ್ದಕ್ಕಿದ್ದಂತೆ ಎರಡು, ಮೂರಾಗಿ ಕೊನೆಗೆ ಲೆಕ್ಕವೇ ಸಿಗದಷ್ಟು ಕವಲಾಗಿ ಇಡೀ ಸಮುದ್ರವೋ ಎಂಬ ಭ್ರಮೆ ಹುಟ್ಟಿಸುವುದು. ಹೀಗೆ ಕವಲಾದಾಗ ನೋಡಬೇಕು. ನಡುವೆ ಸಿಗುವ ನಡುಗಡ್ಡೆಗಳ ಮೋಹದ ಸಿರಿಯಲ್ಲಿ ತೊನೆದು ತೂಗುವ ತೋಟಗಳ ವಯ್ಯಾರವಂತೂ ಅಪರೂಪದ್ದು. ಹೊನ್ನಾವರ ತಲುಪುವವರೆಗೂ ಇದೇ ರೀತಿಯ ಸೊಬಗು. ಐದು ಗಂಟೆಗಳ ಪ್ರಯಾಣ ಮಾಡಿದ್ದರೂ ಇಷ್ಟುಬೇಗ ಮುಗಿಯಿತೆ ಎಂಬ ಬೇಸರ. ಹೊನ್ನಾವರ ಸಮೀಪಿಸುತ್ತಿದ್ದಂತೆ ಅದೊಂದು ಹೊಸ ನೋಟ, ಕೆಲವಾರು ದೋಣಿಗಳ ಬದಲು ನೂರಾರು ದೋಣಿಗಳ ಲೋಕ ಅದು. ಉದ್ದ ಸೇತುವೆಯ ಅಡಿಯಿಂದ ಹಾಯ್ದು ಹೋಗುವ ನದಿ ಹೊನ್ನಾವರ ಪಟ್ಟಣವನ್ನು ಬಳಸಿ ತಬ್ಬಿಕೊಳ್ಳುತ್ತಿದ್ದಂತೆ ಸಮುದ್ರ ಸೇರಿಬಿಡುತ್ತದೆ. ನದಿಯ ಬಲ ಅಂಚಿಗೆ ಮೀನುಗಾರರ ಪುಟ್ಟ ಬಂದರು. ನೂರಾರು ದೋಣಿಗಳ ಹಾಗೂ ಮೀನುಗಾರರ ಸಂಗಮ ಸ್ಥಳ ಅದು. ಹೊನ್ನಾವರದ ಬಂದರಿನಲ್ಲಿ ಇಳಿದು ಆ ಮತ್ಸ್ಯ ಲೋಕವನ್ನು ಬೇಧಿಸುತ್ತಾ ಊರೊಳಗೆ ಪ್ರವೇಶಿಸಿ ಒಳ್ಳೆಯ ಮತ್ಸ್ಯಾಹಾರವನ್ನೇ ಹುಡುಕು ಹೊರಟೆ. ಹೇಳಿ ಕೇಳಿ ಕರಾವಳಿ ತಾನೆ. 'ಬಂಗಡೆ' ಮೀನಿಗೆ ಹೆಸರಾದ ತಾಣ ನಮ್ಮ ಕರಾವಳಿ. ಆದರೆ ನಾನು ಹುಡುಕಿದ್ದು 'ಕಾಣೆ' ಮೀನನ್ನು. ಅಂತೂ ಒಂದು ಹೋಟೆಲ್‌ನಲ್ಲಿ ಕಾಣೆ ಸಿಕ್ಕಿತು. ತಿಂದೇ ನೋಡಬೇಕು ಅದರ ರುಚಿಯನ್ನು! ಹೊನ್ನಾವರದಲ್ಲಿ ಮತ್ತೆ ನಾವೆಲ್ಲರೂ ಸೇರಿಕೊಂಡೆವು ಅಂದರೆ ನಮ್ಮ ಅಧ್ಯಕ್ಷರಾದ ಶ್ರೀ ಎಸ್.ಕೆ.ಕರೀಂಖಾನರು ಮತ್ತು ಛಾಯಾಗ್ರಾಹಕ ವಿ.ಶ್ರೀನಿವಾಸಮೂರ್ತಿ ಹಾಗೂ ಅಕಾಡೆಮಿ ಸಿಬ್ಬಂದಿ. ಈ ಸಲ ನಾವು ಉತ್ತರ ಕನ್ನಡದ ಮುಕ್ರಿಯರು ಮತ್ತು ಹಾಲಕ್ಕಿಯರ ಜೀವನ ವಿಧಾನವನ್ನು ಚಿತ್ರೀಕರಣ ಮಾಡುವುದಿತ್ತು.

ಹೊನ್ನಾವರದಿಂದ ನಾವು ನೇರ ಹೋದದ್ದು 'ಮುಗ್ವಾ' ಎಂಬ ಊರಿಗೆ. ಹೊನ್ನಾವರ ಬೆಂಗಳೂರು ರಸ್ತೆಯಲ್ಲಿ ಹೊನ್ನಾವರದಿಂದ ನಾಲ್ಕು ಕಿ.ಮೀ.ದೂರಕ್ಕೆ ಮಣ್ಣು ರಸ್ತೆಗೆ ಅಂಟುಕೊಂಡಂತೆ ಮುಗ್ವಾಕ್ಕೆ ದಾರಿ ತೋರಿಸುವ ಒಂದು ಬೋರ್ಡ್ ಇದೆ. ಬೋಳು ಗುಡ್ಡಗಳ ನಡುವೆ ಬಂಜರು ಬಯಲಿನ ಆ ರಸ್ತೆಯಲ್ಲಿ ಹೊರಡುವಾಗ ಯಾವುದೋ ಕುರುಚಲು ಕಾಡಿಗೆ ಈ ರಸ್ತೆ ಹೋಗಬಹುದು ಎಂದೆನಿಸುತ್ತದೆ. ಹಾಗೆ ಸ್ವಲ್ಪ

ಮುಂಬರಿದು ಒಂದು ಗುಡ್ಡ ಬಳಸಿ ಬಲಕ್ಕೆ ತಿರುಗಿದರೆ ಅದೋ ಅಲ್ಲಿ ಕೆಳಗೆ ಹಸಿರನ್ನೇ ಹಾಯ್ದುಕೊಂಡ ವಿಶಾಲ ಕಣಿವೆ. ಅದೆಷ್ಟು ಸಾವಿರ ಅಡಿಕೆ ಮರಗಳ ತುತ್ತ ತುದಿಯ ಮೋಹಕ ಹಸಿರು ಛತ್ರಿಗಳು. ಭೂಮಿಯಿಂದ ಮೇಲಕ್ಕೆ ಹುಮ್ಮಸ್ಸಿನಿಂದ ಬೆಳೆಸು ಕುಡಿಯೊಡೆದು ನಿಂತು ಒಂದಕ್ಕೊಂದು ತಬ್ಬಿಕೊಂಡಿರುವ ಲಕ್ಷಾಂತರ ಅಡಿಕೆ ಮರಗಳು. ಮೇಲೆ ನಿಂತು ನೋಡಿದಾಗ ಕೇವಲ ಹಸಿರಸಿರು ಕುಡಿಗಳ ಸಮೂಹವಾಗಿ ಕಾಣಿಸುವ ಆ ಹಸಿರೋಚ್ಛಾದಿತ ಭೂಗರ್ಭದಲ್ಲಿ ಮತ್ತೇನಿರಬಹುದು? ಮೇಲೆ ನಿಂತು ನೋಡಿದಾಗ ಇದು ಯಾರಿಗಾದರೂ ಉಂಟಾಗುವ ಸಹಜ ಕುತೂಹಲ. ನಮ್ಮ ರಸ್ತೆ ಅದೊಂದು ಕಡೆ ಮೊಟಗಾಯಿತು ಸುಮಾರು ಹೊತ್ತಿನಿಂದ ನಮ್ಮನ್ನು ಕಾಯುತ್ತಿದ್ದ ನಮ್ಮ ಪ್ರೀತಿಯ ಅತಿಥಿ ಒಂದೇ ಸಮನೆ ಚಟಪಟಗುಟ್ಟಿ ಮಾತಾಡುತ್ತಾ ಬಂದು ನಮ್ಮನ್ನು ಆಲಂಗಿಸಿಕೊಂಡರು.

ಅಂಕೋಲಾದ ಗೋಖಲೆ ಕಾಲೇಜಿನ ಕನ್ನಡ ಉಪನ್ಯಾಸಕ ಹಾಗೂ ಕವಿ ಡಾ. ಶ್ರೀಪಾದಶೆಟ್ಟಿ ಅಪ್ರತಿಮ ಮಾತುಗಾರ. ಆತಿಥ್ಯಕ್ಕಾಗಿಯೇ ತನ್ನನ್ನು ಅರ್ಪಿಸಿಕೊಂಡ ಆತ್ಮೀಯ ಗೆಳೆಯ. ಸಾಮಾಜಿಕ ಕಳಕಳಿಯು ಹಾಗೂ ರೋಗಗ್ರಸ್ತವಾದ ಯಾವುದೇ ವ್ಯವಸ್ಥೆಯ ವಿರುದ್ಧ ದನಿ ಎತ್ತಬಲ್ಲ ಉತ್ಸಾಹಿ. ಇವರು ಮೂಲತಃ ಮುಗ್ವಾದವರು. ಆ ಕಣಿವೆಯಲ್ಲಿಯೇ ಅವರ ಮನೆ ಎಂದಾಗ ನನಗಂತೂ ಅತೀವ ಸಂತೋಷ. ಏಕೆಂದರೆ ಇನ್ನೂ ಮೂರು ದಿನ ಆ ಕಣಿವೆಯ ಗರ್ಭದಲ್ಲಿಯೇ ಅಲೆಯಬಹುದು ಎಂದು.

ಕಡಿದಾದ ಕಾಲು ಹಾದಿಯಲ್ಲಿ ಒಂದೊಂದೇ ಹೆಜ್ಜೆ ಇಡುತ್ತಾ ಗುಡ್ಡ ಇಳಿದು ಕಣಿವೆಗೆ ಕಾಲಿಟ್ಟಾಗ ಸೂರ್ಯ ಮರೆಯಾದ ಅನುಭವ. ಅರಿವೆಸೊಪ್ಪಿನಂತೆ ಬೆಳೆದ ಅಡಿಕೆವನದ ನಡುವೆ ಅಲ್ಲಲ್ಲಿ ಒಂದೊಂದು ಮನೆ. ತೋಟವೇ ಇಲ್ಲಿಯವರ ಆಸ್ತಿ. ಸರ್ವಸ್ವವೂ ತೋಟವೇ. ಶ್ರೀಪಾದ ಶೆಟ್ಟರ ತಂದೆ ಒಂದು ಕಾಲಕ್ಕೆ ಗೇಣಿದಾರರಾಗಿ ಇನ್ನೊಬ್ಬರಿಗಾಗಿ ದುಡಿಯುತ್ತಿದ್ದವರು. ಉಳುವವನೇ ಒಡೆಯ ಎಂಬ ಭೂಶಾಸನ ಬಂದಾಗ ಒಂದಿಷ್ಟು ತೋಟ ಅವರದಾಯಿತು. ಬಡತನದಲ್ಲಿ ಕಷ್ಟಪಟ್ಟು ಓದಿದ ಶ್ರೀಪಾದ ಕಾಲೇಜು ಉಪನ್ಯಾಸಕರಾದವರು. ಹೀಗಾಗಿ ಈಗ ಒಳ್ಳೆಯ ಸ್ಥಿತಿಯಲ್ಲಿರುವ ಶ್ರೀಪಾದ ಸರಳವಾದ ಆದರೆ ತುಂಬ ಚೆನ್ನಾದ ಒಂದು ಪುಟ್ಟ ಹೆಂಚಿನ ಮನೆ ಕಟ್ಟಿದ್ದಾರೆ. ಅವರ ತಂದೆ ಈಗಿಲ್ಲ. ತಾಯಿ ಖಾಯಂ ಆಗಿ ಆ ಮನೆಯಲ್ಲಿಯೇ ಇರುತ್ತಾರೆ. ದೊಡ್ಡಮ್ಮ ಕೂಡ ಇದ್ದಾರೆ.

ಇದಿಷ್ಟೇ ಆಗಿದ್ದರೆ ಆ ಸ್ಥಳಕ್ಕೆ ಅಷ್ಟೊಂದು ಮಹತ್ವ ಇರುತ್ತಿರಲಿಲ್ಲ. ಈ ಪುಟ್ಟ ಹೊಳೆ ಇಡೀ ಕಣಿವೆಯನ್ನು ಎರಡು ಭಾಗ ಮಾಡಿ ಒಂದು ಹೊಸ ಭೂಲಕ್ಷಣವನ್ನೇ ತುಂಬಿದೆ. ಇದಷ್ಟೇ ಅಲ್ಲ, ಇಲ್ಲಿ ಪ್ರತಿದಿನ ಇನ್ನೊಂದು ಚೋದ್ಯ ನಡೆಯುತ್ತದೆ. ಅದೇನು ಗೊತ್ತೇ? ಈ ಹೊಳೆ ದಿನಕ್ಕೆ ಎರಡು ಬಾರಿ ತುಂಬಿ ಹರಿದು ಮತ್ತೆ ಖಾಲಿಯಾಗುತ್ತದೆ. ಈ ಕಡೆಯ ಶ್ರೀಪಾದಶೆಟ್ಟರ ಮನೆಯಿಂದ ಆ ಕಡೆ 200 ಅಡಿ ಆಚೆ ಇರುವ ನಾಯಕರ ಮನೆಗೆ ಹೋಗಿ ಬರಬೇಕಾದರೆ ಎರಡು ಆಶ್ಚರ್ಯಗಳನ್ನು ನಾವು ಕಂಡೆವು. ನಾವು ಆ ಕಡೆ ಹೊರಟಾಗ ಹೊಳೆ ಖಾಲಿ ಇತ್ತು. ಅಂದರೆ ಎರಡು ಅಡಿಯೂ ನೀರಿರಲಿಲ್ಲ. ಸುಲಭವಾಗಿ ದಾಟಿ ಹೋದೆವು. ಆ ಕಡೆಯ ನಾಯಕ್ ಅವರ ಮನೆಯಲ್ಲಿ ಟೀ ಕುಡಿದು ಕುಶಲ ವಿಚಾರಿಸಿ ಹೊರಡುವಷ್ಟರಲ್ಲಿ ಹೊಳೆ ತುಂಬಿ ತುಳುಕುತ್ತಿತ್ತು! ಆಗ ದೋಣಿಯಲ್ಲೇ ಈ ಕಡೆ ದಡ ತಲುಪಬೇಕು. ಅಥವಾ ಇನ್ನಷ್ಟು ದೂರ ನಡೆದು ಪುಟ್ಟ ಸೇತುವೆ ದಾಟಿ ಬರಬೇಕು. ಇದೇನಿದು ಆಶ್ಚರ್ಯ? ಜಗತ್ತು ಹೀಗೂ ಉಂಟೆ?

ಹೀಗೂ ಉಂಟೆ ಎನ್ನುತ್ತದೆ ಇಲ್ಲಿನ ಪ್ರಕೃತಿ. ಸಮುದ್ರದಲ್ಲಿ 'ಬರ್ತ' ಮತ್ತು 'ಇಳಿತ' ಎಂಬ ಎರಡು ಚಲನೆಗಳುಂಟು. ಬರ್ತ ಎಂದರೆ ಸಮುದ್ರದ ಅಲೆಗಳು ದಡದ ಕಡೆಗೆ ಏರಿ ಮುನ್ನುಗ್ಗುವುದು. ಇಳಿತ ಎಂದರೆ ಅಲೆಗಳು ಕಡಿಮೆಯಾಗುತ್ತಾ ಸಮುದ್ರ ತನ್ನ ವ್ಯಾಪ್ತಿ ಬಿಟ್ಟು ಸ್ವಲ್ಪ ಹಿಂದೆ ಸರಿಯುವುದು. ಪ್ರತಿದಿನ ಹಗಲಿನಲ್ಲಿಯೇ ಎರಡು ಬಾರಿ ಈ ರೀತಿಯ ಉಬ್ಬರ ಮತ್ತು ಇಳಿತ ಉಂಟಾಗುತ್ತದೆ. ಸಮುದ್ರದ ಮಟ್ಟಕ್ಕೇ ಇರುವ ಹೊಳೆಗಳು ಸಮುದ್ರದ ಈ ಚಲನೆಗೆ ಅನುಗುಣವಾಗಿ ತಾವೂ ಏರುತ್ತವೆ. ಮತ್ತು ಇಳಿತ ಉಂಟಾಗುತ್ತದೆ. ಹೊಸದಾಗಿ ನೋಡುವವರಿಗಂತು ಇದೊಂದು ಆಶ್ಚರ್ಯವನ್ನೇ ಹುಟ್ಟಿಸುವ ಸಂಗತಿಯಾಗಿ ಕಾಣುತ್ತದೆ. ವಾಸ್ತವವಾಗಿ ಈ ಪುಟ್ಟ ಹೊಳೆ ಶರಾವತಿಯ ಒಂದು ಕವಲು. ಇಂಥ ಹತ್ತಾರು ಕವಲುಗಳು ಶರಾವತಿಯನ್ನು ಸೇರಿಕೊಳ್ಳುತ್ತಾ ದಿನವೂ ಅವಳಂತೆಯೇ ಏರಿ ಇಳಿಯುತ್ತವೆ. ಮುಗ್ವಾದಂತೆಯೇ ಇನ್ನೂ ಹಲವು ಸುಂದರ ತಾಣಗಳು ಹೊನ್ನಾವರವೇ ಏಕೆ ಇಡೀ ಕರ್ನಾಟಕ ಕರಾವಳಿಯ ಎಲ್ಲ ನದಿಗಳ ಆಸುಪಾಸಿನಲ್ಲಿ ಕಾಣಸಿಗುತ್ತವೆ. ಕೇರಳ ರಾಜ್ಯವಂತೂ ಇಂಥ ವೈಲಕ್ಷಣಗಳ ಸಂಗಮ ಸ್ಥಾನ.

ಈಗ ನೇರ ವಿಷಯಕ್ಕೆ ಬರೋಣ. ಇಂಥ ಈ ಕಣಿವೆಯಲ್ಲಿ ಇರುವ ಜನ ಯಾರು, ಅವರ ಸ್ಥಿತಿಗತಿಗಳೇನು? ನಮ್ಮ ಸಾಮಾಜಿಕ ವೈಪರೀತ್ಯಗಳಿರುವುದು ಇಂಥ ಕಡೆಯೇ. ಎಲ್ಲಿ ಸೌಂದರ್ಯವಿರುತ್ತದೋ, ಎಲ್ಲಿ ಸುಖವಿರುತ್ತದೋ ಅಲ್ಲಿ ಕುರೂಪವೂ ಇರುತ್ತದೆ. ಅಲ್ಲಿ ದು:ಖವೂ ಇರುತ್ತದೆ. ಗುಲಾಬಿಗೆ ಅಂಟಿದ ಮುಳ್ಳು ಇಲ್ಲಿನ ಸೌಂದರ್ಯದ ನಡುವಿನ ಬಡತನ!

ಈ ಪುಟ್ಟ ಹೊಳೆಯ ಒಂದು ಪಕ್ಕಕ್ಕೆ ಮುಕ್ರಿ ಜನಾಂಗ. ಮತ್ತೊಂದು ಪಕ್ಕಕ್ಕೆ ನಾಮಧಾರಿ ನಾಯಕ ಜನಾಂಗ. ಬೇರೆ ಜನಾಂಗವಿಲ್ಲ ಎಂದಲ್ಲ ಗಾಣಿಗ ಶೆಟ್ಟರು, ಬೆಸ್ತರು, ಹವ್ಯಕರು ಮಂತಾಗಿ ಹಲವು ಜನಾಂಗಗಳು ಇಲ್ಲಿವೆಯಾದರೂ ಪ್ರಮುಖವಾಗಿ ಮುಕ್ರಿಯರು ಮತ್ತು ನಾಮಧಾರಿಗಳು. ನಾಮದಾರಿ ಜನಾಂಗದವರು ಕೃಷಿಕರು, ಅಷ್ಟಿಷ್ಟು ತಮ್ಮದೇ ಆದ ತೋಟ ಇಟ್ಟುಕೊಂಡವರು. ಆರ್ಥಿಕವಾಗಿ ಹೇಳಿಕೊಳ್ಳುವಂಥ ಸಿರಿವಂತರಲ್ಲದಿದ್ದರೂ ತಮ್ಮ ಅನ್ನಕ್ಕೆ ಹೆಚ್ಚು ಕಷ್ಟಪಡಬೇಕಾದ ಪ್ರಸಂಗವಿಲ್ಲ. ಇತ್ತೀಚೆಗಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರೂ ಆಗಿರುವುದರಿಂದ ಸುಮಾರು ಜನ ನೌಕರಿಯನ್ನು ಹಿಡಿದಿದ್ದಾರೆ.

ಆದರೆ ಅದೇ ಹೊಳೆಯ ಮತ್ತೊಂದು ದಡದಲ್ಲಿರುವ ಮುಕ್ರಿಯರು ಇವತ್ತಿಗೂ ಅತ್ಯಂತ ಬಡತನ ಹಾಗೂ ಮೌಢ್ಯದಲ್ಲಿರುವ ಜನ. ಸರ್ಕಾರಿ ಆದೇಶದ ಪ್ರಕಾರ ಇವರು ಗಿರಿಜನರಲ್ಲ. ಹರಿಜನರ ಒಂದು ಪಂಗಡ. ಆದರೆ ಇವರಲ್ಲಿರುವ ಆಚಾರ ವಿಚಾರ ಹಾಗೂ ಸಂಸ್ಕೃತಿ ಮಾತ್ರ ಗಿರಿಜನರನ್ನೇ ಹೋಲುವಂಥದ್ದು ಎಂದು ಅದೇ ಜಿಲ್ಲೆಯ ಪ್ರಸಿದ್ಧ ಜಾನಪದ ಸಂಗ್ರಾಹಕ ಡಾ. ಎಲ್. ಆರ್. ಹೆಗಡೆ ಹೇಳುತ್ತಾರೆ. ಡಾ. ಶ್ರೀಪಾದಶೆಟ್ಟರ ಅಭಿಪ್ರಾಯವೂ ಇದೇ ಆಗಿದೆ.



ಮುಕ್ರಿ ಜನಾಂಗದ ಆಚರಣೆಗಳಿಗೂ ಇದೇ ಜಿಲ್ಲೆಯ ಹಾಲಕ್ಕಿ ಜನಾಂಗದ ಆಚರಣೆಗಳಿಗೂ ತುಂಬಾ ಸಾಮ್ಯಗಳಿವೆ. ಆದರೆ ಅಸ್ಪೃಶ್ಯತೆಯ ಕೀಳರಿಮೆಯಲ್ಲಿ ನರಳುತ್ತಿರುವ ಮುಕ್ರಿಯರಿಗೂ ಹಾಲಕ್ಕಿ ಜನಾಂಗಕ್ಕೂ ಸಾಮಾಜಿಕವಾಗಿ ತುಂಬಾ ವ್ಯತ್ಯಾಸಗಳಿವೆ. ಮುಕ್ರಿಯರನ್ನು ಗಂಜಿಗೌಡರು ಮತ್ತು ಹಳೇಗೌಡರು ಎಂಬುದಾಗಿಯೂ ಕರೆಯುತ್ತಾರೆ. ಒಂದು ಕಥೆಯ ಪ್ರಕಾರ ಮುಕ್ರಿಯರು ಮೊದಲು ಹಾಲಕ್ಕಿ ಜನಾಂಗಕ್ಕೇ ಸೇರಿದ್ದವರೆಂದೂ, ಹೆಚ್ಚು ಕುಡಿಯುವ ಕಾರಣಕ್ಕೆ ಕೆಲವರನ್ನು ಜನಾಂಗದಿಂದ ಬಹಿಷ್ಕರಿಸಲಾಯಿತೆಂದೂ, ಆ ಬಹಿಷ್ಕೃತಗೊಂಡ ಕೆಲವರ ಸಂತತಿಯೇ ಇವತ್ತಿನ ಮುಕ್ರಿಯರೆಂದೂ ಹೇಳಲಾಗುತ್ತದೆ. ಯಾವುದೇ ಒಂದು ಜನಾಂಗದ ಹಿಂದೆ ಇಂಥ ಪುರಾಣಗಳಿರುತ್ತವಾದ್ದರಿಂದ ಇದೇ ಅಳತೆಗೋಲಿಲ್ಲ ಎಂಬ ಮಾತು ಬೇರೆ.

ಹೊನ್ನಾವರ ಹಾಗೂ ಕುಮುಟಾ ತಾಲ್ಲೂಕುಗಳಲ್ಲಿ ಯಥೇಚ್ಛವಾಗಿರುವ ಮುಕ್ರಿಯರು ಸಿರ್ಸಿ ಹಾಗೂ ಸಿದ್ಧಾಪುರ ತಾಲ್ಲೂಕುಗಳಲ್ಲಿ ತುಂಬಾ ವಿರಳವಾಗಿದ್ದಾರೆ. ದಣಿಗಳ ತೋಟ ಹಾಗೂ ಗದ್ದೆಗಳ ಕೆಲಸವೇ ಇವರ ವೃತ್ತಿ. ಇವರಲ್ಲಿ ಬಹುತೇಕ ಅಂದರೆ

ಶೇಕಡಾ 75ರಷ್ಟು ಜನರಿಗೆ ಇವತ್ತಿಗೂ ಸ್ವಂತ ಜಮೀನಿಲ್ಲ. ಆರಂಭದಿಂದಲೂ ಜೀತವೇ ಇವರ ಜೀವನವಾದ ಕಾರಣ ವಿದ್ಯಾವಂತರಂತೂ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಡಾ. ಶ್ರೀಪಾದಶೆಟ್ಟರ ಪ್ರಕಾರ ಇಡೀ ಜನಾಂಗದಲ್ಲಿ 21ಜನ ಪ್ರಾಥಮಿಕ ಶಾಲಾ ಶಿಕ್ಷಕರು, 25 ಜನ ಫಾರೆಸ್ಟ್ ಗಾರ್ಡ್‌ಗಳು, 25 ಜನ ಜವಾನರು, 7 ಜನ ಲೈಲ್‌ಮನ್‌ಗಳು, ಮತ್ತು ಇಬ್ಬರು ಪೋಲೀಸರು. ಡಾಕ್ಟರ್‌ಗಳು ಅಥವಾ ಇಂಜಿನಿಯರಿಂಗ್ ಓದಿದವರಾಗಲೀ ಓದುತ್ತಿರುವವರಾಗಲೀ ಇಲ್ಲ. ಇಂದಿಗೂ ಹೊಟ್ಟೆಯ ಪಾಡಿಗಾಗಿ ಮಕ್ಕಳು ಮರಿ ಸಮೇತ ದುಡಿಯಬೇಕಾದ ಕಾರಣ ಶಾಲೆಗೆ ಹೋಗುತ್ತಿರುವವರ ಸಂಖ್ಯೆ ಕಡಿಮೆ. ಸರಕಾರಿ ಸವಲತ್ತುಗಳನ್ನು ಉಪಯೋಗಿಸಿಕೊಂಡು ಓದುತ್ತಿರುವವರು ತುಂಬಾ ಕಡಿಮೆ. ಮದುವೆಗಾಗಿ ಅಥವಾ ಧಾರ್ಮಿಕ ಕಾರ್ಯಕ್ಕಾಗಿ ಸಾಲ ಮಾಡಿಕೊಂಡು ಅದನ್ನು ತೀರಿಸುವುದಕ್ಕಾಗಿ ಮತ್ತೆ ಮತ್ತೆ ಜೀತಮಾಡುವ ಮಂದಿ ಇನ್ನೂ ಇದ್ದಾರೆ. ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳು ಕಳೆದರೂ ಈ ದೇಶದ ಎಷ್ಟು ಜನಕ್ಕೆ ನಿಜವಾದ ಸ್ವಾತಂತ್ರ್ಯ ಬಂದಿದೆಯೋ ಅದನ್ನು ನಮ್ಮ ರಾಜಕಾರಣಿಗಳೇ ಹೇಳಬೇಕು. ಸದಾ ತುಂಬಿ ಹರಿಯುವ ನೀರು, ಹಸಿರು ಹಾಗೂ ಅಡಿಕೆಯಂಥಾ ಚಿನ್ನದ ಬೆಳೆಯ ನಡುವೆಯೂ ಜನ ದುಡಿಯುವ ಎತ್ತುಗಳಂತೆ ಬದುಕಬೇಕಾದ ಧಾರುಣ ಸ್ಥಿತಿ ಬಹುಶಃ ಈ ದೇಶದಲ್ಲಿ ಮಾತ್ರ ಇದೆಯೇನೋ?

ಚಂದಾವರದಲ್ಲಿರುವ ಹನುಮಂತ ದೇವರನ್ನು ಪ್ರಮುಖವಾಗಿ ಆರಾಧಿಸುವ ಇವರು ಸ್ಥಳೀಯವಾಗಿ ಭೂತ, ಜಟ್ಟಿಗ ಮಾಸ್ತಿ ಮಂತಾದ ದೈವಗಳನ್ನು ಆರಾಧಿಸುತ್ತಾರೆ. ದೀಪಾವಳಿ ಇವರಿಗೆ ಶ್ರೇಷ್ಠ ಹಬ್ಬ. ಆಯಾ ಊರಿನ ಜಾತಿಯ ಮುಖಂಡನನ್ನು ಬುದುವಂಥ ಎಂದು ಕರೆಯುವ ಇವರು ಅವನ ತೀರ್ಮಾನವನ್ನು ಒಪ್ಪುತ್ತಾರೆ. ಮದುವೆ ಹಾಗೂ ತಿಥಿಗಳ ಸಂದರ್ಭದಲ್ಲಿ ಈ ಬುದುವಂಥನದು ಪ್ರಮುಖ ಪಾತ್ರ. ಗಂಡಸರಿಗೆ ಭೀರ, ಮಾರು, ದುರ್ಗ, ಕಲ್ಲು ಬೆಳಿಯಾ, ಪುಗ್ಗ, ಪುಟ್ಟ ಮುಂತಾಗಿ ಹೆಸರಿಡುವ ಇವರು ಹೆಂಗಸರಿಗೆ ಕಣ್ಣಿ, ಜಟ್ಟಿ, ಮಾರಿ, ಗಣಪಿ, ಸುಬ್ಬಿ ಮುಂತಾಗಿ ಇಡುತ್ತಾರೆ.

ಗಂಜಿ ಹಾಗೂ ಮೀನಿನ ಹುಳಿ ಇವರ ಪ್ರಮುಖ ಆಹಾರ. ಮಾಂಸಾಹಾರ ಮೊದಲಿಗೆ ಪ್ರಮುಖವಾಗಿತ್ತಾದರೂ ಈಗ ಬೇಟೆ ಅಷ್ಟು ಸುಲಭವಲ್ಲ ಎಂದು ಹೇಳುತ್ತಾರೆ. ಇತ್ತೀಚೆಗಿನ ರೇಟಿನಲ್ಲಿ ಮಾಂಸ ತಂದು ತಿನ್ನುವುದೂ ಇವರಿಗೆ ಕಷ್ಟದಾಯಕ. ಹಾಗಾಗಿ ಕಷ್ಟವೋ ಸುಖವೋ ಮೀನು ತಂದು ಗಂಜಿ ಮಾಡಿ ಕುಡಿದು ಮಲಗುತ್ತಾರೆ. ಹೆಂಡ, ಸಾರಾಯಿಗಳ ವಶವಾದವರ ಸಂಖ್ಯೆ ಹೆಚ್ಚಾಗಿಯೇ ಇದೆ. ಇದು ಬಡವರಿಗೆ ಹೆಚ್ಚು ಪ್ರಿಯ ತಾನೇ?

ಸಾಮಾನ್ಯವಾಗಿ ಕಪ್ಪು ಜನಾಂಗವಾದ ಇವರು ಕುರೂಪಿಗಳಂತೂ ಅಲ್ಲ. ಮುಖದಲ್ಲಿ ಸಹಜ ಕಳೆ ತುಂಬಿಕೊಂಡು ಅಲ್ಲಿನ ಪ್ರಕೃತಿಯ ಮಕ್ಕಳೆಂಬುದನ್ನು ಸಾಬೀತು ಪಡಿಸುತ್ತಾರೆ. ಹಿಂದಿನ ಕಾಲದ ಗಂಡಸರು ಬರೀ ಕೌಪೀನ ಧರಿಸಿದರೆ ಈಗಿನ ಹುಡುಗರು ಸ್ವಲ್ಪ ಆಧುನಿಕವಾಗಿದ್ದಾರೆ, ಹಾಗೆಯೇ ಹಳೇ ಹೆಂಗಸರು ಸೆರಗನ್ನು ಹಿಂದಿನಿಂದ ತಂದು ಕಟ್ಟಿ ಎದೆ ಮುಚ್ಚಿಕೊಳ್ಳಲು ಮಣಿಸರ ಧರಿಸಿದರೆ ಈಗಿನ ಹೆಣ್ಣು ಮಕ್ಕಳು ಸೀರೆ ಕುಪ್ಪಸ ತೊಡುತ್ತಾರೆ. ಕೇವಲ ತೆಂಗಿನಗರಿಯ ತಡಿಕೆಯಿಂದ ಕಟ್ಟಿದ, ಅತ್ಯಂತ ಬಡತನವನ್ನು ಎತ್ತಿ ತೋರಿಸುವ ಇವರ ಮನೆಗಳು ಇವತ್ತಿಗೂ ಬದಲಾಗಿಲ್ಲ. ಇವರ ಬಹುತೇಕ ಮನೆಗಳು ಮನೆಗಳಲ್ಲ, ಬದಲಾಗಿ ಸೋಗೆಯ ಕೊಟ್ಟಿಗೆಗಳು. ಆದರೆ ಇದು ಹೊರ ಜಗತ್ತಿಗೆ ಕಾಣುವುದಿಲ್ಲ. ಏಕೆಂದರೆ ಮೇಲೆ ನಿಂತು ನೋಡುವವರಿಗೆ ಈ ಇಡೀ ಕಣಿವೆ ಹಸಿರು ಮರಗಳ ಛತ್ರಿಯಿಂದ ಆವೃತವಾದ ಸೊಂಪು ಕಣಿವೆ ತಾನೇ? ಪ್ರಕೃತಿದತ್ತವಾದ ಈ ಸಿರಿವಂತ ಸೊಬಗಿನಲ್ಲಿ ಚುಚ್ಚಿ ತಿನ್ನುವ ಬಡತನವಿದೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಹಾಗಾಗಿಯೇ ನಮ್ಮ ನಾಗರಿಕ ವ್ಯವಸ್ಥೆಯ ಊಹೆಗೆ ಈ ಜನಾಂಗಗಳ ನಿಟ್ಟುಸಿರು ನಿಲುಕಿಲ್ಲದಿರಬಹುದು.

ಮೂರು ದಿನ ತುಂಬಾ ಖುಷಿಯಾಗಿದ್ದು ಹೋಗಬೇಕೆಂದು ಬಂದಿದ್ದ ನನಗೆ ಈ ಮುಕ್ರಿಯರ ಜೀವನ ಮನಸ್ಸು ಕಲಕಿದ ಕಾರಣ ಅಷ್ಟು ಖುಷಿಯಿಂದಿರಲು ಸಾಧ್ಯವಾಗಲಿಲ್ಲ. ಈ ಮ್ಲಾನತೆಯ ನಡುವೆಯೇ ಶ್ರೀಪಾದಶೆಟ್ಟರ ಮನೆಯ ರುಚಿಕರವಾದ ಮೀನಿನ ಊಟ, ಹೊಳೆಯಲ್ಲಿನ ನಮ್ಮ ನೀರಾಟ, ಶ್ರೀಪಾದಶೆಟ್ಟರ ನಗು ಮುಖದ ಪತ್ನಿ ಶ್ರೀಮತಿ ಸುಶೀಲಾ ಅವರ ಹೃದಯಪೂರ್ವಕ ಆತಿಥ್ಯ ಹಾಗೂ ಅವರ ತಾಯಿ ಮತ್ತು ಚಿಕ್ಕಮ್ಮನವರ ಪ್ರೀತಿ ಎಂದಿಗೂ ಮರೆಯಲು ಸಾಧ್ಯವಿಲ್ಲದ್ದು.



ನನ್ನ ಗೆಳೆಯ ಶ್ರೀಪಾದಶೆಟ್ಟಿ ಈ ಮುಕ್ರಿಯರ ಬದುಕಿನ ಬಗ್ಗೆ ಅಪಾರ ವ್ಯಥೆಗೊಂಡವರು. ಅಲ್ಲಿನ ಅನೇಕ ಯುವಕರನ್ನು ಕಲೆ ಹಾಕಿ ಅವರಿಗೆ ಕ್ರಾಂತಿಯ ಪಾಠ ಹೇಳಲು ಪ್ರಯತ್ನಿಸಿದವರು. ಅವರ ಪ್ರಿಯ ಶರಾವತಿ ಕವನ ಸಂಕಲನದ ಮೂಲಕ ಮುಕ್ರಿ ಅವರ ಬದುಕಿನ ಬಗ್ಗೆ ಹೇಳಲು ಪ್ರಯತ್ನಿಸಿದವರು. ಅವರ 'ಪ್ರಿಯ ಶರಾವತಿ' ಕವನ ಸಂಕಲನವನ್ನು ಮುಕ್ರಿ ಜನಾಂಗಕ್ಕೆ ಅರ್ಪಿಸಿರುವ ಶ್ರೀಪಾದಶೆಟ್ಟರು ಹೊಸ ಆಲೋಚನೆಯ ಅರ್ಪಣಾ ಹೃದಯದ ವ್ಯಕ್ತಿ.

ಹೊನ್ನಾವರದಿಂದ ಕುಮುಟಾಕ್ಕೆ ಹೋಗುವ ಹೆದ್ದಾರಿಯಲ್ಲಿ ಹೊನ್ನಾವರದಿಂದ ಕೇವಲ 5 ಕಿ.ಮೀ. ದೂರದಲ್ಲಿ ಬಲಕ್ಕೆ ಸಿಗುವ ಮಣ್ಣು ರಸ್ತೆ ಹಿಡಿದು, ಅಕ್ಕಪಕ್ಕದ ಗದ್ದೆ ಬಯಲು ವಿಸ್ತಾರವನ್ನು ಅಳೆಯುತ್ತಾ ಅರ್ಧ ಕಿ.ಮೀ. ಸಾಗುವಷ್ಟರಲ್ಲಿ ರಸ್ತೆ ಕಟ್. ಅಲ್ಲಿಂದ ಮುಂದಕ್ಕೆ ಗದ್ದೆ ಬದುವಿನ ಮೇಲೆ ಹುಷಾರಾಗಿ ಕಾಲಿಡುತ್ತಾ, ತಡವರಿಸುತ್ತಾ, ಮುಂಬರಿದರೆ ಇದ್ದಕ್ಕಿದ್ದಂತೆ ಸಾಲು ಸಾಲು ಹುಲ್ಲಿನ ಮನೆಯ ಹಾಡಿಗಳು, ಹಾಡಿಗಳ ಸುತ್ತಾಮುತ್ತಾ ಎತ್ತರಕ್ಕೆ ಬೆಳೆದ ತೆಂಗು, ಮತ್ತದೇ ಬಾಳೆ, ಅಡಿಕೆ, ಕೆಸವುಗಳ ಚೈತನ್ಯದಾಯಕ ಕಂಪು. ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ 2 ಕಿ.ಮೀ. ಅಂತರದಲ್ಲಿದ್ದರೂ ನಾಗರೀಕ ಜಗತ್ತಿಗೂ ತನಗೂ ಸಂಬಂಧವೇ ಇಲ್ಲವೆಂಬಂತೆ ಆ ಹೆದ್ದಾರಿ ಸಂಸ್ಕೃತಿಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಆ ತಾಣವೇ ಅಪ್ಪಿಕೇರಿ.

ಮುಗ್ಧತೆಯೇ ಮೈವೆತ್ತ ಎಣ್ಣೆಗೆಂಪಿನ ಮಂದಹಾಸದ ತುಟಿಗಳು. ಜಡೆ ಹೆಣದು ಎತ್ತಿ ಕಟ್ಟಿದ ಚಕ್ರ ತಿರುವುಗೆ ಬಣ್ಣದ ಹೂವು. ಕುಪ್ಪುಸವಿಲ್ಲದ ಬತ್ತಲು ಎದೆಗೆ ಇಳಿಬಿಟ್ಟ ರಂಗು ರಂಗಿನ ಹತ್ತಾರು ಸರಮಣಿಗಳ ಮಾಲೆ. ಅದರೊಳಗೆ ಮುತ್ತೈದೆ ತನವನ್ನು ಎತ್ತಿ ತೋರುವ ಕೆಂಪುಹವಳ. ನೀಳ ತೋಳಿನ ದಷ್ಟ ಪುಷ್ಟತೆಯನ್ನು ಹಿಡಿದಿಡುವ ನಾಲ್ಕಾರು ತೋಳುಬಂಧಿಗಳ ಜೋಡಣೆ. ಮುಂಗೈ ಅಂದ ಹೆಚ್ಚಿಸಿದ ಬೆಳ್ಳಿ ಕಡಗಳ ಹೊಳೆವ ಬೆಳಗು. ಸದಾ ಬಿಸಿಲಿಗೆ ತೆರೆದುಕೊಂಡ ಬೆತ್ತಲೆ ಬೆನ್ನಿನ ಕಡುಗಪ್ಪು ಬಣ್ಣ. ಕಾಲಿಗೂ ಕಡಗ. ಕಿವಿಗೆ ಕಡಪು, ಮೂಗಿಗೆ ಮೂಗುತಿ, ಹಣೆಗೆ ಕೆಂಪು ತಿಲಕ, ಎಲೆ ಅಡಿಕೆಯ ರಂಗಿಗೆ ಕೆಂಪಾದ ಹಲ್ಲು. ಹಾಲಕ್ಕಿ ಹೆಣ್ಣು ಮಕ್ಕಳ ನಿತ್ಯದ ನೋಟ. ಅವಳ ಇಡೀ ಮೈಬಣ್ಣ ಮತ್ತು ದಷ್ಟಪುಷ್ಟ ಮೈ ಕಟ್ಟು ಅವಳ ಶ್ರಮದ ದುಡಿಮೆಯನ್ನು, ಆರೋಗ್ಯಕರ ಮನಸ್ಸನ್ನೂ ಪ್ರತಿನಿಧಿಸುತ್ತದೆ. ಹಾಲಕ್ಕಿ ಮಹಿಳೆಯರು ಗಂಡಸರಷ್ಟೇ ಶ್ರಮಜೀವಿಗಳು, ಕಷ್ಟ ಸಹಿಷ್ಣುಗಳು. ಗಂಡಸರು ಗದ್ದೆ ಉತ್ತರೆ, ಹೆಂಗಸರು ಕಾಡಿನಿಂದ ಸೊಪ್ಪು ತಂದು ಗದ್ದೆಯ ಗೊಬ್ಬರಕ್ಕಾಗಿ ತುಳಿಯುತ್ತಾರೆ.

ಅಪ್ಪಿಕೇರಿಯ ಒಂದು ವಿಶೇಷವೆಂದರೆ ನಾನು ಈಗಾಗಲೇ ಹೇಳಿದಂತೆ ಇನ್ನೂ ಸಾಂಪ್ರದಾಯಿಕ ಉಡುಪು ವಿನ್ಯಾಸವನ್ನು ಉಳಿಸಿಕೊಂಡಿರುವ ಹತ್ತಾರು ಹೆಂಗಸರು ಮತ್ತು ತರುಣಿಯರಾದಿಯಾಗಿ ಇಲ್ಲಿದ್ದಾರೆ. ಏಕೆಂದರೆ ಹಾಲಕ್ಕಿ ಸಮಾಜದಲ್ಲಿ ಈಗ ಹೊಸ ಗಾಳಿ ಬೀಸಲಾರಂಭಿಸಿದೆ. ಬೆತ್ತಲ ಮೈಗೆ ಕೇಲವ ಮಣಿಸರ ಧರಿಸಿ ಹಿಂದಿನಂತೆ ಇರುವುದು ಅಜ್ಞಾನದ ಅತಿರೇಕ ಎಂಬ ಎಚ್ಚರ ಯುವಕರಲ್ಲಿ ಮೂಡುತ್ತಿದೆ. ಅನೇಕ ಕೊಪ್ಪಗಳಲ್ಲಿ ಸಾಮೂಹಿಕವಾಗಿ ಈ ರೀತಿಯ ಉಡುಪು ವಿನ್ಯಾಸವನ್ನು ಬಹಿಷ್ಕರಿಸಲಾಗಿದೆ.

ಅಘನಾಶಿನಿ ಕೊಪ್ಪ ಈಗಾಗಲೇ ಈ ಚಳುವಳಿಯಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಈ ವಿಚಾರವಾಗಿ ನಮ್ಮೊಂದಿಗೆ ಲೋಕಾಭಿರಾಮವಾಗಿ ಚರ್ಚಿಸಿದ ಹಾಲಕ್ಕಿ ಜನಾಂಗದವರೇ ಆದ ಕುಮುಟಾದ ಮಾಜಿ ಶಾಸಕ ಶ್ರೀ ಎನ್.ಹೆಚ್. ಗೌಡ ಅವರು ಈ ಹಳೇ ಕಾಲದ ಪದ್ಧತಿಯನ್ನು ತೀವ್ರವಾಗಿ ವಿರೋಧಿಸುತ್ತಾರೆ. ಹೀಗಿದ್ದರೂ ಅಪ್ಪಿಕೇರಿಯಲ್ಲಿ ಮಾತ್ರ ಹಳೆಯ ಉಡುಪು ಸಂಸ್ಕೃತಿಗೆ ಜನ ಇನ್ನು ಸ್ಪಂದಿಸುತ್ತಿದ್ದಾರೆ. ಕನಿಷ್ಠ ಶೇಕಡ 50ರಷ್ಟು ಮಹಿಳೆಯರು ತಮ್ಮ ಪುರಾತನ ಶೈಲಿಯನ್ನು ಇನ್ನೂ ಬಿಟ್ಟಿಲ್ಲ. ಆದರೆ ಗಂಡಸರು ಹಾಗಿಲ್ಲ. ಸಾಮಾನ್ಯವಾಗಿ ಹಾಲಕ್ಕಿ ಗಂಡಸರು ಗದ್ದೆ ಕೆಲಸ ಮಾಡುವಾಗ ಲಂಗೋಟಿಯಲ್ಲಿ ಇರುತ್ತಾರಾದರೂ

ಗದ್ದೆಯ ಹೊರಗೆ ಆಧುನಿಕವಾಗಿಯೇ ಇರುತ್ತಾರೆ. ಆಧುನಿಕವಾಗಿ ಎಂದರೆ ಉಡುಪಿನಲ್ಲಿ ಅಷ್ಟೇ, ಉಳಿದಂತೆ ಹೊರ ಪ್ರಪಂಚಕ್ಕೆ ಸ್ಪಂದಿಸುವಲ್ಲಿ ಇನ್ನೂ ಮುಗ್ಧರು.

ಅಪ್ಪಿಕೇರಿಯಲ್ಲಿ ಗುಮಟೆಗಳು ಇನ್ನೂ ಮೊದಲ ಸ್ಥಾನದಲ್ಲೇ ಇವೆ. ಸುಗ್ಗಿ ಕುಣಿತದ ಕೋಲುಗಳಾಗಲೀ, ಬಣ್ಣದ ಕುಂಚವಾಗಲೀ ತಮ್ಮ ರಂಗು ಕಳೆದುಕೊಂಡಿಲ್ಲ. ಮರಗಾಲು ಕುಣಿತವಂತೂ ವಿಶೇಷ ರೀತಿಯದು. ಹಾಡುವ ಮಹಿಳೆಯರಿಗಂತೂ ಬರವೇ ಇಲ್ಲ. ಹದಿನಾರರಿಂದ ನೂರರ ಮಹಿಳೆಯರವರೆಗೆ ಎಲ್ಲರೂ ಹಾಡುಗಾರ್ತಿಯರೇ. ಕಲೆಯಾಗಲೀ, ಹಾಡಾಗಲೀ, ಸಂಪ್ರದಾಯಗಳಾಗಲೀ, ಆಚರಣೆಗಳಾಗಲೀ, ವೇಷಭೂಷಣಗಳಾಗಲೀ, ಚಿತ್ರ, ಕುಶಲ ಕಲೆಗಳಾಗಲೀ, ಅಪ್ಪಿಕೇರಿಯಷ್ಟು ಸಮೃದ್ಧವಾಗಿರುವುದನ್ನು ನಾನೆಲ್ಲೂ ನೋಡಲಿಲ್ಲ. (ನಾನು ನೋಡಿದ ಕೆಲವು ಕೊಪ್ಪಗಳ ಪೈಕಿ) ಇಲ್ಲಿನ ಜನರ ಹೃದಯ ವೈಶಾಲ್ಯವು ಅಪಾರ. ತುಂಬಾ ಸಹಜವಾದದ್ದು.

ಅಪ್ಪಿಕೇರಿಯ ವೆಂಕಟೇಶ ಗಣಪುಗೌಡ ಅಲ್ಲಿನ ಮಂಡಲ ಸದಸ್ಯ. ಸ್ವತಃ ಉತ್ತಮ ಹಾಡುಗಾರರಾದ ಇವರು ಸುಗ್ಗಿ ಕುಣಿಯುವ ಹಾಗೂ ಗುಮಟೆ ಬಾರಿಸುವ ಕಲಾವಿದರೂ ಹೌದು. ಇವರ ಸೋದರರಾದ ಮಾಸ್ತಿಗೌಡ ಕೂಡ ಒಬ್ಬ ಉತ್ತಮ ಸುಗ್ಗಿ ಕಲಾವಿದ. ಇವರ ಮನೆಯೇ ವಾಸ್ತವ್ಯದ ಜಾಗ. ಇವರ ಮನೆಗಳ ಪರಿಸರವಂತೂ ಕಣ್ಣಿನಲ್ಲಿ ನಿಲ್ಲುವಂಥದ್ದು. ಹಳೇ ವಿನ್ಯಾಸದ ಹುಲ್ಲಿನ ಗುಡಿಸಲ ಮುಂದೆ ಸಾರಿಸಿದ ವಿಶಾಲ ಅಂಗಳ. ಅಂಗಳದ ಒಂದು ಮೂಲೆಯಲ್ಲಿ ತುಳಸಿ ಕಟ್ಟೆ. ಇದು ಹಾಲಕ್ಕಿಗಳ ಅತ್ಯಂತ ಪವಿತ್ರ ಹಾಗೂ ಭಕ್ತಿಯ ತಾಣ. ಪ್ರತಿ ಗುಡಿಸಲ ಮುಂಭಾಗದ ಬಾಗಿಲ ಅಕ್ಕ ಪಕ್ಕ ಕುಳಿತು ವಿಶ್ರಮಿಸಲು ಜಗಲಿಗಳು. ಇಂತಹ ಹಲವು ಗುಡಿಸಲುಗಳ ಸಮೂಹವನ್ನು ಹಾಲಕ್ಕಿಗಳು 'ಕೊಪ್ಪ' ಎಂದು ಕರೆಯುತ್ತಾರೆ.

ಈ ಹಾಲಕ್ಕಿ ಸಮಾಜದ ಆಡಳಿತಾತ್ಮಕ ವ್ಯವಸ್ಥೆ ಇಂದಿನ ಪ್ರಜಾಪ್ರಭುತ್ವಕ್ಕೂ ಒಂದು ಮಾದರಿ. ಬಹಶಃ ಬೇರೆ ಜನಾಂಗಗಳಲ್ಲಿ ನಶಿಸಿ ಹೋಗಿರಬಹುದಾದ ಈ ವ್ಯವಸ್ಥೆ ಇವರಲ್ಲಿ ಇನ್ನೂ ಚಾಲ್ತಿಯಲ್ಲಿದೆ. ಈ ವ್ಯವಸ್ಥೆ ನಮ್ಮ ಜನ ತಮ್ಮನ್ನು ತಾವೇ ಹೇಗೆ ಆಳಿಕೊಂಡರು ಎಂದು ಬೊಟ್ಟು ಮಾಡಿ ತೋರಿಸುವ ಮೂಲಕ ಮಾನವ ಸಂಸ್ಕೃತಿಯನ್ನು ಹಲವು ಹಂತಗಳಲ್ಲಿ ಪಳೆಯುಳಕೆಯಾಗಿ ಪರಿಚಯಿಸುತ್ತದೆ.

ನಾನು ಈಗಾಗಲೇ ಹೇಳಿದಂತೆ ಹಲವು ಗುಡಿಸಲುಗಳ ಒಂದು ಸಮೂಹ ಕೊಪ್ಪ ಎಂದು ಕರೆಸಿಕೊಳ್ಳುತ್ತದೆ. ಉದಾಹರಣೆಗೆ 'ಅಪ್ಪಿಕೇರಿ' ಎಂದೇ ಇಟ್ಟುಕೊಳ್ಳಿ. ಈ ಕೊಪ್ಪದ ಆಡಳಿತ ನೋಡಿಕೊಳ್ಳಲು ಮೂರು ಜನ ಮುಖ್ಯಸ್ಥರಿರುತ್ತಾರೆ. ಮೊದಲನೆಯವನು 'ಗೌಡ'. ಎರಡನೆಯವನು'ಬುಧುವಂತ'. ಮೂರನೆಯವನು ಕೋಲಕಾರ'. ಈ ಮೊದಲ ವ್ಯಕ್ತಿ ಇಡೀ ಊರಿಗೆ (ಅಂದರೆ ಕೊಪ್ಪಕ್ಕೆ) ಗೌಡ. ಇವನೇ ಶ್ರೇಷ್ಠ. ಈತನಿಗೆ ಸಹಕರಿಸಲು ಮತ್ತು ಸಲಹೆ ನೀಡಲು ಎರಡನೇ ಸ್ಥಾನದಲ್ಲಿ ಬುಧುವಂತನಿರುತ್ತಾನೆ. ಕೋಲಕಾರನ ಕೆಲಸವೆಂದರೆ ನ್ಯಾಯ, ಸಭೆ ಅಥವಾ ಕೂಟಗಳ ಸ್ಥಳ, ದಿನಾಂಕ ಹಾಗೂ ಸ್ವರೂಪವನ್ನು ಊರ ಜನಕ್ಕೆ ತಿಳಿಸುವುದು.

ಈಗ ಎರಡನೇ ಹಂತಕ್ಕೆ ಬರೋಣ. ಇಂತಹ ಹಲವು ಕೊಪ್ಪಗಳು ಸೇರಿಕೊಂಡು ಒಂದು 'ಸೀಮೆ' ಆಗುತ್ತದೆ. ಈ ಸೀಮೆಯಲ್ಲಿ 'ಗುರು' 'ಅರಸ' 'ಪ್ರಧಾನಿ' ಹಾಗೂ 'ಶ್ಯಾನುಭೋಗ' ಎಂಬ ನಾಲ್ಕು ಜನ ಪ್ರಮುಖರಿರುತ್ತಾರೆ. ಇವರಿಗೆ ಸಹಾಯಕರಾಗಿ ಈ ಸೀಮೆಯ ಮಟ್ಟದಲ್ಲಿ ಕೂಡ ಬುಧುವಂತ ಹಾಗೂ ಕೋಲಕಾರರಿರುತ್ತಾರೆ. ಈ ಪ್ರಮುಖರುಗಳ ಕಕ್ಷೆಯಲ್ಲಿ ಹಲವು ಕೊಪ್ಪಗಳ ಆಡಳಿತ ನಡೆಯುತ್ತದೆ. ಗುರುಗೌಡ ಮೇಲಿನವನು. ಈತನಿಗೆ ಸೀಮೆಯಲ್ಲಿ ಅತ್ಯಂತ ಗೌರವದ ಸ್ಥಾನ. ಮಾರ್ಗದರ್ಶನ ಈತನ ಕೆಲಸ. ಅರಸುಗೌಡ ತಪ್ಪುವೊಪ್ಪಗಳ ನಿರ್ಣಯಮಾಡುವವನು. ಪ್ರಧಾನಿಗೌಡ ಅರಸುಗೌಡನಿಗೆ ನಿರ್ಣಯದಲ್ಲಿ ಸಹಾಯ ಮಾಡುವವನು. ಪ್ರಧಾನಿಗೌಡ ಅರಸುಗೌಡನಿಗೆ ನಿರ್ಣಯ ಮಾಡುವುದಲ್ಲದೆ ವಸೂಲಿಯನ್ನು ಮಾಡಬಲ್ಲವನು. ಶ್ಯಾನುಭೋಗ (ಇವನೂ ಹಾಲಕ್ಕಿ ಜನಾಂಗದವನೇ) ಲೆಕ್ಕ ಇಡುವವನು.

ಇನ್ನು ಮೂರನೇ ಹಂತವೆಂದರೆ ಈ ಮೇಲ್ಕಾಣಿಸಿದ ವ್ಯವಸ್ಥೆಯಂತೆ ರಚಿತವಾದ ಒಟ್ಟು ಏಳು ಸೀಮೆಗಳ ಒಟ್ಟಾರೆ ಹಾಲಕ್ಕಿ ಸಮಾಜ. ಈ 7 ಸೀಮೆಗಳೆಂದರೆ ಚಂದಾವರ, ಗೋಕರ್ಣ, ಮಸಿಕೋಟೆ, ಕಂಬಾರ ಗದ್ದೆ, ಹರಿಟ್ಟೆ, ಅಂಕೋಲ ಮತ್ತು ಕಡವಾಳ. ಆದರೆ ಏಳು ಸೀಮೆಗಳಿಗೂ ಸೇರಿದಂತೆ ಒಟ್ಟಾರೆಯಾಗಿ ಯಾವ ಪ್ರಧಾನ ವ್ಯಕ್ತಿಯು ಇಲ್ಲ. ಆಯಾ ಸೀಮೆಗೆ ಆಯಾ ಸೀಮೆಯ ಮುಖ್ಯರೇ ಶ್ರೇಷ್ಠರು.

ಕೊಪ್ಪದಲ್ಲಿ ನಡೆಯುವ ಸಭೆಯನ್ನು 'ಕೂಟ' ಎಂದು ಕರೆಯುತ್ತಾರೆ. ಈ ಕೂಟದಲ್ಲಿ ತೀರ್ಮಾನಿಸಲು ಅಥವಾ ನಿರ್ಣಯ ತೆಗೆದುಕೊಳ್ಳಲು ಆಗಲಾರದ್ದನ್ನು ಸೀಮೆಯ ಮಟ್ಟಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ ಅಥವಾ ಸೀಮೆಯ ಕೊಪ್ಪಕ್ಕೆ ಬಠಮಾಡಿಕೊಳ್ಳಲಾಗುತ್ತದೆ. ಇಂತಹ ಪ್ರಮುಖ ಸಭೆಗಳನ್ನು "ಚಪ್ಪರ ಕೂಟ" ಎಂದು ಕರೆಯಲಾಗುತ್ತದೆ. ಮೊದಲಿಗೆ ಇಂತಹ ಚಪ್ಪರ ಕೂಟಗಳನ್ನು ಪ್ರತಿ ವರ್ಷ, ಪ್ರತಿ ಕೊಪ್ಪದಲ್ಲೂ ಮಾಡಬೇಕೆಂಬ ನಿಯಮವಿತ್ತಂತೆ. ಆದರೆ ಈಗ ಅಷ್ಟು ಕಡ್ಡಾಯವಾಗಿ ಈ ಸಭೆಗಳು ನಡೆಯುತ್ತಿಲ್ಲ. ಆಧುನಿಕ ಸರ್ಕಾರಿ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ಈ ಪ್ರಾಚೀನ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಸಡಿಲಗೊಂಡಿರುವುದು ನಿಜವಾದರೂ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಈ ಪ್ರಾಚೀನ ವ್ಯವಸ್ಥೆಯೇ ಈಗಲೂ ಹಾಲಕ್ಕಿಯರ ನಡುವೆ ಜನಪ್ರಿಯವಾಗಿದೆ. ಈ ಬಗ್ಗೆ ನಮ್ಮ ಮಂಡಲ ಪಂಚಾಯ್ತಿ ಸದಸ್ಯ ವೆಂಕಟೇಶ ಗಣಪು ಗೌಡನೇ ಹೇಳುವಂತೆ ಆಧುನಿಕವಾದ ಈ ಮಂಡಲ ಅಥವಾ ಅದಕ್ಕೆ ಮೇಲ್ಪಟ್ಟ ಇನ್ಯಾವುದೇ ಸದಸ್ಯ ಸರ್ಕಾರಿ ಸಭೆಗಳಲ್ಲಿ ಜನರ ಆರ್ಥಿಕ ಭವಣೆಯನ್ನು ಮನದಟ್ಟು ಮಾಡುವುದು ಮಾತ್ರ ಆತನ ಕೆಲಸ. ಇನ್ನು ಯಾವುದೇ ವಿಚಾರಕ್ಕೆ ಸಂಬಂದಿಸಿದಂತೆ ಗುರು ಮತ್ತು ಅರಸ ಹಾಗೂ ಪ್ರಧಾನಿ ಗೌಡರುಗಳದೆ ಅಂತಿಮ ತೀರ್ಮಾನ. ಅದರೆ ಇಲ್ಲಿನ ಪ್ರಮುಖರು ವಂಶ ಪಾರಂಪರ್ಯವಾಗಿ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುತ್ತಾರೆ. ಆದರೂ ಒಬ್ಬ ವ್ಯಕ್ತಿಯದೇ ತೀರ್ಮಾನವಲ್ಲ ವೆಂಬುದು ಇಲ್ಲಿನ ಒಳ್ಳೆಯ ಅಂಶ.

ಎರಡು ದಿನಗಳ ಕಾಲ ಆ ಕೊಪ್ಪದಲ್ಲಿ ನಾವು ನೋಡಿದ್ದಾದರೂ ಏನೇನು? ಒಂದೆರಡು ಸಂಗತಿಗಳಲ್ಲ. ಹಾಲಕ್ಕಿ ಜನಾಂಗದ ಸುಪ್ರಸಿದ್ಧ ಸಂಗೀತ ಗೋಷ್ಠಿ ಗುಮಟೆಪಾಂಗ್, ಅವರ ಹಗರಣ ಸಂಪ್ರದಾಯದ ಹಾಡುಗಳು, ಕೋಲು ಕುಣಿತ, ಕುಂಚದ ಕುಣಿತ, ತುಳಸಿ ಪೂಜೆ, ಜಟ್ಟಿಗನ ಪೂಜೆ, ಅಮ್ಮನ ಹಬ್ಬದ ಆಚರಣೆ, ಅತೀ ಎತ್ತರದ ಕೋಲಿನ ಮೇಲೆ ನಿಲ್ಲುವ ಮರಗಾಲು ವೇಷ. ಈ ಮರಗಾಲಿನ ಬಗ್ಗೆ ಮತ್ತಷ್ಟು ಹೇಳಲೇ ಬೇಕು ಅನ್ನಿಸುತ್ತದೆ. ಇದು ಅಂತಿಂಥ ಮರಗಾಲಲ್ಲ. ನನ್ನ ಇಷ್ಟು ವರ್ಷಗಳ ಅನುಭವದಲ್ಲಿ ಮತ್ತೆಲ್ಲೂ ಇಂತಹ ಮರಗಾಲನ್ನು ಕಂಡಿರಲಿಲ್ಲ. ಸುಮಾರು 10–12 ಅಡಿ ಎತ್ತರದ ಮರದ ಕೊರಡುಗಳನ್ನು ಕಾಲುಗಳಾಗಿಸಿ ತಮ್ಮ ಎರಡುವರೆ ಅಡಿ ಉದ್ದದ ಕಾಲಿನ ಜೊತೆಗೆ ಬೆಸೆದು ಒಟ್ಟಾರೆ 15–16 ಅಡಿ



ಎತ್ತರದ ಅಭೂತಪೂರ್ವ ವ್ಯಕ್ತಿಯಾಗಿ ಮಾರ್ಪಡುವ ಸೋಜಿಗ ಅದು. ಈ ಮರಗಳನ್ನು ಕಾಲಿಗೆ ಕಟ್ಟಿಕೊಳ್ಳುವುದಾದರೂ ಹೇಗೆ? ಒಂದು ಎತ್ತರದ ಮನೆಯ ಮೇಲೆ ಕುಳಿತು ತಮ್ಮ ಕಾಲುಗಳನ್ನು ಇಳಿಬಿಟ್ಟು ಕಟ್ಟಿಕೊಳ್ಳುವ ಈ ಕಲಾವಿದರು, ಅನಂತರ ಆ ಮನೆಯನ್ನು ಮೀರಿ ಬೆಳೆದು ಆಕಾಶಕ್ಕೆ ಕತ್ತು ಚಾಚಿ, ಕೈಯಲ್ಲಿ ಕತ್ತಿ ತಿರುಗಿಸುತ್ತಾ, ತನ್ನಂತೆಯೇ ಮರಗಾಲಿನ ಮತ್ತೊಬ್ಬ ವೀರನನ್ನು ಅಟ್ಟಿಸಿಕೊಂಡು ಹೋಗಿ ಅಂತರಿಕ್ಷದಲ್ಲಿ ಯುದ್ಧ ಮಾಡುವ ಮಹಾಪವಾಡ ಅದು. ಹೀಗೆ ನಾಲ್ಕಾರು ಜನ ಮರಗಾಲು ಕಟ್ಟಿಕೊಂಡು, ವಿವಿಧ ವೇಷಗಳನ್ನು ಹಾಕಿ ನಮ್ಮನ್ನು ರಂಜಿಸಿದರು.

ಅಪ್ಪಿಕೇರಿಯ ಮಹಿಳೆಯರು ಉತ್ತಮ ಹಾಡುಗಾರ್ತಿಯರು. ಗಂಡನ ಮನೆಯಿಂದ ಹಬ್ಬಕ್ಕೆಂದು ತೌರಿಗೆ ಬಂದಿದ್ದ ಗಣಪಿ ಎಂಬ ಮಹಿಳೆಯಂತೂ ತನ್ನ ಉತ್ತಮ ಕಂಠದಿಂದ ನಮ್ಮನ್ನು ಭಾವಪರವಶಗೊಳಿಸಿದಳು. ಅವಳ ಜೊತೆ ಸೇರಿದ ಪಾರ್ವತಿ, ಸೋಮಿಯರ ಕಂಠ ಮಾದುರ್ಯವು ಅಷ್ಟೆ. ಇಂತಹ ಹತ್ತಾರು ಹೆಂಗಸರು ಇಲ್ಲಿದ್ದಾರೆ. ವೆಂಕಟೇಶ ಗಣಪುಗೌಡ, ಮಾಸ್ತಿ ಹಾಗು ಅವರ ಮನೆಯವರು ಎರಡು ದಿನವೂ ನಮಗೆ ಮೀನಿನ ಊಟ ಬಡಿಸಿದರು. ಕೊಪ್ಪದ ಇತರ ಯುವಕರು ಪ್ರತಿ ಗಳಿಗೆಗೂ ಎಳನೀರು ಕೆತ್ತಿ ಕೊಡುತ್ತಿದ್ದರು. ಎರಡು ದಿನವೂ ಈ ಎಲ್ಲಾ ವಿಸ್ಮಯಗಳ ಮಧ್ಯೆ ನಾವು ನಿದ್ದೆ ಮಾಡಿದ್ದು ಕಡಿಮೆ. ಆದರೂ ಬೆಳದಿಂಗಳ ರಾತ್ರಿ ಆ ತಂಪು ಅಂಗಳದಲ್ಲಿ ಮಲಗಿ, ತೆಂಗಿನ ಗರಿಗಳ ನಡುವಿನಿಂದ ಇಷ್ಟಿಷ್ಟೆ ಇಣುಕಿ ಓಡುತ್ತಿದ್ದ ಚಂದ್ರನನ್ನು ಹಿಂಬಾಲಿಸುತ್ತಾ ನಾನು ಮಲಗಿದ್ದೆ.

ಅಪ್ಪಿಕೇರಿಯಲ್ಲಿ ಎರಡು ದಿನವಿದ್ದು ಮುಂದಕ್ಕೆ ಹೊರಟ ನಮ್ಮನ್ನು ಬಿಟ್ಟು ಬಿಡಲಾರದೆ ಕಳುಹಿಸಿದರು ಆ ಜನ. ಕೊಪ್ಪಕ್ಕೆ ಕೊಪ್ಪವೇ ನಮ್ಮ ಹಿಂದೆ ಹೊರಟಿತ್ತು. ಗದ್ದೆ ಬದುವಿನ ಮೇಲಿನ ಕಿರುದಾರಿಯಲ್ಲಿ ಒಬ್ಬರ ಹಿಂದೆ ಒಬ್ಬರು ಹೊರಟು, ಇಡೀ ಬಯಲಿಗೆ ಬಯಲೇ ಸರತಿ ಸಾಲಿನಿಂದ ತುಂಬಿ ಹೋಗಿತ್ತು. ಮದುವೆಯ ಹೆಣ್ಣು ಗಂಡುಗಳನ್ನು ಕಳಿಸುವಾಗಿನ ದೃಶ್ಯ. ಅವರ ಜೊತೆ ಬೆರೆತು ಅವರಂತೆಯೇ ಉಡುಪು ಧರಿಸಿ ಅಲ್ಲಿನ ಹೆಂಗಸರನ್ನು ದಂಗು ಬಡಿಸಿದ್ದ ಶ್ರೀಮತಿ ಸತ್ಯ ಅವರಿಗಂತು ಹೆಣ್ಣನ್ನು ಕಳಿಸುವಾಗಿನ ಉಪಚಾರವೇ ನಡೆದಿತ್ತು. ಬೆತ್ತಲ ಬುರುಡೆಗೆ ಗಾಂಧಿ ಟೋಪಿ ಹಾಕಿ ಸಂಜೆಯ ಹಾರುವ ಹಕ್ಕಿಗಳನ್ನೇ ದಿಟ್ಟಿಸುತ್ತಾ ಹಸನ್ಮುಖರಾಗಿ ತುಟಿ ಅರಳಿಸಿ ನಡೆಯುತ್ತಿದ್ದ ಕರೀಂಖಾನ್ ಅವರನ್ನು ತಡೆದು ತಡೆದು ನಮಸ್ಕರಿಸಿದವರು ಉಂಟು. ನಮ್ಮನ್ನು ಬೀಳ್ಕೊಡಲು ಕೇವಲ ಜನರೇ ಸಾಲದೆಂಬಂತೆ ನೂರಾರು ಬೆಳ್ಳಕ್ಕಿಗಳು ತೆರೆಯಾಗಿ ಹಾರುತ್ತಾ, ನಮ್ಮ ಮೇಲೆಯೇ ಚಿಲಿಪಿಲಿಗುಟ್ಟುತ್ತಾ ಅಪ್ಪಿಕೇರಿಯ ಇಡೀ ಬಯಲಿನಲ್ಲಿ ಸಂಜೆಯ 'ರುಜು' ಮಾಡುತ್ತಿದ್ದವು.

ಅಂದು ರಾತ್ರಿಗೆ ಹೊನ್ನಾವರದಲ್ಲಿ ಠಿಕಾಣಿ. ಮಾರನೆಗೆ ಹೊನ್ನಾವರದಿಂದ ಕುಮಟಾಕ್ಕೆ ಕುಮುಟಾದಲ್ಲಿ ಕಾಫಿ ಕುಡಿದು ಅಂಕೋಲದ ಕಡೆಗೆ ಮುಂದುವರಿಯುತ್ತಿದ್ದಂತೆ ಅಘನಾಶಿನಿ ಎದುರಾಗುತ್ತಾಳೆ. ಗುಡ್ಡಗಳ ನಡುವೆ ಅಘನಾಶಿನಿ ಸುತ್ತು ಬಳಸಿ ಹರಿಯುವ ರೀತಿಯನ್ನಂತೂ.... ಎಷ್ಟೆಂದು ಮತ್ತು ಹೇಗೆಂದು ವರ್ಣಿಸುವುದು? ಸುಮ್ಮನೆ ಹೋಗಿ ಬಿಡೋಣ. ಮತ್ತೊಂದು ತಿರುವುವಿನಲ್ಲಿ ಗಂಗಾವಳಿ ನದಿ. ಪ್ರಶಾಂತೆ, ಗಂಭೀರೆ, ಗಂಗಾವಳಿಯ ಒಂದು ತಿರುವುವಿನಲ್ಲಿ ಸುಂದರ ಸೇತುವೆ. ಅದನ್ನು ಹಾಯುವುದೇ ಸಂತಸದ ಸಂಗತಿ.

ಅಂಕೋಲದಿಂದ ನಾಲ್ಕೈದು ಕಿ.ಮಿ. ಪಶ್ಚಿಮಕ್ಕೆ ಮೊರೆವ ಸಾಗರದಿಂದ ಕೆಲವೇ ಅಡಿಗಳ ಈಚೆ ಇರುವ ಬಡಗೇರಿ. ಇದು ಹಾಲಕ್ಕಿ ಒಕ್ಕಲಿಗರ ಮತ್ತೊಂದು ತಾಣ. ಈ ಬಡಗೇರಿಯ ಹಾಲಕ್ಕಿಯವರು ಅಪ್ಪಿಕೇರಿಗಿಂತ ಭಿನ್ನವಾದವರೇನಲ್ಲ. ಆದರೆ ಇಲ್ಲಿನ ಒಬ್ಬ ಪ್ರಸಿದ್ಧ ಕಲಾವಿದೆ ಹಾಗೂ ಅಪ್ರತಿಮ ಮಾತುಗಾತಿ 'ಸುಕ್ರಿಬೊಮ್ಮಗೌಡ' ಎಂಬ ಮಹಿಳೆ ಬಗ್ಗೆ ಹೇಳದಿದ್ದರೆ ಈ ಪ್ರವಾಸ ಅಪೂರ್ಣವಾಗುತ್ತದೆ.

ಬಡಗೇರಿಯ ಪುಟ್ಟ ರಸ್ತೆಯ ಇಕ್ಕೆಲಗಳಲ್ಲಿ ತೆಂಗಿನ ತೋಟಗಳು ನಡು ನಡುವೆ ಗೊಪ್ಪೆ ಗೊಪ್ಪೆಯಾಗಿ ಕಟ್ಟಿಕೊಂಡ ನೂರಾರು ಗುಡಿಸಲುಗಳಲ್ಲಿ ವಾಸಿಸುವ ಹಾಲಕ್ಕಿಗಳಲ್ಲಿ ತುಂಬಾ ಪ್ರಸಿದ್ಧೆ ಈ ಸುಕ್ರಿ. ಕೂತಲ್ಲಿ ನಿಂತಲ್ಲಿ ನೂರು ಹಾಡುಗಳನ್ನು ಚಲ್ಲಬಲ್ಲ ಮಾಟಗಾತಿ.

ಸೋಬಾನೆ, ಜೋಗುಳ, ದೇವರ ಪದಗಳು ಮತ್ತು ಕಥನ ಕವನಗಳು ಹೇರಳವಾಗಿ ತನ್ನದೆಯಲ್ಲಿ ತುಂಬಿಕೊಂಡಿರುವ ಸುಕ್ರಿ ಹಾಡಲು ಕುಳಿತಳೆಂದರೆ ಹಲವು ರಾತ್ರಿಗಳು ಹಗಲಾಗುತ್ತವೆ. ಕೇಳಲು ಕುಳಿತ

ಮನಸ್ಸು ಮುದಗೊಳ್ಳುತ್ತವೆ. ಸುಕ್ರಿ ಕೇವಲ ಹಾಡುಗಾತಿ ಅಷ್ಟೇ ಅಲ್ಲ. ಹರಳು ಹುರಿದಂತೆ ನಿರರ್ಗಳವಾಗಿ ಮಾತನ್ನಾಡುತ್ತಾ, ವಾದಕ್ಕೂ ಇಳಿಯುವ ಚಲಗಾತಿ. ಜನಪದ ಸಾಹಿತ್ಯ ಇಂತವರಿಂದಲೇ ಸೃಷ್ಟಿಯಾಗಿದೆ ಎಂದು ಹೇಳಬಹುದು. ಒಂದಕ್ಷರವನ್ನು ಕಲಿಯದ ಈ ನಿರಕ್ಷರ ಕುಕ್ಷಿಯ ಎದೆಯಲ್ಲಿ ಬಹುದೊಡ್ಡ ಜ್ಞಾನಜ್ಯೋತಿಯು ಇದೆ. ಅದರ ಪ್ರಭೆ ಅಕ್ಷರ ಕಲಿತವರನ್ನು ಮಣಿಸುತ್ತದೆ.

ಸುಕ್ರಿಯ ಮನೆಯಲ್ಲಿ ಅದೆಷ್ಟು ಹೊತ್ತು ಕಳೆದವೂ. ಮಹಾಕವಿವೊಬ್ಬನ ಸಾನ್ನಿಧ್ಯದಂತೆ ಅಲ್ಲಿ ಅವರ್ಣನೀಯ ಅನುಭವಕ್ಕೆ ನಾನು ಒಳಗಾದೆ. ಸುಕ್ರಿಯ ಜೊತೆಗೆ ಧನಿ ಗೂಡಿಸಿದ ಮೂವರು ಹೆಣ್ಣು ಮಕ್ಕಳ ಕಂಠವು ತುಂಬಾ ಮಧುರವಾಗಿತ್ತು. ಸುಕ್ರಿಕೊಟ್ಟ ಬೆಲ್ಲ ನೀರು, ತದನಂತರದ ಎಳನೀರು (ಸೀಯಾಳ) ಆನಂತರದ ಅವಳ ಮಮತೆ ತುಂಬಿದ ನಿಷ್ಕಪಟ ಹಾಡಿನ ರಾಗರಸಧಾರೆ ನಮ್ಮನ್ನು ಸುಪ್ರೀತಗೊಳಿಸಿತ್ತು.

### "ಪದ್ಮಶ್ರೀ" ಪಡೆದ 'ಹಾಡುವ ಹಾಲಕ್ಕಿ' ಸುಕ್ರಿ ಬೊಮ್ಮಗೌಡ

1986ರಲ್ಲಿ ಪ್ರಥಮ ಬಾರಿಗೆ ಸುಕ್ರಿ ಅವರನ್ನು ಭೇಟಿ ಮಾಡಿದ ನಾನು ಆ ನಂತರ ಹತ್ತಾರು ಬಾರಿ ಅಲ್ಲಿಗೆ ಹೋಗಿ ಬಂದಿದ್ದೇನೆ. ಈ ನಡುವೆ ಜಾನಪದ ಅಕಾಡೆಮಿಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸರ್ಕಾರದ ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ಸುಕ್ರಿ ಪಡೆದಿದ್ದಾರೆ.

ಗಿರಿಜನರಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಅವರಿಗಾಗಿ ದುಡಿದ ವೆರಿಯರ್ ಎಲ್ವಿನ್ ಒಮ್ಮೆ ಮಧ್ಯಪ್ರದೇಶದ ಗೊಂಡರ ಕಲಾವಿದರೊಂದಿಗೆ ಮಾತಾಡುತ್ತಿರುತ್ತಾರೆ. ತನ್ನ ಹಾಡಿಯ ಹತ್ತಿರದಿಂದ ಹಾದು ಹೋದ ಹೊಸ ರೈಲು ಹಳಿಗಳನ್ನು ಕುರಿತು ಆ ಕಲಾವಿದ ಹೀಗೆ ಹೇಳುತ್ತಾನೆ– ಮೊದಲಿಗೆ ನಾವೆಲ್ಲಾ ನಮ್ಮ ದೇವರ ಕೃಪೆಯಿಂದ ತುಂಬಾ ಸಿರಿವಂತರಾಗಿದ್ದೆವು. ಆರೋಗ್ಯವಾಗಿದ್ದೆವು. ಅಷ್ಟರಲ್ಲಿ ರೈಲು ಚಂದ ನೋಡಿ ನಮ್ಮ ದೇವರು ಕೂಡ ಅದನ್ನು ಹತ್ತಿ ಪಟ್ಟಣಕ್ಕೆ ಹೊರಟುಹೋದ. ಈಗ ನಾವೆಲ್ಲ ಬಡವರಾಗಿದ್ದೇವೆ. ಪಟ್ಟಣದವರು ಸಿರಿವಂತರಾಗಿದ್ದಾರೆ. ಆಧುನಿಕತೆ ಗಿರಿಜನರ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ.



ಜಾನಪದ ಕ್ಷೇತ್ರದಲ್ಲಿನ ತನ್ನ ಕಲಾ ಸೇವೆಗಾಗಿ ಕರ್ನಾಟಕ ಸರ್ಕಾರದ ಅತ್ಯುನ್ನತ ಜಾನಪದಶ್ರೀ ಪ್ರಶಸ್ತಿ ಪಡೆದ ಸುಕ್ರಿಬೊಮ್ಮಗೌಡ ಅವರನ್ನು ಮಾತಾಡಿಸಿ ಬರಬೇಕೆಂದು ಹೊರಟ ನನಗೆ ಮೇಲಿನ ರೀತಿಯ ಪ್ರಶ್ನೆಗಳೇ ಎದುರಾದವು. ಉತ್ತರ ಕನ್ನಡಕ್ಕೆ ಕೊಂಕಣ ರೈಲು ಬಂತು ಹಾಗೂ ವಿದ್ಯುತ್ತಿನ ಅನೇಕ ಅಣೆಕಟ್ಟುಗಳು ನಿರ್ಮಾಣವಾದವು. ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿಯ ದಾಪುಗಾಲಿನಲ್ಲಿದೆ ಎಂಬುದು ನಮ್ಮೆಲ್ಲರ ನಂಬಿಕೆ. ಆಧುನಿಕ ಭಾರತದ ನಿರ್ಮಾಣಕ್ಕೆ ಇವೆಲ್ಲವೂ ಬೇಕೆಂಬುದು ನಿಜ. ಆದರೆ ದೊಡ್ಡದೊಡ್ಡ ಯೋಜನೆಗಳು ಸಣ್ಣ ಸಮುದಾಯಗಳ ಕನಸುಗಳನ್ನು ಹೇಗೆ ನಾಶಗೊಳಿಸುತ್ತವೆ ಎಂಬುದರ ಕಡೆಗೂ ನಮ್ಮ ಲಕ್ಷ್ಯವಿರಬೇಕಾಗುತ್ತದೆ. "ಇದರಿಂದ ನಮಗೆ ಒಳ್ಳೆಯದಂತೂ ಆಗಲಿಲ್ಲ, ನಮ್ಮ ಜಮೀನು ಹೋಯಿತು, ಮನೆ ಮಠ ಹೋದವು ಭೂಮಿಯನ್ನೇ ನಂಬಿದ ನಮ್ಮ ಸಮಾಜಕ್ಕೆ ಇದರಿಂದ ಕೆಡುಕೇ ಹೆಚ್ಚಾಯಿತು" ಎಂದು ಕೊಂಕಣ ರೈಲ್ವೆ ಬಗ್ಗೆ ಹೇಳುವ ಸುಕ್ರಿ ಅರಣ್ಯ ನಾಶ ಮಾಡುತ್ತಿರುವವರ ವಿರುದ್ಧ ತೀವ್ರ ನೋವಿನಿಂದ ಕಿಡಿ ಕಾರುತ್ತಾಳೆ. "ಆಗ ಅರಣ್ಯ ಹೇಗಿತ್ತು? ನಿಮಗೆ ಗೊತ್ತಿಲ್ಲ, ಸುತ್ತಲ ಏಳೇಳು ಲೋಕವೂ ಅರಣ್ಯವೇ, ಅರಣ್ಯ ಬಿಟ್ಟರೆ

ಸಮುದ್ರ ಅಷ್ಟೆ. ಈಗ ಬರೇ ಎಕ್ಕೇಸನ್ (ಅಕೇಶಿಯಾ) ಗಿಡ. ಅದರ ಅಡಿಯಲ್ಲಿ ಹುಲ್ಲೂ ಹುಟ್ಟುವುದಿಲ್ಲ. ಬರೀ ಬೆಂಕಿ". ಇದು ಸುಕ್ರಿಯ ಅನುಭವದ ಮಾತು.

ಉತ್ತರ ಕನ್ನಡ ಜಿಲ್ಲೆ ಪ್ರಕೃತಿಗೆ ಹೆಸರಾದ ತಾಣ. ಕಡಲು ಮತ್ತು ಪರ್ವತಗಳ ನಿರಂತರ ಚುಂಬನ ಇಲ್ಲಿ ನಡೆಯುತ್ತದೆ. ಗುಡುಗುಡುಸಿ ಹರಿದು ಬರುವ ನದಿಗಳು ಕ್ರಮೇಣ ಪ್ರಶಾಂತವಾಗಿ ವಿಶಾಲವಾಗುತ್ತಾ ಬೆಟ್ಟ ಪಂಕ್ತಿಗಳನ್ನು ತಬ್ಬಿಕೊಳ್ಳುತ್ತಾ ಸಮುದ್ರದಲ್ಲಿ ಮೊರೆವ ಸಾಗರದಿಂದ ಕೆಲವೇ ಅಡಿಗಳ ಈಚೆ ಇರುವ ಒಂದು ಸುಂದರ ತಾಣ ಬಡಗೇರಿ. ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಅನೇಕ ಕೊಪ್ಪಗಳಲ್ಲಿ ಬಡಗೇರಿಯೂ ಒಂದು. ಬಡಗೇರಿಯ ಪುಟ್ಟ ರಸ್ತೆಯಲ್ಲಿನ ಇಕ್ಕೆಲಗಳ್ಳಿ ತೆಂಗಿನ ತೋಟಗಳ ನಡುವೆ ಗೊಪ್ಪೆಗೊಪ್ಪೆಯಾಗಿ ಕಟ್ಟಿಕೊಂಡ ನೂರಾರು ಗುಡಿಸಲುಗಳು. ಗುಡಿಸಲ ಮುಂದೆ ಕನ್ನಡಿಯಂತೆ ಹೊಳೆಯ ತುಂಬ ರಂಗೋಲಿ, ಚಿತ್ತಾರ. ಹಾಲಕ್ಕಿ ಹೆಣ್ಣುಮಕ್ಕಳು ಪ್ರಕೃತಿಯ ಒಡಲಿನಸೌಂದರ್ಯವತಿಯರು.

ಸುಮಾರು 65 ವರ್ಷಗಳನ್ನು ಕಳೆದಿರುವ ಸುಕ್ರಿಯ ಜೀವನ ಕೂಡ ಒಂದು ಕಾದಂಬರಿಗೆ ವಸ್ತುವಾಗುವಂಥದ್ದು. ತನ್ನ ಹನ್ನೆರಡನೇ ವರ್ಷಕ್ಕೆ ಮದುವೆಯಾದ ಸುಕ್ರಿಯನ್ನು ಗಂಡನ ಮನೆಗೆ ಹೆಗಲ ಮೇಲೆ ಕೂರಿಸಿಕೊಂಡು ಹೊತ್ತು ತರುತ್ತಾರೆ. ಮದುವೆಯಾದ ಬೊಮ್ಮಗೌಡನಿಗೆ ಆಗ ನಲವತ್ತೆಂಟು ವರ್ಷಗಳಂತೆ! ಹೆಣ್ಣುಗಳು ಸಿಗುವುದೇ ಅಪರೂಪವಾಗಿದ್ದ ಆ ಕಾಲದಲ್ಲಿ ಬೊಮ್ಮಗೌಡ ಕಾದು ಕಾದು 12 ವರ್ಷದ ಬಾಲೆ ಸುಕ್ರಿಯನ್ನು ವರಿಸಿದ್ದ! "ಅಮ್ಮನೋರು ಮೈನೆರೆದಾಗ ಅಯ್ಯನೋರು ದಂಡಿಗೆ ಏರುದ್ರು" ಎಂದೂ "ಮುದುಕನ ಹೆಂಡತಿ" ಎಂದೂ ಜನ ಕೀಟಲೆ ಮಾಡಿದ್ದುಂಟು. ಕೂಲಿಯೇ ಜೀವನ, ಕಟ್ಟಿಕೊಂಡವನೇ ದೈವ ಎಂದು ಸುಕ್ರಿ ಬಾಳಿದಳು. ಗಂಡ ತೀರಿಕೊಂಡಾಗ ಸುಕ್ರಿಗೆ ಇನ್ನೂ ಹರೆಯ. ಅಂಕೋಲ ತಾಲ್ಲೂಕಿನ ಅಂಬಾರ ಕೊಡ್ಲಿನ ಶಿರ್ಕುಲಿಯಲ್ಲಿ ಜನ್ಮ ತಾಳಿದ ಸುಕ್ರಿ ತಾನು ಹುಟ್ಟಿದಾಗಿನಿಂದಲೂ ಕೂಲಿ ಮಾಡಿ ಬದುಕಿದವಳೆ. "ಅವರೆಲ್ಲ ಎರಡು ಸಿದ್ದೆ ಅಕ್ಕಿ ತಂದರೆ ನಾನು ಒಂದು ಸೀಮೆಯನ್ನಾದ್ರೂ ತರುತ್ತಿದ್ದೆ" ಎನ್ನುವ ಸುಕ್ರಿಗೆ ಮಹಾ ಸ್ವಾಭಿಮಾನ. ಅಷ್ಟೆಲ್ಲ ಕಷ್ಟದಲ್ಲಿ ಬೆಳೆದು ಬಂದ ಅನುಭವವಿದ್ದಿದ್ದರಿಂದಲೇ ವಿಧವೆಯಾಗಿಯೂ ಸ್ವಾಭಿಮಾನದ ಬದುಕನ್ನೇ ಸುಕ್ರಿ ನೀಗಿಸಿದ್ದಾಳೆ. ಇವತ್ತಿಗೂ ಕೂಲಿಯೇ ಜೀವನಾಧಾರ. ಹಾಲಕ್ಕಿ ಸಮಾಜದಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆ. ಹಾಗೇ ಆಗಬಹುದಿತ್ತಲ್ಲಾ? ಪ್ರಶ್ನೆ ಹಾಕಿದ್ದೆ ತಡ, ಸುಕ್ರಿ ಒಂದು ಹಾಡಿನ ಮೂಲಕ ಕಥೆ ಹೇಳಲು ಪ್ರಾರಂಭಿಸಿದಳು. ಅದು ಒಂದು ನವಿಲಿನ ಕಥೆ. ಗಂಡ ನವಿಲಿಗೆ ಬಾಣ ಬಿದ್ದು ಸಾಯುತ್ತದೆ. ಬಾಣ ಬಿಟ್ಟ ಬೇಟೆಗಾರ ಇನ್ನೊಂದು ಗಂಡನ ತರಿಸಿಕೊಡುವೆ ಎನ್ನುತ್ತಾನೆ. ಇದ್ದ ಪತಿಯೇ ಹೋದ ಮ್ಯಾಲೆ ಮತ್ತೊಂದು ಗಂಡನ ಗೊಡವೆಯಾಕೆ? ಬೇಡವೆಂದು ಹೆಣ್ಣು ನವಿಲು ತಿರಸ್ಕರಿಸುತ್ತದೆ. ನವುಲಕ್ಕಿಯೇ ಹಾಗೇ ಮಾಡಿದಾಗ ನರಮನುಷ್ಯೆಯಾದ ನಾನು ಯಾಕೆ ಹಾಗೆ ಮಾಡಬೇಕು? ಇದು ಸುಕ್ರಿಯ ಅಂತರಾಳದ ನೈತಿಕ ನಂಬಿಕೆ.

ಸುಕ್ರಿ ಇಷ್ಟೆಲ್ಲ ಹಾಡು ಕಥೆ ಕಾವ್ಯಗಳನ್ನು ಹೇಗೆ ಕಲಿತಳು? ಹಾಗೇ ನೋಡಿದರೆ ಇಡೀ ಹಾಲಕ್ಕಿ ಸಮಾಜವೇ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾದದ್ದು. ಶಿವ ಮತ್ತು ಪಾರ್ವತಿಯರು ಕೊಟ್ಟ ಹಾಲು-ಅಕ್ಕಿಯಿಂದಲೂ ಬಲೀಂದ್ರ ದೇವ ನೀಡಿದ ಭೂಮಿ ಮತ್ತು ಬೆಳೆಯಿಂದಲೂ ನಾವು ಬದುಕಿದ್ದೇವೆ ಎಂದು ನಂಬುವ ಈ ಜನರ ಬದುಕು ಬಣ್ಣ ಬಣ್ಣದ್ದು. ಸುಗ್ಗಿ ಹಬ್ಬ, ತುಳಸಿ ಹಬ್ಬ, ಹೊಸತಿನ ಹಬ್ಬ, ಬೂರೆ ಹಬ್ಬ, ಗದ್ದೆ ಗಂಡನ ಹಬ್ಬ, ಬಲೀಂದ್ರನ ಹಬ್ಬ ಮುಂತಾಗಿ ತಮ್ಮದೇ ವಿಶಿಷ್ಟತ ಹಬ್ಬದಾಚರಣೆಗಳನ್ನು ಮಾಡುವ ಇವರಲ್ಲಿ ಅಳೆದಷ್ಟೂ ಹಾಡುಗಳ ಬಳ್ಳ, ಮೊಗೆದಷ್ಟು ಕಥೆಗಳ ಸಾಗರ. ಗುಮಟೆಯ ಸದ್ದಿಗೆ ತಕ್ಕಂತೆ ಕುಣಿಯುವ ಹಾಡುವ ಗಂಡಸರ ಲೆಕ್ಕವಿಲ್ಲದಷ್ಟೂ ಸುಗ್ಗಿಯ ಹಾಡುಗಳಿಗೆ ಸರಿ ಸಮಾನವಾಗಿ ಹೆಂಗಸರ ಹಾಡುಗಳು ಇವೆ. ತಮ್ಮದೆ ನ್ಯಾಯ ಪದ್ಧತಿ, ತಮ್ಮದೇ ವೈವಾಹಿಕ ಪದ್ಧತಿ ಹಾಗೂ ತಮ್ಮದೇ ಆದ ಹಲವು ಪರಂಪರಾಗತ ಜ್ಞಾನ ಪದ್ಧತಿಗಳನ್ನು ಈಗಲೂ ಉಳಿಸಿಕೊಂಡು ಬಂದಿದ್ದಾರೆ ಹಾಲಕ್ಕಿಗಳು. ಇಂತಹ ಹಾಲಕ್ಕಿಗಳ ಸುಂದರ ಸಮಾಜದಲ್ಲಿ ಅರಳಿದ ಕಾಡಿನ ಕುಸುಮ ನಮ್ಮ ಸುಕ್ರಿ. ತನ್ನ ತಾಯಿಯಾದ ದೇವಿ ಮತ್ತು ಅಜ್ಜಿಯಿಂದ ಆರಂಭದಲ್ಲಿ ಕಲಿತು ತನ್ನ ಪರಿಸರದಿಂದ ಹಾಡು ಕಲಿತ ಸುಕ್ರಿ, ತನ್ನ ಪ್ರತಿಭಾ ಶಕ್ತಿಯನ್ನು ಅದಕ್ಕೆ ಬೆರಸಿ ಹೊಸ ಹೊಸ ಜಾನಪದ ಹಾಡುಗಳ ಉದಯಕ್ಕೆ ಕಾರಣಳಾದವಳು. ತನ್ನ ಮುಂದೆ ನಿಂತ ಯಾರನ್ನು ಕುರಿತು ಬೇಕಾದರೂ ತಟ್ಟನೆ ಹಾಡು ಕಟ್ಟಿ ಹಾಡಬಲ್ಲ ಜಾಣ್ಮೆವುಳ್ಳ ಸುಕ್ರಿ ಪರಂಪರೆಯನ್ನು ಕೂಡ ಬಿಟ್ಟವಳಲ್ಲ. ಮೂಲ ಧಾಟಿ, ಬಲಿ ಹಾಗೂ ಧನಿಗಳನ್ನು ಕಾಪಾಡಿಕೊಂಡು

ಬಂದಿದ್ದಲ್ಲದೆ ತನ್ನ ಸುತ್ತಲ ಬಳಗಕ್ಕೂ ಅದನ್ನು ಕಲಿಸುವ ಹಟ ಮತ್ತು ಔದಾರ್ಯ ಅವಳದು. ಮಾದೇವರಾಯ, ಚಂದನರಾಯ,ರಾಮ– ಲಕ್ಷಣ, ಐರಾವತ, ಕುಂತಿ ಕಥೆ, ಸಿರಿಕವುಲಿ ಮುಂತಾದ ಕಾವ್ಯಗಳನ್ನು ಹಾಡುವ ಸುಕ್ರಿ ಬಲೀಂದ್ರರಾಯ ಗೋವಿಂದರಾಯ, ತಂಗಿ ತುಳಸಮ್ಮ ಹಾಗೂ ಕರಿದೇವರ ಬಗೆಗಿನ ಕಥನ ಕವನಗಳನ್ನು ಹಾಡುತ್ತಾಳೆ. ಕಳೆ, ನಾಟಿ, ಮದುವೆ, ಸೋಬಾನೆ, ಸುಗ್ಗಿ ಮುಂತಾದ ಬಿಡಿ ಹಾಡುಗಳಿಗಂತೂ ಲೆಕ್ಕವಿಲ್ಲ.

ಆಧುನಿಕ ವ್ಯವಸ್ಥೆ ಹಾಗೂ ಕಲುಷಿತಗೊಂಡ ಮನಸ್ಸುಗಳ ಬಗ್ಗೆ ಸುಕ್ರಿಗೆ ಎಲ್ಲಿಲ್ಲದ ಕೋಪ. ತಮ್ಮ ಸಮಾಜದ ಗೌಡ ಬುದವಂತರ "ಸೀಮೆ ಹಾಗೂ ಚಪ್ಪರಕೂಟ"ದ ನ್ಯಾಯಪದ್ಧತಿಯೇ ಸರಿ ಎಂದು ನಂಬಿರುವ ಸುಕ್ರಿಗೆ ಕಿತ್ತಾಡಿ ಕೋರ್ಟು ಕಛೇರಿ ಹತ್ತುವವರ ಬಗ್ಗೆ ತೀವ್ರವಾದ ಮರುಕವಿದೆ. ಮದ್ಯಪಾನದಿಂದಾಗಿ ಇಡೀ ಸಮಾಜವೇ ನಾಶವಾಗುತ್ತಿದೆ ಎಂದು ಮರುಗುವ ಸುಕ್ರಿ ಮದ್ಯಪಾನದ ವಿರುದ್ಧದ ಚಳುವಳಿಯಲ್ಲಿ ಮಂಚೂಣಿ ನಾಯಕತ್ವ ವಹಿಸಿದ್ದಾಳೆ. ದಿ. ಕುಸುಮ ಸೊರಬ ಅವರ ಮಾರ್ಗದರ್ಶನದಲ್ಲಿ ಸಾವಿರಾರು ಮಹಿಳೆಯರನ್ನು ಒಟ್ಟುಗೂಡಿಸಿ, ಅಂಕೋಲ, ಕಾರವಾರ, ಸಿರ್ಸಿ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳ ಕಛೇರಿಗಳ ಮುಂದೆ ಧರಣಿ ನಡೆಸುತ್ತಿದ್ದಾಳೆ. ತನ್ನ ಪ್ರಯತ್ನದಿಂದಾಗಿಯೇ ಬಡಗೇರಿಕೊಪ್ಪದಲ್ಲಿ ಇಂದು ಯಾವ ಗಂಡಿಗೂ ಮದ್ಯಪಾನ ಮಾಡುವ ಧೈರ್ಯವಿಲ್ಲ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ ಸುಕ್ರಿ.

ಬಡಗೇರಿಯ ಹಾಲಕ್ಕಿ ಹೆಣ್ಣುಮಕ್ಕಳನ್ನು ಒಂದು ಗೂಡಿಸಿ ಅವರಿಗೆ ಪ್ರಾಚೀನ ಕುಣಿತಗಳೆನಿಸಿದ 'ತಾರ್ಲೆ, ಪಗಡೆ, ಬಿದರಂಡೆ' ಮುಂತಾದ ಕೆಲವನ್ನು ಕಲಿಸುತ್ತಿರುವ ಸುಕ್ರಿಗೆ ಅವುಗಳನ್ನು ಉಳಿಸುವ ಅಪಾರ ಆತ್ಮ ವಿಶ್ವಾಸವಿದೆ. ತನಗೆ ಬಂದ ಜಾನಪದಶ್ರೀ ಪ್ರಶಸ್ತಿ ಇಡೀ ಹಾಲಕ್ಕಿ ಸಮಾಜಕ್ಕೆ ಎಂದು ಹೇಳುತ್ತಾಳೆ. ಇಂತಹ ಮಹಾನ್ ವ್ಯಕ್ತಿತ್ವದ ಬುಡಕಟ್ಟು ಕಲಾವಿದೆಯನ್ನು ಗುರುತಿಸಿ ಜಾನಪದಶ್ರೀ ಪ್ರಶಸ್ತಿ ನೀಡುವ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸರ್ಕಾರ ತನ್ನನ್ನು ಗೌರವಿಸಿಕೊಂಡಿದೆ. ಆದರೆ, ಆರ್ಥಿಕವಾಗಿ ತೀರ ದುಸ್ಥಿತಿಯಲ್ಲಿರುವ ಹಾಲಕ್ಕಿ ಒಕ್ಕಲಿಗರ ಅಭ್ಯದಯಕ್ಕಾಗಿ ಸರ್ಕಾರ ಏನಾದರೂ ಹೊಸ ಯೋಜನೆಗಳನ್ನು ರೂಪಿಸುತ್ತದೆ ಎಂದು ಆಶಿಸೋಣವೇ?

**ಅಕಾಡೆಮಿ ಅಭಿನಂದನೆ:**

ನಾನೀಗಾಗಲೇ ಪ್ರಸ್ತಾಪಿಸಿದಂತೆ ಜಾನಪದ ಅಕಾಡೆಮಿ ಸುಕ್ರಿಬೊಮ್ಮಗೌಡರನ್ನು ಅಭಿನಂದಿಸಿದ ವಿಶೇಷ ಸಮಾರಂಭದ ಬಗ್ಗೆ ಹೇಳದೇಹೋದಲ್ಲಿ ಈ ಲೇಖನ ಅಪೂರ್ಣವಾಗುತ್ತದೆ. ಅದ್ಭುತ ಕಲಾವಿದರನ್ನು ಕಂಡಾಗ ಅಷ್ಟೇ ಅದ್ಭುತವಾಗಿ ಪುಲಕಗೊಳ್ಳುವ ಜಾನಪದ ಅಕಾಡೆಮಿ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ ಅಕ್ಷರಶಃ ಅಂದು ಆನಂದೋತ್ಸಾಹದಲ್ಲಿದ್ದರು. ಉತ್ತರ ಕನ್ನಡದ ವಿದ್ವಾಂಸರಲ್ಲದೆ, ನಾಡಿನ ವಿವಿದೆಡೆಯಿಂದ ಸಂಶೋಧಕರನ್ನು ಆಹ್ವಾನಿಸಿದ್ದರು. ಉತ್ತರ ಕನ್ನಡದ ಅನೇಕ ಕಲಾತಂಡಗಳೂ ಅಲ್ಲಿ ಮೇಳೈಸಿದ್ದವು. ಒಡಗೂಡಿದ ಜನ ಸಮೂಹ ಹಾಗೂ ಅಂಕೋಲೆಯ ನಾಗರೀಕರೂ ಸೇರಿ ಅದೊಂದು ಪುಟ್ಟ ಜಾತ್ರೆಯೇ ನೆರೆದಿತ್ತು. ಅಂಕೋಲೆಯ ಪೇಟೆಬೀದಿಯ ಹತ್ತಿರವಿರುವ ದೇವಸ್ಥಾನದ ಬಯಲಲ್ಲಿ ಬೆಳಿಗ್ಗೆ 10ಕ್ಕೆ ಸೇರಿದ ಸುಕ್ರಿ ಅವರ ಈ ಅಭಿಮಾನಿ ಸಮೂಹ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಮೆರವಣಿಗೆಯನ್ನು ಕಣ್ತುಂಬಿಕೊಳ್ಳುವ ತವಕದಲ್ಲಿತ್ತು. ಸುಕ್ರಜ್ಜಿ ಅಂದಿನ ಎಲ್ಲರ ಕಣ್ಣಿನ ಕೇಂದ್ರ ಬಿಂದು. ಬಂದವರೆಲ್ಲರೂ ಸುಕ್ರಜ್ಜಿಯ ಕಾಲಿಗೆ ನಮಸ್ಕರಿಸುವವರೇ. ತಬ್ಬಿ ಮುತ್ತಿಡುತ್ತಾ ಮಾತೃ ಪ್ರೇಮವನ್ನು ಮೆರೆಯುವವರೇ. ತನ್ನ ಸುಕ್ಕು ಗಟ್ಟಿದ ಕೆನ್ನೆ ಮತ್ತು ಹಲ್ಲಗಳನ್ನು ಅರಳಿಸುತ್ತಾ, ಆ ವಯೋವೃದ್ಧ ಸುಂದರ ನಗೆ ಮುಖದಲ್ಲಿ ಪುಟ್ಟ ಕಣ್ಣುಗಳನ್ನು ಪಿಳಿಪಿಳಿಸುತ್ತಾ ತಾನಿನ್ನು ಹದಿನಾರರವಳು ಎಂಬ ಅಮಿತೋತ್ಸಾಹದಲ್ಲಿದ್ದ ಆ 82ರ 'ಪೋರಿ' ನಿಜಕ್ಕೂ ಎಲ್ಲರನ್ನು ಸಮ್ಮೋಹಿಸುವ ನಗೆಮುಖದ ಆದಿಶಕ್ತಿಯಂತೆ ಗೋಚರಿಸುತ್ತಿದ್ದರು. ಅಲಂಕೃತಗೊಂಡ ವಾಹನದಲ್ಲಿ ಅಕಾಡೆಮಿ ಅಧ್ಯಕ್ಷ ಪಿಚ್ಚಳ್ಳಿಯವರು ಮತ್ತು ಸುಕ್ರಿ ಏರಿ ನಿಂತಾಗ ಆನಂದೋತ್ಸಾಹದ ಶಿಳ್ಳೆ, ಚಪ್ಪಾಳೆ, ಹೆಂಗಳೆಯರ ಕಳಸಪೂಜೆ ಶಾಲಾ ವಿದ್ಯಾರ್ಥಿನಿಯರ ಸಾರೋಟು. ಇವೆಲ್ಲಕ್ಕೂ ಕಳೆ ಕಟ್ಟುವಂತೆ ಸುಗ್ಗಿ ಕುಣಿತ, ಗುಮಟೆಪಾಂಗು, ತಾರ್ಲೆ ಕುಣಿತ, ಡೊಳ್ಳು, ಸಿದ್ಧಿಯರ ಢಮಾಮಿ ನೃತ್ಯ, ಗೊಂಡರ ಮಂಡಲ ಕುಣಿತ, ಗೌಳಿಗರ ಕುಣಿತ, ಕುಣಬಿ ನೃತ್ಯ, ಗಾರುಡಿ ಗೊಂಬೆ ಮುಂತಾದ ಕಲಾಮೇಳಗಳ ವೈವಿಧ್ಯಮಯ ರಂಗು.

ಮೆರವಣಿಗೆ ಸುಮಾರು ಒಂದು ಕಿಲೋ ಮೀಟರ್‌ನಷ್ಟು ದೂರ ಸಾಗಿ ಬರುವಾಗ ಪೇಟೆ ಬೀದಿಯಲ್ಲಿ ನಿಂತ ನೂರಾರು ಜನರ ಮುಕ್ತ ಅಭಿನಂದನೆ. ಸುಕ್ರಿ ಈಗಾಗಲೇ ಇಂಥ ಎಷ್ಟೋ ಮೆರವಣಿಗೆ ಕಂಡವಳು, ಆದರೆ ತನ್ನದೇ ಮಣ್ಣಿನಲ್ಲಿ ತಾನು ಬೆಳೆದ ಬದುಕಿನ ನೆಲದಲ್ಲಿ ಇಂಥ ಒಂದು ಆಪ್ತ ಮೆರವಣಿಗೆ ನಡೆಯುತ್ತಿದ್ದರೆ ಅದೊಂದು ನಿಜಕ್ಕೂ ಅಂತರಂಗದ ಸಂತಸ. ಸುಕ್ರಿಯ ಕಣ್ಣುಗಳಲ್ಲಿ ಆ ಖುಷಿ ಮಿಂಚಿನಂತೆ ಪ್ರವಹಿಸುತ್ತಿತ್ತು. ಈ ಅಪೂರ್ವ ಮೆರವಣಿಗೆ ಸಾಗಿ ಬಂದದ್ದು ಅಂಕೋಲಾದ ಸ್ವಾತಂತ್ರ್ಯ ಹೋರಾಟದ ಸ್ಮಾರಕ ಭವನಕ್ಕೆ. ಸ್ಮಾರಕ ಭವನ ಸುಕ್ರಿಯ ಅಭಿಮಾನಿಗಳಿಂದ ತುಂಬಿಹೋಗಿತ್ತು.

ಮೊದಲಿಗೆ ಸುಕ್ರಿ ಸಂಕಥನ ಎಂಬ ವಿಚಾರ ಸಂಕಿರಣ ಆರಂಭದಲ್ಲಿ ಜಾನಪದ ಅಕಾಡೆಮಿ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸರಿಂದ ಕಾರ್ಯಕ್ರಮದ ಉದ್ದೇಶವನ್ನು ಕುರಿತ ಪ್ರಾಸ್ತಾವಿಕ ಮಾತು. ಉತ್ತಮ ವಾಗ್ಮಿಗಳಾದ ಪಿಚ್ಚಳ್ಳಿ ಶ್ರೀನಿವಾಸ ಅವರು ತಮ್ಮ ಮನಮೋಹಕ ಹಾಡುಗಳನ್ನು ಹಾಡುತ್ತಾ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ವಿಚಾರ ಸಂಕಿರಣಕ್ಕೆ ಚಾಲನೆ ನೀಡಿದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ ಅವರು ತಮ್ಮ ಮತ್ತು ಸುಕ್ರಿಯವರ ನಡುವಿನ ಮೂರು ದಶಕಗಳಿಗೂ ಹೆಚ್ಚಿನ ಸಾಂಸ್ಕೃತಿಕ ಬಾಂಧವ್ಯವನ್ನು ನೆನೆಯುತ್ತಾ ಸುಕ್ರಿ ನಡೆದು ಬಂದ ದಾರಿಯನ್ನು ಆಪ್ತವಾಗಿ ವಿವರಿಸಿದರು. ಹಾಲಕ್ಕಿ ಸಮುದಾಯದ ಒಳಗಿನಿಂದಲೇ ರೂಪುಗೊಂಡ ಕವಿ ಮತ್ತು ಲೇಖಕ ಶ್ರೀ ಪಾಲ್ಗುಣಗೌಡ ಅಚಿವೆ ಅವರು ಹಾಲಕ್ಕಿ ಸಮುದಾಯದ ವಿಶಿಷ್ಟತೆಯನ್ನು ಕುರಿತು ಮನಮುಟ್ಟುವಂತೆ ವಿವರಿಸಿದರು. ಸಾಕ್ಷ್ಯಚಿತ್ರ ನಿರ್ದೇಶಕ ಹಾಗೂ 'ಸಿರಿಗಂಧ' ಜಾನಪದ ಧಾರಾವಾಹಿಯ ನಿರೂಪಕಿ ಕವಿತಾ ಸಾಗರ ಅವರು ಸುಕ್ರಿಯವರ ಹಾಡು, ಕಥನ ಮತ್ತು ಕಲಾ ಪ್ರದರ್ಶನಗಳ ಬಗ್ಗೆ ಸವಿವರವಾದ ಮಾಹಿತಿ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಉತ್ತರ ಕನ್ನಡದ ಖ್ಯಾತ ಜಾನಪದ ವಿದ್ವಾಂಸ ಹಾಘೂ ಕವಿ ಡಾ. ಸೈಯದ್ ಜಮೀರುಲ್ಲಾ ಷರೀಫ್ ಅವರು ಸುಕ್ರಿ ಅವರ ಪ್ರತಿಭಾಶಕ್ತಿ ಹಾಗೂ ಹೋರಾಟಗಳನ್ನು ಬಣ್ಣಿಸಿದರಲ್ಲದೆ, ಇಂಥ ಒಂದು ಅರ್ಥಪೂರ್ಣ ಕಾರ್ಯಕ್ರಮ ಮಾಡುತ್ತಿರುವುದಕ್ಕೆ ಅಕಾಡೆಮಿಯನ್ನು ಅಭಿನಂದಿಸಿದರು.

ಮಧ್ಯಾಹ್ನ ಒಂದು ವಿಶಿಷ್ಟ ಕಾರ್ಯಕ್ರಮ. ವಿದ್ವಾಂಸರೆನಿಸಿಕೊಂಡ ನಾವೆಲ್ಲ ಬೆಚ್ಚಿ ಬೀಳುವ ಸಂದರ್ಭ. ನೆರೆದ ವಿದ್ವಾಂಸರು ಸುಕ್ರಿ ಅವರೊಡನೆ ನಡೆಸಿದ 'ಸಂವಾದ' ನಮ್ಮೆಲ್ಲ ಪದವಿಗಳ ಅಹಂಕಾರಕ್ಕೆ ನಾಚಿಕೆ ತರುವ ರೀತಿಯಲ್ಲಿ ನಮ್ಮನ್ನು ಚಿಂತನೆಗೆ ಹಚ್ಚತೊಡಗಿತ್ತು. ವೇದಿಕೆಯ ಮೇಲೆ ಎಲ್ಲರ ಕಣ್ಮಣಿಯಾಗಿ ಮಂದಸ್ಮಿರಾಗಿ ಕುಳಿತಿದ್ದ ಸುಕ್ರಿಯವರಿಗೆ ಒಂದೊಂದೇ ಪ್ರಶ್ನೆಗಳನ್ನು ಎಸೆಯುತ್ತಿದ್ದ ವಿದ್ವಾಂಸರಿಗೆ ಸುಕ್ರಿ ಉತ್ತರಿಸುತ್ತಿದ್ದ ರೀತಿ ಆಕೆಯ ದಾರ್ಶನಿಕತೆಗೆ ಅನುಭವ ಪರಂಪರೆಗೆ ಸಾಕ್ಷಿ ಎಂಬಂತೆ ಭಾಸವಾಗುತ್ತಿತ್ತು. ಉದ್ವೇಗಗೊಳ್ಳದೆ, ನಿರುಮ್ಮಳವಾಗಿ ತಣ್ಣಗೆ ಆಕೆ ಕೊಡುತ್ತಿದ್ದ ಸಂಕ್ಷಿಪ್ತ ಉತ್ತರಗಳು ಬಾಯಮೇಲೆ ಬೆರಳಿಟ್ಟುಕೊಂಡು ಯೋಚಿಸುವ ಹಾಗೆ ಮಾಡುತ್ತಿತ್ತು. ಉದಾಹರಣೆಗೆ ಒಂದೇ ಒಂದು ಪ್ರಶ್ನೋತ್ತರವನ್ನು ನೀಡಬಯಸುತ್ತೇನೆ. ಪ್ರಶ್ನೆ : ಸುಕ್ರಜ್ಜಿ ಅವರೇ, ಈ ವಯಸ್ಸಿನಲ್ಲಿಯೂ ನಿಮ್ಮ ದೇಹ ಮತ್ತು ಮನಸ್ಸಿನ ಆರೋಗ್ಯ ಇಷ್ಟು ಚೆನ್ನಾಗಿರುವುದರ ಗುಟ್ಟೇನು? ಸುಕ್ರಿಯ ಉತ್ತರ: ಆತ್ಮ ಚನ್ನಾಗಿರಬೇಕು, ನಾನು ಅನ್ನುವ ಬದಲು ನಾವು ಅನ್ನಬೇಕು, ನಾನು ನನಗಾಗಿ ಬದುಕಿಲ್ಲ, ನನ್ನ ಸಮಾಜಕ್ಕಾಗಿ ಬದುಕಿದ್ದೇನೆ. ಇದೇ ನನ್ನ ಆರೋಗ್ಯದ ಗುಟ್ಟು!. ಇಂಥ ಅನೇಕ ಸಾರ್ಥಕ ಜ್ಞಾನದ ಉತ್ತರಗಳು ಸಭೆಯನ್ನು ಮೂಕ ವಿಸ್ಮಿತರನ್ನಾಗಿ ಮಾಡಿದವು. ಧ್ಯಾನಸ್ಥ ಭಂಗಿಯಲ್ಲಿ ಸಾಕ್ಷಾತ್ ಕುವೆಂಪು ಅವರಂತೆ ಕುಳಿತಿರುತ್ತಿದ್ದ ಈ ಅನಕ್ಷರಸ್ಥೆ ಸುಕ್ರಿ ಅಕ್ಷರವನ್ನು ಮೀರಿದ ಅನುಭವ ಎಂಬ ವಿದ್ಯೆಯ ಮೂಲಕ ನೀಡುತ್ತಿದ್ದ ಉತ್ತರಗಳು ಕುವೆಂಪು ಕಾರಂತರ ದರ್ಶನವನ್ನು ನೆನಪಿಸುತ್ತಿದ್ದವು. ಹಾಲಕ್ಕಿ ಒಕ್ಕಲಿಗ ಸಮುದಾಯ ತನ್ನ ಪರಂಪರೆಯ ಜ್ಞಾನದಿಂದ ರೂಪಿಸಿಟ್ಟ 'ಅಧ್ಯಾತ್ಮ'ವೊಂದರ ಪ್ರತೀಕವಾಗಿ ಸುಕ್ರಿ ತನ್ನೆಲ್ಲಾ ಪ್ರತಿಭಾಶಕ್ತಿಯನ್ನು ಮಿಳಿತಗೊಳಿಸಿ ಅಂದು ಮಾತನಾಡಿದ್ದರು. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಕೆ.ಎಂ. ಮೇತ್ರಿ ಅವರು ಸಂವಾದವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಸಂವಾದದ ನಂತರ ಸುಕ್ರಿಗೆ ಅಭಿನಂದನೆಯ ಕ್ಷಣ. ಪ್ರಖ್ಯಾತ ವೈಚಾರಿಕ ಲೇಖಕ ಹಾಗೂ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಕಾಳೇಗೌಡ ನಾಗವಾರ ಹಾಗೂ ಪಿಚ್ಚಳ್ಳಿ ಶ್ರೀನಿವಾಸ ಒಟ್ಟುಗೂಡಿ ಸುಕ್ರಿ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು. ನಾಗವಾರ ಅವರು ಸಂವಾದ ಕಾರ್ಯಕ್ರಮವನ್ನು

ನೆನಪಿಸಿಕೊಳ್ಳುತ್ತಾ ಸುಕ್ರಿಯವರ ಸೂಕ್ಷ್ಮಮತಿಯನ್ನು ಅವರ ಪ್ರತಿಭಾ ಪಾಂಡಿತ್ಯವನ್ನು ಮೆಚ್ಚಿ ಮಾತಾಡಿದರು. ಪಿಚ್ಚಳ್ಳಿ ಶ್ರೀನಿವಾಸ ಅವರು ಅರ್ಥಪೂರ್ಣ ತತ್ವಪದವೊಂದನ್ನು ಹಾಡುವ ಮೂಲಕ ಈ ಹಾಲಕ್ಕಿ ಹಾಡು ಹಕ್ಕಿಗೆ ಅಭಿನಂದನೆ ಸಲ್ಲಿಸಿದರು. ಕರ್ನಾಟಕ ರಕ್ಷಣಾ ವೇದಿಕೆಯ ಉಪಾಧ್ಯಕ್ಷೆ ಹೇಮಲತಾ ಬೆಂಗಳೂರಿನಿಂದ ಆಗಮಿಸಿ ಈ ಅಭಿನಂದನಾ ಕಾರ್ಯಕ್ರಮವನ್ನು ನಿರೂಪಿಸಿದ್ದು ಒಂದು ವಿಶೇಷವಾಗಿತ್ತು. ಇದೇ ಸಂದರ್ಭದಲ್ಲಿ ಉತ್ತರ ಕನ್ನಡದ ಲೇಖಕ ಡಾ. ಪ್ರಕಾಶ್ ನಾಯಕ ಅವರು ಸುಕ್ರಿ ಅವರನ್ನು ಕುರಿತು ಬರೆದ ಪುಸ್ತಕ ಒಂದನ್ನು ಬಿಡುಗಡೆ ಮಾಡಲಾಯಿತು. ಹಾಲಕ್ಕಿ ಸಮುದಾಯ ಸಂಘಟನೆಯ ಅಧ್ಯಕ್ಷರಾದ ಹನುಮಂತಗೌಡ ಹಾಗೂ ಸಮುದಾಯದ ಅನೇಕರು ಈ ಸಾರ್ಥಕ ಅಭಿನಂದನೆಗೆ ಸಾಕ್ಷಿಯಾದರು. ಉತ್ತರ ಕನ್ನಡದ ಹಿರಿ ಕಿರಿಯ ಲೇಖಕರು ಉತ್ಸಾಹದಿಂದ ಈ ಸಮಾರಂಭದಲ್ಲಿ ಪಾಲ್ಗೊಂಡರು.

ಸಮಾರಂಭದ ನಂತರ ಸಂಜೆಗೆ ಈಗಾಗಲೇ ಮೆರವಣಿಗೆಯಲ್ಲಿ ಪಾಲ್ಗೊಂಡು ಜನರಂಜಿಸಿದ್ದ ಕಲಾ ತಂಡಗಳು, ವೇದಿಕೆಯಲ್ಲಿ ತಮ್ಮ ಪ್ರದರ್ಶನಗಳನ್ನು ನೀಡಿ ಸುಕ್ರಿ ಅವರಿಗೆ ಕಲಾಭಿನಂದನೆ ಸೂಸಿದವು. ಜಾನಪದ ಅಕಾಡೆಮಿ ಈ ಕಾರ್ಯಕ್ರಮದ ಮೂಲಕ ತನ್ನ ಕರ್ತವ್ಯವನ್ನು ಪಾಲಿಸಿ ತಾನು ಅಭಿನಂದನೆಗೆ ಪಾತ್ರವಾಯಿತು.



# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಜಾನಪದ

ಎಚ್.ದಂಡಪ್ಪ

**ಈ**ಗ ಮಹಾರಾಷ್ಟ್ರದಲ್ಲಿ ಜಾನಪದವನ್ನು ದಲಿತರೂ ಒಳಗೊಂಡಂತೆ ಎಲ್ಲರೂ ಸ್ವಲ್ಪಮಟ್ಟಿಗೆ ಕಡೆಗಣಿಸುತ್ತಿದ್ದಾರೆಂದು ಹೇಳಲಾಗುತ್ತಿದೆ. ದಲಿತ ಬರಹಗಾರರೂ ಸಹ ಜಾನಪದವನ್ನು ಕಡೆಗಣಿಸಿ ತಾವು ಬರೆಯುತ್ತಿರುವುದೇ ಶ್ರೇಷ್ಠ ಮತ್ತು ಮೌಲ್ಯಯುತವಾದದ್ದು ಎಂದು ಭಾವಿಸಿಬಿಟ್ಟಿದ್ದಾರೆ. ಅಕ್ಷರ ಸಂಸ್ಕೃತಿ, ಮೌಖಿಕ ಪರಂಪರೆಗಿಂತ ಹೆಚ್ಚು ಮಹತ್ವದ್ದು ಎಂದು ಭಾವಿಸಲಾಗಿದೆ. ಆದರೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಜಾನಪದವನ್ನು ಕಡೆಗಣಿಸಲಿಲ್ಲ. ಅವರಿಗೆ ಜಾನಪದದ ಬಗ್ಗೆ ಅದರ ಮಹತ್ವದ ಬಗ್ಗೆ, ಅದರ ಸಾಂಸ್ಕೃತಿಕ ಅನನ್ಯತೆಯ ಬಗ್ಗೆ ತುಂಬಾ ಅರಿವಿತ್ತು. ಅವರ ಸಾಂಸ್ಕೃತಿಕ ಬರಹಗಳನ್ನು ಗಮನಿಸಿದಾಗ ಯಾರಿಗಾದರೂ ಈ ಬಗ್ಗೆ ಅರಿವಾಗುತ್ತದೆ. ಅಂಬೇಡ್ಕರ್ ಅವರು ರಾಜಕೀಯ ಶಾಸ್ತ್ರ, ಪುರಾಣ ಶಾಸ್ತ್ರಗಳು, ವಿಜ್ಞಾನ, ಮಾನವಿಕಗಳನ್ನು ಎಷ್ಟು ಆಸಕ್ತಿಯಿಂದ ಓದಿದ್ದರೋ, ಓದಿ ಗ್ರಹಿಸಿ ಜ್ಞಾನವನ್ನು ಗಳಿಸಿಕೊಂಡಿದ್ದರೋ ಅದೇ ಕ್ರಮದಲ್ಲಿ ಜಾನಪದವನ್ನು ಅಧ್ಯಯನ ಮಾಡಿದ್ದರು. ಅವರು ಜಾನಪದವನ್ನು ಈಗಿನಂತೆ ಶೋಕಿಗಾಗಿಯೋ, ಅದರಲ್ಲಿರುವ ರಸ ಸೌಂದರ್ಯವನ್ನು ಅನುಭವಿಸುವುದಕ್ಕಾಗಿಯೋ, ಇಲ್ಲವೇ ಆಸ್ವಾದಿಸುವುದಕ್ಕಾಗಿಯೋ ಅಧ್ಯಯನ ಮಾಡಿಲ್ಲ. ಅಂಬೇಡ್ಕರ್ ಅವರು ಜಾನಪದವನ್ನು ಅಧ್ಯಯನ ಮಾಡಿದ್ದು ಅದರಲ್ಲಿರುವ ಜ್ಞಾನಕ್ಕಾಗಿ ಹಾಗು ದಲಿತ ಸಂಸ್ಕೃತಿಯ ವಿನ್ಯಾಸಗಳನ್ನು ಇಲ್ಲವೇ ದಲಿತರ ಸ್ಥಿತಿಗತಿಗಳನ್ನು ಅನಾವರಣಗೊಳಿಸಿ ಆಮೂಲಕ ಸಾಮಾಜಿಕ ಎಚ್ಚರವನ್ನು

ಮೂಡಿಸುವುದು ಅವರ ಅಧ್ಯಯನದ ಉದ್ದೇಶವಾಗಿತ್ತು. ದಲಿತರ ಹಿಂದುಳಿದವರು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅವರ ಬದುಕಿನ ವಿನ್ಯಾಸಗಳನ್ನು ಹಿಡಿದಿಟ್ಟು ಆಮೂಲಕ ಅವರಿಗೆ ಸಿಗಬೇಕಾದ ಸ್ಥಾನಮಾನಗಳ ಬಗ್ಗೆ, ಅವರ ಅಭಿವೃದ್ಧಿಯ ಬಗ್ಗೆ, ಸಮಾಜದಲ್ಲಿ ವರ್ಗ, ಜಾತಿಗಳನ್ನು ಅಳಿಸಿಹಾಕಿ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವುದರ ಬಗ್ಗೆ ತಮ್ಮ ಚಿಂತನೆಗಳನ್ನು ಸ್ಪಷ್ಟಗೊಳಿಸಿಕೊಳ್ಳುವುದಕ್ಕಾಗಿ ಜಾನಪದವನ್ನು ಬಳಸಿಕೊಳ್ಳುತ್ತಾರೆ. ಇದು ಇಂದಿನ ಅಧ್ಯಯನಕಾರರಿಗೆ ಅಂದರೆ ಜಾನಪದ ಅಧ್ಯಯನಕಾರರಿಗೆ ಮಾರ್ಗದರ್ಶಕವಾಗಿರುವಂತಹದ್ದು. ಏಕೆಂದರೆ ಅಂಬೇಡ್ಕರ್ ಅವರು ಪುರಾಣ ಕತೆಯಾಗಿರಬಹುದು, ಜನಪದ ಕತೆಗಳಾಗಿರಬಹುದು, ಯಾವುದನ್ನೇ ಆಗಲಿ ತಮ್ಮ ವಿಚಾರಧಾರೆಗಳಿಗೆ ಪೂರಕವಾಗಿ ಅದರಲ್ಲೂ ದಲಿತರ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಯ ವಿನ್ಯಾಸಗಳನ್ನು ವಿವರಿಸುವುದಕ್ಕಾಗಿ ಬಳಸಿಕೊಳ್ಳುತ್ತಾರೆ. ಇದಕ್ಕೆ ನಿದರ್ಶನವಾಗಿ ದಾದಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ 20ರಲ್ಲಿರುವ ಒಂದು ಲೇಖನದ ವಿವರಗಳನ್ನು ಗಮನಿಸಬಹುದು.

ಮೊದಲೇ ತಿಳಿಸಿದಂತೆ ಮರಾಠಿ ಸಾಹಿತ್ಯವು ಬಹುಮುಖವಾಗಿ ಬೆಳೆಯುತ್ತಿತ್ತು. ಇದನ್ನು ಅಂಬೇಡ್ಕರ್ ಬಲ್ಲವರಾಗಿದ್ದರು, ಅಧ್ಯಯನವನ್ನೂ ಮಾಡಿದ್ದರು. ಹಳೆಯ ಸಾಹಿತ್ಯದಿಂದ ನಾನು ಬೆಳೆದಿದ್ದೇನೆ, ಜ್ಞಾನದ ದಿಗಂತವನ್ನು ವಿಸ್ತರಿಸಿಕೊಂಡಿದ್ದೇನೆಂದು ಅಂಬೇಡ್ಕರ್ ಅವರು ಅನೇಕ ಸಾರಿ ಹೇಳಿಕೊಂಡಿದ್ದಾರೆ. ಮೌಖಿಕ ಸಾಹಿತ್ಯ ಶಿಷ್ಟ ಸಾಹಿತ್ಯದೊಂದಿಗೆ ಹದವಾಗಿ ಬೆರೆತು ಪುಷ್ಟಿಗೊಳ್ಳಬೇಕು ಎಂಬುದು ಅಂಬೇಡ್ಕರ್ ಅವರ ನಿಲುವಾಗಿತ್ತು. ಆದ್ದರಿಂದಲೇ ಅವರು ಹಳೆಯ ಅಂದರೆ ಮೌಖಿಕ ಹಾಗು ಶಿಷ್ಟ ಮರಾಠಿ ವಾಙ್ಮಯದ ಪರಿಧಿಯನ್ನು ಪರೀಕ್ಷಿಸಲಾಗಿ ಕೆಲವು ಪ್ರಕಾರದ ಮೌಖಿಕ ವಾಙ್ಮಯವು ಇಂದಿನ ಶಿಷ್ಟ ವಾಙ್ಮಯದಿಂದ ಕಳಚಿಬಿದ್ದಿದೆ ಎಂದು ಹೇಳಿದರೆ ಅದೊಂದು ಅವಸರದ ಹೇಳಿಕೆಯಾಗುವುದಿಲ್ಲ ಎಂದು ಖಂಡಿತವಾಗಿ ಅನ್ನಿಸುತ್ತದೆ ಎಂದು ಹೇಳುತ್ತಾರೆ. ಜಾನಪದದ ಎಲ್ಲಾ ಪ್ರಕಾರಗಳ ಬಗ್ಗೆ ತಿಳುವಳಿಕೆ ಜ್ಞಾನವನ್ನು ಹೊಂದಿದ್ದ ಅಂಬೇಡ್ಕರ್ ಅವರಿಗೆ ಲಾವಣಿಗಳು ಮತ್ತು ಗಾರ್ಹಾಣೆಗಳು (ಗೋಳುಗಳು) ಎಂಬುವು ಮರಾಠಿಯಲ್ಲಿ ಸಾಕಷ್ಟಿವೆ ಎಂಬುದನ್ನು ಗಮನಿಸಿದ್ದರು. ಅಂಬೇಡ್ಕರ್ ಕಾಲಕ್ಕಾಗಲೇ ಆ ಪ್ರಕಾರಗಳು ನಶಿಸುತ್ತಿದ್ದವು. ಲಾವಣಿ ಮತ್ತು ಗಾರ್ಹಾಣೆಗಳಲ್ಲಿದ್ದ ಲಾಲಿತ್ಯ ಹಾಗೂ ಬೆರಗುಗಳನ್ನು ಗಮನಿಸಿದ ಅಂಬೇಡ್ಕರ್ ಅವುಗಳ ಮಟ್ಟ ಎತ್ತರವಾದದ್ದು ಎಂದು ಹೇಳುತ್ತಾರೆ. ಇಂತಹ ಲಾವಣಿ ಮತ್ತು ಗಾರ್ಹಾಣಿಗಳು ನಾಶವಾಗಬಾರದೆಂಬುದು ಅವರ ಆಶಯವಾಗಿತ್ತು. ಈ ಲಾವಣಿ ಮತ್ತು ಗಾರ್ಹಾಣಿಗಳನ್ನು ಸಂಗ್ರಹಿಸಬೇಕೆಂದು ನಿರ್ಧರಿಸುತ್ತಾರೆ. ಆದರೆ ಅವರಿಗೆ ಬೇರೆ ಬೇರೆ ಕೆಲಸಗಳ ಒತ್ತಡವಿದ್ದುದರಿಂದ ಈ ಕಡೆ ಗಮನಹರಿಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಅವರು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ. ಲಾವಣಿಗಳು ಬಹಳಷ್ಟು ಜನರಿಗೆ ಗೊತ್ತಿದೆ. ಆದರೆ ಗಾರ್ಹಾಣಿಗಳು ಬಹಳಷ್ಟು ಜನರಿಗೆ ತಿಳಿದಿರಲಿಲ್ಲ. ಇದರಿಂದಾಗಿ ಅಂಬೇಡ್ಕರ್ ಅವರು ಅವುಗಳ ಮಹತ್ವವನ್ನು ತಿಳಿಸಲೋಸುಗ (ಸಾಳೋ ಬಾಬೇ ಗಾರ್ಹಾಣಿ) 'ಸಾಳೋಬಾನ ಗಾರ್ಹಾಣಿಗಳು' ಎಂದು ಒಂದು ಗಾರ್ಹಾಣಿಯನ್ನು ಸಂಗ್ರಹಿಸಿ 'ನವಯುಗ' ಪತ್ರಿಕೆಗಾಗಿ ಕಳುಹಿಸಿಕೊಡುತ್ತಾರೆ. ಅದು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಆದರ ವಿವರಗಳು ಹೀಗಿವೆ; ಸಾವಂತವಾಡಿ ಸಂಸ್ಥಾನದಲ್ಲಿ ಝೂರಾಪ್ ಎಂಬ ಊರಿದೆ. ಪಂಡೋಚಿ ಪಾಥರ್ ಎಂಬ ಸ್ಥಳದಲ್ಲಿರುವ ದೇವತೆಯ ಹೆಸರು ಚಾಳೋಬಾ. ವರ್ಷ ವರ್ಷವೂ ಈ ಚಾಳೋಬಾ ದೇವತೆಯ ಹೆಸರಿನಲ್ಲಿ ಸಮಾರಾಧನೆಯನ್ನು ಏರ್ಪಡಿಸುವ ಒಂದು ಆಚರಣೆ ಮಾಡಲಾಗುತ್ತದೆ. ಸಮಾರಾಧನೆಯ ಆಚರಣೆಯ ನಂತರ ಊಟದ ವ್ಯವಸ್ಥೆ ಇರುತ್ತದೆ. ಊಟವಾದ ಮೇಲೆ ಚಾಳೋಬಾನ ಎದುರಿಗೆ ಒಂದು ತೆಂಗಿನ ಕಾಯಿಯನ್ನು ಇಟ್ಟು ಗಾರ್ಹಾಣಿಯನ್ನು ಹಾಡಲಾಗುತ್ತದೆ. ಅದೇ ಊರಿನ ಹೊಲೆಯರ (ಮಹಾರರು) ವ್ಯಕ್ತಿಯೊಬ್ಬನು ಗಾರ್ಹಾಣಿಯನ್ನು ಹಾಡುತ್ತಾನೆ. ಈ ಗಾರ್ಹಾಣಿಯಲ್ಲಿ ಇಪ್ಪತ್ತೇಳು ಸಾಲುಗಳಿರುತ್ತವೆ. ಈ ಇಪ್ಪತ್ತೇಳು ಸಾಲುಗಳನ್ನು ಹೊಲೆಯ (ಮಹಾರ್) ಜಾತಿಗೆ ಸೇರಿದ ವ್ಯಕ್ತಿ ಒಂದೊಂದಾಗಿ ಹಾಡುತ್ತಾನೆ. ಅವನು ಅದನ್ನು ಹಾಡಿದ ನಂತರ ಕೊನೆಯಲ್ಲಿ ಉಳಿದವರು 'ಹೊಯ್ ಮರಾಜ್ಯ' (ಹೌದು ಮಹಾರಾಜ) ಎಂದು ಹೇಳಬೇಕು. ಇಂತಹ ಸಂಪ್ರದಾಯದ ಆಚರಣೆಯಲ್ಲಿ ಬರುವ ಗಾರ್ಹಾಣಿಯ ಸಾಲುಗಳನ್ನು ಡಾ.ಅಂಬೇಡ್ಕರ್ ಅವರು ತಾವೇ ಸಂಗ್ರಹಿಸಿದ್ದಾರೆ. ಈ ಸಂಗ್ರಹವನ್ನು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು– ಸಂಪುಟ30ರಲ್ಲಿ ಅನುವಾದಿಸಿಕೊಡಲಾಗಿದೆ. ಈ ಸಂಪುಟವನ್ನು

ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ ಅವರು ಅನುವಾದಿಸಿದ್ದಾರೆ. ಆ ಅನುವಾದವನ್ನು ಯಥಾವತ್ತಾಗಿ ಇಲ್ಲಿ ಕೊಡಲಾಗಿದೆ.

| | | |
|---|---|---|
| 1. | ಅಪ್ಪಾದೇವ ಮ್ಹಾರಾಜ್ಯ ಚಾಳೋಬಾ | ಹೌದು ಮಹಾರಾಜ |
| 2. | ಏಳುನೂರು ಊರುಗಳ ಬಾಳ್ಯಾ ನೀನು | ಹೌದು ಮಹಾರಾಜ |
| 3. | ಮೂರು ಊರುಗಳ ಆದಿಸ್ಥಾನದ ಮಹಾರಾಜ | ಹೌದು ಮಹಾರಾಜ |
| 4. | ನೀನು ರಾಜನು ದೇವನು ಚಾಳೋ | ಹೌದು ಮಹಾರಾಜ |
| 5. | ಅಂತೆಯೇ ನೀ ಹೊಲೆಯರ ಪೋಟಕರಾಜ್ಯ ಹೆಸರಿಂದ ಧಾವಿಸುವಿ | ಹೌದು ಮಹಾರಾಜ |
| 6. | ಅಂತೆಯೇ ಮಹಾರಾಜನೆ ನಿನಗಿಂದು ಸಮಾರಾಧನೆ ತೆಂಗನಿಟ್ಟೆ ಒಪ್ಪಿಕೋ ಅದನ್ನು | ಹೌದು ಮಹಾರಾಜ |
| 7. | ಊರಲ್ಲಿ ದೇಸದಾಮ (ಮಾರಿ ಬೇನೆ) ಬಂದರೆ ನಾಲ್ಕು ಗಡಿಯಾಚೆಗೆ ಲಾನ್ವವಿ (ಹೊಡೆದೋಡಿಸು) | ಹೌದು ಮಹಾರಾಜ |
| 8. | ಊರು ಗ್ರಾಮಗಳ ಕಲ್ಯಾಣ ಮಾಡು | ಹೌದು ಮಹಾರಾಜ |
| 9. | ಅದರಂತೆ ಈವತ್ತು ಆ ಅರವತ್ತು ಊರುಗಳ ಚಾಳೋ | ಹೌದು ಮಹಾರಾಜ |
| 10. | ಅವನ್ನು ಕಾಪಾಡಲು ಒಪ್ಪಕೋ | ಹೌದು ಮಹಾರಾಜ |
| 11. | ಅಣ್ಣಾ ಭಗವತೀನ್ನ ಒಪ್ಪಿಸು | ಹೌದು ಮಹಾರಾಜ |
| 12. | ಆ ರಾಮೇಶ್ವರನನ್ನು ಒಪ್ಪಿಸು | ಹೌದು ಮಹಾರಾಜ |
| 13. | ಇಂದು ನೀನು ರವಳನಾಥನಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 14. | ಇಂದು ನೀನು ಕಲ್ಯಾಣ ಪುರುಷನಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 15. | ಈ ಭೂಮಿಯ ಬ್ರಾಹ್ಮಣನಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 16. | ಇಂದು ನೀನು ಬೇತಾಳನಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 17. | ಪಿಶಾಚಿಗಳಿಗೆ ತಿಳಿಸಿಹೇಳು | ಹೌದು ಮಹಾರಾಜ |
| 18. | ಹನ್ನೆರಡು ಐದರ ಲೆಕ್ಕವನ್ನು ಒಂದು ಮಾಡು | ಹೌದು ಮಹಾರಾಜ |
| 19. | ಹನ್ನೆರಡವರನ್ನುಮೊದಲಿನಂತೆ ಒಂದು ಮಾಡು | ಹೌದು ಮಹಾರಾಜ |
| 20. | ಹೊಲೆಯ ಗಿಲೆಯರಿಗೆಲ್ಲ ತಿಳಿಸಿ ಹೇಳು | ಹೌದು ಮಹಾರಾಜ |
| 21. | ಊರಿನ ಗಿರೋಬನಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 22. | ಇಂದು ನೀನು ನಿಶಕ್ತರಿಗೆ ತಿಳಿಸಿ ಹೇಳು | ಹೌದು ಮಹಾರಾಜ |
| 23. | ಸೀಮ ಗಡಿ ದೇವನನ್ನು ಒಪ್ಪಿಸು | ಹೌದು ಮಹಾರಾಜ |
| 24. | ಮತ್ತು ಈ ತೆಂಗಿನಕಾಯ ಇಟ್ಟೀನಿ ಅದನ್ನು ಒಪ್ಪಿಕೋ | ಹೌದು ಮಹಾರಾಜ |
| 25. | ಮತ್ತು ಊರ ಗ್ರಾಮಗಳ ಕಲ್ಯಾಣ ಮಾಡು | ಹೌದು ಮಹಾರಾಜ |
| 26. | ಸೇವೆ ಚಾಕರಿಗಳನ್ನು ಮಾಡಿಸಿಕೋ | ಹೌದು ಮಹಾರಾಜ |
| 27. | ಮತ್ತು ಮಾಡಿದ ಕೆಲಸಕ್ಕೆ ಯಶಕೊಟ್ಟು ಕಲ್ಯಾಣ ಮಾಡೋ | ಹೌದು ಮಹಾರಾಜ |

ಅಂಬೇಡ್ಕರ್ ಅವರು ಈ ಗಾರ್ಹಾಣಿಗಳನ್ನು ಸಂಗ್ರಹಿಸಿಕೊಡುವುದರ ಮೂಲಕ ಹೊಲೆಯ ಸಮುದಾಯದ ಐತಿಹಾಸಿಕ ಮಹತ್ವದ ಸ್ಥಾನವನ್ನು ತಿಳಿಸಿಕೊಡುವುದಕ್ಕಾಗಿಯೂ ಬಳಸಿಕೊಳ್ಳುತ್ತಾರೆ. ಇದು ಬಹಳ ಮುಖ್ಯವಾದದ್ದು. ಮೇಲೆ ಉಲ್ಲೇಖಿಸಿದ ಅನುವಾದಕರ ಅನುವಾದವನ್ನೇ ಇಲ್ಲಿ ಉಲ್ಲೇಖಿಸಲಾಗಿದೆ.

"ಒಂದು ಕಾಲಕ್ಕೆ ಕೊಂಕಣದಲ್ಲಿ ಹೊಲೆಯರ ಒಂದು ರಾಜ್ಯವಿತ್ತು. ಆರ್ಯ ಮೊದಲಾದವರು ಅವರನ್ನು ಗೆದ್ದುಕೊಂಡು ಅವರಿಗೆ ಬಂಡು ಹೂಡಲು ಎಳ್ಳಷ್ಟು ಆಸ್ಪದ ಲಭಿಸದಷ್ಟು ಶರಣಾಗತಿಯ ಷರತ್ತುಗಳನ್ನು ಅವರ ಮೇಲೆ ಹೇರಿದರು. ಈ ಐತಿಹಾಸಿಕ ಘಟನೆಗಳ ಮುದ್ರೆಯ ಕುರುಹುಗಳೆಂದರೆ ಕೊಂಕಣದ

ಊರುಗಳಲ್ಲಿ ಹೊಲೆಯರಿಗೆ ತುಂಬಾ ಮರ್ಯಾದೆ ಹಾಗು ಮಹತ್ವದ ಸ್ಥಾನವನ್ನು ನೀಡಲಾದುದು. ಅದು ಸಾವಿರಾರು ವರ್ಷಗಳ ಕಾಲ ಉಳಿದುಕೊಂಡಿದೆ. ಹೊಲೆಯರಿಗೆ ನೀಡಲಾದ 'ಭೂಮಿಪುತ್ರ' ಎಂಬ ಹೆಸರು ಕೊಂಕಣದಲ್ಲಿ ಇಂದಿಗೂ ಬಳಕೆಯಲ್ಲಿದೆ. ಊರಿನ ದೇವರ ವಿಧಿಗಳನ್ನು ಹೊಲೆಯರ ಕೈಯಿಂದಲೇ ಪೂರ್ತಿಗೊಳಿಸಲಾಗುತ್ತದೆ. ಹೊಲೆಯರು ದೇವದೇವತೆಯನ್ನು ಕೂಗಿ ಕರೆದು ಎಚ್ಚರಗೊಳಿಸಬೇಕಾಗುತ್ತದೆ. ಅವರು ಕೋಲು ಕುಳಿತುಕೊಳ್ಳದ ಹೊರತು ದೇವದೇವತೆಗಳ ಮೈಯಲ್ಲಿ ದೇವತ್ವವು ಬರುವುದಿಲ್ಲ. 'ದೇವಾಚರ' ಎಂಬ ಒಬ್ಬ ದೇವತೆಯು ಕೊಂಕಣದಲ್ಲಿ ಇರುವಳು. ಅವಳನ್ನು ಶಾಂತಗೊಳಿಸಲು ಮಾಡಬೇಕಿದ್ದ ವಿಧಿಯು ಹೊಲೆಯನಿಗೆ ಕಂಬಳಿ ಮತ್ತು ಅನ್ನವನ್ನು ನೀಡದ ಹೊರತು ಪೂರ್ತಿಯಾಗಲಾರದಲ್ಲದೆ ಅಲ್ಲಿಯ ತನಕ ದೇವತೆಯೂ ಸಂತುಷ್ಟಳಾಗಲಾರಳು. ಊರಿನ ದೇವ ದೇವತೆಗಳೆದುರು ಗಾರ್ಹಾಣಿಯನ್ನು (ಬವಣೆಯನ್ನು ತೋಡಿಕೊಳ್ಳುವುದು) ಮಾಡಿಸುವುದಿದ್ದರೆ ಮರಾಠ ಮೊದಲಾದ ಸ್ಪೃಶ್ಯ ಗ್ರಾಮಸ್ಥರು ಹೊಲೆಯರನ್ನು ನಮ್ರತೆಯಿಂದ ವಿನಂತಿಸಬೇಕಾಗುತ್ತದೆ. ಅಲ್ಲದೆ ಹೊಲೆಯರು ಗಾರ್ಹಾಣಿಯನ್ನು ಹಾಡಿದರೆ ಮಾತ್ರ ದೇವದೇವತೆಗಳು ಪ್ರಸನ್ನರಾಗುತ್ತಾರೆಂಬ ಸಂಪ್ರದಾಯವು ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ಸುಶಿಕ್ಷಿತ ಹಾಗು ಅಶಿಕ್ಷಿತ ಕೊಂಕಣಸ್ಥರು ಇದನ್ನು ನಂಬುತ್ತಾರೆ".

ಗಾರ್ಹಾಣಿಯ ಮಹತ್ವ ಈ ಮೇಲ್ಕಂಡ ದೃಷ್ಟಿಯಿಂದ ಅಧ್ಯಯನ ಯೋಗ್ಯವಾದದ್ದು. ಭಾರತೀಯ ಸಮಾಜದ ಜಾತಿವ್ಯವಸ್ಥೆಯ ಐತಿಹಾಸಿಕತೆಯನ್ನು ತಿಳಿಯಬೇಕಾದರೆ ಈ ಮೌಖಿಕ ಜ್ಞಾನ ಪರಂಪರೆಯ ಅಧ್ಯಯನ ತುಂಬಾ ಅತ್ಯಗತ್ಯವಾದದ್ದು. ಆದ್ದರಿಂದಲೇ ಜಾನಪದವನ್ನು ಮಾನವಶಾಸ್ತ್ರ ಅದರಲ್ಲೂ ಸಾಂಸ್ಕೃತಿಕ ಮಾನವ ಶಾಸ್ತ್ರದ ಅಧ್ಯಯನದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಬೇಕೆಂದು ಪದೇಪದೇ ಹೇಳಲಾಗುತ್ತದೆ. ಹೀಗಾದಾಗ ಜಾನಪದದ ಸಾಂಸ್ಕೃತಿಕ ಮಹತ್ವದ ಅರಿವಾಗುತ್ತದೆ. ಇಲ್ಲದಿದ್ದರೆ ಅದನ್ನು ಒಂದು ಐಷಾರಾಮಿ ಚಟುವಟಿಕೆಗೋ ಇಲ್ಲವೇ ರಸಾಸ್ವಾದನೆಗೋ ಬಳಸಿಕೊಂಡು ಅದನ್ನು ಒಂದು ಜ್ಞಾನ ವಿಜ್ಞಾನವಲ್ಲವೆಂಬ ಪ್ರಚಾರ ಮಾಡಿದಂತಾಗುತ್ತದೆ.



ಅಂಬೇಡ್ಕರ್ ಅವರು ಕೆಲವು ಕತೆಗಳನ್ನು ಹಾಗು ಪುರಾಣಗಳನ್ನು ಅಸ್ಪೃಶ್ಯರ ಸಂಸ್ಕೃತಿ, ಜೀವನ ವಿಧಾನ, ಅವರಿಗೆ ಸಮಾಜದಲ್ಲಿರಬಹುದಾದ ಸ್ಥಾನಮಾನಗಳ ಸ್ವರೂಪವನ್ನು ವಿವರಿಸಲು ಬಳಸಿಕೊಳ್ಳುತ್ತಾರೆ. ಅವುಗಳನ್ನು ಅವರು ಬಳಸಿಕೊಳ್ಳುವ ಕ್ರಮವೇ ಅನನ್ಯವಾದದ್ದು. ನಿದರ್ಶನಕ್ಕಾಗಿ ಅವರು ಪುರಾಣದ ಕತೆಯೊಂದನ್ನು ಬಳಸಿಕೊಂಡಿರುವ ಬಗೆಯನ್ನು ಗಮನಿಸಬಹುದು.

ಅಂಬೇಡ್ಕರ್ ಅವರ ಎಪ್ಪತ್ತೈದನೇ ಹುಟ್ಟುಹಬ್ಬದಂದು 'ನವಯುಗ' ಪತ್ರಿಕೆಯು ಅಂಬೇಡ್ಕರ್ ವಿಶೇಷ ಸಂಚಿಕೆಯನ್ನು 13–4–1947 ರಂದು ಪ್ರಕಟಿಸುತ್ತದೆ. ಅದಕ್ಕೆ ಕೃತಜ್ಞತಾಪೂರ್ವಕವಾಗಿ ಒಂದು ಪತ್ರವನ್ನು ಅಂಬೇಡ್ಕರ್ ಕಳುಹಿಸುತ್ತಾರೆ. ಆ ಸಂದೇಶದಲ್ಲಿ ವಿದೇಶಗಳಲ್ಲಿ ಮಹಾಪುರುಷರ ಜಯಂತಿಗಳನ್ನು ಆಚರಿಸುತ್ತಾರೆ. ಆದರೆ ಭಾರತದಲ್ಲಿ ಅವತಾರ ಪುರುಷರ ಮತ್ತು ರಾಜಕೀಯ ಪುರುಷರಿಬ್ಬರ ಜಯಂತಿಗಳನ್ನು



ಆಚರಿಸಲಾಗುತ್ತದೆ. ಇದು ದುಃಖದ ಸಂಗತಿ ಎಂದು ಹೇಳುತ್ತಾ ಅದಕ್ಕೆ ಕಾರಣಗಳನ್ನೂ ಕೊಡುತ್ತಾರೆ. ರಾಜಕೀಯ ಮುಂದಾಳುಗಳು ಎಂದಿಗೂ ಅವತಾರ ಪುರುಷರಾಗಲಾರರು. ಹೀಗಾಗಿ ರಾಜಕೀಯ ವ್ಯಕ್ತಿ ಮತ್ತು ಅವನನ್ನು ಆರಾಧಿಸುವ ನಾಯಕನನ್ನು ಅವತಾರ ಪುರುಷನೆಂದು ಕರೆದು ಅವನನ್ನು ಆರಾಧಿಸಲು ತೊಡಗಿದರೆ ಅವನು ತನ್ನ ಮಹಾಪುರುಷನ ಸೋಗನ್ನು ಹಾಕಿಕೊಂಡು ಅದನ್ನು ನಿರ್ವಹಿಸು-ವಂತಾಗುತ್ತದೆ. ತಾನು ಅವತಾರ ಪುರುಷನೆಂದು ತನ್ನ ಅನುಯಾಯಿಗಳಿಗೆ ಸಂದೇಶ ರವಾನಿಸುತ್ತಲೇ ಇರಬೇಕಾಗುತ್ತದೆ. ಆದರೆ ನಾನು ಅವತಾರಪುರುಷನಾಗಲು ಇಷ್ಟವಿಲ್ಲ. ಸೋಗಿನ ಮುಖವಾಡ ಧರಿಸಿ ಸಂದೇಶ ನೀಡಲು ಇಷ್ಟವಿಲ್ಲ ಎಂದು ಸಂದೇಶ ನೀಡಲು ನಿರಾಕರಿಸಿದ ಅಂಬೇಡ್ಕರ್ ಹೋಮರ್ ಮಹಾಕವಿಯ ಡಿಮೇಟರ್ ಎಂಬ ಗ್ರೀಕ್ ಪುರಾಣ ಕತೆಯನ್ನು ಅವರಿಗೆ ಬರೆದು ಕಳುಹಿಸುತ್ತಾರೆ.

"ತನ್ನ ಮಗಳನ್ನು ಶೋಧಿಸಲೆಂದು ಈ ಡಿಮೇಟರ್ ದೇವತೆಯು ಅಂಡಲೆಯುತ್ತಾ ಕೆಲಿಯೋಸ್‌ನ ರಾಜ್ಯಕ್ಕೆ ಬರುತ್ತಾಳೆ. ಅವಳು ದಾದಿಯ ವೇಷವನ್ನು ತೊಟ್ಟಿರುತ್ತಾಳೆ. ಹೀಗಾಗಿ ಯಾರೂ ಅವಳನ್ನು ಗುರುತಿಸುವುದಿಲ್ಲ. ರಾಣಿ ಮೆಹೋನ್ಸೈರ್ ತನ್ನ ಡಿಮೋಫೋನ್ ಎಂಬ ಹೆಸರಿನ ತನ್ನ ಎಳೆಯ ಮಗುವನ್ನು ಸಲುಹಲೆಂದು ಆ ದಾದಿಯನ್ನು ನೇಮಿಸಿಕೊಳ್ಳುತ್ತಾಳೆ. ದಿನಾಲು ರಾತ್ರಿಯಾಗುತ್ತಲೇ ಅರಮನೆಯವರೆಲ್ಲರೂ ಮಲಗಿದ ಬಳಿಕ ಡಿಮೇಟರ್ ದೇವತೆಯು ಬಾಗಿಲುಗಳನ್ನು ಮುಚ್ಚಿ ಈ ಗಂಡು ಮಗುವನ್ನು ತೊಟ್ಟಿಲಿನಿಂದ ಹಗುರವಾಗಿ ಎತ್ತಿಕೊಂಡು ಅವನ ಬಟ್ಟೆಗಳನ್ನು ಕಳಚಿ ಮಗುವನ್ನು ಉರಿಯುವ ಬೆಂಕಿಯ ಕೆಂಡಗಳ ಮೇಲೆ ಹಿಡಿಯುತ್ತಿದ್ದಳು. ಕೇಳುಗರಿಗೆ ಇದು ತುಂಬಾ ಕ್ರೂರ ಸಂಗತಿ ಎನ್ನಬಹುದು. ಆದರೆ ಆ ಮಗುವನ್ನು 'ದೇವ'ನನ್ನಾಗಿ ಮಾಡಲೆಂದು ಅವಳು ಬಲು ಕಳಕಳಿ ಹಾಗು ಪ್ರೀತಿಯಿಂದ ಹೀಗೆಲ್ಲಾ ಮಾಡುತ್ತಿದ್ದಳು. ನಿಧಾನವಾಗಿ ಆ ಮಗುವಿನಲ್ಲಿ ಬೆಂಕಿಯ ಧಗೆಯನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಬಂದಿತು. ಅವನ ಸಾಮರ್ಥ್ಯ ಹೆಚ್ಚತೊಡಗಿತು. ಒಂದು ಬಗೆಯಾದ ತೇಜಸ್ಸು, ದಿವ್ಯ ಅತಿಮಾನವೀಯ ಅಂಶವು ಆ ಮಗುವಿನಲ್ಲಿ ವಿಕಸನಗೊಳ್ಳತೊಡಗಿತು. ಆದರೆ ಒಂದು ರಾತ್ರಿ ಅಚಾನಕ್ಕಾಗಿ ಮಗುವಿನ ಅಮ್ಮನು ಕೋಣೆಯನ್ನು ಪ್ರವೇಶಿಸಿದಳು. ಮಗುವನ್ನು ನಾರಾಯಣನನ್ನಾಗಿ ಮಾಡುವ ದಾದಿಯ ಪ್ರಯೋಗವನ್ನು ಕಂಡವಳೇ ಆಕೆ ಆ ದೇವತೆಯನ್ನು ಅತ್ತ ದೂಡಿ ಮಗುವನ್ನು ಬೆಂಕಿಯ ಮೇಲ್ಬದಿಯಿಂದ ಎತ್ತಿಕೊಂಡಳು. ಮಗುವೇನೋ ಅವಳಿಗೆ ಲಭಿಸಿತಾದರೂ ಅವಳೊಬ್ಬ ಅತಿಮಾನವೀಯತೆಯ ಮಗನನ್ನು, ದೇವನನ್ನು ಕಳೆದುಕೊಂಡಳು".

ಈ ಕತೆ ಏನು ಹೇಳುತ್ತದೆ? ಬೆಂಕಿಯ ಕೆಂಡದಲ್ಲಿ ಹಾಯದ ಹೊರತು ಪೌರುಷ ಇಲ್ಲವೇ ದೇವತ್ವವು ಲಭಿಸುವುದಿಲ್ಲ. ಬೆಂಕಿಯ ಮೂಲಕ ಹಾಯದ ಹೊರತು ಮನುಷ್ಯನ ಶುದ್ಧಿಯಾಗುವುದಿಲ್ಲ. ಅವನ ಶಕ್ತಿವರ್ಧನೆ ಆಗುವುದಿಲ್ಲ. ಹಾಗೆಯೇ ಅಸ್ಪೃಶ್ಯರು ಕಷ್ಟ ತೊಂದರೆ, ತ್ಯಾಗದ ಅಗ್ನಿಪರೀಕ್ಷೆಗಳನ್ನು ಎದುರಿಸದೆ ಸುಲಭವಾಗಿ ಅವರಿಗೆ ದೊಡ್ಡ ದೊಡ್ಡ ಸ್ಥಾನಮಾನಗಳನ್ನು ಗಳಿಸಲು ಸಾಧ್ಯವಾಗುವುದಿಲ್ಲ. ತಮ್ಮ ಮುಂದಿನ ಭವಿಷ್ಯ ಉಜ್ವಲವಾಗಬೇಕಾದರೆ ಅವರು ತಮ್ಮ ಯೌವ್ವನದ ಸುಖ ಮತ್ತು ಅಗತ್ಯಗಳನ್ನು ತ್ಯಜಿಸಬೇಕು. ಬದುಕಿನ ಸ್ಪರ್ಧಾ ಓಟದಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಅವಕಾಶವಿದೆಯೆಂದು ಬೈಬಲ್ ಹೇಳುತ್ತದೆ.

ಈ ಅವಕಾಶದಲ್ಲಿ ಕೆಲವು ಜನರಷ್ಟೇ ಯಶಸ್ವಿಯಾಗುತ್ತಾರೆ. ಹೀಗೇಕೆಂದರೆ ಭವಿಷ್ಯಕ್ಕಾಗಿ ಸಧ್ಯದ ಭೋಗ ಐಷಾರಾಮಿ ಜೀವನವನ್ನು ಬಿಡಬೇಕಾದ ಧೈರ್ಯ ಮತ್ತು ನಿರ್ಧಾರಗಳು ಅಸ್ಪೃಶ್ಯರಲ್ಲಿ ಇಲ್ಲದೆ ಇರುವುದು. ಹೀಗಾಗಿ ಅವರಿಗೆ ಸ್ಪರ್ಧೆಯಲ್ಲಿ ಯಶಸ್ಸು ಸಿಗುತ್ತಿಲ್ಲ. ಈ ಗ್ರೀಕ್ ಪುರಾಣ ಕತೆಗಿಂತ ಹಿರಿದಾದ ಸಂದೇಶ ಯಾವುದೂ ಇಲ್ಲ. ಅಂಬೇಡ್ಕರ್ ಅವರ ಅಭಿಪ್ರಾಯದಂತೆ ಅಸ್ಪೃಶ್ಯರಿಗೆ ಈ ಕತೆ ಉತ್ತಮ ಸಂದೇಶವಾಗಿದೆ. ಅಸ್ಪೃಶ್ಯರ ಹೋರಾಟ ಹಾಗು ಅವರ ಕಷ್ಟಕೋಟಲೆಗಳು, ಪರಿಸ್ಥಿತಿಗಳು ಅಂಬೇಡ್ಕರ್ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅವುಗಳಿಂದ ಬಿಡುಗಡೆ ಪಡೆಯಲು ನೋವು ಯಾತನೆ ಅನುಭವಿಸಿದ್ದಾರೆಂಬುದು ಅಂಬೇಡ್ಕರ್ ಅವರಿಗೆ ಗೊತ್ತಿದೆ. ಆದ್ದರಿಂದಲೆ ಅವರು "ಹೀಗಿದ್ದೂ ನಾನವರಿಗೆ 'ಹೋರಾಡಿ', 'ಇನ್ನಷ್ಟು ಹೋರಾಡಿ', 'ತ್ಯಾಗ ಮಾಡಿ', 'ಇನ್ನಷ್ಟು ತ್ಯಾಗ ಮಾಡಿ', ತ್ಯಾಗ ಹಾಗೂ ಪೀಡೆಗಳನ್ನು ಲೆಕ್ಕಿಸದೆ ಒಂದೇ ಸಮನೆ ಹೋರಾಟವನ್ನು ಮುಂದುವರೆಸಿದರೆ ಮಾತ್ರ ನಿಮಗೆ ಮುಕ್ತಿ ದೊರೆಯುತ್ತದೆ ಎಂಬ ಸಂದೇಶ ನೀಡಬಯಸುತ್ತೇನೆ" ಎಂದು ಹೇಳುತ್ತಾರೆ. ಮುಂದುವರಿದು ಅವರು "ಅಸ್ಪೃಶ್ಯರಲ್ಲಿ ಎಚ್ಚರ ತಳೆದು ಪ್ರತೀಕಾರವನ್ನು ಮಾಡುವ ಸಾಮುದಾಯಿಕ ಇಚ್ಛಾಶಕ್ತಿಯು ಬೆಳೆಯಬೇಕಿದೆ. ತಮ್ಮ ಕ್ರೌರ್ಯ ಪವಿತ್ರವಾದದ್ದು ಎಂಬ ದೃಢವಿಶ್ವಾಸವು ಅವರಲ್ಲಿ ಇರಬೇಕಿದೆ. ಸಂಘಟಿತರಾಗಿ ಅವರು ತಮ್ಮ ಗುರಿಯನ್ನು ತಲುಪಲು ನಿರ್ಧರಿಸತಕ್ಕದ್ದು. ಅಸ್ಪೃಶ್ಯರ ಕಾರ್ಯ ಎಷ್ಟು ಮಹತ್ತರ ಹಾಗು ಅವರ ಗುರಿ ಎಷ್ಟೊಂದು ಉದಾತ್ತವಾದುದೆಂದರೆ ಅವರು ಒಕ್ಕೊರಲಿನಿಂದ 'ಯಾವ ಜನರಲ್ಲಿ ನಮ್ಮ ಜನ್ಮವಾಗಿದೆಯೋ ಆ ಜನರನ್ನು ಉದ್ಧರಿಸುವುದು ನಮ್ಮ ಕರ್ತವ್ಯವಾಗಿದೆ ಎಂಬ ಅರಿವುಳ್ಳವರೇ ಧನ್ಯರು. ಗುಲಾಮಗಿರಿಯ ಮೇಲೆ ದಾಳಿಯಿಕ್ಕಲು ಯಾರು ತನು ಮನ ಧನ ಹಾಗೂ ಯೌವನಗಳನ್ನು ಬಲಿ ಕೊಡುವರೋ ಅವರೇ ಧನ್ಯರು. ಅಸ್ಪೃಶ್ಯರಿಗೆ ತಮ್ಮ ಮಾನವೀಯತೆಯು ಪೂರ್ತಿಯಾಗಿ ಸಿಕ್ಕುವವರೆಗೆ ಯಾರು ಒಳ್ಳೆಯ ಕೆಟ್ಟ ಸುಖದುಃಖ ಸಂಕಟ ಬಿರುಗಾಳಿ ಮರ್ಯಾದೆ ಅವಮಾನಗಳನ್ನು ಲೆಕ್ಕಿಸದೆ ಒಂದೇ ಸಮನೆ ಹೋರಾಟ ನಡೆಸುವರೋ ಅವರೇ ಧನ್ಯರು' ಎಂದು ಪ್ರಾರ್ಥಿಸಬೇಕು" ಎಂದು ಹೇಳಿ ತಮ್ಮ ಸಂದೇಶವನ್ನು ಮುಗಿಸುತ್ತಾರೆ.



ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಅಸ್ಪೃಶ್ಯತೆಯ ಹುಟ್ಟು ಮತ್ತು ಬೆಳವಣಿಗೆ, ಶೂದ್ರರು ಯಾರು? ಜಾತಿಗಳ ಸ್ವರೂಪ ಅಪವಿತ್ರರು ಮತ್ತು ಅಸ್ಪೃಶ್ಯರು, ಜಾತಿಯ ನಿರ್ಮೂಲನೆ, ರಾಮಕೃಷ್ಣರ ಒಗಟುಗಳು ಇತ್ಯಾದಿ ಲೇಖನಗಳಲ್ಲಿ ತಮ್ಮ ವಿಚಾರಗಳ ಸಮರ್ಥನೆಗಾಗಿ ಜನಪದ ಕತೆ ಐತಿಹ್ಯ ಪುರಾಣಗಳನ್ನು ಬಳಸಿಕೊಂಡಿದ್ದಾರೆ. ಸಾಮಾಜಿಕ ವಿಚಾರಗಳನ್ನು ಮಂಡಿಸುವಾಗ ಜಾನಪದವನ್ನು ಬಳಸಿ ವಿಶ್ಲೇಷಣೆ ಮಾಡುತ್ತಾರೆ. ಅಂಬೇಡ್ಕರ್ ಅವರು ಜಾನಪದವನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡು ವಿಚಾರಗಳನ್ನು ಯಾವ ರೀತಿ ವಿಶ್ಲೇಷಿಸಿದ್ದಾರೆಂಬುದನ್ನು ವಿವರಿಸಲು ಒಂದು ದೀರ್ಘ ಪ್ರಬಂಧವನ್ನೇ ಬರೆಯಬೇಕಾಗುತ್ತದೆ. ಜಾನಪದ ಅಧ್ಯಯನಕಾರರು ಜಾನಪದದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಬರಹಗಳನ್ನು ವಿಶ್ಲೇಷಿಸಿ ಅವರ ಬರಹಗಳ ಸಾಂಸ್ಕೃತಿಕ ಮಹತ್ವವನ್ನು ಓದುಗರಿಗೆ ಮನವರಿಕೆ ಮಾಡಿಕೊಡಲಿ ಎಂಬ ಆಶಯದೊಂದಿಗೆ ಈ ಟಿಪ್ಪಣಿ ರೂಪದ ಲೇಖನವನ್ನು ಮುಗಿಸುತ್ತೇನೆ.



# ನೀಡುವವನೇ ಬೇಡುವವನಾಗಿದ್ದ ಕೋನಿಗ ಹನುಮಪ್ಪ

ಆರ್. ವಿಜಯರಾಘವನ್

**ಕೋ**ಲಾರಕ್ಕೆ ಉತ್ತರ ದಿಕ್ಕಿಗೆ ನಲವತ್ತೇ ಕಿಲೋಮೀಟರ್ ದೂರದಲ್ಲಿದೆ, ಶ್ರೀನಿವಾಸಪುರ ತಾಲೂಕಿನ ಹೊದಲಿ ಗ್ರಾಮ. ಶ್ರೀನಿವಾಸಪುರ ತಾಲೂಕು ಕೇಂದ್ರ. ಇಲ್ಲಿ ತಾಲೂಕು ಕೇಂದ್ರದಲ್ಲಿರುವ ಎಲ್ಲ ಸರಕಾರೀ ಕಛೇರಿಗಳಿವೆ. ಅಂದರೆ ಆ ತಾಲೂಕಿನ ಜನರ ಪಂಚೇಂದ್ರಿಯಗಳೂ ಅಲ್ಲಿವೆ. ಆ ಹೊದಲಿ ಗ್ರಾಮಕ್ಕೆ ಇಲ್ಲಿಂದ ಬಹಳವೆಂದರೆ ಹತ್ತು ಕಿಲೋಮೀಟರ್ ದೂರವಾಗಬಹುದು. ಹೊದಲಿಯೂ ಸಾರ್ವಜನಿಕ ಸಂಪರ್ಕವಿರುವ, ಪಟ್ಟಣ ಪ್ರದೇಶಕ್ಕೆ ಹತ್ತಿರವಿರುವ ಯಾವುದೇ ಒಂದು ಹಳ್ಳಿಯ ಹಾಗಿರುವ ಹಳ್ಳಿ. ಇಲ್ಲಿಯೂ ಕೆಲವು ವರ್ಷಗಳ ಹಿಂದೆ ಕಾಲೋನಿಯಿಂದ ಹಲಗೆ ತುಡುಮುಗಳ ಸದ್ದುಗಳು ಇರುಳಲ್ಲಿ ಕೇಳಿಬರುತ್ತಿದ್ದವು. ಇದು ಬಹುಪಾಲು ಕಲಿಯುವ ಹೊಲೆಯರ ಮಕ್ಕಳು ಬಗೆಬಗೆಯ ಗಸ್ತುಗಳನ್ನು ಕಲಿಯುತ್ತಾ ಮಾಡುವ ಹಲಗೆ ತುಡುಮುಗಳ, ಆ ಬಗೆಯ ಚರ್ಮವಾದ್ಯಗಳ ಸದ್ದು. ಆ ಸದ್ದು ಬೆಳದಿಂಗಳ ಇರುಳುಗಳಲ್ಲಿ ದೂರದೂರ ಸಾಗುತ್ತಿತ್ತು; ಬೇಸಗೆಯಾದರೆ ಇನ್ನೂ ಸುಖವಾಗಿ. ಆ ಸದ್ದು ಜಾನಪದ ಕಲೆಗಳ ಪರಂಪರೆಯ ಮುಂದುವರಿಕೆಯ ಸೂಚನೆಯಾಗಿತ್ತು.

ಈಗ ಸಂಜೆಗಳ ನಿಶ್ಶಬ್ದವು ಜನರ ಕಿವಿಗಳಿಗೆ ಬಡಿಯುತ್ತದೆ. ಮನೆಮನೆಗಳ ಬಾಗಿಲು ಮುಚ್ಚಿಕೊಂಡಿರುತ್ತದೆ. ಟಿವಿಗಳ ಮುಂದೆ ಭಾರತದ ಹಳ್ಳಿಗಳೆಲ್ಲ ಕೀಲಿಸಿ ಕೂತುಬಿಡುವಾಗ, ಅಥವಾ ಪೇಟೆಗೆ ಹೋಗಿ ಅಮಲೇಕ್ಕಿಸಿಕೊಂಡು ಕೊನೆಯ ಬಸ್ಸಿಗೋ, ಬೈಕಿನಲ್ಲೋ ಮರಳುವಾಗ ಈ ಸದ್ದುಗಳು ಬೇಕಾಗುವುದಿಲ್ಲ. ಈ ಮಾತುಗಳು 2002ನೇ ಇಸವಿಗೆ ಸಂಬಂಧಿಸಿದ್ದು. ಅಂದಿನ ಸಂಜೆ ನಮ್ಮಲ್ಲಿ ಗಾಢ ವಿಷಾದಹುಟ್ಟಿಸಿದ್ದು ನಿಜ. ಇವತ್ತಿನ ಮಾತಿಗೆ ಬರಬೇಕೆಂದರೆ ನನ್ನಲ್ಲಿ ಪದಗಳಿಲ್ಲ. ಆದರೆ ಇಂದು ಕಲೆಯ ಅಂದಿನ ಸದ್ದು ಮಾಡುವ ಹೊಸ ಜನಾಂಗ ಆ ಸದ್ದಿನ/ನಾದದ ವೃತ್ತಿಯನ್ನು ನೋಡುವುದರಲ್ಲಿ ಬಹಳ ವ್ಯತ್ಯಾಸಗಳಾಗಿವೆ. ಆದರೂ ಹಳೆಯ, ಉಳಿದಿರುವ, ಕೈಕಾಲು ಉಡುಗದಿರುವ ಅವರಲ್ಲಿಯವರು ಅದನ್ನು ಅರ್ಥಮಾಡಿಕೊಂಡಿರುವ

ಬಗೆಯೇ ಬೇರೆ.

ಇದು ಕೋನಿಗ ಹನುಮಪ್ಪನ ಹುಟ್ಟೂರು. ಕೈಕಾಲು ಗಟ್ಟಿಯಾಗಿದ್ದಾಗ ಅವನೊಬ್ಬ ಇಲ್ಲಿ ಮನೆಯಿದ್ದ, ಎಲ್ಲೆಲ್ಲಿಯೋ ಇರುತ್ತಿದ್ದ ಜಂಗಮ. ಜಂಗಮತನವನ್ನು ತೊರೆಯುವುದೆಂದರೆ ಅವನಂಥವರಿಗೆ ಉಪವಾಸವಿರುವುದು ಎಂದರ್ಥ. ಅವನಿಗೆ ಗೊತ್ತಿದ್ದ ವಿದ್ಯೆ ಅದೊಂದೇ. ಅದನ್ನೂ ಅವನು ಅವನ ಅಪ್ಪನಿಂದ ಕಲಿತಿದ್ದ. ಅಂದು ಇರುತ್ತಿದ್ದುದೇ ಹಾಗೆ. ಕಲೆಗಳೆಲ್ಲವೂ ಬಹುವಾಗಿ ವಂಶದಲ್ಲಿ ಸಾಗಿಬರುತ್ತ ಉಳಿದುಕೊಂಡಿರುತ್ತಿದ್ದವು. ಆ ಕೊಂಡಿ ಕಳಚಿಹೋಗಿದ್ದೇ ಹಾಡುವವರು ಮೂಕರಾಗಿ ಬಳಿಕ ನಿರ್ನಾಮವಾದರು. ಕೇಳಿಕೆಗಳು ಮಾಯವಾದವು. ತೊಗಲುಗೊಂಬೆಗಳಿಗೆ ತೂತುಗಳಾದವು. ಕೊನೆಯ ಕೊಂಡಿಗಳು ಕಳಚಿಕೊಂಡವು. ಅವುಗಳನ್ನು ಕುರಿತ ಸಾಕ್ಷ್ಯಚಿತ್ರಗಳು ತಿಜೋರಿಗಳಲ್ಲಿ ಭದ್ರವಾದವು. ಒಮ್ಮೆ ಅದಾಯಿತೆಂದರೆ ಎಲ್ಲವೂ ಅಂತ್ಯವಾಗುತ್ತವೆ.

ನಿಜ. ಎಲ್ಲಕ್ಕೂ ಅಳಿವಿದೆ. ಹೊಸ ಅಭಿವ್ಯಕ್ತಿ ಮಾಧ್ಯಮಗಳು, ಪ್ರಕಾರಗಳು ಮುಂದೆ ಬಂದಾಗ ಹಳೆಯವು ನೇಪಥ್ಯಕ್ಕೆ ಸರಿಯುತ್ತವೆ. ಅಳಿದುಳಿದರೆ ಅವುಗಳಿಗೆ ಪೋಷಕರು ದೊರೆಯುವುದಿಲ್ಲ. ಪೋಷಣೆಯಿಲ್ಲದೆ ಈ ಬಗೆಯ ಪ್ರಕಾರಗಳು ಉಳಿಯಲಾರವು. ಪೋಷಕರ ಬದಲು ಸರ್ಕಾರ ಮಾಡಬೇಕಾದ ಕೆಲಸ. ಆದರೆ ಸರ್ಕಾರವೆನ್ನುವುದು ಕೇವಲ ನೆಪಕ್ಕಿದೆ. ಅದು ತನ್ನ ಲ್ಯಾಬಿರಿಂತಿನಲ್ಲಿ ತಾನುಡುಗಿದೆ. ಯಾವುದನ್ನಂತ ಪೋಷಿಸುವುದದು?

ಕೋನಿಗ ಹನುಮಪ್ಪನ ಹೆಸರು ಹನುಮಪ್ಪ. ಕೋನಿಗ ಹೆಸರು ಬಂದಿದ್ದು ಅವನ ಆ ಅಂಕುಡೊಂಕು ಕೋಲಿನಿಂದ. ಅದರ ಹೆಸರು ತೆಲುಗಿನಲ್ಲಿ ಕೋನಿಗ ಕಟ್ಟ. ನಾವು ಅವನನ್ನು ಕಂಡಾಗ ಅವನು ತನ್ನ ದಾರಿದ್ರ್ಯದ, ಕಡೆಯ ದಿನಗಳನ್ನು ದೂಕುತ್ತಿದ್ದ. ಅದು ಅವನ ಓರಿಗೆಯ ಎಲ್ಲ ದಲಿತ ಕಲಾವಿದರಂತೆಯೇ ಇತ್ತು. ಜೊತೆಗೆ ಅವನೊಬ್ಬ ಕಟ್ಟಾ ದೈವ ಭಕ್ತ. ಹೊದಲಿಗೆ ಒಂದೆರಡು ಮೈಲಿ ದೂರದಲ್ಲಿ ಒಬ್ಬ ಅನುಭಾವಿಯ ಆಶ್ರಮ, ದೇಗುಲವಿದೆ. ಅಲ್ಲಿಗವನು ನಿರ್ಧರಿಸಿದ ದಿನಗಳಂದು ನಡೆದು ಹೋಗಿ ಸೇವೆ ಮಾಡುತ್ತಿದ್ದ. ಉಳಿದಂತೆ ಊರು ತಿರುಗುವ. ಹರಪನಾಯಕನ ಹಳ್ಳಿಯ ಬಿಸೇಗೌಡನ ಚರಿತ್ರೆಯನ್ನು, ಓಬಳಪ್ಪನೆಂಬ ನಾಯಕರ ವ್ಯಕ್ತಿಯನ್ನು ಮೋಸದಿಂದ ಅಬ್ದುಲ್ ಸಾಬಿಯೆಂಬುವವನು ಕೊಲ್ಲಿಸಿದ ಕತೆಯನ್ನು, ಎಲೆಅಡಿಕೆಯ ಮಹತ್ವ ಕುರಿತಾದ ಹಾಡನ್ನು, ಯಾಲಪದಗಳನ್ನೂ, ಅಪರೂಪಕ್ಕೆ ಗಂಗಭಾತರವನ್ನೂ ತೆಲುಗಿನಲ್ಲಿ ಹಾಡುವ. ಈ ಬಿಸೇಗೌಡ ಮೈಸೂರ ಅರಸರ ಸಾಮಂತ. ಹೊದಲಿಗೂ ಹರಪನಾಯಕನ ಹಳ್ಳಿಗೂ ನಡುವೆ 25 ಕಿಲೋಮೀಟರ್ ಅಂತರ. ಬಿಸೇಗೌಡನ



ಮಾಂಡಲಿಕ ಆಸ್ಥಾನದಲ್ಲಿ ಹೀಗೆ ಹಾಡುವ ಹನುಮಪ್ಪನೆಂಬ ಗಾಯಕನಿದ್ದನಂತೆ. ಅವನ ವಂಶದ ಕುಡಿ ಈ ಹನುಮಪ್ಪ. ಅಂಥ ಮಹಾನುಭಾವರ ಆಸ್ಥಾನದ ಹಾಡುಗಾರಿಕೆಯ (ಮೌಖಿಕ) ಪರಂಪರೆಯನ್ನು ಉಳಿಸಿಕೊಂಡು ಬರಲು ಕಟಿಬದ್ಧನಾದವ ಈ ಹನುಮಪ್ಪ.

ಹನುಮಪ್ಪನನ್ನು ನಾನು ನೋಡಿದ್ದು ಇಳಿ ಸಂಜೆಯಲ್ಲಿ. ನಾವು ಹೊದಲಿಯ ಅವನ ಮನೆಗೆ ಹೋದಾಗ ಅವನಿರಲಿಲ್ಲ. ಆಶ್ರಮಕ್ಕೆ ಹೋಗಿದ್ದ. ಆದರೂ ಬೇಗನೇ ಬಂದುಬಿಟ್ಟ. ಅವನಿಗೆ ನಮ್ಮನ್ನು ಕಂಡು ಸಂತೋಷವೇ ಆಯಿತು ಎನ್ನಬಹುದು. ಅವನು ದಣಿದಿದ್ದ. ಆದರೆ ನಮ್ಮ ಒತ್ತಾಯಕ್ಕೆ ಮಣಿದು ವೇಷ ಧರಿಸಿದ. ಆ ವೇಷವನ್ನು ಸ್ಮೃತಿಯಿಂದ ಅಳಿಸಲು ಸಾಧ್ಯವೇ ಇಲ್ಲ. ಹಣೆಗೆ ದೊಡ್ಡ ಮೂರುನಾಮ, ಮೈಸೂರು ಪೇಟ, ಪೇಟಕ್ಕೊಂದು ಕುಚ್ಚು, ಕನ್ನಡಕ, ದೊಡ್ಡ ಮೀಸೆ, ಕೈಲಿ ಆ ಸೊಟ್ಟ ಸೊಟ್ಟಗಿನ ಬಲುಘಟ್ಟಿಯಾದ ಕೋನಿಗ ಕಟ್ಟ ಎಂಬ ಕೋಲು, ಬಗಲಲ್ಲಿ ನೆಗ್ಗಿದ ಆದರೆ ಚೆನ್ನಾಗಿ ಬೆಳಗಿದ್ದ ತಾಮ್ರದ ಅಕ್ಷಯ(ಭಿಕ್ಷಾ)ಪಾತ್ರೆ, ಬಿಡಿಬಿಡಿಯಾದ ಐದು ಚಿಟಿಕೆ. ಯುದ್ಧಕ್ಕೆ ಹೊರಟವನಿಗೆ ಸೇಸೆ ಎತ್ತಿದ ಹಾಗೆ. ಅವನಿಗೆ ತಕ್ಕ ಧಿರಿಸಿಲ್ಲ ಎಂದರೆ ಅವನು ಹಾಡ ಹೊರಡುವುದಿಲ್ಲ. ಧಿರಿಸಿನಲ್ಲಿ ಗಾಯನ ಸಾಮ್ರಾಟನಾಗಿ ತನ್ನ ಮಾಡಿಕೊಳ್ಳುತ್ತಾನೆ.

ನಾವು ಬಿಸಿಲು ಆರುವ ಮೊದಲು ಅವನದಷ್ಟು ಫೋಟೋ ತೆಗೆದುಕೊಂಡೆವು. ಅವನಿಂದ ಬಿಸೇಗೌಡನ ಪಾಟದ ಕೆಲವು ಭಾಗಗಳನ್ನು, ವಕ್ಕಾಕು ಪಾಟವನ್ನು, ಅಬ್ದುಲ್‌ಸಾಬಿ, ಓಬಳಪ್ಪನ ಹಾಡನ್ನು ಹಾಡಿಸಿ ಕೇಳಿದೆವು. ಹತ್ತಿರ ಕೂತು ಮಾತಾಡಿದೆವು. ನಮ್ಮ ಗುಂಪಿನಲ್ಲಿ ಇದ್ದದ್ದು ಲಕ್ಷ್ಮೀಪತಿ ಕೋಲಾರ, ಸ. ರಘುನಾಥ, ಆರ್ ಶಿವಪ್ಪ, ನಾನು, ಮತ್ತೆ ಯಾರೋ ನೆನಪಿಲ್ಲ.



ಹನುಮಪ್ಪ ತನ್ನ ಹಾಡಿಗೆ ಶ್ರುತಿಯನ್ನು, ತಾಳವನ್ನು, ಲಯನಡಿಗೆಗಳನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಚಿಟಿಕೆ ಇತ್ಯಾದಿಗಳು ತಂದೆಯಿಂದ ಬಂದಿದ್ದರೆ ಈಗಿರುವ ಕೋನಿಗ ಕಟ್ಟ ಎಂಬ ಬಿದಿರ ಕೋಲನ್ನು ರೋಣೂರಿನಿಂದ ಆರಿಸಿ ಅವನೇ ತಂದಿದ್ದ. ಬಿಸೇಗೌಡನಿಗೆ ಕತ್ತಿ ಇದ್ದಂತೆ, ಸಿಂಹಾಸನವಿದ್ದಂತೆ ಅವನಿಗೆ ಅದು. ಅವನಿರುವವರೆಗೂ ಅದೂ ಬಾಳುತ್ತದೆ ಅಂದುಕೊಂಡೆ. ಆ ಹಾಡು, ಹಾಡಿನ ಪರಂಪರೆ ಅಲ್ಲಿಗೆ ಮುಗಿಯುತ್ತದೆ ಅನ್ನಿಸಿತು: ಅವನ ಸಂತಾನ ಅದರಲ್ಲಿ ಆಸಕ್ತಿ ತೋರಲಿಲ್ಲವಂತೆ. ಕೂಲಿ ಮಾಡಿ ತಿನ್ನುತ್ತೇವೆ, ಈ ರೀತಿ ಭಿಕ್ಷೆ ಬೇಡಿ ಅಲ್ಲ ಅನ್ನುತ್ತಾರಂತೆ. ಕಲೆಯು ಭಿಕ್ಷಾಟನೆಯೆಂದು ಬಗೆಯುವುದು ನಮ್ಮಲ್ಲಿ ಮಾತ್ರ ಸಾಧ್ಯವೇನೋ? ಅವನು ನೀಡುವವನು, ಬೇಡುವವನಲ್ಲ ಎಂಬ ಭಾವ ನಮ್ಮಲ್ಲಿ ಮೊಳೆಯುವುದು ಎಂದೋ. ಅವನು ಹಾಡಿದ್ದಕ್ಕೆ ಏನಾದರೂ ಕೊಡುವುದು ಪ್ರತಿಫಲ ಎಂಬ ಭಾವನೆ ನಮ್ಮಲ್ಲಿ ಹುಟ್ಟುವುದಾದರೂ ಎಂದು? ನೀಡುವವನು ಬೇಡುವವನೇ?

ಬಿಸೇಗೌಡ, ಅಬ್ದುಲ್ ಸಾಬಿ, ಎಲೆಯಡಿಕೆಯಂಥ ನೂರು ಸಾವಿರ ಹಾಡುಗಳು ಆಗ ಪರಿಸರದಲ್ಲಿ ಓಡಾಡಿಕೊಂಡಿದ್ದವು. ಆದರೆ ಹನುಮಪ್ಪ ತಾನು ಹಾಡುವವನ್ನು ತಾನೇ ಕವಿಕಟ್ಟಿದ್ದೆಂದು ಹೇಳುತ್ತಿದ್ದ. ಎನ್ನೆನ್ನೋ ಕವಿಕಟ್ಟಿನಾನು ಅನ್ನುತ್ತಿದ್ದ. ಈಗ ನೆನಪಿನಲ್ಲಿರುವುದು ಕಡಿಮೆ. ಅವನು ಕವಿಕಟ್ಟಿದ್ದನ್ನೆಲ್ಲ ಜನರು ಕೇಳುವುದಿಲ್ಲವಲ್ಲ. ಜನರಿಗೆ ಅವರು ಮೆಚ್ಚಿದ್ದು ಬೇಕು. ಆದ್ದರಿಂದ ಅವನ ಅಪ್ಪ ಹೇಳುತ್ತಿದ್ದ



ಹಾಡುಗಳೇ ಈಗಲೂ ಜನ ಕೇಳುವುದು. ಕಥೆಯು ಪ್ರಾಚೀನವಾದಷ್ಟೂ ಆಕರ್ಷಣೆ ಹೆಚ್ಚುತ್ತದೆ.

ಆತನ ಅಣ್ಣನ ಮಗ ಬಂದ. ಆತ ಈಗ ಹನುಮಪ್ಪನನ್ನು ಅಕಾಡೆಮಿ, ಸರ್ಕಾರದ ಕಾರ್ಯಕ್ರಮಗಳಾದರೆ, ಅದೂ ವರ್ಷದಲ್ಲಿ ಒಂದೋ ಎರಡೋ ಅಷ್ಟೇ, ಕರೆದುಕೊಂಡು ಹೋಗುತ್ತಾನೆ. ಜೊತೆಗೆ ಕೀಬೋರ್ಡನ್ನು ಒಯ್ಯುತ್ತಾನೆ. ಹಾರ್ಮೋನಿಯಂಗಿಂತ ಅದು ವಾಸಿಯಂತೆ. ಅದರ ಸದ್ದು ಅವನ ಹಾಡನ್ನು ಅರ್ಧ ನುಂಗಿಬಿಡುತ್ತದೆ. ಆದರೂ ಅವನಿಗೆ ಸಾಥ್ ಕೊಡುವುದು ಘನತೆಯ ಪ್ರಶ್ನೆ. ಕಾರ್ಯಕ್ರಮಗಳನ್ನು ಏರ್ಪಡಿಸಿ ಕರೆಯುವವರು ಕಮ್ಮಿ ಎಂದ.

ಇವನಿಗೆ, ಇವನಂಥವರಿಗೆ ಮಾಸಾಶನ ಕೊಡಿಸಲು ಸ. ರಘುನಾಥರು ಪಟ್ಟ ಪಡಿಪಾಟಲಿನ ಬಗ್ಗೆ ಅವರನ್ನೇ ಕೇಳಬೇಕು. ಸ್ವತಃ ಪರಿಶಿಷ್ಟ ಜನಾಂಗಕ್ಕೆ ಸೇರಿದ ಸರ್ಕಾರೀ ಅಧಿಕಾರಿಗಳಿಗೇ ಇಂಥವರನ್ನು ಕಂಡರೆ ಅಸಡ್ಡೆ. ವಾಸ್ತವವನ್ನು ಅರಿಯದೆ ಕೂತೆಡೆಯೇ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಅವನ ಮಕ್ಕಳು ಅವನನ್ನು ಸಾಕದಿದ್ದರೂ ಅವನು ಅನಾಥನೆಂದು ಪರಿಗಣಿಸಲ್ಪಡುವುದಿಲ್ಲ. ಜನಪದ ಅಕಾಡೆಮಿ ಅವನಿಗೆ ವಾರ್ಷಿಕ ಪ್ರಶಸ್ತಿ ಕೊಟ್ಟಿತು. ಆ ಹಣ ತಿಂಗಳೆರಡು ತಿಂಗಳ ಡಯಾಬಿಟೀಸಿನ ಉಪಚಾರಕ್ಕೆ ಆದೀತು.

ಹನುಮಪ್ಪನ ದೃಷ್ಟಿ ಕಡಿಮೆಯಾಗುತ್ತಿತ್ತು. ಮಧುಮೇಹ ತನ್ನ ಚಾಳಿ ತೋರಿಸಲು ಶುರುಮಾಡಿತ್ತು. ಇದ್ದಷ್ಟು ಕಾಲ ಭುವನದ ಭಾಗ್ಯವೆಂದು ಬಗೆದು ಹಿಂತಿರುಗಿದೆವು. ಅದಕ್ಕೆ ಮೊದಲು ಶಿವಪ್ಪ ಅವನಿಗೆ ಅಷ್ಟು ಹಣ ಕೊಟ್ಟರು. ಹನುಮಪ್ಪನ ಮುಖದಲ್ಲಿ ಧನ್ಯತೆಯ ಬಿಸಿಲ ಕೋಲೊಂದು ಮೂಡಿತು.

ಆಗಷ್ಟೇ ಊರಿನ ಡೈರಿಯಲ್ಲಿ ಸಂಗ್ರಹಿಸಿದ ಹಾಲು ಕ್ಯಾನುಗಳನ್ನು ಹೇರಿಕೊಂಡು ಮದರ್ ಡೈರಿ ವಾಹನ ಪೇಟೆಗೆ ಹೋಗುತ್ತಿತ್ತು. ಈ ಡೈರಿ ಕ್ರಾಂತಿ ಶುರುವಾದ ಮೇಲೆ ಊರಲ್ಲಿ ಪಾವು ಪಡಿ ಹಾಲು ಹುಟ್ಟುವುದಿಲ್ಲ. ನೀರುಮಜ್ಜಿಗೆಯ ಮಾತೇ ಇಲ್ಲ. ಅದೇನೋ ಕೋನಿಗ ಹನುಮಪ್ಪನ ಬಗೆಯವರು ಉಳಿಸಿಕೊಂಡು ಬಂದಿದ್ದ ಕಲೆಯ ರೂಪಕದಂತೆ ಕಾಣಿಸಿತು.

ಬಹಳ ದಿನ ದೂರದ ಊರಿನಲ್ಲಿದ್ದು ಮರಳಿದವನು ರಘುನಾಥರ ಬಳಿ ವಿಚಾರಿಸಿದೆ. ಕೋನಿಗ ತೀರಿಕೊಂಡಿದ್ದ. ಅವನ ಕೊನೆಯ ದಿನಗಳದೇ ಇನ್ನೊಂದು ಕಥೆ. ಹನುಮಪ್ಪನ ಮರೆಯಲ್ಲಿದ್ದ ಕೀರ್ತಿ ಪ್ರಚಾರಕ್ಕೆ ಬಂದಂತೆ ಅದನ್ನು ತಮ್ಮದಾಗಿಸಿಕೊಳ್ಳುವ ರಾಜಕೀಯದ ಪ್ರವೇಶವಾಯಿತು. ಅವನ ಕುಲಕ್ಕೆ ಸೇರಿದ ಅಸಾಮಿಯೇ ಆತನನ್ನು ಶೋಷಿಸಿದ್ದು ಹನುಮಪ್ಪನಲ್ಲಿ ಉಳಿದ ಮಾಯದ ನೋವು. ಆತನ ಶ್ರದ್ಧಾಂಜಲಿ ಹೆಸರಿನಲ್ಲಿಯೂ ಹಣ ಮಾಡಿಕೊಂಡ 'ಬಂಧು'ಗಳಿದ್ದರು. ನೋವು, ಕೊರಗಿನಲ್ಲಿ 2008ರ ಒಂದು ನಡಹಗಲು ಹನುಮಪ್ಪ ಇಹದೊಂದಿಗೆ, ಕೋನಿಗ ಕಲೆಗೂ ಶಾಶ್ವತ ವಿದಾಯ ಹೇಳಿದ.

ಅವನ ಧಿರಿಸು, ಕೋನಿಗಕಟ್ಟ, ಜೋಳಿಗೆ, ಪಾತ್ರೆ...? ಅದನ್ನು ಸ. ರಘುನಾಥ ಒಂದು ಸ್ಮಾರಕವಾಗಿಸುವ ಪ್ರಯತ್ನ ನಡೆಸಿದರಾದರೂ ಹನುಮಪ್ಪನ ಮಗನಿಗೆ 'ಅದರ ರೆಲಿಕಲ್ ಬೆಲೆ ಎಷ್ಟಿರಬೇಕು' ಎಂದು ಯಾರೋ ಇಲ್ಲದ್ದನ್ನು ಕಿವಿಯಲ್ಲಿ ಊದಿದ್ದರು. ಆದ್ದರಿಂದ ಅದಕ್ಕೆ ಸಲ್ಲಬೇಕಾದ ಸ್ಥಳ ಸಿಕ್ಕಲಿಲ್ಲ. ಬದಲಿಗೆ ಈಗ ಅವು ಆ ಮಗನ ಬಳಿ, ಹನುಮಪ್ಪನ ಹಳೇ ತಗಡು ಪೆಟ್ಟಿಯಲ್ಲಿ ಕತ್ತಲವಾಸ ಅನುಭವಿಸುತ್ತಿವೆ. ಯಾವ ಗೆದ್ದಲು ಯಾವಾಗ ಬಂದು ಮುತ್ತಿ ತಿಂದುಕೊಳ್ಳುವುದೋ ಹನುಮಪ್ಪನ ಆರಾಧ್ಯ ದೈವವೇ ಹೇಳಬೇಕು.



# ಕರಾವಳಿ ಕರ್ನಾಟಕದ ಜನಪದ ಕಲೆಗಳು

ಪ್ರೊ.ಎಸ್.ಎ.ಕೃಷ್ಣಯ್ಯ

ಕರ್ನಾಟಕ ರಾಜ್ಯ ಪಶ್ಚಿಮ ಅಂಚಿನ ದಕ್ಷಿಣದ ತುದಿಯಿಂದ ಉತ್ತರ ಕಾರವಾರದ ಸುಮಾರು 320 ಕಿ.ಮೀ-ಗಳಷ್ಟು ವ್ಯಾಪ್ತಿಯ ಭೂಭಾಗ ಪ್ರದೇಶವನ್ನು 'ಕರಾವಳಿ ಪ್ರದೇಶ' ಎನ್ನಲಾಗಿದೆ. ಈ ಪ್ರದೇಶ ವ್ಯಾಪ್ತಿಯೊಳಗೆ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಹಾಗೂ ಉತ್ತರ ಕಾರವರದ ಜಿಲ್ಲೆಗಳೂ ಸೇರಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಉದ್ದ ಸುಮಾರು 140 ಕಿ.ಮೀ.ಗಳು. ಸುಮಾರು ಕ್ರಿ.ಶ. 1862ರ ತನಕ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಪ್ರದೇಶವು ಏಕಾಡಳಿತ ವ್ಯವಸ್ಥೆಯಲ್ಲಿ ಸೇರ್ಪಟ್ಟಿತು. ಬ್ರಿಟೀಷ್ ಸರಕಾರ ತನ್ನ ಅಧಿಪತ್ಯ ಸ್ಥಾಪಿಸಿಕೊಂಡ ತರುವಾಯ 'ದಕ್ಷಿಣ ಕನ್ನಡ' ಮತ್ತು 'ಉತ್ತರ ಕನ್ನಡ' ಪ್ರಾಂತ್ಯವಾಗಿಸಿ ಬೇರ್ಪಡಿಸಿತು. ದಕ್ಷಿಣ ಕನ್ನಡ ಪ್ರದೇಶವನ್ನು ಮದ್ರಾಸ ಸರಕಾರ ಅಧಿಪತ್ಯಕ್ಕೂ ಸೇರಿಸಿಕೊಂಡಿತು. ದಕ್ಷಿಣ ಕನ್ನಡ ಜಿಲ್ಲೆ ಎಂಬ ಪ್ರತ್ಯೇಕತೆಯು ಕ್ರಿ.ಶ. 1884ರಲ್ಲಿ ಮದ್ರಾಸ್ ಸರಕಾರದ ಮೂಲಕ ಸ್ಥಾಪಿತಗೊಂಡಿತು. 15-ಆಗಸ್ಟ್-1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಂದಿನಿಂದ ರಾಜ್ಯದಲ್ಲಿ ಜಿಲ್ಲಾವಾರು ಪ್ರತ್ಯೇಕ ಆಡಳಿತ ಸೂತ್ರ ಮೈಗೂಡಿಸಿಕೊಂಡವು. ಅಂದಿನ ದಿನಗಳಲ್ಲಿ 'ಕಾಸರಗೋಡು' ಪ್ರದೇಶ ಮೈಸೂರು (ಇಂದಿನ ಕರ್ನಾಟಕರಾಜ್ಯ) ರಾಜ್ಯದ ಭಾಗವಾಗಿತ್ತು. ಗಡಿ ಸಮಸ್ಯೆ ಇತ್ಯರ್ಥವಾಗದೆ ಕರಾವಳಿ ಕರ್ನಾಟಕ-ಭಾಗದ ಕಾಸರಗೋಡು ಪ್ರದೇಶ 1956ನೇ ಇಸವಿಯಲ್ಲಿ ಕೇರಳ ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಇತ್ತೀಚೆಗೆ ದಕ್ಷಿಣ ಕನ್ನಡವನ್ನು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳೆಂದು ವಿಂಗಡಿಸಲಾಗಿದ್ದರೂ ಈ ಎರಡೂ ಜಿಲ್ಲೆಗಳಾದರೂ ಸಾಂಸ್ಕೃತಿಕ ನೆಲೆಗಟ್ಟು ಒಂದೇ ಆಗಿದೆ. ಇಂತಿಷ್ಟು ಭೌಗೋಳಿಕ ನೆಲೆಯಲ್ಲಿ ಪ್ರಸ್ತಾಪ ಈ ಲೇಖನಕ್ಕೆ ಇಲ್ಲಿ ನೀಡಿದೆ.

ವೈವಿಧ್ಯಮಯ ಸಂಸ್ಕೃತಿ, ಭಾಷೆ, ಜನಪದಕಲೆ, ರಂಗಕಲೆಗಳು ಹಾಗೂ ಆಚರಣಾತ್ಮಕ ವೈಶಿಷ್ಟ್ಯತೆ ಇರುವುದು ಕರಾವಳಿ ಕರ್ನಾಟಕದಲ್ಲಿ. ಅಧ್ಯಯನ ದೃಷ್ಟಿಯಿಂದ ಅಥವಾ ಯಾರಾದರೂ ಹೀಗೊಂದು ಪ್ರಶ್ನೆ ಕೇಳಬಹುದು. 'ಕರ್ನಾಟಕ ರಾಜ್ಯದಲ್ಲಿ ಯಾವೆಲ್ಲ

ಜನಪದ ಕಲೆಗಳಿವೆ...?' ಥಟ್ಟನೆ ಅಭಿಮಾನದಿಂದ ಬರುವ ಉತ್ತರ: ಸಾವಿರಾರು ಕಲಾ ಪ್ರಕಾರಗಳಿವೆ ಎನ್ನುತ್ತಾರೆ, ಇಲ್ಲವೇ ಐದುನೂರು ಮಿಗಿಲಾಗಿ ಕಲಾ ಪ್ರಕಾರಗಳಾದರೂ ಇರಬಹುದು, ಎನ್ನಬಹುದು. ಇದು ಕೇವಲ ಊಹೆ ಮಾತ್ರ. ಅಧ್ಯಯನದ ದೃಷ್ಟಿಕೋನದಿಂದ ಸರ್ವೇಕ್ಷಣೆ ಮಾಡಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ಕಲಾಪ್ರಕಾರಗಳಿವೆ ಎನ್ನಬಹುದು. ಈ 249 ಕಲಾ ಪ್ರಕಾರಗಳಲ್ಲಿ ಸುಮಾರು 121 ಜನಪದ ಕುಣಿತಗಳಿವೆ. ಈ ಉತ್ತರ ಖಂಡಿತವಾಗಿಯೂ ಯಾರಿಗೂ ತೃಪ್ತಿ ಕೊಡಲಾರದು. ಏಕೆಂದರೆ ಇದುವರೆವಿಗೆ ನಾವು ಅಭಿಮಾನದಿಂದ ವೈಭವೀಕರಿಸಿಕೊಂಡು ಬಂದದ್ದು ಜಾಸ್ತಿ.

ಕರ್ನಾಟಕದ ಭೌಗೋಳಿಕ ಹಿನ್ನೆಲೆಯಲ್ಲಿ ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದೇನೆ. ಮುಖ್ಯವಾಗಿ ಕರಾವಳಿ ಕರ್ನಾಟಕ (ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ), ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಕೊಡಗು ಪ್ರಾಂತ್ಯ.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟಾಗಿ ಸುಮಾರು ಜನಪದ ಕಲಾ ಪ್ರಕಾರಗಳಿವೆ. ಈ ಅಂಕಿ-ಸಂಖ್ಯೆಗಳ ಆದಿ ಅಂತಿಮ ಎಂದು ನಾನು ಪರಿಗಣಿಸಿಲ್ಲ. ಈ ಮುಖ್ಯ ಪ್ರಕಾರಗಳಲ್ಲಿ ಅನೇಕ ಉಪ ಪ್ರಕಾರಗಳು, ಪ್ರಭೇದಗಳು ಅಥವಾ ಕುಣಿತಗಳು, ವೇಷಗಳು ಹೀಗೆ ಹಲವಾರು ಕಲೆಗಳು ಇರುತ್ತವೆ. ಉದಾ: ಭೂತಾರಾಧನೆಯಲ್ಲಿ ಸುಮಾರು 334 ಭೂತಗಳ ಆರಾಧನೆ, ಉತ್ಸವ ಇದೆ ಎನ್ನುತ್ತಾರೆ. ಊರಿಗೊಂದು ಭೂತದ ಆರಾಧನೆ ಮಾಡಿದರೆ ಲೆಕ್ಕ ಸಾವಿರ ದಾಟುತ್ತದೆ. ಹೀಗೆಂದು ಈ ಎಲ್ಲ ಪ್ರಭೇದಗಳನ್ನು ಮುಖ್ಯ ಪ್ರಕಾರಗಳಲ್ಲಿ ಸೇರಿಸಿಲ್ಲ.

ಕರ್ನಾಟಕದಾದ್ಯಂತ ಜನಪದ ಕಲೆಗಳನ್ನು ಪರಿಗಣಿಸಿದಾಗ ಕರಾವಳಿ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಕಲಾ ಪ್ರಕಾರಗಳು ಲಭ್ಯವಾಗುತ್ತವೆ. ಎಲ್ಲಿ ಸಮೃದ್ಧತೆ ಇದೆಯೋ ಅಲ್ಲಿ ಹೆಚ್ಚು ಕಲಾಪ್ರಕಾರಗಳಿರುತ್ತವೆ, ಎಲ್ಲಿ ಹೆಚ್ಚು ಕಲಾ ಪ್ರಕಾರಗಳಿವೆಯೋ ಅಲ್ಲಿ ಜನ-ಸಂಸ್ಕೃತಿ ಹಾಗೂ ಬುದ್ಧಿಕೌಶಲ್ಯ ಅಧಿಕವಿರುತ್ತದೆ. (ಕರಾವಳಿ ಕರ್ನಾಟಕದ ಜನತೆ ಬಹಳಷ್ಟು ಜನ ಮೀನು ತಿನ್ನುತ್ತಾರೆ. ಹೀಗಾಗಿ ಇಲ್ಲಿಯ ಜನ ಅತಿ ಬುದ್ಧಿವಂತರು ಎಂದು ಪ್ರಶಂಸೆಯನ್ನೂ ಪಡೆದಿದ್ದಾರೆ). ಈ ಮಾತು ಸತ್ಯಕ್ಕೆ ದೂರವಾದುದು. ನಂಬಿದರೆ ನಂಬಿ ಬಿಟ್ಟರೆ ಬಿಡಿ ದಕ್ಷಿಣ ಕನ್ನಡ ಜನ ಖಂಡಿತವಾಗಿಯೂ ಮೀನು ತಿನ್ನುವುದರಿಂದ ಇಲ್ಲಿಯ ಜನವರ್ಗ ಬುದ್ಧಿವಂತರಾದುದಲ್ಲ. ಮುಖ್ಯವಾಗಿ ಇಲ್ಲಿನ ಕಲಾ ಸಂಸ್ಕೃತಿಯಲ್ಲಿ ದಿನ ನಿತ್ಯ ಮಿಂದೇಳುವ ಪರಿಸರ ಈ ಜನವರ್ಗದವರಿಗೆ ಲಭ್ಯವಿದೆ, ಹೀಗಾಗಿ ಬುದ್ಧಿವಂತರಾಗಿದ್ದಾರೆ ಎಂದರೆ ಅತಿಶಯೋಕ್ತಿ ಎಂದು ತಿಳಿಯಬಾರದು. ಯಕ್ಷಗಾನ, ತಾಳಮದ್ದಳೆ, ಕಂಬಳ, ಭೂತಕೋಲದಂತಹ ಮಾಧ್ಯಮಗಳಲ್ಲಿ ಹೊಂಬರುವ ಮಾತುಗಳು, ಅರ್ಥಗಾರಿಕೆ, ಅಲಂಕಾರಿಕ ನುಡಿಗಟ್ಟುಗಳು, ಒಡಪು ನುಡಿಗಟ್ಟುಗಳು ಹೀಗೆ ಹತ್ತು ಹಲವು ಚಿತ್ರಕಾವ್ಯಗಳು ಈ ಕಲಾ ಸೊಗಸಿನಲ್ಲಿವೆ. ಇವುಗಳನ್ನು ಒಮ್ಮೆ ಕೇಳಿದರೆ ಸಾಕು ಕಲಾ ಸಾಕಾರತ್ವದ ರುಚಿ ಬಯಸಿ ಬಯಸಿ ಜನ ನೋಡ ಬಯಸುತ್ತಾರೆ ಹಾಗೂ ಕೇಳ ಬಯಸುತ್ತಾರೆ, ಮತ್ತು ಹೊಸತನ್ನು ಸೃಷ್ಟಿಸುತ್ತಾರೆ. ಹೀಗಾಗಿ ಸಹೃದಯ ಕಲಾವಂತಿಕೆ ಈ ಜನರ ಹೃದಯದಲ್ಲಿ ಶ್ರೀಮಂತವಾಗಿದೆ.

ಕರಾವಳಿ ಕರ್ನಾಟಕದಲ್ಲಿ ವರ್ಷದ ಎಲ್ಲಾ ದಿನಗಳಲ್ಲಿ ಕಲಾ ಪ್ರಕಾರಗಳು ನೋಡಲು ಇಲ್ಲಿ ಲಭ್ಯವಿಲ್ಲ. ವರ್ಷದ ಆರು ತಿಂಗಳು ಕರಾವಳಿ ಕರ್ನಾಟಕದ ಹಲವು ಭಾಗಗಳಲ್ಲಿ ವೈವಿಧ್ಯಮಯವಾದ ಜನಪದ ಕಲೆಗಳು ಅಲಲ್ಲಿ ಕಾಣಸಿಗುತ್ತವೆ. ಸಾಮಾನ್ಯವಾಗಿ ಯಕ್ಷಗಾನ, ಗೊಂಬೆಯಾಟ, ತಾಳ ಮದ್ದಳೆ ಇವುಗಳೆಲ್ಲ ಜನಪದ ರಂಗ ಪ್ರಕಾರಗಳು, ಮತ್ತೊಂದೆಡೆ ಆರಾಧನಾ ಕಲಾ ಪ್ರಕಾರಗಳಾದ ಆಟಿ ಕಳಂಜ, ಕಂಗಿಲು, ಬಾಲೆ ಸಾಂತು, ಭೂತ ಕೋಲ, ಮೆಚ್ಚಿ, ನಾಗ ಮಂಡಲ, ನಿಜ ಮಂಡಲ, ಡಕ್ಕೆ ಬಲಿ ಇವುಗಳೆಲ್ಲಾ ಈ ನಾಡಿನ ಆರಾಧನಾ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪ್ರಕಾರಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕೆಲವೊಂದು ಪ್ರಕಾರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

**ಕರಾವಳಿ ಕರ್ನಾಟಕದ ಜನಪದ ಕಲೆಗಳು:**

1. ಆಟಿಕಳಂಜ
2. ಭೂತಾರಾಧನೆ

3. ಚೆನ್ನು ಕುಣಿತ
4. ದಪ್ಪು ಕಳಿ
5. ಕೊರಗರ ಡೋಲು, ಪನಿಕುಲ್ಲುನು ನಲಿಕೆ, ಕುಂಬುಲದ ನಲಿಕೆ
6. ಹುಲಿ ವೇಷ
7. ಮರಾಠಿ ನಾಯಕರ ಹೋಳಿ
8. ಕಂಗಿಲಿ ಕುಣಿತ
9. ಕರಂಗೋಲು ಕುಣಿತ
10. ಕಾಪಾಳರ ಕುಣಿತ (ದ.ಕ. ಜಿಲ್ಲೆಯಲ್ಲಿ ಕಾಪಾಳರು ಗಿರಿಜನವರ್ಗ, ಕೊಡಗು ಭಾಗದಲ್ಲಿ ಇವರುಗಳನ್ನು 'ಕೆಂಬಟ್ಟಿ'– ಜನವರ್ಗದವರೆಂದು ಕರೆಯುತ್ತಾರೆ. ದ.ಕ. ಜಿಲ್ಲೆಯ ಗಡಿ ಭಾಗವಾದ ಸಂಪಾಜೆ ಪರಿಸರದಲ್ಲಿ ಈ ಜನವರ್ಗದವರಾಗಿದ್ದಾರೆ)
11. ಕೀಲು ಕುದುರೆ
12. ಖಡ್ಗದ ಕುಣಿತ (ಮಲೆ ಕುಡಿಯರು ನಡೆಸುವ ಕೋಲದಲ್ಲಿ ನಡೆಯುವ ಕಲೆ)
13. ತಾಸೆ ಕುಣಿತ (ಶಿವರಾತ್ರಿ, ನವರಾತ್ರಿ ಉತ್ಸವ ಸಂದರ್ಭ)
14. ಲೇ ಲೇ ಕುಣಿತ (ಮನ್ಸೆರು, ಮುಂಡಾಲರು ನಡೆಸಿಕೊಡುವ ಕುಣಿತ)
15. ಮರಗಾಲು ಕುಣಿತ
16. ಪಿಲಿ ಪಂಜಿ ಕುಣಿತ
17. ಪುರುಷೆರು ಕುಣಿತ
18. ಸೋಣದ ಜೋಗಿ (ಶ್ರಾವಣದಲ್ಲಿ ನಲಿಕೆ, ಮುಗ್ಗೇರ ಜನವರ್ಗದವರು ನಡೆಸಿಕೊಡುವ ಕಲೆ)
19. ತಟ್ಟೀರಾಯ (ಗಾರುಡಿ ಗೊಂಬೆ) ಕುಣಿತ
20. ಬಾಲೆಸಾಂತು (ಮಾಯಿ ತಿಂಗಳ ಅಮವಾಸ್ಯೆ: ಮರಾಠಿ ಜನವರ್ಗ ನಡೆಸುವ ಕುಣಿತ, ಆರಾಧನೆ ಸಂದರ್ಭ)
21. ಹೌಂದ್ರಾಯನ ವೋಲ್ಗ (ತುಳಸೀ ಹಬ್ಬ ಹಾಗೂ ಸಾವಿರ ಹಣ್ಣಿನ ವಸಂತ ಆರಾಧನಾ ಸಂದರ್ಭ)
22. ದುಡಿ ಕುಣಿತ (ಮುಗ್ಗೇರ ಜನವರ್ಗ)
23. ಡಕ್ಕೆ ಬಲಿ (ಪಾಣಾರ ಜನವರ್ಗ)
24. ಡಮರು ಸೇವೆ/ಡಕ್ಕೆ ಬಲಿ (ವೈದ್ಯ ಜನವರ್ಗದವರು ನಡೆಸಿಕೊಡುವ ಪ್ರಕಾರ)
25. ಏರು ಕೋಲ (ಆಳಿಯ ಕಟ್ಟಿನ ಸಂತಾನದಲ್ಲಿ ಹಿರಿಯರು ಸತ್ತಾಗ ಪಾಣಾರ ಜನವರ್ಗದವರಿಂದ ನಡೆಯುವ ಕುಣಿತ)
26. ಜಕ್ಕಿಣಿಯರ ಕುಣಿತ (ಕಾಡ್ಯಾನಾಟ: ಬಿಳಿ ಮೇರ ಜನವರ್ಗದ ಹೆಣ್ಣು ಮಕ್ಕಳು ಹಾಗೂ ವೈದ್ಯ ಪಾತ್ರಿ ನಡೆಸುವ ಕುಣಿತ)
27. ಮನ್ಸೆರ ಡೋಲು (ಕೊಕ್ಕಡ ಕೋರಿ ಕಂಬುಲದಲ್ಲಿ ಹೆಂಗಸರು ಮತ್ತು ಗಂಡಸರು ಕೂಡಿ ಕುಣಿಯುವರು)
28. ಕೊರಗ ನಲಿಕೆ ಅಥವಾ ಕರಿವೇಷ (ಪಾಣಾರ ಜನವರ್ಗದವರಿಂದ, ಬೆಳ್ತಂಗಡಿಯಲ್ಲಿ ಮೇರ ಜನವರ್ಗದವರು)
29. ಕರಡಿ ವೇಷದ ಕುಣಿತ (ಬೆಳ್ತಂಗಡಿ ವಿಭಾಗ)
30. ಬಸವನಾಡಿಸುವವರು (ಮರಾಠಿ–ಜನವರ್ಗದವರು)
31. ಆಂಧ್ರದ ಕೋಲೆ ಬಸವ (ಹೊರಗಿನಿಂದ ಬಂದವರು: ತೆಲುಗು ಜನವರ್ಗ)
32. ಹಾವಾಡಿಗರು, ಮಂಗನಾಡಿಸುವವರು
33. ಚೆನ್ನು ಕುಣಿತ (ಮೇರ ಜನಾಂಗ: ಬೆಳ್ತಂಗಡಿ ವಿಭಾಗ)
34. ಮಾದಿರ ನೃತ್ಯ (ಉಡುಪಿ, ಶಿರ್ವ: ನಲಿಕೆ ಜನವರ್ಗದವರಿಂದ)
35. ಗೋಂದಳ ನೃತ್ಯ (ಮರಾಠಿ ನಾಯಕ, ಕೊಂಕಣ ಜನಾಂಗ, ಕೀಜುಗಾರ ಜನವರ್ಗ)
36. ದರ್ಸೊನದ ನಲಿಕೆ (ದೇವಳದ ತಂತ್ರಿಗಳಿಂದ)
37. ನಾಗ ಮಂಡಲ
38. ಬ್ರಹ್ಮ ಮಂಡಲ

39. ಅರ್ಧ ನಾರೀಶ್ವರ (ವೈದ್ಯ ಜನವರ್ಗ ಆರಾಧನ ಸಂದರ್ಭ)
40. ಸೋಣದ ಸಿರಿವೇಸೋ ನಲಿಕೆ (ಸೋಣ ತಿಂಗಳಲ್ಲಿ ಹೆಣ್ಣು ಮತ್ತು ಗಂಡು ವೇಷದೊಂದಿಗೆ ಭಾಗವತರು ಪ್ರಸಂಗದ ಹಾಡು ಹೇಳಿ ಕುಣಿಸುವರು)
41. ಚಿಕ್ಕ ಮೇಳ
42. ಮದಿಮಯ-ಮದಿಮಾಲ್ ಕುಣಿತ (ಮಾಯಿ ಹುಣ್ಣಿಮೆಯಿಂದ ಸುಗ್ಗಿ ಹುಣ್ಣಿಮೆ ತನಕ: ಚಂಡೆ ವಾದ್ಯ ಬಳಸುತ್ತಾರೆ, ಕಥೆ: ಗುರುಸರನಾಯ್ಕ ಪಾಳೆಗಾರ ಮತ್ತು ಏಳು ಜನ ಹೆಣ್ಣುಮಕ್ಕಳು, ಅದರಲ್ಲಿ ಒಬ್ಬಳು ಪರವ-ನನ್ನು ಮೋಹಿಸುವ ಆಶಯ. ಉಳಿದ ಆರುಜನ ಹೆಣ್ಣು ಮಕ್ಕಳು ಶಾಪ ಕೊಡುವರು, ಇಬ್ಬರೂ ಮಾಯ ಆದುದರಿಂದ ಮದಮರ್ಳ-ಮದಿಮಯೆ ಕುಣಿತ ಪರವನಲಿಕೆ ಜನವರ್ಗದಲ್ಲಿ ಇಂದಿಗೂ ಪ್ರಚಲಿತದಲ್ಲಿದೆ.)
43. ಮರ್ದ ನಲಿಕೆ (ಕೇರಳದ ಕಲೆ: ಮಡಿವಾಳ ಜನಾಂಗ, ಕಿರಾತ ಬೇಟೆ ನೃತ್ಯ ಪ್ರದರ್ಶನ: ಕಿರಾತ ಕನ್ಯಾರೂಪವೇ ಮರ್ದ ಎನ್ನುವ ಹೆಣ್ಣು, ಕಾಸರಗೋಡು ಕರಾವಳಿ ಗಡಿ ಭಾಗದಲ್ಲಿ ಈ ಕುಣಿತ ಪ್ರಚಲಿತ)
44. ಮಯ್ಯ ನಲಿಕೆ (ಕಾಸರಗೋಡು ಮತ್ತು ಗಡಿಭಾಗ)
45. ಚುಣ್ಣ ನೃತ್ಯ (ಕೊರಗ ಜನವರ್ಗದವರಿಂದ)
46. ಸಾವಿರ ಹಣ್ಣಿನ ವಸಂತ
47. ತಾಳ ಮದ್ದಳೆ
48. ಕಂಬಳ
49. ಹರಿಕಥೆ
50. ಕೋಳಿ ಅಂಕ
51. ಗೊಂಬೆಯಾಟ
52. ದೇವದಾಸಿ ನೃತ್ಯ (ಈ ಕಲಾ ಪದ್ಧತಿ ಇಲ್ಲವಾಗಿದೆ)
53. ಯಕ್ಷಗಾನ
54. ಹೂವಿನ ಕೋಲು
55. ಮಾಂಕಾಲಿ ಕುಣಿತ
56. ನರಸಣ್ಣ
57. ಜಾಲಾಟ
58. ಪಾಣಾರಾಟ
59. ಕನ್ಯಾಪು ಕುಣಿತ
60. ದೇವಿ ನಲಿಕೆ



**ಚೆನ್ನು ಕುಣಿತ:**

ಕಾಸರಗೋಡು ಪ್ರಾಂತ್ಯ ಮತ್ತು ವಿಟ್ಲ ಭಾಗದಲ್ಲಿ 'ಚೆನ್ನು ಕುಣಿತ'ವನ್ನು 'ಕೋಪಾಲ' ಜನಾಂಗದವರು ನಡೆಸಿಕೊಡುವರು. 'ಚೆನ್ನು' ಎಂಬಾಕೆಯ ಕುರಿತು ಹಾಡುವರು. ಈ ಜನಾಂಗದ ಸಾಂಸ್ಕೃತಿಕ ಮೂಲ ಸ್ತ್ರೀ 'ಚೆನ್ನು' ಎಂಬುದಾಗಿ ಭಾವಿಸಿರುವರು. ಮಾಯಿ ಹುಣ್ಣಿಮೆ ದಿವಸ (ಫೆಬ್ರವರಿ ತಿಂಗಳು) ನಲಿಕೆ ಅಥವಾ ಕೋಪಾಲ ಜನಾಂಗದವರು ಆರಾಧಿಸುವರು. ಕೋಪಾಳ ಜನವರ್ಗದ ಹೆಂಗಸರು (ಎಂಟು-ಹತ್ತು ಜನ) ಕಾಲಿಗೆ ಗೆಜ್ಜೆ ಕಟ್ಟಿ ಎಕ್ಕ ಮಲೆ ಹೂಗಳಿಂದ ಸಿಂಗರಿಸಿಕೊಂಡ ತೆಂಬರೆ ವಾದ್ಯದೊಂದಿಗೆ ಹಾಡುತ್ತಾ ಕುಣಿಯುವರು. ಆ ಬಳಿಕ ಭತ್ತ, ಅಕ್ಕಿ ಪಡಿಯನ್ನು ಹಾಗೂ ತೆಂಗಿನ ಕಾಯಿ ಧಾನವಾಗಿ ಸ್ವೀಕರಿಸುವರು. ಈ ನೃತ್ಯ ಪ್ರಕಾರ ಇಂದು ವಿರಳವಾಗಿದೆ. ಬೆಳ್ತಂಗಡಿ ಭಾಗದಲ್ಲಿ ಮೇರ ಜನವರ್ಗದವರು 'ಚೆನ್ನು' ಕುಣಿತವನ್ನು ದುಡಿ ವಾದ್ಯದೊಂದಿಗೆ ನರ್ತಿಸುವರು. ಸ್ತ್ರೀ ವೇಷದ ನೃತ್ಯಗಾರ್ತಿಯ ಕೈಯಲ್ಲಿ ಅಡಕೆ ಹಾಳೆ ಹಿಡಿದುಕೊಂಡಿರುತ್ತಾಳೆ. ಈ ಹಾಳೆಯಲ್ಲಿ ಬಟ್ಟೆಯ ಸಿಂಬೆಯನ್ನು ಮಗುವಿನ ಆಕಾರದಲ್ಲಿ

ಇಟ್ಟುಕೊಂಡು ಕುಣಿಯುವಳು. ಚೆನ್ನುವಿನ ಜೊತೆಯಲ್ಲಿ ವೇಷ ಭೂಷಣವಿಲ್ಲದೆ ಕುಣಿಯುವ ಹೆಂಗಸರು, ಗಂಡಸರೂ ಇರುತ್ತಾರೆ. ಇವರ ನಡುವೆ ಚೆನ್ನು ವೇಷದಾರಿ ಕುಣಿಯುತ್ತಾನೆ. ಸುತ್ತಲೂ ಐದಾರು ಮಂದಿ ದುಡಿ ಬಾರಿಸುತ್ತಾ ಹಾಡೂ ಹೇಳುತ್ತಾ ಕುಣಿಯುವರು. ಕೆಲವೆಡೆ ಚೆನ್ನು ವೇಷದ ಜೊತೆಯಲ್ಲಿ ಕೊರಗ ವೇಷವೂ ಇರುತ್ತದೆ.

**ಕನ್ಯಾಪು ಕುಣಿತ:**

ಕನ್ಯಾಪು ಕುಣಿತವನ್ನು ಹೆಚ್ಚಾಗಿ ಪುತ್ತೂರು ಭಾಗದ ಅಜಿಲ ಅಥವಾ ನಲಿಕೆ ಜನವರ್ಗದವರುಗಳಲ್ಲಿ ಕಾಣಬಹುದು. ಮಾಯಿ ಹುಣ್ಣಿಮೆಯಿಂದ ಸುಗ್ಗಿ ಹುಣ್ಣಿಮೆ ತನಕ (ಮಾರ್ಚ್-ಏಪ್ರಿಲ್) ಈ ಕುಣಿತವನ್ನು ರಾತ್ರಿ ವೇಳೆ ಪ್ರದರ್ಶಿಸುವರು. ಈ ಕುಣಿತದಲ್ಲಿ ನಾಲ್ಕೈದು ಜನರಿರುತ್ತಾರೆ. ಪರವ ಜನಾಂಗದಲ್ಲಿರುವ ಮದುಮಗ ಮತ್ತು ಮದುವಣಗಿತ್ತಿ ಆಶಯವಿರುವ (ಮದ್ಮಯೆ-ಮದ್ಮಲ್ ಕುಣಿತ) ಈ ಕುಣಿತದಲ್ಲಿಯೂ ಹೆಣ್ಣು-ಗಂಡು ವೇಷವಿರುತ್ತದೆ. ಹೆಣ್ಣು-ಗಂಡು ವೇಷ ಬಂದಾಗ ಜನರು ಅಕ್ಕಿ, ಬಟ್ಟೆ ಕೊಡುವರು. ಈ ಕುಣಿತದಲ್ಲಿ ಸಿಂಗಾರ ಅತಿಯಾಗಿರುವುದಿಲ್ಲ, ಮುಖ ತುಂಬಾ ಬಿಳಿ ಬಣ್ಣ ಬಳಿದುಕೊಂಡು ಸೀರೆ ಉಟ್ಟ ಮದುವಣಗಿತ್ತಿ ವೇಷವಾದರೆ, ಗಂಡು ಮದುವಣಿಗನಂತೆ ಪೇಟ ಧರಿಸಿ, ಪಂಚೆ ಧರಿಸಿರುತ್ತಾನೆ. ತೆಂಬರೆ (ಚರ್ಮ ವಾದ್ಯ) ಎಂಬ ವಾದ್ಯದೊಂದಿಗೆ ಹಾಡು ಆರಂಭಗೊಳ್ಳುವುದು. ಪರವರು ನಡೆಸಿಕೊಡುವ 'ಮದ್ಮಯೆ-ಮದ್ಮಲ್ ಕುಣಿತ'ದ ಹಾಡಿಗೂ ನಲಿಕೆ ಜನಾಂಗದವರು ನಡೆಸಿಕೊಡುವ ಹಾಡುಗಳಿಗೆ ಬಹಳಷ್ಟು ಅಂತರವಿರುವುದು. ಈ ಕುಣಿತದ ಮುಖ್ಯ ನಂಬಿಕೆಯೇನೆಂದರೆ 'ಕನ್ಯಾಪು' ಪ್ರದರ್ಶನದಿಂದ ಅಥವಾ ತಿರುಗಾಟದಿಂದ ಗ್ರಾಮದ ಬೆಳೆ ಹುಲುಸಾಗುವುದೆಂದು ಜನ ಭಾವಿಸಿರುವರು. ಕಲಾವಿದರು ರಾತ್ರಿ ವೇಳೆ ಪ್ರದರ್ಶನ ನೀಡಿ ಬೆಳಗ್ಗಿನ ಜಾವಕ್ಕೆ ಮನೆಗೆ ಹಿಂದಿರುಗುವರು. ಕುಣಿತವೆಲ್ಲ ಆದಬಳಿಕ ಮನೆಯ ಯಜಮಾನ ಕುಲದೇವತೆಯಾದ 'ಗುರು ಉಳ್ಳಾಲ್ತಿ'ಗೆ ನೈವೇದ್ಯ ನೀಡುವ ಕ್ರಮವಿರುವುದು. ಕಂಚಿನ ಕಲಶಕ್ಕೆ ಕರಿಮಣಿ ಸರ ಹಾಕಿ ಗದ್ದಿಗೆ ತಯಾರಿಸಿ ಗುರು ಉಳ್ಳಾಲ್ತಿಯನ್ನು ಪೂಜಿಸಿ ಹಾಕುವರು. ಕೊನೆಯಲ್ಲಿ ಕೋಳಿ ಕೊಯ್ದು ಎಡೆ ನೀಡಿ ಪ್ರಾರ್ಥನೆ ಸಲ್ಲಿಸುವರು. ಅದೇ ದಿನ ಕೋಳಿ ಸಾರು, ನೀರುದೋಸೆ ತಯಾರಿಸಿ ಸತ್ತಂತಹ ಹಿರಿಯರಿಗೆ 'ಅಗೆಲು' (ಪಿತೃಗಳಿಗೆ ಅರ್ಪಿಸುವ ನೈವೇದ್ಯ) ನೀಡುವರು. ಕಲಾವಿದರ ಪ್ರಕಾರ ಒಂದು ತಿಂಗಳು ಕಾಲ 'ಕನ್ಯಾಪು' ನೃತ್ಯ/ಕುಣಿತ ಮಾಡಿದರೆ ಸುಮಾರು ಐದು-ಆರು ಮುಡಿ ಭತ್ತ ಲಭ್ಯವಾಗುವುದು. ಈ ಕುಣಿತದಿಂದ ಸ್ವಲ್ಪ ಆದಾಯವಿರುವುದರಿಂದ ಬೆಳ್ತಂಗಡಿ ಹಾಗೂ ಉಪ್ಪಿನಂಗಡಿ ಭಾಗದಲ್ಲಿ 'ಕನ್ಯಾಪು' ಕುಣಿತವನ್ನು ಇಂದಿಗೂ ಕಾಣಬಹುದು.

**ಆಟಿ ಕಳೆಂಜ:**

ತುಳು ನಾಡಿನ ಜನಪದ ಕುಣಿತಗಳಲ್ಲಿ ಆಟಿ ಕಳಂಜವೂ ಒಂದು ಆಚರಣಾತ್ಮಕ ಕಲಾ ಪ್ರಕಾರ. ದ.ಕ. ಜಿಲ್ಲೆಯಲ್ಲಿ ಹೆಚ್ಚಾಗಿ ನಲಿಕೆ' ಜನವರ್ಗದಲ್ಲಿ ಕಾಣಸಿಗುವ ಕುಣಿತ. ಇದೇ ಕುಣಿತವನ್ನು ಬೆಳ್ತಂಗಡಿ ಭಾಗದಲ್ಲಿ 'ಮೇರ' ಜನವರ್ಗದವರು ನಡೆಸಿಕೊಡುತ್ತಾರೆ. (ಯದುಪತಿ ಗೌಡ, ಸಂಶೋಧಕರು ಮಂಗಳೂರು ವಿಶ್ವವಿದ್ಯಾಲಯ). ಈ ಕುಣಿತವನ್ನು ಆಷಾಡ ತಿಂಗಳಲ್ಲಿ ನಡೆಸುವುದರಿಂದ ಇದನ್ನು ಆಟಿ ಕಳಂಜ ಎಂತಲೂ ಕರೆಯಲಾಗಿದೆ. ಕಳೆಂಜ ಎಂದರೆ ಚಿಕ್ಕ ಬಾಲಕ, ದುಷ್ಟ ಶಕ್ತಿಗಳನ್ನು ಹೊಡೆದೋಡಿಸುವ ಮಾಂತ್ರಿಕ ಎಂದರ್ಥವೂ ಇದೆ. ಅರ್ಥಾತ್ ಊರಿಗೆ ಬಂದ ಮಾರಿಯನ್ನು (ರೋಗ-ರುಜಿನವನ್ನು) ದೂರ ಮಾಡುವ ಈತ ಫಲವತ್ತಿಕೆಯನ್ನೂ ಹೊತ್ತು ತರುತ್ತಾನೆ ಎನ್ನುವ ಆಶಯ ಈ ಜನವರ್ಗದವರು ನಡೆಸಿಕೊಡುವ ಮಾಂತ್ರಿಕ ವಿಧಿಗಳಲ್ಲಿದೆ. ನಲಿಕೆ ಜನವರ್ಗದವರು ನಡೆಸಿಕೊಡುವ ಈ ಕಳಂಜ ವೇಷ ಕಣಿಂಜ ಇದ್ದಿರಬಹುದೇನೋ ಎನ್ನುವ ಅನುಮಾನವೂ ಇದೆ. ಕಾರಣ, ಕಣಿಂಜ ಎಂದರೆ ಮಾಟ-ಮಂತ್ರಗಳನ್ನು ದೂರ ಮಾಡುವವ ಎಂದರ್ಥ. ತುಳುವಿನ ಆಟಿ (ಆಷಾಢ: ಚಾಂದ್ರಮಾನದಲ್ಲಿ ನಾಲ್ಕನೆಯ ತಿಂಗಳು) ತಿಂಗಳಲ್ಲಿ ನಲಿಕೆ ಅಥವಾ ಪಾಣಾರ ಜನವರ್ಗದವರು ಆಟಿಕಳೆಂಜ ವೇಷವನ್ನು ಹಾಕಿಕೊಂಡು ಮನೆ ಮನೆಗೆ ಹೋಗಿ ಕುಣಿಯುತ್ತಾರೆ. ಸಣ್ಣ ಬಾಲಕನಿಗೆ ತಾಳೆಗರಿಯ ತತ್ರ (ಛತ್ರಿ) ಕೊಟ್ಟು ಕುಣಿಯಲು ಹಿಮ್ಮೇಳದಲ್ಲಿ ತೆಂಬರೆಯನ್ನು ಪುರುಷ ವ್ಯಕ್ತಿ ನುಡಿಸುತ್ತಿರುತ್ತಾನೆ. ಕಳೆಂಜನ ವೇಷ ಭೂಷಣದಲ್ಲಿ ಮುಖ್ಯವಾಗಿ ಸೊಂಟಕ್ಕೆ ತೆಂಗಿನ ತಿರಿ, ಕಾಲಿಗೆ ಗಗ್ಗರ, ಅಥವಾ ಕೈಗೆ-ಮೈಗೆ ಬಣ್ಣ, ಮುಖ್ಯವಾಗಿ ಗಡ್ಡ



ಮತ್ತು ಮೀಸೆ, ಅಡಿಕೆ ಹಾಳೆಯಿಂದ ಮಾಡಿದ ಮತ್ತು ಹೂವಿನಿಂದ ಸಿಂಗರಿಸಿದ ಟೊಪ್ಪಿ ಆಟಿಕಳೆಂಜನ ವೇಷಗಳು.

ಬೆಳ್ತಂಗಡಿ ತಾಲ್ಲೂಕಿನ ಮೇರರಲ್ಲಿನ ಆಟಿ ಕಳೆಂಜ ವೇಷದಲ್ಲಿ ಕಳೆಂಜನ ವೇಷ ಹಾಕುವವರು ವಯಸ್ಕರು ಮತ್ತು ಕೈಯಲ್ಲಿ ದುಡಿ ಎನ್ನುವ ವಿಶೇಷ ವಾದ್ಯವನ್ನು ಹಿಡಿದು ನುಡಿಸುತ್ತಾ ಪಾಡ್ದನವನ್ನು ಹೇಳುತ್ತಾ ಕುಣಿಯುವರು. ಮನುಷ್ಯನಿಗಾಗಲಿ, ಪ್ರಾಣಿ ಪಶುಗಳಿಗಾಗಲಿ ಬಂದ ಮಾರಿಯನ್ನು ಅಥವಾ ರೋಗವನ್ನು ಓಡಿಸುವುದು ಆಟಿಕಳೆಂಜನ ಕಾರ್ಯ ಎಂಬುದಾಗಿ ತುಳು ಪಾಡ್ದನದಿಂದ ತಿಳಿದುಬರುವುದು.

ತುಳುವಿನಲ್ಲಿ ಆಷಾಡ ಆರಂಭವಾಗುವುದು ಎಂದರೆ ಮಳೆಗಾಲದ ಆರಂಭವೆಂದರ್ಥ. ಕೆಲವೊಮ್ಮೆ ಮಳೆ ಬೀಳದಿದ್ದರೆ ಬಿಸಿ ಹೆಚ್ಚಾಗಿ ಕೆರೆ–ಕುಂಟೆಗಳು ಬತ್ತಲಾರಂಭಿಸಿ ಜನ ನೀರಿಗಾಗಿ ಪರಿತಪಿಸುವರು, ಸಹಜವಾಗಿ ರೋಗ ರುಜಿನ ಹುಟ್ಟಿಕೊಳ್ಳುವುದು. ಮಳೆಗಾಲ ಆರಂಭ ಹಾಗೂ ಬೇಸಿಗೆಯ ಕೊನೆಯ ಈ ಕಾಲವು ಸಂಕ್ರಮಣದ ಸ್ಥಿತಿಯನ್ನು ತಂದೊಡ್ಡುತ್ತವೆ. ಆಟಿ ಅಥವಾ ಆಷಾಡ ತಿಂಗಳಲ್ಲಿ ಬಿಸಿಲು ಕಾದರೆ ಆನೆಯ ಬೆನ್ನೂ ಬಿರಿಯುವುದೆಂಬುದಾಗಿ ತುಳುನಲ್ಲಿ ಗಾದೆಯಿದೆ (ಆಟಿದ ದೊಂಬ ಆನೆತ ಬೆರಿ ಪುಡಪು) ಹೀಗಾಗಿ ಆಟಿಕಳೆಂಜ ಬಂದರೆ ರೋಗ ರುಜಿನಗಳನ್ನು ನಿವಾರಣೆ ಮಾಡುತ್ತಾನೆ ಎನ್ನುವ ನಂಬಿಕೆ ಜನರಲ್ಲಿ ಇದೆ. ಹೀಗಾಗಿ ಆಟಿಕಳಂಜನಿಗೆ ತುಳುನಾಡಿನಲ್ಲಿ ಮಹತ್ವದ ಸ್ಥಾನವಿದೆ. ಕಾಸರಗೊಡು ಪ್ರಾಂತ್ಯದಲ್ಲಿ ಕಳಂಜ ಕುಣಿತವನ್ನು ಕೋಪಾಳರು ನಡೆಸಿದರೆ 'ಮಲಯ' ಜನಾಂಗದವರು ಬೇಡ ಕುಣಿತವನ್ನೂ 'ವಣ್ಣನ್' ಜನಾಂಗದವರು 'ಮರ್ದ' ಎಂಬ ಕುಣಿತ ನೀಡಿ ಪಡಿ–ಹಣ ತೆಗೆದುಕೊಂಡು ಹೋಗುವ ಸಂಪ್ರದಾಯವನ್ನು ಕಾಣಬಹುದು.

**ಕರಂಗೋಲ್ ಕುಣಿತ:**

ಕರಂಗೋಲ್ ಕುಣಿತವನ್ನು ತುಳುನಾಡಿನ ಮೂಲನಿವಾಸಿಗಳೆಂದು ಕರೆಯಿಸಿಕೊಂಡಿರುವ ಮನ್ಸ ಜನವರ್ಗದವರು ಆಚರಣಾತ್ಮಕವಾಗಿ ಕುಣಿಯುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನ್ಸೆರ ಡೋಲು ಅತ್ಯಂತ ಪ್ರಚಲಿತವಾದ ವಾದ್ಯವಾಗಿದೆ. ಸುಳ್ಯ ಹಾಗು ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಮನ್ಸೆರು ಕರಂಗೋಲು ಕುಣಿತ ನಡೆಸಿದರೆ ಬಂಟ್ವಾಳ ತಾಲ್ಲೂಕಿನ ಭಾಗದಲ್ಲಿ ಮುಗೇರ–ಜನವರ್ಗದವರು ಕರಂಗೋಲು ಕುಣಿತವನ್ನು ನಡೆಸುತ್ತಾರೆ. ಕೊಕ್ಕಡದ ಕಂಬಳ, ಗದ್ದೆಗೋರಿ ಮುಂತಾದ ಸಾರ್ವಜನಿಕ ಉತ್ಸವಗಳಲ್ಲಿ ಮನ್ಸೆರು ಡೋಲನ್ನು ನುಡಿಸುತ್ತಾ ಕೋರಿ ಕಂಬಳದ ಹೇಳಿಕೆಯನ್ನು ಕೊಟ್ಟು ಕುಣಿಯುವುದನ್ನು ಇಂದಿಗೂ ಗಮನಿಸಬಹುದಾಗಿದೆ.

ಕರಂಗೋಲ್ ಕುಣಿತದಲ್ಲಿ ಐದರಿಂದ ಹತ್ತು ಜನ ಕಲಾವಿದರಿರುತ್ತಾರೆ. ಆದರೆ ಕರಂಗೋಲು ವೇಷ ಹಾಕುವವರು ಎರಡು ಅಥವಾ ನಾಲ್ಕು ಮಂದಿ. ಸುಳ್ಯದಲ್ಲಿ ಕರಂಗೋಲ್ ಕುಣಿಯುವವರ ಜೊತೆಯಲ್ಲಿ

ಮದುಮಕ್ಕಳ ವೇಷವಿರುತ್ತದೆ. ಬೆಳ್ತಂಗಡಿ ತಾಲ್ಲೂಕಿನ ಕರಂಗೋಲು ವೇಷದ ಜೊತೆ ಕೊರಗ ವೇಷವಿರುತ್ತದೆ. ಕರಂಗೋಲು ಕುಣಿಯುವವರ ವೇಷವು ಆಕರ್ಷಣೆಯಾಗಿರುತ್ತದೆ. ವೇಷಧಾರಿಗಳು ಜೇಡಿಮಣ್ಣನ್ನು ಕಲೆಸಿ ಓಟೆ ಬಿದಿರಿನ ಮುದ್ರೆಯಿಂದ ಮುಖ, ತೋಳು, ಎದೆ, ಬೆನ್ನು, ಹೊಟ್ಟೆ – ಹೀಗೆ ಮೈಮೇಲೆ ವರ್ತುಲಾಕಾರದ ಚಿತ್ತಾರಗಳನ್ನು ಮೂಡಿಸಿಕೊಳ್ಳುತ್ತಾರೆ. ಹೊಟ್ಟೆ ಮತ್ತು ಬೆನ್ನ ಮೇಲೆ ಅಡ್ಡವಾಗಿ ಎರಡು ಗೆರೆಗಳನ್ನು ಎಳೆದಿರುತ್ತಾರೆ. ಇದನ್ನು ಗೇಂಟಿ ಎಳೆಯುವುದು ಎಂದು ಕರೆಯಲಾಗಿದೆ. ತಲೆಗೆ ಬಿಳಿ ಮುಂಡಾಸು ಕಟ್ಟಿಕೊಂಡಿರುತ್ತಾರೆ. ಕೈಯಲ್ಲಿ ನೆಕ್ಕಿ ಸೊಪ್ಪಿನ ಗೊಂಚಲು ಹಿಡಿದು ಕುಣಿಯುವರು, ಕಾಲಲ್ಲಿ ಗೆಜ್ಜೆ ಧರಿಸಿ ಬಾಗುತ್ತಾ–ಬಳಕುತ್ತಾ ಹಿಂದೆ–ಮುಂದೆ ನಡು ಬಗ್ಗಿಸಿ ಕುಣಿಯುವ ಸೊಬಗು ಇವರಲ್ಲಿ ಕಾಣಬಹುದಾಗಿದೆ. ಇವರ ನರ್ತನದ ಹೆಜ್ಜೆಗಾರಿಕೆಯಲ್ಲಿ ಲಾವಣ್ಯದ ಗತಿಯನ್ನೂ ಗಮನಿಸಬಹುದು. ಕರಂಗೋಲು ವೇಷಧಾರಿ ಜೊತೆಯಲ್ಲಿ ಓರ್ವ ಮುದುಕನ ವೇಷಧಾರಿ ಒಂದು ಬಿದಿರಿನ ದೊಣ್ಣೆ ಹಿಡಿದುಕೊಂಡು ನೆಲ ಕುಟ್ಟಿ ಸದ್ದು ಮಾಡುತ್ತಾ ಲಯಬದ್ಧವಾಗಿ ಕುಣಿಯುವರು. ಗುಂಪಿನಲ್ಲಿ ಹೆಚ್ಚುವರಿ ಸದಸ್ಯರು ಇದ್ದರೆ ಡೋಲು ಬಡಿಯುತ್ತಾ ಹಾಡಿನ ಪಲ್ಲವಿಯನ್ನು ಪುನರುಚ್ಚರಿಸಿ ಕುಣಿಯುವರು. ಸುಗ್ಗಿಯ ಸಂದರ್ಭದಲ್ಲಿ ಫಲವತ್ತಿಕೆಯನ್ನು ಬಯಸಿ ಕುಣಿಯುವ ನರ್ತಕರು ಮನೆ ಮನೆಗೆ ಬಂದು 'ಪೊಲಿ ಲೆತ್ತೊಂದು ಬತ್ತೋ' (ಸಂಪತ್ತನ್ನು ಕರೆದುಕೊಂಡು ಬಂದಿದ್ದೇವೆ) ಎನ್ನುತ್ತಾ ತಮ್ಮ ಕೈಯಲ್ಲಿನ ಘಂಟಾ ಮಣಿಯನ್ನು ಜೋರಾಗಿ ಬಾರಿಸುವರು, ತಾಳಕ್ಕೆ ಸರಿಯಾಗಿ ಕುಣಿಯುವರು. ಹುಣ್ಣಿಮೆಯ ಹಿಂದಿನ ದಿನದಿಂದ ಆರಂಭಗೊಳ್ಳುವ ಈ ಕುಣಿತವು ಇಂದು ಅವನತಿಯ ಹಾದಿಯಲ್ಲಿದೆ.

### ಕಂಗಿಲು ಕುಣಿತ ಮತ್ತು ಆಚರಣೆ

ಕರಾವಳಿ ಕರ್ನಾಟಕದಲ್ಲಿ ಕಂಗಿಲು ಆಚರಣೆ ಹಾಗೂ ಕುಣಿತ ಪ್ರಕಾರವು ಒಂದು ನಿರ್ದಿಷ್ಟ ಜನವರ್ಗದವರುಗಳ ಆರಾಧನಾ ಪದ್ಧತಿಯಾಗಿದೆ. ಈ ಕುಣಿತದ ಆರಾಧನಾ ಕ್ರಮಗಳನ್ನು ನಿರ್ದಿಷ್ಟವಾದ ಋತುಮಾನದಲ್ಲಿ ನಡೆಸುವರು. ಮುಖ್ಯವಾಗಿ ತುಳುವಿನಲ್ಲಿ ಹೆಚ್ಚಾಗಿ ಈ ಆರಾಧನ ಕ್ರಮಗಳು ಮಾಯಿ ತಿಂಗಳ ಹುಣ್ಣಿಮೆಯ (ಫೆಬ್ರವರಿ) ಬೆಳದಿಂಗಳಲ್ಲಿ ನಡೆಯುವುದು ರೂಢಿ. ಮಾಯಿ ತಿಂಗಳ ಬೆಳದಿಂಗಳ ಈ ಆರಾಧನ ಪದ್ಧತಿಯಲ್ಲಿ ಹಾಸ್ಯ, ಕುಣಿತ, ಡೋಲು ಬಡಿಯುವಿಕೆ, ಹರಕೆ ಪಡೆಯುವಿಕೆ ಮತ್ತು ಆಶೀರ್ವಚನ, ಕಾಣಿಕೆ ಒಪ್ಪಿಸುವುದು ಮುಂತಾದ ಕ್ರಿಯೆಗಳಿವೆ. ಕಂಗಿಲು ನೃತ್ಯ ಮತ್ತು ಆರಾಧನ ಪದ್ಧತಿಯನ್ನು ಮೂರು ಹಗಲು ಮೂರು ರಾತ್ರಿ ನಡೆಸುವರು. ಮುಖ್ಯವಾಗಿ ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿರುವ ಜನವರ್ಗದವರುಗಳಲ್ಲಿ ಮುಖ್ಯವಾಗಿ 'ಗೊಡ್ಡ ಜನಾಂಗದವರು'. ಇತರೆ ಜನವರ್ಗದವರುಗಳಾದ ಮುಂಡಾಲ, ಮೇರ–ಜನಾಂಗದವರುಗಳಲ್ಲಿಯೂ ಅಲ್ಪ–ಸ್ವಲ್ಪ ಬದಲಾವಣೆಯೊಂದಿಗೆ ಕಂಗಿಲು ಆರಾಧನ ಪದ್ಧತಿ ಮತ್ತು ಕುಣಿತದ ಕಲಾತ್ಮಕ ಆಚರಣೆಯನ್ನು ಅಲ್ಲಲ್ಲಿ ಉಳಿಸಿಕೊಂಡು ಬಂದಿರುವರು. ಕಂಗಿಲು–ಕುಣಿತದಲ್ಲಿ ಸಿರಿ ಎಳೆಯನ್ನು ಧರಿಸಿಕೊಳ್ಳುವುದು ವೇಷ–ಭೂಷಣದ ಒಂದು ಭಾಗವಾದರೆ ಕಂಗಿಲು–ಕುಣಿತಕ್ಕೆ ಸಮಾನವಾಗಿರುವ ಮತ್ತೊಂದು ಕುಣಿತ ಮನ್ಸೆರು ಜನವರ್ಗದವರಲ್ಲಿ ಪ್ರಚಲಿತವಿರುವ 'ಕರಂಗೋಲು' ಎನ್ನುವ ಆಚರಣಾ ಕುಣಿತ ಒಂದು ಆರಾಧನ ಪದ್ಧತಿಯಾಗಿ ನಡೆದುಬಂದಿದೆ. ಕರಂಗೋಲು ಕುಣಿತದವರು ಕೈಯಲ್ಲಿ ನೆಕ್ಕಿಸೊಪ್ಪು ಹಿಡಿದು ಕುಣಿಯುವುದು. ಈ ಕುಣಿತದಲ್ಲೂ ಕೊರಗ ವೇಷವಿದೆ. ಕರಂಗೋಲು ಕುಣಿತವನ್ನು ಸುಗ್ಗಿ ತಿಂಗಳ ಹುಣ್ಣಿಮೆಯ ದಿನದಲ್ಲಿ ಆರಂಭವಾಗಿ ಮೂರು ಹಗಲು ಮೂರು ರಾತ್ರಿ ಜರುಗುವುದು. ಈ ಕುಣಿತವನ್ನು ವಿಟ್ಲ, ಬೆಳ್ತಂಗಡಿ, ಪುತ್ತೂರು ಭಾಗಗಳಲ್ಲಿ ಹೆಚ್ಚಾಗಿ ಕಾಣಬಹುದು. (ನೋಡು: ಕರಂಗೋಲು ಕುಣಿತ).

ಕಂಗಿಲು ನೃತ್ಯವನ್ನು ಹೆಚ್ಚಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ವಾಸವಾಗಿರುವ ಗೊಡ್ಡ ಜನವರ್ಗದವರಲ್ಲಿ ಕಾಣಬಹುದು ಗೊಡ್ಡ ಜನಾಂಗದವರು ತಮ್ಮ ಮಾತೃ ಭಾಷೆಯಾಗಿ ತುಳು ಮಾತಾನಾಡಿದರೂ ಪರಂಪರೆಯ ಕಥೆಯ ಪ್ರಕಾರ ಈ ಜನವರ್ಗದವರು ತುಳು ನಾಡಿಗೆ ಪರವೇಶಿಸಿದ್ದು ಹೊರಗಿನಿಂದ ಎಂಬ ಅಭಿಪ್ರಾಯವಿದೆ. ಹೊಯ್ಸಳರ ಕಾಲದಲ್ಲಿ ಈ ಜನವರ್ಗದವರುಗಳು ದೇವಳದ ಸೇವೆಯಲ್ಲಿದ್ದರೆಂದೂ ಮತ್ತು ಕ್ರಮೇಣ ಯುದ್ಧ ಕೌಶಲವನ್ನು ತಿಳಿದವರಾಗಿದ್ದರೆಂಬುದು ಅಭಿಮತವಿದೆ. ಹೀಗಾಗಿ ಗೊಡ್ಡರದು 'ಬೇಲೂರು ಹುಟ್ಟು, ಕಟ್ಟಿಂಗೇರಿ ಕಟ್ಟು' ಎನ್ನುವ ಮಾತು ಜನಜನಿತವಾಗಿದೆ. ಗೊಡ್ಡರು ಆರಂಭದಲ್ಲಿ ಕಟ್ಟಿಂಗೇರಿಯಲ್ಲಿ ಬಂದು ನೆಲೆಸಿದರು, ತರುವಾಯ ಉತ್ತರ ಭಾಗವಾದ ಕಾಪು–ಉಡುಪಿ ಈ ಪ್ರದೇಶಗಳಲ್ಲಿ ದೈವಾರಾಧನೆಯ ಕೈಂಕರ್ಯ ನಡೆಸುವಲ್ಲಿ ಪಾಲ್ಗೊಂಡರು. ಇದಕ್ಕೆ ಉದಾಹರಣೆ

ಎನ್ನುವಂತೆ ಕಾಪು ಹಳೇ ಮಾರಿ ಗುಡಿಯ ಸಮೀಪದಲ್ಲಿ ಇರುವ ದೈವ ಸ್ಥಾನದಲ್ಲಿ ನಡೆಸುವ ಪಿಲಿ ಕೋಲ, ಗುಳಿಗ ಆರಾಧನೆ, ಬೆರ್ಮೆರು ಆರಾಧನೆ ನಡೆಸುವ ಯಜಮಾನಿಕೆ ಈ ಜನವರ್ಗದಲ್ಲಿ ಇಂದಿಗೂ ಇರುವುದು ಸಾಕ್ಷಿಯಾಗಿದೆ. ಈ ಆರಾಧನೆಯಲ್ಲಿ ನಡೆಯುವ ಕ್ರಿಯೆಗಳನ್ನು ಗಮನಿಸಿದಾಗ ಈ ಜನವರ್ಗದವರು ಕ್ಷಾತ್ರಧರ್ಮವನ್ನು ಮೈಗೂಡಿಸಿಕೊಂಡಿದ್ದರೆನ್ನುವುದನ್ನು ಇನ್ನಷ್ಟು ಸ್ಪಷ್ಟಪಡಿಸಬಲ್ಲದು. ಗೊಡ್ಡ ಜನವರ್ಗದವರು ನಡೆಸುವ ಬೆಳದಿಂಗಳ ಈ ಆರಾಧನ ಪದ್ಧತಿ ಹಾಗೂ ಕಂಗಿಲು ಕುಣಿತ ಪುರುಷ ಪ್ರಧಾನವಾದುದು. ಈ ಕುಣಿತವನ್ನು ಗಮನಿಸಿದಾಗ ಆರಾಧನ ಪಾತ್ರಧಾರಿಗಳು ತಮ್ಮ ಉಡುಪು ಮತ್ತು ಶಿರಸ್ತ್ರಾಣವಾಗಿ ತೆಂಗಿನ ಸಿರಿಯನ್ನು ಹೆಚ್ಚಾಗಿ ಬಳಸುತ್ತಾರೆ ಮತ್ತು ತಾಸೆ, ತಾಳ, ಜಾಗಟೆ, ಡೋಲು-ಚೆಂಡೆಯ ನಿನಾದಕ್ಕೆ ತಕ್ಕನಾಗಿ ಕುಣಿಯುವರು. ಬೆರ್ಮೆರು ಅಥವಾ ಖಡ್ಗೇಶ್ವರಿ ದೈವಸ್ಥಾನದಲ್ಲಿ ಆರಂಭವಾಗುವ ಈ ಕಂಗಿಲು ಕುಣಿತದ ತಿರುಗಾಟ ಮೂರು ರಾತ್ರಿ ಮತ್ತು ಮೂರು ಹಗಲು ನಡೆಯುವುದು. ತಿರುಗಾಟದ ಸಂದರ್ಭದಲ್ಲಿ ಕಂಗಿಲು ಕುಣಿತದವರುಗಳು ತೆಂಗಿನ ಸಿರಿಯನ್ನು ಹೊದ್ದುಕೊಳ್ಳುವುದರಿಂದಾಗಿ ಇವರನ್ನು ಸಿರಿಯ ಮಕ್ಕಳೆಂದು ಕರೆಯುವರು. (ದ.ಕ. ಜಿಲ್ಲೆಯಲ್ಲಿ ಸಿರಿ ಆಚರಣೆ ಅಥವಾ ಸಾಮೂಹಿಕ ದೈವಾವೇಷ ಬರುವ ಸಿರಿ ಆಚರಣೆಗೂ ಈ ಆಚರಣೆಗೂ ಸಂಬಂಧವಿಲ್ಲ). ಕಂಗಿಲು ಪಾತ್ರಧಾರಿಗಳು ತೆಂಗಿನ ಸಿರಿಲಂಗ ಧರಿಸಿದುದರಿಂದ ಇವರನ್ನು ಸಿರಿಯ ಮಕ್ಕಳು ಎಂದು ಮನ್ನಣೆ ಕೊಡಲಾಗಿದೆ. ಸಿರಿಯ ಮಕ್ಕಳೆಂದರೆ ಫಲವತ್ತಿಕೆಯನ್ನು ತಂದು ಅನಿಷ್ಟವನ್ನು ಹೊಡೆದೋಡಿಸುವ ಮಕ್ಕಳೆಂಬುದು ಈ ಆರಾಧನಾ ಪದ್ಧತಿಯಿಂದ ತಿಳಿದು ಬರುವುದು. ಕಂಗಿಲು ಕುಣಿತದ ಮೊದಲ ದಾಖಲೀಕರಣದ ಮಾಹಿತಿ ಲಭ್ಯವಾಗುವುದು 1938ರಲ್ಲಿ ಡಚ್ ವಿದ್ವಾಂಸ ಆರ್ನಾಲ್ಡ್ ಬಾಕೆ ಸಂಗ್ರಹಿಸಿದ ಮೂಕಿ-ಟಾಕಿ ಚಿತ್ರದಿಂದ. ಅನಂತರ ಉಡುಪಿಯ ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದ ಸಂಶೋಧನ ಬಳಗ 1996ರಲ್ಲಿ ಬಹು ಮಾಧ್ಯಮಗಳಲ್ಲಿನ ದಾಖಲೀಕರಣ ಹಾಗೂ ಅಧ್ಯಯನ ನಡೆಸಿದೆ.

**ಕಂಗಿಲು ಶಬ್ಧ ಕುರಿತು:**

ಕೆಲವೊಮ್ಮೆ ಬರಹ ಮಾಧ್ಯಮದಿಂದ ಇಡೀ ಜನ ಸಮೂಹದ ಅರಿವನ್ನು ತಪ್ಪಾಗಿ ಗ್ರಹಿಸುವಂತೆ ಮಾಡುವಂತಾಗಿದೆ. ಇದಕ್ಕೆ ಕಂಗಿಲು ಪದ ಕೂಡ ಅಪವಾದದಿಂದ ಹೊರತಾಗಿಲ್ಲ. ಹಂಪಿ ವಿಶ್ವವಿದ್ಯಾನಿಲಯ ಪ್ರಕಟಿಸಿದ (ಹಿ.ಚಿ. ಬೋರಲಿಂಗಯ್ಯ ಸಂಪಾದಿತ) 'ಕರ್ನಾಟಕ ಜನಪದ ಕಲೆಗಳ ಕೋಶ' (1996) ತಿಳಿಸುವಂತೆ ಕಂಗು ಎಂದರೆ ಅಡಿಕೆ ಮರ, ಈ ಮರದ ಸಿರಿಯನ್ನು ಬಳಸಿದುದರಿಂದ ಕಂಗಿಲು ಬಂದಿದೆ ಎಂದಿರುವರು. ಇದೊಂದು ತಪ್ಪು ಗ್ರಹಿಕೆ. ಡಾ. ಅಶೋಕ ಆಳ್ವ ನಡೆಸಿದ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಪ್ರಕಾರ ಕಂಗಿಲು ಸಿರಿ ಮಕ್ಕಳು ಪುರುಷ ಪಾತ್ರಧಾರಿಯಾದರೂ ಇವರೆಲ್ಲ ವೇಷಭೂಷಣದಲ್ಲಿ ಸಿಂಗರಿಸಿಕೊಂಡ ಗೋಪಿಕಾಸ್ತ್ರೀಯರು ಮತ್ತು ಕೃಷ್ಣನ ಓಲೈಸಿಕೊಳ್ಳಲು ಬಂದವರು ಎನ್ನುವುದು ಒಂದು ಅಭಿಮತವಾಗಿದೆ. ಈ ಎಲ್ಲಾ ಕ್ರಿಯೆಗಳು ನಡೆಯುವುದು ಮತ್ತು ನಡೆಯುತ್ತಿದ್ದುದು ಕಾನನದಲ್ಲಿ. ಇದಕ್ಕೆ ಮುಖ್ಯ ಕಾರಣ ಈ ಕುಣಿತದ ನಡುವೆ ಗೊಲ್ಲರ ಪ್ರತಿನಿಧಿಯೆನಿಸಿಕೊಂಡ ಶ್ರೀಕೃಷ್ಣ 'ಕಡೆಗಣ'ನಾಗಿ (ಈತನನ್ನು ಕೊರಗ ದಿಕ್ಕೆ ಎಂಬುದಾಗಿಯೂ ಕರೆಯುವರು) ಪ್ರಮುಖ ಪಾತ್ರ ವಹಿಸಿದ್ದಾನೆ. ಈತನ ಸುತ್ತ 'ಸಿರಿ' ಮಕ್ಕಳು ಕುಣಿಯುವರು. 'ಸಿರಿ' ಮಕ್ಕಳು ಮನೆಯ ಮುಂದೆ ಕುಣಿದು ಪಡಿ-ಕಾಣಿಕೆ ದಾನವಾಗಿ ಮನೆಯ ಯಜಮಾನತಿಯಿಂದ ಮನೆಯ ಮುಂಭಾಗದಲ್ಲಿ ಪಡೆದರೆ 'ಕಡೆಗಣ'-ಪಾತ್ರಧಾರಿ ಮನೆಯ ಹಿಂಭಾಗದಲ್ಲಿ ಹೋಗಿ ದಾನ ಪಡೆಯುವುದು ಈ ಆರಾಧನಾ ಪದ್ಧತಿಯ ವೈಶಿಷ್ಟ್ಯವಾಗಿದೆ. ಭಕ್ತಾದಿಗಳು ಕೊಡುವ ಪಡಿ ಕಾಣಿಕೆಯನ್ನು 'ಕಡೆಗಣ' ಪಡೆದು ತನ್ನ ಹಣೆಯಲ್ಲಿನ ಕಪ್ಪು ಮಸಿ (ಮಾಂತ್ರಿಕ ತಿಲಕ)ಯನ್ನು ತೆಗೆದು ಭಕ್ತಾದಿಗಳ ಹಣೆಗೆ ಸೋಕಿಸುವುದು ಕಂಗಿಲು-ಆರಾಧನಾ ಪದ್ಧತಿಯಲ್ಲಿ ವಿಶೇಷವಾಗಿದೆ. ಕಂಗಿಲು ಕುಣಿತ ಹಾಗೂ ಆರಾಧನಾ ಪದ್ಧತಿಗೂ ಹುಣ್ಣಿಮೆ ಕಾಮನಿಗೂ ಸಂಬಂಧವಿರುವುದನ್ನು ಈ ಆರಾಧನಾ ಪದ್ಧತಿಯಲ್ಲಿ ಬಳಸುವ ಸಾಹಿತ್ಯದಲ್ಲಿ ಕಾಣಬಹುದು. ಇಲ್ಲಿ ಕೃಷ್ಣ ಕಾಮನ ಸಂಕೇತವಾಗಿರುವುದನ್ನು ಅಧ್ಯಯನದಿಂದ ತಿಳಿಸಲಾಗಿದೆ.

**ಕಂಗಿಲು ಪ್ರದರ್ಶನ:**

ಕಂಗಿಲು ಕುಣಿತಕ್ಕೆ ಇಂತಿಷ್ಟು ಜನ ಬೇಕೆಂದು ನಿಯಮವಿಲ್ಲ, ಆಯಾಯ ಜನವರ್ಗದಲ್ಲಿನ ಕುಟುಂಬದಲ್ಲಿನ ಓರ್ವ ಸದಸ್ಯ ಪಾಲ್ಗೊಳ್ಳುವುದು ಒಂದು ಕಾಲದಲ್ಲಿ ನಿಯಮವಾಗಿತ್ತು. ಇತ್ತೀಚಿನ ದಿನಗಳಲ್ಲಿ 4 ಅಥವಾ



6, 8 ಅಥವಾ 11 ಜನ ಕಂಗಿಲು ಕುಣಿತದ ವಿಧಿಯಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದು. ಕಂಗುಲು-ಕುಣಿತದಲ್ಲಿ ಪಾಲ್ಗೊಳ್ಳುವವರು ಶುದ್ಧದಲ್ಲಿರಬೇಕೆಂಬುದು ನಿಯಮ, ಹೆಂಗಸರ ಜೊತೆಯಲ್ಲಿ ಇರುವುದು ನಿಷಿದ್ಧ. ಹೀಗಾಗಿ ಕಂಗಿಲು ಪಾತ್ರಧಾರಿಗಳು ಒಮ್ಮೆ ವೇಷಧರಿಸಿದರೆ ಅದನ್ನು ಬಿಚ್ಚುವವರೆಗೆ ಚಹಾ ಮಾತ್ರ ಇವರ ಸೇವನೆಯಾಗಿರುತ್ತದೆ. ಒಂದು ಹೊತ್ತಿನ ಊಟ-ಚಹಾ ಉಪಾಹಾರಗಳನ್ನು ಕಂಗಿಲು ಪಾತ್ರಧಾರಿಗಳು ಸೇವಿಸುತ್ತಾರೆ. ಕಂಗಲು ಪಾತ್ರಧಾರಿಗಳಲ್ಲಿ ಎರಡು ರೀತಿಯ ವೇಷಧಾರಿಗಳಿರುತ್ತಾರೆ. ಮುಖ್ಯವಾಗಿ ಕುಣಿಯುವವರು ತೆಂಗಿನ ಸಿರಿಯನ್ನು ಹೊದ್ದು ಕುಣಿದರೆ ಪಾತ್ರಧಾರಿಗಳನ್ನು ಕುಣಿಸುವ ಪಾತ್ರಧಾರಿ ಕಡೆಗಣ ಈ ಗುಂಪಿನ ಯಜಮಾನ ಮತ್ತು ನಿರ್ದೇಶಕನೂ ಆಗಿರುತ್ತಾನೆ. ಈ ಕುಣಿತವನ್ನು ನಿಯಂತ್ರಿಸುವ ಈತನನ್ನು ಕೊರಗ ತನಿಯ ಎಂತಲೂ ಜನ ಭಯ ಭಕ್ತಿಯಿಂದ ಗೌರವಿಸುತ್ತಾರೆ. ಕಂಗಿಲು ಕುಣಿತದಲ್ಲಿ ಆಚರಣಾತ್ಮಕ ರಂಗ ತಿರುಗಾಟಕ್ಕೆ ಆಯ್ಕೆಗೊಂಡವರು ಶುದ್ಧದಲ್ಲಿರಬೇಕೆಂಬುದು ನಿಯಮ. ಮೊದಲಾಗಿ ಆಯ್ಕೆಗೊಂಡ ಪುರುಷವರ್ಗದಲ್ಲಿ ಹಿರಿಯರಿಗೆ ಗೊಡ್ಡರ ಮುಖ್ಯಸ್ಥ "ತಿರಿ ಏರುನಿ" (ಸಿರಿ ಎಳೆಯನ್ನು ಮುಡಿಗೆ ಏರಿಸುವ ಕ್ರಿಯೆ) ಕಾರ್ಯ ನಡೆಸುತ್ತಾನೆ. ಉಳಿದಂತೆ ಕ್ರಮವಾಗಿ ತಲೆಗೆ ಸಿರಿ ಎಳೆಯನ್ನು ಧರಿಸಿಕೊಳ್ಳುವರು. ಈ ಕಾರ್ಯಕ್ಕೆ 'ತಿರಿ ಕೊಲ್ಪುನಿ' ಎಂದು ಹೆಸರು. ಧರಿಸಿಕೊಳ್ಳುವ ತಿರಿ-ಎಳೆಯಲ್ಲಿ ಮೂರು ಬಗೆಯ ಹೆಸರುಗಳಿವೆ. ತಲೆಗೆ ಕಟ್ಟಿಕೊಳ್ಳುವುದು 'ತರೆತ್ತ ತಿರಿ', ಸೊಂಟಕ್ಕೆ ಕಟ್ಟಿಕೊಳ್ಳುವುದು 'ಸೊಂಟದ ತಿರಿ', ಭುಜಕ್ಕೆ ಕಟ್ಟಿಕೊಳ್ಳುವುದು 'ಭುಜತ ತಿರಿ' – ಹೀಗೆ ಮೂರು ರೀತಿಯಲ್ಲಿ ಧರಿಸಿಕೊಳ್ಳುವ ಕ್ರಮವಿದೆ. ಸಿಂಗರಿಸಿಕೊಳ್ಳುವ ಹೂಮಾಲೆಯನ್ನು ಬಾಳೆ ನಾರಿನಿಂದ ಕಟ್ಟಿರಬೇಕು. ಉಳಿದದ್ದು ವರ್ಜ್ಯ. ಕುಣಿಯುವ ಪಾತ್ರಧಾರಿಗಳು ತಮ್ಮ ವೇಷ-ಭೂಷಣವನ್ನು ದೈವ ಸಾನಿಧ್ಯದ ಸಮ್ಮುಖದಲ್ಲಿ ಕ್ರಮವಾಗಿ ಸಿರಿ ಲಂಗವನ್ನು, ಮತ್ತು ತಲೆಗೆ, ಭುಜಕ್ಕೆ, ಸೊಂಟಕ್ಕೆ ಧರಿಸಿಕೊಂಡ ಬಳಿಕ ಹೊರನೋಟಕ್ಕೆ ಈ ಪಾತ್ರಧಾರಿಗಳು ಸಂಪೂರ್ಣವಾಗಿ ಸಿರಿ ಎಳೆಯಿಂದ ಮುಡಿಯಿಂದ ಅಡಿಯವರೆಗೆ ವಿಶೇಷವಾದ ಉಡುಪು ಧರಿಸಿದವರ ಹಾಗೆ ತೋರುವರು. ಸಿರಿ ಎಳೆಯನ್ನು ಕಟ್ಟವಾಗಿ ಮುಚ್ಚಿಕೊಂಡ ಕಂಗುಲು ಪಾತ್ರಧಾರಿಗಳು ಕುಣಿಯುವಾಗ ನೋಡುವವರಿಗೆ ವಿಶೇಷ ಸೊಬಗು ಮತ್ತು ನೃತ್ಯದಲಿ ಏನೋ ಕೌತುಕವಿರುವ ಹಾಗೆ ಆಕರ್ಷಿಸುತ್ತದೆ. ಕಂಗುಲು ಪಾತ್ರಧಾರಿಗಳು ತಲೆಯಿಂದ ಇಳೆ ಬಿದ್ದ ಸಿರಿಯ ಸಂದುಗಳಿಂದ ತಮ್ಮ ದೃಷ್ಟಿ ಹರಿಸಿ ತಾಳ-ತಾಸೆಯ ನುಡಿತಕ್ಕೆ ತಕ್ಕಂತೆ ನಡೆದಾಡುತ್ತಾರೆ, ಕುಣಿಯುತ್ತಾರೆ. ಈ ಕುಣಿತದಲ್ಲಿ 'ಕಂಗುಲು

ಪುಟ್ಟಿನಿ ಕಾಮದೇವರೆ ನಾಡುಡು...' (ಕಂಗುಲು ಮಕ್ಕಳು ಹುಟ್ಟಿದ್ದು ಕಾಮದೇವನ ನಾಡಿನಲ್ಲಿ) ಎಂದು ಹೇಳುವ ಸೊಲ್ಲಿನಿಂದ ಹಾಡು ಆರಂಭವಾಗುವುದು. ಕಂಗುಲು ಕುಣಿತದ ಮೂಲಕ ಊರಿಗೆ ಬಂದ ಮಾರಿ ರೋಗ ಹಾಗೂ ಜನ ಜಾನುವಾರುಗಳಿಗೆ ಬಂದ ಪೀಡೆ-ಅನಿಷ್ಟಗಳು ತೊಲಗುವುದೆಂಬ ನಂಬಿಕೆ ಇರುವುದು. ಕಂಗುಲು ಕುಣಿತದ ಕೊನೆಯ ಆಚರಣೆಯಲ್ಲಿ ಪಾತ್ರಧಾರಿಗಳು ತಾವು ಧರಿಸಿದ ಸಿರಿ ಎಳೆಯನ್ನು ಒಂದು ಕಡೆ (ಕಾನನದಲ್ಲಿ) ಇರಿಸಿ ರಾಶಿ ಪೂಜೆ ನಡೆಸುವರು. ಈ ಪೂಜೆಗೆ 'ತಡ್ಪೆದ ಬೂಳ್ಯೋ' – ಎಂದು ಹೆಸರು. ಆನಂತರ ಶುದ್ಧ ಮಿಂದು (ಸ್ನಾನ) ಕಂಗುಲು ಆಚರಣೆಯಲ್ಲಿ ಭಾಗಿಯಾದವರು ತಮ್ಮ ತಮ್ಮ ಮನೆಗೆ ತೆರಳುವರು. ಬಹಳ ಹಿಂದೆ ಕಂಗುಲು ಕುಣಿತದ ಜೊತೆಯಲ್ಲಿ ಕೀಲು ಕುದುರೆಯ ಮಾದರಿಯ ಪಾತ್ರವಿರುತ್ತಿತ್ತು. ಈ ಕೀಲು ಕುದುರೆಯ ಪಾತ್ರವನ್ನು ತೆಂಗಿನ ಸಿರಿ ಎಳೆಯಿಂದ ನಿರ್ಮಿಸುತ್ತಿದ್ದರು. ಇಂದು ಈ ಪಾತ್ರದ ಔಚಿತ್ಯ ಮತ್ತು ಅದರ ಬಗ್ಗೆ ಮಾಹಿತಿ ಬಲ್ಲವರು ಅತಿವಿರಳ. ಕೀಲು ಕುದುರೆಯ ಮಾದರಿಯ ಪಾತ್ರವು ಇಂದು ಆಚರಣೆಯಲ್ಲಿ ಲುಪ್ತವಾಗಿದೆ. (ನೋಡಿ ಅಂತ್ಯ ಟಿಪ್ಪಣಿ-II)

**ಕುಡುಬಿಯರ ಹೋಳಿ ಕುಣಿತ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಕುಡಬಿಯರು ಗಿರಿಜನ ವರ್ಗ ವ್ಯಾಪ್ತಿಗೆ ಸೇರಿದ ಸಮುದಾಯ. ಸುಮಾರು 15ನೇ ಶತಮಾನದಲ್ಲಿ ಗೋವಾ-ಕೊಂಕಣ ರಾಜ್ಯಗಳಲ್ಲಿ ಇದ್ದವರು ಪೋರ್ಚುಗೀಸರಿಂದ ನಡೆಯುತ್ತಿದ್ದ ಮತಾಂತರ ಪ್ರಕ್ರಿಯೆಯ ಉಪಟಳ ತಪ್ಪಿಸಿಕೊಳ್ಳಲೋಸ್ಕರವಾಗಿ ಕುಡುಬಿ ಜನವರ್ಗ ರಾಜ್ಯ-ಕೋಶಗಳನ್ನು ಬಿಟ್ಟು ಮೂಲ್ಕಿ, ಗಂಗೊಳ್ಳಿ, ಮಂಗಳೂರು, ಪುತ್ತಿಗೆ, ಸೂರಾಲು, ಕೊಕ್ಕರ್ಣೆ ಈ ಭಾಗಗಳಲ್ಲಿ ವಾಸ್ತವ್ಯ ಹೂಡಿದರು. ಆರಂಭದ ದಿನಗಳಲ್ಲಿ ಇತಿಹಾಸ ಪ್ರಸಿದ್ಧವಾದ ಸೂರಾಲು ಮನೆತನದ ತೋಳಾರ ವಂಶಸ್ಥರು ಈ ಕುಡುಬಿಗಳಿಗೆ ಮೊದಲ ಆಶ್ರಯ ನೀಡಿದ್ದರಿಂದ ಇಂದಿಗೂ ಕುಡುಬಿಯರಲ್ಲಿ ಸ್ವಾಮಿನಿಷ್ಠೆಯ ಮನ್ನಣೆ ಗೌರವ ಮೊದಲಾಗಿ ಸೂರಾಲಿನ ಮನೆತನಕ್ಕೆ ಸಲ್ಲಿಸುವರು.

ಕುಡುಬಿಯರ ಹಾಡು-ಹಸೆ-ಹಬ್ಬಗಳೆಂದರೆ ಹೋಳಿ ಕುಣಿತ. ತಮ್ಮ ಮೂಲ ದೇವತೆಯಾದ ಮಾಳಸ ಅಥವಾ ಗೋವೆಯನ್ನು ದೇವರ ಪ್ರೀತ್ಯರ್ಥವಾಗಿ ಐದು ದಿನಗಳ ಕಾಲ ಹಬ್ಬ ನಡೆಸುವರು. ಈ ಐದು ದಿನಗಳಲ್ಲಿ ಮಾಂಸ ಮೀನು ತಿನ್ನುವುದಿಲ್ಲ. ಈ ಐದು ದಿನಗಳ ಹಗಲು ರಾತ್ರಿ ಹಾಡು ಕುಣಿತಗಳ ಮೂಲಕ ದೇವರ ಪ್ರೀತ್ಯರ್ಥ ಗುಮಟೆ ವಾದ್ಯ ಹಿಡಿದು ಕುಣಿಯುವರು. ಆರಂಭದಲ್ಲಿ ಈ ಜನವರ್ಗದವರುಗಳು ಅವಿಭಾಜಿತ ಕುಟುಂಬದವರಾಗಿದ್ದರು. ಹೀಗಾಗಿ ಯಜಮಾನನ (ಮುಂಡ್ಕರ್) ಮನೆಯಲ್ಲಿ ತುಳಸಿ ಕಟ್ಟೆಯಲ್ಲಿ ತೆಂಗಿನ ಕಾಯಿ ಏರಿಸಿ, ಕಾಲು ದೀಪ ಬೆಳಗಿಸಿ ಹಬ್ಬ ಆರಂಭ ಮಾಡುವರು. ಹೋಳಿ ಹಬ್ಬವೆಂದರೆ ಕಡುಬಿಯ ಪ್ರತಿಯೊಬ್ಬ ಪುರುಷ ಸಮಾಜದವರು ಕೈಯಲ್ಲಿ ಗುಮಟೆ, ಕೋಲಾಟದ ಕೋಲುಗಳು ಹಾಗೂ ಕಚ್ಚೆ ಹಾಕಿದ ಸೀರೆ ತೊಟ್ಟು ನರ್ತಿಸುವ ಕಲಾಕಾರರಾಗುತ್ತಾರೆ. ಒಂರ್ಥದಲ್ಲಿ ಹೆಣ್ಣು-ಗಂಡು ಈ ಎರಡೂ ವೇಷಗಳ ವೈವಿಧ್ಯತೆ ಇವರ ವೇಷಗಾರಿಕೆಯಲ್ಲಿ ಕಾಣಬಹುದಾಗಿದೆ. ತಲೆಗೆ ಏರಿಸಿಕೊಂಡ ಪಟಗಾದಲ್ಲಿ ಕಾಡು ಜಾತಿ ಹಕ್ಕಿ (ಮುದ್ದಣ)ಯ ಉದ್ದನೆಯ ಗರಿಯನ್ನು ತುರಾಯಿ ಹಾಗೆ ತೊಟ್ಟುಕೊಳ್ಳುವುದು ಗೌರವ ಸಂಕೇತವೂ ಆಗಿದೆ. ಮೇಲ್ ಉಡುಪಾಗಿ ಬಿಳಿ ಬಣ್ಣದ ರವಕೆ, ಕೆಳಭಾಗದಲ್ಲಿ ನೆರಿ ಅಂಗಿ, ಕತ್ತರಿ ಆಕಾರದ ಕೆಂಪು ಶಾಲು ಹೀಗೆ ವಿಶೇಷ ಅಲಂಕೃತಗೊಂಡ ಕಲಾವಿದರ ಮೇಳ ಅಥವಾ ಗುಂಪು ಐದು ದಿನಗಳ ಕಾಲ ತಿರುಗಾಟ ನಡೆಸುವರು. ಮನೆ ಮನೆಗೆ ಹೋಗಿ ಕುಣಿದು ಧಾರ್ಮಿಕ ಪಡಿ ಕಾಣಿಕೆ ಸ್ವೀಕರಿಸುತ್ತಾರೆ. ಯಜಮಾನನ ಮನೆಯ ಅಂಗಳದಲ್ಲಿ ಕೋಲಾಟ, 'ಗುಮಟೆ' ವಾದ್ಯದ ಗತ್ತಿನೊಂದಿಗೆ ರಾಮಾಯಣ ಮತ್ತು ಮಹಾಭಾರತದ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಕುಣಿಯುತ್ತಾರೆ. ತಮ್ಮ ತಿರುಗಾಟದಲ್ಲಿ ದೊರಕಿದ ತೆಂಗಿನಕಾಯಿ, ಸೇರು ಅಕ್ಕಿ ಇತ್ಯಾದಿ ಪರಿಕರಗಳನ್ನು ಕಲಾ ಮೇಳದ ಯಜಮಾನನಲ್ಲಿ ಸಂದಾಯವಾಗುತ್ತದೆ. ಹೀಗೆ ಪ್ರತಿದಿನ ಸಂಗ್ರಹವಾದ ಸರಂಜಾಮುಗಳನ್ನು ಸೇರಿಸಿ ಕೊನೆಯ ದಿನ (ಐದನೆ ದಿನದಂದು) ಹೋಳಿ ಹುಣ್ಣಿಮೆ ಮೇಳದ ಹಬ್ಬದ ವಿಶೇಷ ಪೂಜೆ ನಡೆಯುವುದು. ತುಳಸಿಕಟ್ಟೆಯಲ್ಲಿ ಏರಿಸಿದ ತೆಂಗಿನಕಾಯಿ ಇಳಿಸುವ ದಿನ (ಕೊನೆಯ ಆಚರಣೆ) ಬುದ್ಯಂತ ಅಥವಾ ಕೋಲ್ಕಾರ (ಗಣಾಚಾರಿ) ಮನೆಯಲ್ಲಿ ಕಲಾಕಾರರು ಒಟ್ಟಾಗಿ ಸೇರುತ್ತಾರೆ. ವಾಡೆಯ ಹೆಂಗಸರು ರಾತ್ರಿಯ ಭೋಜನ ತಯಾರಿಸುತ್ತಾರೆ. ಬುದ್ಯಂತನ ಮನೆಯ ಅಂಗಳದಲ್ಲಿ ನಡು ರಾತ್ರಿಯ

ತನಕ ಹಾಡು, ಕುಣಿತ ಸಾಗುತ್ತದೆ. ವೇಷ ಕಳಚಿದ ಬಳಿಕ ಸ್ನಾನ ಮಾಡಿ ವೇಷ ತೆಗೆದಿರಿಸಿ ವೇಷ-ಭೂಷಣದ ಎದುರು ಸೇವೆಯ ಪ್ರತೀಕವಾಗಿ ಪೂಜೆ ಮಾಡಿ ತೆಂಗಿನಕಾಯಿ ಒಡೆಯುತ್ತಾನೆ. ಹೋಳಿ ಹಬ್ಬದ ಬಳಿಕ ಒಂದು ನಿಶ್ಚಿತ ದಿನದಂದು ಎಲ್ಲರೂ ಬೇಟೆಗೆ ಹೋಗುತ್ತಾರೆ. ಈ ಸಂದರ್ಭದಲ್ಲಿ ಮೊಲದ ಬೇಟೆ ಸಿಕ್ಕಿದರೆ ಫಲವತ್ತಿಕೆ ಎಂದು ನಂಬಿರುವರು. ಬೇಟೆಯಾಡಿದ ಪ್ರಾಣಿಗಳನ್ನು ಕೊಂದು ಎಲ್ಲರೂ ಸಹಭೋಜನ ಮಾಡುವಲ್ಲಿ ಹೋಳಿ ಹಬ್ಬದ ವಿಧಿಗಳು ಮುಗಿಯುತ್ತವೆ.

### ಬಾಲೆಸಾಂತು

ಮರಾಠಿ ನಾಯಕ ಜನವರ್ಗದವರ ಅಪರೂಪದ ಕುಣಿತ ಬಾಲೆಸಾಂತು. ಡಾ. ಅಶೋಕ ಆಳ್ವ, ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದ ಸಂಶೋಧಕರು ಇವರು. ಬಾಲೆ ಸಾಂತು ಎನ್ನುವ ಒಂದು ಪ್ರಕಾರವಿದೆ ಎಂದು ಆಗಾಗ್ಗೆ ತಿಳಿಸುತ್ತಿದ್ದರು. ಡಾ. ಅಶೋಕ ಆಳ್ವ ಇವರ ಪ್ರಕಾರ 1977ರ ದಶಕದಲ್ಲಿ ಬಾಲೆಸಾಂತು ಪ್ರಕಾರವು ವಿಟ್ಲ ಪ್ರಾಂತ್ಯದಲ್ಲಿ ಜರುಗಿತ್ತು. ಆನಂತರ ಡಾ. ಆಳ್ವ ಇವರ ಸಂಯೋಜನೆಯಲ್ಲಿ ಬಾಲೆಸಾಂತು ಪ್ರಕಾರವನ್ನು ವಿಟ್ಲದ ಸಮೀಪದ ಕೇಪು ಗ್ರಾಮದ ಮರಾಠಿ ನಾಯಕರುಗಳು ನಡೆಸಲು ಮುಂದಾದರು. ಬಾಲೆಸಾಂತು ಪ್ರಕಾರವನ್ನು ಅಂದಿನ ನಿರ್ದೇಶಕರಾಗಿದ್ದ ಪ್ರೊ. ಕುಶಿ ಹರಿದಾಸ ಭಟ್ ಮಾರ್ಗದರ್ಶನದಲ್ಲಿ ಅಪರೂಪವೆನಿಸಿದ ಬಾಲೆ ಸಾಂತು ಆರಾಧನ ವಿಧಿಗಳನ್ನು 1997ರಲ್ಲಿ ದಾಖಲೀಕರಣ ನಡೆಸಲಾಯಿತು. ಅಂದು ದಾಖಲೀಕರಣ ನಡೆಸಿದ್ದುದರಿಂದ ಇಂದು ಉಡುಪಿಯ ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದಲ್ಲಿ ಬಾಲೆಸಾಂತು ಎನ್ನುವ ಒಂದು ಆರಾಧನ ಪ್ರಕಾರದ ಸಂಪೂರ್ಣ ಮಾಹಿತಿ ಶಾಶ್ವತವಾಗಿ ಉಳಿದಿದೆ. ಏನಿದು 'ಬಾಲೆ ಸಾಂತು' ಈ ಹೆಸರು ಬಹಳಾ ವಿಚಿತ್ರವಾದಂತೆ ಇದೆ ಎಂದು ಜನ ಆಶ್ಚರ್ಯ ಪಡುತ್ತಾರೆ. 'ಸಾಂತ' ಎನ್ನುವ ಹೆಸರು ಗೋವೆಯ 'ಸಾಂತೇರಿ ದೇವತೆ'ಗೆ ನಡೆದುಕೊಳ್ಳುವ ಮರಾಠಿ ಸಮುದಾಯದವರಿಗೆ ಸಂಬಂಧಿಸಿದ್ದಾಗಿರಬೇಕು. ಕಥೆಯ 'ಬಾಲಮ್ಮ' ಎನ್ನುವವರು ಮಗಳು 'ಬಾಲೆ ಸಾಂತು' ಅನಾಥಳಾಗುತ್ತಾಳೆ. ಈ ಅನಾಥ ಬಾಲೆ ಶೃಂಗೇರಿ ಮಠ ಪರಂಪರೆಯಲ್ಲಿ ಬೆಳೆಯುವಳು. ಈಕೆ ಬೆಳೆದು ದೊಡ್ಡವಳಾದ ಬಳಿಕ ಘಟ್ಟದ ಮೇಲಣ ಕಾಫಿ ತೋಟಕ್ಕೆಂದು ಕೆಲಸಕ್ಕೆ ಹೋಗುವವಳು. ಅಲ್ಲಿ ಕೊಂಕಣಿ-ಮರಾಠೀ ನಾಯಕರ ಪೈಕಿ ಒಲವು ಬೆಳೆದು ಓರ್ವ ಪುರುಷನೊಂದಿಗೆ ಮದುವೆಯಾಗುವವಳು. ಮಠ ಪರಂಪರೆಯಲ್ಲಿ ಬೆಳೆದ ಈಕೆ ಪ್ರತಿ ವರ್ಷದ ಮಾಯಿ ತಿಂಗಳಲ್ಲಿ ಶೃಂಗೇರಿಗೆ ಬಂದು ದೇವರ ಸೇವೆಯಲ್ಲಿ ತೊಡಗುವುದು ಒಂದು ಪದ್ಧತಿಯಾಗಿತ್ತು. ಈಕೆ ಮದುವೆಯಾದ ಬಳಿಕ ದೊಡ್ಡ ಶ್ರೀಮಂತಿಕೆಯ ದರ್ಪದಿಂದ ದೇವರ ಸನ್ನಿಧಿಗೆ ಬರಲು ಅಹಂನಿಂದ ತಿರಸ್ಕರಿಸುವಳು. ಈಕೆ ಶೃಂಗೇರಿಗೆ ಬಾರದಿದ್ದಾಗ ಸನ್ಯಾಸಿಯರನ್ನು ಕರೆದು ತರಲು ಕಳುಹಿಸಿದಾಗ ಅವರನ್ನೆಲ್ಲಾ ತನ್ನ ತೋಟದಲ್ಲಿ ದಂಡನೆ ನೀಡುತ್ತಾ ಕೆಲಸ ಮಾಡಿಸುವಳು. ಕೊನೆಗೆ ಶೃಂಗೇರಿ ದೇವತೆ ಈಕೆಯನ್ನು ಮಾಯ ಮಾಡುವಳು. ಸಾಂತಮ್ಮ ಅದೃಶ್ಯಳಾದಾಗ ಸಮುದಾಯದವರು ದೇವತೆಯ ಮೊರೆಹೊಕ್ಕರಂತೆ. ಸಾತಮ್ಮನ ಪಾಪ ಪರಿಹಾರವಾಬೇಕಾದರೆ ಸಮುದಾಯದವರು ದೇವರ ಹೆಸರಲ್ಲಿ ಹಾಡಿ ಕುಣಿಯಬೇಕು ಎಂದು ಅಪ್ಪಣೆ ಆಯಿತು. ಇಂತಿಷ್ಟು ಕಥೆ 'ಬಾಲೆ ಸಾಂತು'ವಿನ ಬಗ್ಗೆ.

ಬಾಲೆ ಸಾಂತು ಆರಾಧನ ಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣುವ ಬಹುತೇಕ ಜನಪದ ಕುಣಿತಗಳ ಅನುಕರಣೆ, ವೇಷ, ಹಗನ (ಹಗರಣ) ಕುಣಿತಗಳಿವೆ. ಮರಾಠಿ ನಾಯಕರು ನಡೆಸುವ ಗುಂಪು (ಮೇಳ) ಪ್ರದರ್ಶನದಲ್ಲಿ ಸುಮಾರು 50 ಜನರು ಪಾಲ್ಗೊಳ್ಳುತ್ತಾರೆ. ಬೆಸ ಸಂಖ್ಯೆಯಲ್ಲಿ 7, 9, 11 ದಿನಗಳು ಹಾಡು ಕುಣಿತಗಳ ಸೇವೆ ಬಾಲೆ ಸಾಂತು ಹೆಸರಿನಲ್ಲಿ ನಡೆಯುವುದನ್ನು ಈ ಆರಾಧನೆಯಲ್ಲಿ ಕಾಣಬಹುದು. ಮುಸ್ಲಿಮ್, ಮಾಪಿಳ್ಳೆ, ಕೊರಪಲು, ಜೋಗಿ ಪುರುಸೆರು, ಈ ವೇಷಗಳ ಮೂಲಕ ಹಗಣದಂತಹ ಹಾಸ್ಯ ಪ್ರಕರಣಗಳು ನಡೆಯುತ್ತವೆ.

### ಸೋಣದ ಜೋಗಿ

ಸೋಣ-ಮಾಸ ಸಾಮಾನ್ಯವಾಗಿ ಆಗಸ್ಟ್ ತಿಂಗಳ ಉತ್ತರಾರ್ಧ ಮತ್ತು ಸೆಪ್ಟಂಬರ್ ತಿಂಗಳ ಆರಂಭದ ದಿನಗಳಾಗಿವೆ. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಭಾಗದಲ್ಲಿ ಕೋಪಾಳ ಜನವರ್ಗದವರು (ನಲಿಕೆ) ಜೋಗಿಯ (ನಾಥ ಪಂಥದ) ವೇಷ ಧರಿಸಿ ರೈತಾಪಿ ಮನೆಯವರ ಅಂಗಳದಲ್ಲಿ ಕುಣಿಯುತ್ತಾನೆ. ಹಾರೈಕೆಗಳ ನುಡಿ ನುಡಿಯುತ್ತಾರೆ. ಸೋಣದ ಜೋಗಿಯಲ್ಲಿ ಜೋಗಿ ವೇಷಕ್ಕೆ ಸಹಾಯಕವಾಗಿ ತೆಂಬರೆ

(ವಾದ್ಯ) ನುಡಿಸಲು ಓರ್ವ ಪುರುಷ ಸದಸ್ಯ ಜೊತೆಯಲ್ಲಿರುತ್ತಾನೆ. ಜೋಗಿ ವೇಷವೆಂದರೆ ತಲೆಗೆ ಜಟೆಯ ಮಾದರಿಯಲ್ಲಿ ತೆಂಗಿನ ಎಳೆ ತಿರಿಯಿಂದ ತಯಾರಿಸಿದ ಟೊಪ್ಪಿಗೆ ಕೆಂಪು ನೆರಿಗೆಯ ಇಳಿ ಲಂಗ, ಎದೆಗೆ ತೆಂಗಿನ ಎಳೆತಿರಿಯಿಂದ ತಯಾರಿಸಿದ ಕವಚ, ಕೈಯಲ್ಲಿ ಒಂದು ದಂಟೆ (ಕೋಲು) ಈ ಕೋಲಿಗೂ ತೆಂಗಿನ ತಿರಿಯ ಅಲಂಕರಣವಿರುತ್ತದೆ. ಮುಖಕ್ಕೆ ತಿಳಿ ಕೆಂಪು ಬಣ್ಣ, ಬಿಳಿ ಚುಟ್ಟಿಗಳನ್ನು ಇಟ್ಟುಕೊಂಡ ವರ್ಣಿಕೆ, 12 ರಿಂದ 18 ವರ್ಷದೊಳಗಿನ ಸೋನದ ಜೋಗಿ ವೇಷ ಧರಿಸುವುದು ಸಂಪ್ರದಾಯ. ಬೆಳೆಗೆ ಬರುವ ರೋಗಗಳು ಈತನ ಆಗಮನದಿಂದ ದೂರಾಗುತ್ತವೆ, ಊರಿಗೆ ಬರುವ ಕಷ್ಟಗಳನ್ನು ಈತ ಪರಿಹರಿಸುತ್ತಾನೆ ಎಂದು ಜನರಲ್ಲಿ ನಂಬಿಕೆಯಿದೆ. ಈತ ನುಡಿಯುವ ಶಕುನಕ್ಕೆ ರೈತಾಪಿ ವರ್ಗದವರು ಭತ್ತ, ಮೆಣಸಿನಕಾಯಿ, ತೆಂಗು, ಉಪ್ಪು, ಹುಳಿ, ಮಸಿ (ಇದ್ದಲು) ಸ್ವೀಕರಿಸುವ ಹಿನ್ನೆಲೆಯಲ್ಲಿ ಮಾರಿ ಕಳೆಯುವ ನಂಬಿಕೆ ಜನರಲ್ಲಿ ಇದೆ. ದಕ್ಷಿಣ ಕನ್ನಡ ಜಿಲ್ಲೆ ಜೋಗಿ ಪಂಥಕ್ಕೆ ಹೆಸರು ಪಡೆದಿರುವುದರಿಂದ ಘಟ್ಟದ ಮೇಲಣ ಪ್ರದೇಶದಿಂದ ನಾಥ ಪಂಥದ ಜೋಗಿಗಳು ಈ ನಾಡಿಗೆ ಪ್ರಸಾರವಾದುದರ ಸೂಕ್ಷ್ಮ ಚಿತ್ರಣ ಇವರು ನುಡಿಯುವ ಹಾಡಿನಲ್ಲಿರುವುದು ಗಮನಾರ್ಹ.

ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರ ಸಂಗ್ರಹಿಸಿದ ದಾಖಲೀಕರಣದ ಪ್ರಕಾರ (ಕಾಸರಗೋಡು ವಿಭಾಗ) ಜೋಗಿ ವೇಷವನ್ನು ದೈವ ಸ್ಥಾನದಲ್ಲಿ ಬಣ್ಣ ಬಳಿದುಕೊಂಡು ನಿಶ್ಚಿತ ಗುತ್ತುಗಳಿಗೆ ಹೋಗಿ ಪಡಿ ಸ್ವೀಕರಿಸುವರು. ಈ ಕುಣಿತದಲ್ಲಿ ಹಾಡು ಮುಖ್ಯವಾಗಿ ಕನ್ನಡದಲ್ಲಿರುವುದು ವಿಶೇಷ. ವಾದ್ಯ ನುಡಿಸುವಾತ ಜೋಗಿಯಲ್ಲಿ ಹೀಗೆ ಕೇಳುತ್ತಾನೆ.

'ಎಲ್ಲಿಂದ ಬಂದೆ ಜೋಗಿ'........

ಜೋಗಿ ಹೀಗೆ ನುಡಿಯುತ್ತಾನೆ: 'ಘಟ್ಟದ ಮೇಲಿಂದ ಬಂದೆ. ಘಟ್ಟದ ಮೇಲೆ ಹುಟ್ಟಿಕೊಂಡು, ಕದ್ರೆ ಮೇಲೆ ಬೆಳಗಿಕೊಂದು, ಕಾಂತಾಣಕದ್ರ, ಬೇಂತಾಣ ಬೆದ್ರ, ಪರಮಲೆ ದಾಟಿಕೊಂಡು ಊರೆಲ್ಲ ಬೇಡಿಕೊಂಡು ಕನ್ಯಾರೆ ಚೌತಿಗೆ ಬಂದೆ ಜೋಗಿ...'

ಹೌದು...

ಹಾಗೆ ಬಂದ ಜೋಗಿಗೆ ಉಪ್ಪು ಹುಳಿ, ಸೌತೆಕಾಯಿ, ಭತ್ತ, ಮೆಣಸು ತೆಂಗಿನ ಕಾಯಿಯ ಕೊಡ್ತಾರೆ ಜೋಗಿ... ಇನ್ನೊಂದು ಆಟ ಅದು. ಹೀಗೆ ಸಂವಾದವೇ ಹಾಡಿನ ಭಾಗವಾಗಿ ಜೋಗಿ ವೇಷದಲ್ಲಿ ಕಾಣಬಹುದು. ಆರ್ನಾಲ್ಡ್ ಬಾಕೆ 1938ರಲ್ಲಿ ಸಂಗ್ರಹಿಸಿದ (ರಾಷ್ಟ್ರಕವಿ ಗೋವಿಂದ ಪೈ ಇವರ ಸಹಕಾರದಿಂದ) ಕಾಸರಗೋಡು ಭಾಗದ ಜೋಗಿ ಸಾಹಿತ್ಯಕ್ಕೂ ಪ್ರಸ್ತುತ ದೊರಕುವ ಜೋಗಿ ಸಾಹಿತ್ಯಕ್ಕೂ ಅನೇಕ ವ್ಯತ್ಯಾಸಗಳನ್ನು ಕಾಣಬಹುದು.

1938ರಲ್ಲಿ ಆರ್ನಾಲ್ಡ್ ಬಾಕೆ (ಡಚ್ ವಿದ್ವಾಂಸ) ಸಂಗ್ರಹದ ಜೋಗಿ ಹಾಡು ಈ ಕೆಳಕಂಡಂತೆ ಇದೆ.

ಯಾವಲ್ಲಿ ಹುಟ್ಟಿದ ಜೋಗಿ

ಊರೊಳಗೇಕೆ ಬಂದ ಜೋಗಿ

ಕೈಕಂ(ದಂ)ಟಿ ಕರಿಮಣಿ ತಂದ ಜೋಗಿ

ಘಟ್ಟದಲ್ಲಿ ಹುಟ್ದೆ ಜೋಗಿ

ಕದ್ರೆ ಮೇಲೆ ಮಲಗಿದ ಜೋಗಿ

ಊರೊಳಗೇಕೆ ಬಂದ ಜೋಗಿ

ನೆಟ್ಗೆ ಬಂದ ಜೋಗಿ

ಕಂ(ದಂ)ಟೀ ಕರಿಮಣಿ ತಕ್ಕೊ ಜೋಗಿ

ದೊಡ್ಮನೆಗೆ ಹೋಗಿದ ಜೋಗಿ

ಒಂದ್ಕಾನೆ ಭತ್ತಾ ಜೋಗಿ

ತೆಂಗಿನಕಾಯಿ ಜೋಗಿ

ಹಲಸಿನ ಹಣ್ಣು ಜೋಗಿಮತ್ತೊಂದಾಟ ಮಾಡಿದ ಜೋಗಿ

ಭಂಗೀ ಭಂಗೀ ತಕ್ಕೋ ಜೋಗಿ.

ಈ ಸೋಣ ಜೋಗಿ ಆಶಯದ ಮತ್ತೊಂದು ರೂಪವನ್ನು ಕುಂದಾಪುರ ಭಾಗದಲ್ಲಿ ದೊರಕುವ 'ಕಂಇಡಿ ಹಾಯ್ ಗುಳಿ ಸನ್ಯಾಸಿ ಹೊಗಳಿಕೆ' (ಹಾಡಿನ ಪ್ರಕಾರ)ಯಲ್ಲೂ ಕಾಣಬಹುದು. ಕಾಸರಗೋಡು ಭಾಗದಲ್ಲಿ ಕೆಲವು ಕಡೆ 'ಬೊನ್ಯ ಜೋಗಿ' (ಬೂದಿ ಪ್ರಸಾದ ಕೊಡುವ ಜೋಗಿ) ಎಂತಲೂ ಕೊಡಗಿನಲ್ಲಿ 'ಜೋಯಿ ಕಳಿ' ಎನ್ನುವ ಜೋಗಿ ವೇಷಗಳು, ಹರಕೆ ಸಂಪ್ರದಾಯಗಳು ಇವೆ. ಇಂದು ಜೋಗಿ ವೇಷಗಳು ಕಾಣಸಿಗುವುದು ಬಹಳ ವಿರಳವಾಗಿದೆ, ಉದರ ನಿಮಿತ್ತಕ್ಕಾಗಿ ಈ ವೇಷಗಳು ತಿರುಗಾಟ ನಡೆಸುವ ಹೀನಾಯ ಸ್ಥಿತಿಗೆ ಈ ಕಲಾ ಪ್ರಕಾರಗಳು ಬಂದಿದ್ದು, ಇಂದು ಅಪರೂಪಕ್ಕೊಮ್ಮೆ ಸೋಣ ಜೋಗಿ ವೇಷವನ್ನು ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದು.

**ಸಿದ್ಧವೇಷ ಅಥವಾ ಪುರುಷೆರು ಕುಣಿತ**

ಪುರುಷೆರು ಈ ಪ್ರಕಾರವು ಹೆಚ್ಚಾಗಿ ಬೆಳ್ತಂಗಡಿ, ಸುಳ್ಯ, ಪುತ್ತೂರು ಭಾಗದಲ್ಲಿ ವಾಸವಾಗಿರುವ ಗೌಡ ಜನಾಂಗದವರುಗಳು ನಡೆಸಿಕೊಡುವ ಜನಪದ ಕುಣಿತದ ಪ್ರಕಾರ. ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ ಈ ಪುರುಷ ವೇಷ ಕಲಾ ಪ್ರಕಾರದ ಗುಂಪು ಮನೆ ಮನೆಗೆ ತಿರುಗಾಡಿ ಪಡಿಕಾಣಿಕೆ ಸ್ವೀಕರಿಸುತ್ತಾರೆ. ಈ ವೇಷ ಪ್ರಕಾರವೂ ಜೋಗಿ ಪಂಥದ ಆಶಯವನ್ನು ಪ್ರತಿನಿಧಿಸುವುದರಿಂದ ಈ ಕುಣಿತವನ್ನು ಕೆಲವೆಡೆ ಸಿದ್ಧವೇಷ ಎಂತಲೂ ಕರೆಯುತ್ತಾರೆ. ಸುಗ್ಗಿ ಹುಣ್ಣಿಮೆ ಎರಡು ದಿನ ಹಿಂದೆ ದಿನ ನಿಗದಿ ಪಡಿಸಿ ಊರಿನ ಹಿರಿಯ ಗೌಡನ ನೇತೃತ್ವದಲ್ಲಿ ಆಸಕ್ತ ಗೌಡ ಯುವಕರು ಊರಿನ ದೈವ ಚಾವಡಿಯ ಮುಂದೆ ಕುಣಿತಕ್ಕೆ ಸಜ್ಜಾಗುತ್ತಾರೆ. ಈ ಕುಣಿತ ರಾತ್ರಿ ಸಂದರ್ಭದಲ್ಲಿ ನಡೆಯುವುದು. ಈ ಕುಣಿತ ಪ್ರಕಾರದಲ್ಲಿನ ವೇಷಗಳಲ್ಲಿ ಮುಖ್ಯವಾಗಿ ಬ್ರಾಹ್ಮಣ ವೇಷ, ದಾಸಯ್ಯ, ಇಬ್ಬರು ಸನ್ಯಾಸಿ ಹಾಗೂ ಪ್ರಾದೇಶಿಕತೆಗೆ ತಕ್ಕಂತೆ ವೇಷಗಳು ಇರುತ್ತವೆ.

ಸಿದ್ಧವೇಷ ಕುಣಿಯುವ ಯುವಕರು ತಲೆಗೆ ಮುಂಡಾಸು ಕಟ್ಟಿಕೊಂಡಿರುತ್ತಾರೆ. ಬಿಳಿಕಚ್ಚೆ, ದೊಗಳೆ ಅಂಗಿ ಧರಿಸಿ ಸೊಂಟಕ್ಕೆ ಬಿಗಿಯಾದ ದಟ್ಟಿಯನ್ನು ಕಟ್ಟಿಕೊಂಡಿರುತ್ತಾರೆ. ಬ್ರಾಹ್ಮಣ ವೇಷಧಾರಿ ಬಿಳಿ ಕಚ್ಚೆ ಹಾಗು ಗೋಣಿನಾರಿನಿಂದ ಮಾಡಿದ ದಪ್ಪ ಎಳೆಯ ಜನಿವಾರ ಧರಿಸಿ ನಾಮಧಾರಿಯಾಗಿರುತ್ತಾನೆ. ದಾಸಯ್ಯನ ವೇಷದಾತ ಕೈಯಲ್ಲಿ ಶಂಖ-ಜಾಗಟೆ ಹಿಡಿದರೆ, ಸನ್ಯಾಸಿಗಳು ತಮ್ಮ ಸಂಪೂರ್ಣ ದೇಹವು ಗೊತ್ತಾಗದ ಹಾಗೆ ಮೈತುಂಬಾ ಒಣಗಿದ ಬಾಳೆ ಪಟ್ಟಿಯನ್ನು ಕಟ್ಟಿಕೊಂಡಿರುವುದು ಈ ವೇಷದ ವಿಶೇಷವಾಗಿರುತ್ತದೆ. ಡಾ. ಪುರುಷೋತ್ತಮ ಬಿಳಿಮಲೆ ತಿಳಿಸುವಂತೆ ಸನ್ಯಾಸಿ ವೇಷದವರು ಬಾಳೆ ಎಲೆಗಳನ್ನು ಇಡೀ ದೇಹಕ್ಕೆ ಕಟ್ಟಿ, ದೇಹ ಮರೆಯಾಗುವಂತೆ ಮಾಡುತ್ತಾರೆ. ಹಸಿ ಬಾಳೆ ಎಲೆಯನ್ನು ತಂದು ಗರಗಸದಂತೆ ಕತ್ತರಿಸಿ ಮುಖಕ್ಕೆ ಅಡ್ಡವಾಗಿ ಕಟ್ಟಿ ಇಡೀ ಮುಖವನ್ನು ಮರೆ ಮಾಚುತ್ತಾರೆ. ತೆಳ್ಳಗಿನ ನಾಲ್ಕಾರು ಬೆತ್ತಗಳನ್ನು ಜೋಡಿಸಿ ಹಗ್ಗದಿಂದ ಸುತ್ತಿ ಸೊಂಟದ ಮುಂಭಾಗದಲ್ಲಿ ಕಟ್ಟಿ ನಿಗುರಿ ನಿಂತ ಶಿಶ್ನವನ್ನು ಪ್ರತಿನಿಧಿಸುವಂತೆ ಸೃಷ್ಟಿಸಿರುತ್ತಾರೆ. ಊರೊಳಗೆ ಓಡಾಡುವಾಗ ಪೋಕರಿಗಳು ಕೃತಕ ಶಿಶ್ನಕ್ಕೆ ಕೈ ಹಾಕುವರೆಂಬ ಕಾರಣಕ್ಕೆ ಶಿಶ್ನದ ತುದಿಗೆ ಮುಳ್ಳನ್ನು ಕಟ್ಟಿರುತ್ತಾರೆ. ಕೆಲವೊಮ್ಮೆ ಭಸ್ಮದ ಪಾತ್ರೆಯನ್ನು ಸನ್ಯಾಸಿ ಹಿಡಿದಿರುತ್ತಾನೆ- ಇಂತಿಷ್ಟು ಸನ್ಯಾಸಿ ವೇಷಭೂಷಣಗಳು. (ಡಾ. ಪುರುಷೋತ್ತಮ ಬೆಳಿಮಲೆ, 25-09-1988, ಮುಂಗಾರು ದೈನಿಕ, ಮಂಗಳೂರು ಪು.1) ಈ ಜನಪದ ಕಲಾ ಪ್ರಕಾರದ ಕುಣಿತ, ಚೇಷ್ಟೆಗಳನ್ನು ಗಮನಿಸಿದರೆ ಪುರೋಹಿತಶಾಹಿ ವರ್ಗದವರು ನಿರಾಕರಿಸುವ ಹಾಗೂ ತನ್ನ ಸ್ಥಾನ-ಮಾನವನ್ನು ಪ್ರತಿಸ್ಥಾಪಿಸುವ ಘರ್ಷಣೆ ಈ ಕುಣಿತದ ಚಲನವಲದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಕುಣಿತದ ವೇಳೆ ಇವರುಗಳು ದಿಂಬಿ ಸಾಲೆ ದಿಂಬಿಸಾಲೆ ಎಂದು ಹಾಡಿನ ಪಲ್ಲವಿಯನ್ನು ಹೇಳಿಕೊಂಡು, ಕೇಕೆ ಹಾಕುತ್ತಾ ಸಾಗುವರು. ಒಂದು ಗುಂಪಿನ ಸಿದ್ಧವೇಷ ಮತ್ತೊಂದು ಗುಂಪಿನ ಸಿದ್ಧವೇಷದವರೊಂದಿಗೆ

ಮುಖಾಮುಖಿಯಾಗಬಾರದು, ಜಗಳಗಳಾಗುತ್ತವೆ ಎನ್ನುವ ದೂರದೃಷ್ಟಿಯಿಂದ ಮುಖಾ–ಮುಖಿಯಾಗುವುದನ್ನು ಹಿರಿಯರು ತಪ್ಪಿಸುತ್ತಾರೆ. ಸಿದ್ಧವೇಷ ರೈತಾಪಿ ಜನವರ್ಗದವರ ಮನೆಯ ಮುಂದೆ ಹಾಡು ಹೇಳಿದ ಬಳಿಕ ಮಂಜುನಾಥ ದೇವರ ವಿಗ್ರಹವನ್ನು ಪೂಜಿಸುತ್ತಾರೆ, ಭಸ್ಮವನ್ನು ಪ್ರಸಾದವಾಗಿ ಕೊಡಲಾಗುತ್ತದೆ. ಹೀಗೆ ನಾಲ್ಕೈದು ದಿನಗಳ ಕುಣಿತದ ತರುವಾಯ ಹೋಳಿ ಹುಣ್ಣಿಮೆಯ ದಿನದಂದು ಆಚರಣೆ ಅಂತ್ಯವಾಗುವುದು. ಅಂದು ಮೇಳದವರೆಲ್ಲಾ ಸೇರಿ ಪುರುಷರ ಪೂಜೆ ಮಾಡುತ್ತಾರೆ, ಕೋಳಿ ಕೊಯ್ದು, ರೊಟ್ಟಿ ಎಡೆ ಅರ್ಪಿಸಿ ಕಳ್ಳು–ತೀರ್ಥ ಸ್ವೀಕರಿಸಿ ಸಂಭ್ರಮದಲ್ಲಿ ಕಾಲ ಕಳೆಯುವರು.

**ಚುಣ್ಣ**

ಕೊರಗ ಜನವರ್ಗದವರು ನಡೆಸಿಕೊಡುವ ಒಂದು ಜನಪದ ಕುಣಿತ. ಕುಂದಾಪುರ ಭಾಗದಲ್ಲಿ ಈ ಜನವರ್ಗದವರು ಒಂದು ಕಾಲದಲ್ಲಿ ಸಣ್ಣ ರಾಜ್ಯಭಾರ ಮಾಡಿದವರೆಂಬ ಹೆಗ್ಗಳಿಕೆಯೂ ಇದೆ. ಇಂದಿಗೂ ಶಂಕರನಾರಾಯಣ–ಸೂಡ ಭಾಗದಲ್ಲಿ ಕೊರ್‍ರ ಕೋಟೆ ಇದೆ ಎನ್ನುವುದು ಸ್ಥಳೀಯ ಐತಿಹ್ಯವಾಗಿದೆ. ಇವರುಗಳು ತಮ್ಮದೇ ಆದ ಭಾಷೆಯನ್ನು ಮಾತನಾಡುವರಾಗಿದ್ದು ಪ್ರಸ್ತುತ ತುಳು–ಕನ್ನಡ ಸಂಸ್ಕೃತಿಯಲ್ಲಿ ಅವಿಭಾಜ್ಯ ಅಂಗವಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಂಡಿರುವವರು. ಕಂಬಳದ ಗದ್ದೆಯಲ್ಲಿ ಹನಿ ಕಾಯುವಿಕೆ' ಮತ್ತು ಸಾವು ಸಂದರ್ಭದಲ್ಲಿ ವಿಶೇಷವಾಗಿ ಡೋಲನ್ನು ನುಡಿಸುವುದನ್ನು ವಾಂಶಿಕ ಸೇವೆಯಾಗಿ ಮಾಡಿಕೊಂಡು ಬಂದಿರುವವರು. ಇವರ ಪರಿಭಾಷೆಯಲ್ಲಿ ಡೋಲಿಗೆ 'ಕಡ್ಡಾಯಿ' ಎಂತಲೂ ತಾಳಕ್ಕೆ ಕೌಸಾಳೆ, (ವಾಂಟೆ) ಸಣ್ಣ ಕರಂಡೆ ಎಂಬುದಾಗಿ ಕರೆದಿರುವರು. ಈ ವಾದ್ಯಗಳನ್ನು ನುಡಿಸುತ್ತಾ ಕೊಡಿ ತಿಂಗಳಲ್ಲಿ ಬರುವ ಮಾರಣಕಟ್ಟೆ ದೇವಿ ಜಾತ್ರೆ ಸಂದರ್ಭದಲ್ಲಿ ಚುಣ್ಣ–ವೇಷಧಾರಿಗಳಾಗಿ ಮನೆ ಮನೆಗೆ ಹೋಗಿ ಕುಣಿದು ಪಡಿಕಾಣಿಕೆ ಸ್ವೀಕರಿಸುವರು. ಕೊರಗರು ಚುಣ್ಣ–ವೇಷದ ಮೂಲಕ ಬಂದಾಗ ಅನಿಷ್ಟಗಳು ದೂರವಾಗುತ್ತವೆ ಎಂದು ಜನ ನಂಬಿರುವರು. ಇಂದಿಗೂ ಪುರೋಹಿತಶಾಹಿ ವರ್ಗದವರು ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೊರಡುವ ಮುನ್ನ ಈ ಜನವರ್ಗದವರಿಗೆ ಹಣಕೊಟ್ಟು ಮುಂದಡಿ ಇಡುವುದು ಒಂದು ಸಂಪ್ರದಾಯವಾಗಿದೆ. ಕೊರಗ ಜನವರ್ಗದ ಚುಣ್ಣ ವೇಷದವರು ಬರಿ ಮೈಗೆ ಬಿಳಿ ಚುಕ್ಕೆ, ಕರಿ ಚುಕ್ಕೆಯ ಮುದ್ರೆ ಧರಿಸಿಕೊಂಡು, ಸೊಂಟದ ಭಾಗದಲ್ಲಿ ಸಣ್ಣ ಕೌಪೀನ ಧರಿಸಿರುತ್ತಾರೆ ಹಾಗೂ ಕೈಯಲ್ಲಿ ಹಾಗೂ ಸೊಂಟಕ್ಕೆ ನೆಕ್ಕಿ ಸೊಪ್ಪು ಕಟ್ಟಿಕೊಂಡು, ತಲೆಗೆ ಅಡಿಕೆ ಹಾಳೆಯಿಂದ ವಿಶೇಷವಾಗಿ ತಯಾರಿಸಿದ ಮುಟ್ಟಾಳೆ ಇಟ್ಟುಕೊಂಡಿರುತ್ತಾರೆ. ಈ ಟೊಪ್ಪಿಯಲ್ಲಿ ಕಿಸ್ಗಾರ ಹೂವಿನ ಅಲಂಕರಣವಿರುತ್ತದೆ. ಚುಣ್ಣ ವೇಷಧಾರಿಗಳ ಕೈಯಲ್ಲಿ ಮೊರ ಮತ್ತು ಮರದ ಕತ್ತಿ ಇರುತ್ತದೆ. ಕುಣಿತದಲ್ಲಿ ಯಾವುದೇ ಹಾಡುಗಳಿಲ್ಲ, ಕಡ್ಡಾಯಿ, ಕರಂಡೆ, ವಾಂಟೆ–ಕೌಸಾಲೆ ವಾದ್ಯಗಳ ನಿನಾದಕ್ಕೆ ಇವರುಗಳು ಕುಣಿಯುವರು, ಇವರ ಜೊತೆಗೆ ಒಂದು ಹೆಣ್ಣು ವೇಷವೂ ಇರುತ್ತದೆ. ಮೊದಲಾಗಿ ಊರ ದೇವಸ್ಥಾನದಲ್ಲಿ ಕುಣಿದು ಆ ಬಳಿಕ ಕುಣಿತದ ತಿರುಗಾಟ ನಡೆಸುವರು. ಈ ಚುಣ್ಣ ವೇಷ ಪ್ರಕಾರವನ್ನು ಕುಂದಾಪುರ ಭಾಗದಲ್ಲಿ ಹೆಚ್ಚಾಗಿ ಕಾಣಬಹುದು.

**ಕೊರಗರ ಕಡ್ಡಾಯಿ**

ಕೊರ ಎಂಬುದು ಜಾತಿಸೂಚಕ ಹೆಸರು. ಈ ಜನವರ್ಗದವರು ನಡೆಸಿಕೊಡುವ ಕುಣಿತಕ್ಕೆ ಡೋಲು ಅಥವಾ ಕಡ್ಡಾಯಿ ಅಗತ್ಯ ಡೋಲು/ಕಡ್ಡಾಯಿ ವಾದ್ಯದಲ್ಲಿ ಮೂರು ಪ್ರಕಾರಗಳಿವೆ.

1. ಕಂಚಿನ ಕಡ್ಡಾಯಿ : ಕಂಚಿನ ಲೋಹದ ಕವಚ ಹೊಂದಿದ್ದ ವಾದ್ಯ.

2. ಮರದ ಕಡ್ಡಾಯಿ : ಮರದ ಹೊರ ಕವಚ ಹೊಂದಿದ್ದ ವಾದ್ಯ.

3. ಬೈದೆರಲ್ ಕಡ್ಡಾಯಿ : ನಿರ್ದಿಷ್ಟ ಜನವರ್ಗದವರ (ಬಿಲ್ಲವ) ಗರೋಡಿಗಳಲ್ಲಿ ಆರಾಧನೆ ನಡೆಯುವಾಗ ಉಪಯೋಗಿಸುವ ವಾದ್ಯ?

ಒಂದು ಕಾಲದಲ್ಲಿ ಈ ಜನವರ್ಗದವರು ಲೋಹ ನಿರ್ಮಿತ ಕಡ್ಡಾಯಿ ಬಳಸುತ್ತಿದ್ದುದರ ಬಗ್ಗೆ ಮೌಖಿಕ ಇತಿಹಾಸಕ್ಕೆ ಪೂರಕವಾಗಿರುವ ಕಥೆಗಳಿವೆ. ಪಡ್ಡಂಬೂಡು (ಉಡುಪಿ ಜಿಲ್ಲೆ ಹಿರಿಯಡ್ಕ ಗ್ರಾಮ). ಇಲ್ಲಿನ ಜೈನ ಮನೆತನದವರ ವ್ಯಾಪ್ತಿಯಲ್ಲಿದ್ದ ಕೊರಗರು ಕಂಚಿನ ಕಡ್ಡಾಯಿ ಹೊಂದಿದವರಾಗಿದ್ದರು. ಟಿಪ್ಪು



ಸುಲ್ತಾನನ ಕಾಲ (ಕ್ರಿ.ಶ. 1783-84ರಲ್ಲಿ) ಸುಲ್ತಾನನ ಕಡೆಯವರು ಕರವಾಳಿ ಕರ್ನಾಟಕ ದತ್ತ ದಾಳಿ ನಡೆಸುತ್ತಿದ್ದ ಕಾಲವದು. ಒಮ್ಮೆ ದಂಡು ಹಿರಿಯಡ್ಕ ದತ್ತ ಬಂದಾಗ ಲೋಹದ ಮೂರ್ತಿ, ಲೋಹ ಸಂಬಂಧಿಯಾದ ಸರಂಜಾಮುಗಳನ್ನು ಮದ್ದು ಗುಂಡು ತಯಾರಿಸಲು ಜಮಾಲಗಡ ಕೋಟೆಗೆ ಕೊಂಡೊಯುತ್ತಿದ್ದರು. ಇದನ್ನರಿತು ಜೈನ ಆಳ್ವಿಕೆಯ ಬೀಡಿನವರ ಕಂಚಿನ ಕಡ್ಡಾಯಿಯನ್ನು ಕೊಂಡೊಯ್ಯದೆಂದು ಮುಂಜಾಗ್ರತೆಯಾಗಿ ಉಳಿಸಿಕೊಳ್ಳಲು ಬೀಡಿನ ಬಾವಿಗೆ ಹಾಕುವಂತೆ ಹೇಳಿದರು. ಕಡ್ಡಾಯಿ ನೀರ ಪಾಲಾಯ್ತು. ಅಂದು ಕಂಚಿನ ಡೋಲು ಕಳೆದುಕೊಂಡವರು ಮತ್ತೆ ದಕ್ಕಿಸಿಕೊಳ್ಳಲಿಲ್ಲ. ಇಂದು ಬಾಯ್ದೆರೆಯ ಕಥೆಯಾಗಿ ಕೊರಗ ಜನವರ್ಗದವರು ಕಂಚಿನ ಕಡ್ಡಾಯಿ ಬಗ್ಗೆ ನೆನಪಿಸಿಕೊಳ್ಳುತ್ತಾರೆ. ಕಡ್ಡಾಯಿ ವಾದ್ಯದ ಮೂಲಕ ನುಡಿಸುವ ತಾಳಗಳಿಗೆ ಟಕ್ಕುಗಳೆಂದು ಹೇಳುತ್ತಾರೆ. ಉದಾ: ಮಾರಿ ನಡಪು ಟಕ್ಕು, ಕಂಬಳದ ಟಕ್ಕು ಸಾವುದ ಟಕ್ಕು, (ಸಾವಿನ ಸಂದರ್ಭದಲ್ಲಿ ಬಳಸುವ ಈ ನುಡಿತ ವಿಶೇಷವಾಗಿದೆ). ಪ್ರಸ್ತುತ ಈ ಜನವರ್ಗದವರು ಇಂದು ಡೋಲು ಅಥವಾ ಕಡ್ಡಾಯಿ ನುಡಿಸುವುದು ಕಾನೂನು ಬಾಹಿರವಾಗುತ್ತಿದೆ. ಒಂದರ್ಥದಲ್ಲಿ ಇವರ ಡೋಲು ನುಡಿಸುವ ಕಲೆ ಕ್ಷೀಣಿಸುತ್ತಿದೆ.

ಕೊರಗರ ಸಾಂಸ್ಕೃತಿಕ ನಾಯಕ ಅಂಗಾರ. ಈತನೇ ಇಂದು ಎಲ್ಲ ಭೂತಗಳಿಂಗಿತಲೂ ಅತ್ಯಂತ ಶಕ್ತಿಶಾಲಿ ಭೂತ. ಕರಾವಳಿ ಕರ್ನಾಟಕದಲ್ಲಿ ಸಾಮಾನ್ಯವಾಗಿ ಭೂತಕೋಲಗಳೆಲ್ಲ ನಡೆದ ನಂತರ ಕೊನೆಯ ಭೂತವಾಗಿ ಕೊರಗ ಭೂತದ ಕೋಲ ನಡೆಯುವುದು ಕೆಲವು ಕಡೆ ರೂಢಿಯಲ್ಲಿದೆ. ಕೊರಗ ಭೂತಕ್ಕೆ ಜನ ಹೆಚ್ಚು ಭಯಭೀತರಾಗುತ್ತಾರೆ.

**ಮಾಂಕಾಳಿ ಕುಣಿತ**

ಉಡುಪಿ, ಕಾರ್ಕಳ ತಾಲ್ಲೂಕಿನ ಭಾಗದತ್ತ ಹೆಚ್ಚು ಪ್ರಚಲಿತವಿರುವ ಮಾಂಕಾಳಿ ಮುಖವಾಡದ ಕುಣಿತ ಇಂದು ನೋಡಲು ಅಪರೂಪವಾಗುತ್ತಿದೆ. ನಲಿಕೆ ಜನವರ್ಗದವರು ಈ ಕುಣಿತವನ್ನು ನಡೆಸುವರು. ಅಡಿಕೆ ಹಾಳೆಯಿಂದ ತಯಾರಿಸಿದ ಮಾಂಕಾಳಿ ಮುಖವಾಡ ತಯಾರಿಸಿ ಕುಣಿಯುವವರು ಧರಿಸಿಕೊಳ್ಳುವರು. ಮುಖವಾಡ ಧರಿಸಿದಾತನ ಬೆನ್ನ ಭಾಗಕ್ಕೆ ಕೆಂಪು ಸೀರೆಯನ್ನು ಇಳಿ ಬಿಟ್ಟಿರುತ್ತಾರೆ. ಒಬ್ಬ ನರ್ತಕ ಹಾಗೂ ಮತ್ತೋರ್ವ ತೆಂಬರೆ ನುಡಿಸುತ್ತ 'ಬಲೆ ಬಲ್ಲೆ ಮಾಂಕಾಳಿ' ಎಂದು ತುಳುವಿನಲ್ಲಿ ಪಾಡ್ದನ ಹೇಳುತ್ತ ರೈತಾಪಿ ಜನವರ್ಗದವರ ಮನೆಯ ಅಂಗಳದಲ್ಲಿ ಕುಣಿಯುವರು. ಸುಗ್ಗಿಯ ಕಾಲದಲ್ಲಿ ರೈತಾಪಿ ಜನವರ್ಗದವರುಗಳು ಮಾಂಕಾಳಿ ಬರುವಿಕೆಯನ್ನು ಸಂತೋಷದಿಂದ ಆಹ್ವಾನಿಸುತ್ತಾರೆ. ಮಾಂಕಾಳಿ ಕುಣಿತದವರಿಗೆ ಭತ್ತದ ಸೂಡಿ ಅಥವಾ ಭತ್ತವನ್ನು ತೆಗೆದಿರಿಸಿರುತ್ತಾರೆ, ಮಾಂಕಾಳಿ ಕುಣಿತದವರು ಬಂದಾಗ ಭತ್ತದ ಪಡಿ, ಕಾಣಿಕೆ ಕೊಡುವರು. ಭತ್ತವನ್ನು ಸ್ವೀಕರಿಸಿದ ಬಳಿಕ ಅದೇ ಭತ್ತದ ಸ್ವಲ್ಪ ಭಾಗವನ್ನು ಕೊಟ್ಟಿಂತ ಗೆರಸೆಯಲ್ಲಿ ಹಾಕಿ ಫಲವತ್ತಿಗೆ ಹೆಚ್ಚಲೆಂದು ಹಾರೈಸುವರು, ದನ-ಕರುಗಳಿದ್ದ ಕೊಟ್ಟಿಗೆ ಇದ್ದರೆ ಪ್ರಸಾದ ರೂಪವಾಗಿ ಭತ್ತವನ್ನು ತೆಗೆದಿರಿಸುವುದು ರೂಢಿಯಲ್ಲಿದೆ. ಅಂತಿಮವಾಗಿ ನಲಿಕೆ ಜನವರ್ಗದವರು ಈ ಮಾಂಕಾಳಿ ದೈವಕ್ಕೆ ನೀರುದೋಸೆ-ಕೋಳಿ ಖಾದ್ಯ ಮಾಡಿ ಎಡೆ ಅರ್ಪಿಸುವಲ್ಲಿ ಕುಣಿತದ ಆರಾಧನ ವಿಧಿ ಮುಕ್ತಾಯಗೊಳಿಸುವರು.

**ಗೋಂದೋಳು**

ಕರ್ನಾಟಕ, ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿರುವ ಆರಾಧನ ಪದ್ಧತಿ ಗೋಂದೋಳು. ಮರಾಠಿ ಜನವರ್ಗದವರು ನಡೆಸಿಕೊಡುವ ದೇವಿ ಗದ್ದಿಗೆ ಪೂಜೆ ಹಾಗೂ ದೈವಿಯ ಆವಾಹನೆ ಮತ್ತು ಭೈರವ ದೈವಕ್ಕೆ ಮಂಡಲ ಬರೆದು ಹಂದಿ ಬಲಿ ಕೊಡುವ ಆಚರಣೆ ಇಲ್ಲಿ ಮುಖ್ಯವಾಗಿದೆ. ಈ ಪೂಜೆಯಲ್ಲಿ ದರ್ಶನ ಪಾತ್ರಿಯಾಗಿ

ಪಾಲ್ಗೊಳ್ಳುವಾತನನ್ನು ಪರುಷರಾಮ ಎಂದು ಕರೆಯುತ್ತಾರೆ. ಜಮದಗ್ನಿ, ರೇಣುಕೆ ಕಾವ್ಯದ ಕಥೆ ಇಲ್ಲಿ ಮುಖ್ಯವಾಗಿದ್ದರೂ ಮರಾಠಿಗಳು ನಡೆಸುವ ಆರಾಧನೆಯಲ್ಲಿ ಈ ಕಥಾ ನಿರೂಪಣೆ ಲುಪ್ತವಾಗಿದೆ. ಇಂದು ಗೋಂದೊಳು ನಲಿಕೆ (ಕುಣಿತ) ಮತ್ತು ದೇವಿ ಗದ್ದುಗೆ ಪೂಜೆ ಹಾಗೂ ದರ್ಶನ ಆರಾಧನೆ ಹಿನ್ನೆಲೆಯಲ್ಲಿ ನಡೆಯುವುದು. ಅಂತಿಮವಾಗಿ ಭಕ್ತಾಧಿಗಳು ಉರಿಯುವ ದೊಂದಿಯನ್ನು ಹಿಡಿದು ಪರುಷರಾಮನ ಸುತ್ತ ಅಥವಾ ಆತನ ಮಾರ್ಗದರ್ಶನದಂತೆ ಪ್ರದಕ್ಷಿಣೆ ಮತ್ತು ಅಪ್ರದಕ್ಷಿಣೆಯಾಗಿ ಕುಣಿಯುವರು. ಹಿಮ್ಮೇಳದಲ್ಲಿ ಗುಮಟೆ ವಾದ್ಯದ ನಿನಾದವಿರುತ್ತದೆ, ಬೆಳ್ತಂಗಡಿಯ ಭಾಗದಲ್ಲಿ ಗೊಂದಳು ನಡೆಯುವ ಸಂದರ್ಭದಲ್ಲಿ ತುಂತುಣಿ ನುಡಿಸುವಾತನನ್ನು, ದರ್ಶನಕ್ಕೆ ನಿಲ್ಲುವಾತನನ್ನು ಕೀಜುಗಾರ ಎಂದು ಕರೆಯುತ್ತಾರೆ. ಹೆಚ್ಚಾಗಿ ಇವರೆಲ್ಲಾ ತುಳಜಾ ಭವಾನಿಯ ಭಕ್ತರಾಗಿರುತ್ತಾರೆ. ಪದಶಃ ಗೋಂದಳು ಎಂದರೆ ಗಣಗಳ ದಳ (ಪಡೆ) ಇವುಗಳನ್ನು ನಿರ್ವಹಣೆ ಮಾಡುವುದರ ಆರಾಧನೆಯಿಂದಾಗಿ ಮರಾಠಿ ನಾಯಕರಲ್ಲಿ ಗೋಂದೊಳು ಪೂಜೆ ಪ್ರಧಾನವಾಗಿದೆ. ಉತ್ತರಕರ್ನಾಟಕದ ಭಾಗದಲ್ಲಿ ಗೊಂದಲಿಗರ ಆಟ ಎನ್ನುವ ಕಥಾ ನಿರೂಪಣೆ ರಾತ್ರಿಯಿಡಿ ದೇವಿಯ ಹೆಸರಲ್ಲಿ ನಡೆಯುವುದು ಇಂದು ಒಂದು ರಂಗಕಲೆಯಾಗಿ ಬೆಳೆದಿದೆ.

**ಸಾವಿರಹಣ್ಣಿನ ವಸಂತ ಮತ್ತು ಹೌಂದ್ರಾಯನ ಓಲಗ**

ಕುಂದಾಪುರ ಭಾಗದಲ್ಲಿ ತಿರುಪತಿಗೆ ಹೋಗಿ ಬಂದವರು ಮನೆಯೊಳಗೆ ಪ್ರವೇಶಿಸುವ ಮುನ್ನ ವಸಂತ ಅಥವಾ ಸಾವಿರ ಹಣ್ಣಿನ ಎನ್ನುವ ವಿಶೇಷ ಪೂಜೆ ನಡೆಸುವರು. ತುಳಸೀ ಕಟ್ಟೆಯ ಎದುರು ಪೂಜೆ ಕಾರ್ಯವನ್ನು ನಡೆಸಿ ಭೋಜನ ಸ್ವೀಕರಿಸಿದ ಬಳಿಕ ಮನೆ ಪ್ರವೇಶಿಸುವರು. ಇದೇ ಸಂದರ್ಭದಲ್ಲಿ ಪುರುಷರು ನಡೆಸುವ ಹೌಂದ್ರಾಯನ ಓಲಗ ಎನ್ನುವ ವಿಶಿಷ್ಟ ಕುಣಿತ ಪ್ರದರ್ಶಿಸುವರು. ಇವರ ವೇಷಭೂಷಣ ತೀರಾ ಸರಳವಾಗಿರುತ್ತದೆ. ಕಚ್ಚೆ ಪಂಚೆ ಧರಿಸಿ, ತಲೆಗೆ ಬಿಳಿ ರುಮಾಲು, ಕಾಲಿಗೆ ವಿಶೇಷವಾದ ಗಗ್ಗರ (ಕಡಗ) ಧರಿಸಿ ನೃತ್ಯ ಮಾಡುವರು. ಹಿಮ್ಮೇಳಕ್ಕೆ ಜಾಗಟೆಯ ನಿನಾದ ಲಯವನ್ನು ಒದಗಿಸುತ್ತದೆ. ಹಾಡುಗಾರನ ಪ್ರತೀ ಸಾಲಿಗೆ ಹೌಂದ್ರಾಯನ ಓಲಗವೇ ಎಂದು ಗುಂಪಿನವರು ಸಾಥ್ ಕೊಡುತ್ತಾ ಕುಣಿಯುವರು. ಕಣಿತದ ನಡುವೆ ಕೆಲವೊಮ್ಮೆ ಹನುಮಂತನ ಆವೇಶ ಕೆಲವು ಭಕ್ತರಿಗೆ ಬರುವದೂ ಇದೆ. ಕುಂದಾಪುರ, ಅಂಪಾರು ಭಾಗಗಳಲ್ಲಿ ಈ ಕುಣಿತ ವಿಶೇಷವಾಗಿದ್ದರೂ ನೋಡಲು ಕಾಣ ಸಿಗುವುದು ಅಪರೂಪವಾಗಿದೆ.

**ನಾಗಾರಾಧನೆ**

ದಕ್ಷಿಣ ಕರಾವಳಿಯಲ್ಲಿ ಹಲವು ಬಗೆಯ ದೈವಿಕ ಆಚರಣೆಗಳು ಜರುಗುತ್ತಿದ್ದು ಕೆಲವು ಆಚರಣೆಗಳು ಆಧುನಿಕ ಸಮಾಜಕ್ಕೆ ತಕ್ಕಂತೆ ಅವಿಷ್ಕಾರಗೊಂಡು ಜನಪ್ರಿಯತೆಗಳಿಸಿಕೊಳ್ಳುತ್ತಿವೆ. ಉದಾ:– ನಾಗಮಂಡಲ, ಭೂತ–ನೇಮ ಅಥವಾ ಕೋಲ, ಆಯನ ಇತ್ಯಾದಿ ಪ್ರಾದೇಶಿಕವಾಗಿ ಮತ್ತು ಜನಾಂಗೀಯ ಆಚರಣೆಗಳು ಭಿನ್ನವಾಗಿದ್ದು ದೈವಿಕ ಆಚರಣೆಗಳ ಆಶಯ ಏಕಮೂಲವಾಗಿರುತ್ತವೆ. ಉದಾ: ಫಲಪ್ರಾಪ್ತಿ, ರೋಗ ರುಜಿನಗಳ ನಿವಾರಣೆ, ಸಂತನ ಅಭಿವೃದ್ಧಿ ಮಾನಸಿಕ ಕ್ಲೇಶ ನಿವಾರಣೆ ಮತ್ತು ಚರ್ಮವ್ಯಾಧಿ ನಿವಾರಣೆ ಇತ್ಯಾದಿ. ದಕ್ಷಿಣ ಕನ್ನಡ ಭೂತಾರಾಧನೆಯ ಪ್ರತಿಯೊಂದು ಶಿಲ್ಪದಲ್ಲಿ ನಾಗನ ಆಕೃತಿ ಇರುವುದನ್ನು ಕಾಣುತ್ತೇವೆ. ಬಹುತೇಕ ಬೆಸ ಸಂಖ್ಯೆಯಲ್ಲಿ ನಾಗ ಪ್ರತಿಮೆಗಳನ್ನು ಪ್ರತಿಮಾಶಿಲ್ಪದಲ್ಲಿ ಕಾಣಬಹುದಾಗಿದೆ. ಬೆಸ ಸಂಖ್ಯೆಗಳ ನಾಗ ಶಿಲ್ಪದ ಪ್ರತಿಮಾ ಲಕ್ಷಣದಂತೆ ಶಿಲ್ಪಿಗಳು, ಮೂಚಾರಿಗಳು, ಗುಡಿಗಾರರು ನಾಗನ ಚಿತ್ರವನ್ನು ನಿರ್ಮಾಣ ಮಾಡುವರು. ಕರ್ನಾಟಕ ಜೈನ ದೇವಸ್ಥಾನದ ಎದುರು ಭಾಗದ ಧ್ವಜಕಂಬದಲ್ಲಿ ಹಾಗೂ ಶೈವ ಶಕ್ತಿ ದೇವಾಲಯಗಳಲ್ಲಿ ನಾಗನ ಹೆಡೆಯ ವಿನ್ಯಾಸ, ವಿವಿಧ ಚೌಕಗಳುಳ್ಳ ಮಂಡಲ (ಚಿತ್ರ) ಇಂದಿಗೂ ಕಾಣಬಹುದಾಗಿದೆ. ಕೇರಳ, ಕರಾವಳಿ ಕರ್ನಾಟಕ, ಕೊಂಕಣ ಈ ರಾಜ್ಯಗಳನ್ನು ಪರಶುರಾಮನು ಸಮುದ್ರರಾಜನಿಂದ ಪಡೆದನೆಂಬ ದಂತ ಕಥೆಯಿರುವುದು. ಪುರಾಣ ಕಾಲದಲ್ಲಿ ಈಗಿನ ಸೀಮೆಯಾಗಿರುವ ಗೋಕರ್ಣದಿಂದ ಕನ್ಯಾಕುಮಾರಿ–ಪ್ರಾಂತ್ಯದ ತನಕ 'ಪರುಷರಾಮಕ್ಷೇತ್ರ' ಎಂಬುದಾಗಿ ಹೆಸರಿತ್ತು. ಇಡೀ 'ಪರುಷರಾಮ ಕ್ಷೇತ್ರಕ್ಕೆ' 'ನಾಗಖಂಡ' ಎಂಬ ಹೆಸರೂ ಇದ್ದಿತೆಂಬುದಾಗಿ ಶಿಕಾರಿಪುರದ ಶಾಸನದ ಆಧಾರದಿಂದ ತಿಳಿದುಬರುವುದು.

ನಾಗದೇವತೆಯ ಆವಾಹನೆ ಉಪಾಸನೆ ಕುರಿತು ಹಲವು ಆಚರಣೆಗಳು ದ.ಕ. ಜಿಲ್ಲೆಯಲ್ಲಿ ಚಾಲ್ತಿಯಲ್ಲಿದೆ. ಪ್ರಾದೇಶಿಕ ಹಾಗೂ ಜನಾಂಗೀಯ ಹಿನ್ನೆಲೆಯಲ್ಲಿ ನಾಗದೇವತೆಯ ಆರಾಧನಾ ಪದ್ಧತಿ ಹಲವು ರೀತಿಯಲ್ಲಿರುವುದು ಗಮನಾರ್ಹ.

ನಾಗ ಮಂಡಲ, ಬ್ರಹ್ಮಮಂಡಲ, ಡಕ್ಕೆ ಬಲಿ, ಈ ಪ್ರಕಾರಗಳು ಹೆಚ್ಚಾಗಿ ಬ್ರಾಹಣವರ್ಗ ಮತ್ತು ವೈದ್ಯರು ಎಂಬ ಜನವರ್ಗದವರ ಸಹಕಾರದಿಂದ ಜರುಗುತ್ತವೆ. ತೀರಾ ಕೆಳವರ್ಗದವರು ನಡೆಸುವ ನಾಗಾರಾಧನೆಯ ಕ್ರಮದಲ್ಲಿ ಮುಖ್ಯವಾಗಿ ಪಾಣಾರಾಟ ಅಥವಾ ಸ್ವಾಮಿ (ನಾಗ) ಮಂಡಲ ಭೋಗ ಎಂಬ ಆಚರಣೆಗಳು ನಡೆಯುತ್ತವೆ.

ನಾಗದೇವತೆಗೆ ಹಲವಾರು ಹೆಸರುಗಳಿಂದ ಸ್ತುತಿಸಿ ಪೂಜಿಸುವ ಆಚರಣೆಯನ್ನು ಕರಾವಳಿ ಕರ್ನಾಟಕದಲ್ಲಿ ಕಾಣಬಹುದು. ಸ್ವಾಮಿಲಿಂಗ, ಬ್ರಹ್ಮಲಿಂಗ, ನಾಗಬೆರ್ಮೆರು, ಸ್ವಾಮಿಲಿಂಗಮ್ಮ, ಸುಬ್ಬುರಾಯ, ಕುಕ್ಕೆಲಿಂಗ ಇತ್ಯಾದಿ. ಕುಂದಾಪುರದ ಬಹುತೇಕ ಹಾಡಿದೈವದ ಮನೆ, ದೇವಾಲಯಗಳಲ್ಲಿ ಸ್ವಾಮಿ ಅಥವಾ ಸ್ವಾಮಿಲಿಂಗ ಎಂದು ಗಂಡು ನಾಗದೇವತೆಗೂ ಸ್ವಾಮಿಲಿಂಗಮ್ಮ ಎಂದು ಹೆಣ್ಣು ನಾಗದೈವಕ್ಕೂ ಭೋಗ ಕೊಡುವ ಆಚರಣೆ ಇದೆ. ಈ ಆಚರಣೆಗಳು ಬಹುತೇಕ ನಾಗನ ಪ್ರಿತ್ಯರ್ಥವಾಗಿ ನಡೆಸಿಕೊಡುವ ಒಂದು ಧಾರ್ಮಿಕ ಸೇವೆಯಾಗಿದೆ.



ನಾಗಮಂಡಲದಂತಹ ಅತಿವೆಚ್ಚದ ಆಚರಣೆಯಲ್ಲಿ ವೈದ್ಯ ಜನಾಂಗದವರು ಡಕ್ಕೆ (ಡಮರು ಆಕೃತಿಯ ಚರ್ಮ ವಾದ್ಯ) ಹಿಡಿದು ನಾಗಪಾತ್ರಿ (ಬ್ರಾಹ್ಮಣ)ಯನ್ನು ಆವೇಶಕ್ಕೊಳಗಾಗಿಸಿ ಕುಣಿಸುವುದು, ನಿಯಂತ್ರಿಸುವುದನ್ನು ಕಾಣಬಹುದು. ಹಾಡು, ಹೊಗಳಿಕೆ, ಡಕ್ಕೆವಾದ್ಯದ ನಿನಾದದ ಮೂಲಕ ನಾಗಪಾತ್ರಿಯನ್ನು

ದರ್ಶನಕ್ಕೆ ಒಳಪಡಿಸುವ ಕ್ರಿಯೆ ಗಮನಾರ್ಹವಾದುದಾಗಿದೆ. ಇದಕ್ಕೆಲ್ಲಾ ಮೂಲ ಕಾರಣವಾಗಿ ಡಕ್ಕೆಯ ಧ್ವನಿ, ಸಂಜ್ಞೆಗಳು ಅಂತಿಮ. ವೈದ್ಯ ಜನಾಂಗದವರು ಬ್ರಾಹ್ಮಣ ವರ್ಗಕ್ಕೆ ಸೇರಿದವರು ಎಂಬುದಾಗಿ ಇತ್ತೀಚಿನ ಅಭಿಪ್ರಾಯವಾಗಿದೆ. ನಾಗ ಮಂಡಲದಂತಹ ಆಚರಣೆಗಳು ಕೇರಳದಲ್ಲಿಯೂ ನಡೆಯುತ್ತವೆ, ಇಲ್ಲಿ ಪಾಬನ್ ಪುಲ್ಲವರ್ ಎಂಬ ಜನವರ್ಗದವರು ಆಚರಣೆಯನ್ನು ನಡೆಸಿಕೊಡುತ್ತಾರೆ.

ಪಾಣಾರಾಟದಲ್ಲಿ ನಡೆಯುವ ಸ್ವಾಮಿಲಿಂಗ (ನಾಗ) ಭೋಗ, ಮಂಡಲ ಆಚರಣೆಯನ್ನು ಡಕ್ಕೆ ಬಲಿ ಪಾಣಾರ ಆಟ ಎಂಬುದಾಗಿ ಕರೆಯುವರು. ಬಾರಕೂರು, ಸಿದ್ಧಾಪುರ, ಕುಂದಾಪುರ, ಶಂಕರನಾರಾಯಾನ ಈ ಭಾಗಗಳಲ್ಲಿರುವ ದೈವದ (ಭೂನದ) ಮನೆ/ಸ್ಥಾನಗಳಲ್ಲಿ ಆಚರಣೆ, ನೇಮ, ಕೋಲಗಳಂತೆ ಪ್ರತಿ ಭೂತ / ದೈವಗಳಿಗೆ ಹೊಗಳಿಕೆ ಇರುವುದು. ತುಳುವಿನಲ್ಲಿ 'ಬೀರ' 'ಸಂಧಿ' ಹೇಳುವ ಹಾಡುಗಳಿಗೆ ಪರ್ಯಾಯವಾಗಿ (ಕುಂದಾಪುರ-ಕನ್ನಡ ಮಾತನಾಡುವ ಹಾಡಿ ದೈವದ ಮನೆ ಆಚರಣೆಗಳಲ್ಲಿ) ಪಾಣಾರ ಜನಾಂಗದವರು ಹಾಡುವ ಹಾಡಿಗೆ 'ದೈವದ ಹೊಗಳಿಕೆ' ಅಥವಾ 'ಹೊಗಳಕೆ' ಎಂದು ಹೇಳುವರು.

'ಪಾಣಾರಾಟ' ನಡೆಸಿಕೊಡುವ ಆಚರಣೆಗಳಲ್ಲಿ ಡಕ್ಕೆಬಲಿ ಸೇವೆ (ನಾಗರಾಧನೆ/ಸ್ವಾಮಿಗಳ ಪೂಜೆ) ನಡೆಯಲೇಬೇಕೆಂಬ ನಿಯಮವಿಲ್ಲ. ಆದರೆ ಕೆಲವು ಹಾಡಿ ದೈವದ ಮನೆಯಲ್ಲಿ (ಸ್ಥಾನಗಳಲ್ಲಿ) 'ಡಕ್ಕೆಬಲಿ' (ಸ್ವಾಮಿ ಮಂಡಲ) 'ಹೊಗಳಿಕೆ' – ಮೂಲಕ ಆಚರಣೆ ಜರುಗುವುದು. ಸಾಮಾನ್ಯವಾಗಿ ಡಕ್ಕೆ ಹಿಡಿದ ಪ್ರಧಾನ ಪಾತ್ರಧಾರಿ ನಾಗಕನ್ನಿಕೆ ಅಥವಾ ಅರ್ಧನಾರಿ ವೇಷದಲ್ಲಿ ನರ್ತಿಸುವನು. ನಾಗಬನದಲ್ಲಿ ಅಡಿಕೆ ಹಾಳೆಯಿಂದ ರಚಿತವಾದ ನಾಗನ ಮುಖವಾಡ ಹಾಕಿಕೊಂಡು ಆವೇಶಕ್ಕೆ ಒಳಗಾಗುವುದನ್ನು ಅಪರೂಪವಾಗಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಪಾಣಾರಾಟದಲ್ಲಿ ಕಾಣಬಹುದಾಗಿದೆ.

ನಾಗಮಂಡಲದಲ್ಲಿ ನಾಗಪಾತ್ರಿ ಆವೇಶಕ್ಕೆ ಒಳಗಾಗಿ ವೈದ್ಯನಾಗಿರುವ ಅರ್ಧನಾರಿಯಾಗಿ ಡಕ್ಕೆ ವಾದ್ಯ ನುಡಿಸುವ ಸೊಬಗು ನಾಗ ಮಂಡಲದ ಪ್ರಮುಖ ಆಕರ್ಷಣೆಯಾಗಿರುತ್ತದೆ. ನಾಗನ ಪ್ರೀತ್ಯರ್ಥವಾಗಿ ಮಂಡಲದ ಹೊರಭಾಗದಲ್ಲಿ ಅರ್ಧನಾರಿಯಾಗಿ ಕುಣಿಯುವಲ್ಲಿ ಪಾದಗಳ ಮೂಲಕ ಮಂಡಲದ ವಿನ್ಯಾಸ ಸಾಗುವುದು. ಈ ವಿಶಿಷ್ಟ ನರ್ತನ ನೋಡುಗರ ಕಣ್ಣಿಗೆ ಒಂದು ತಾಂತ್ರಿಕ ಮಂಡಲವಾಗಿದೆ. ಇಡೀ ಮಂಡಲದ ಸಾರ್ಥಕ್ಯ ಫಲಿತಾಂಶವಿರುವುದು ಈ ನಾಗಪಾತ್ರಿ ಹಾಗೂ ನಾಗಿಣಿಯರು ಜೊತೆಗೂಡಿ ಚಲಿಸುವ ಪಾದಚಲನೆಯಿಂದ. ಪವಿತ್ರದ ಮಾದರಿಯಲ್ಲಿ ಮಂಡಲ ಹಾಕುವುದು ಹಾಗೂ ಬೇರ್ಪಡಿಸುವುದು ಒಂದು ವಿಶೇಷ ಕಲೆಗಾರಿಕೆಯಾಗಿದೆ. ಈ ಒಂದು ಅಪೂರ್ವ ನೃತ್ಯದ ಭಾಗವು ಮಿಥುನದ ಸಂಕೇತವಾಗಿರುವುದರಿಂದಲೇ ಏನೋ ಇಂತಹ ಆಚರಣೆಗೆ ಮಂಡಲ ಭೋಗ ಸೇವೆ ಎಂತಲೂ ಸೂಕ್ಷ್ಮವಾಗಿ ಕರೆಯಲಾಗಿದೆ. ನಾಗ ಮಂಡಲದಲ್ಲಿ 'ಪವಿತ್ರ' (ಶಕ್ತಿ ಬಂಧಿಸುವ ಗಂಟು)ಗಳಿಗೆ ಉನ್ನತ ಸ್ಥಾನ-ಗೌರವ ನೀಡುವರು. ಸಂಪೂರ್ಣ ನಾಗಮಂಡಲ ಎಂದರೆ 16 ಪವಿತ್ರಗಳು ರಚನೆಯಾಗಬೇಕು. ಅರ್ಧ ನಾಗಮಂಡಲವೆಂದರೆ 8-ಪವಿತ್ರಗಳು, ಕಾಲು ನಾಗಮಂಡಲವೆಂದರೆ 4 ಪವಿತ್ರಗಳು ಈ ಸೂತ್ರದನ್ವಯ ನರ್ತನ-ಭೋಗ ಮಂಡಲ ಸೇವೆ ಆಚರಣಾತ್ಮಕವಾಗಿ ನಡೆಯುವುದು.

ಸ್ವಾಮಿ ಮಂಡಲದಲ್ಲಿನ ವಿನ್ಯಾಸವನ್ನು ಡಕ್ಕೆ ಬಲಿ ಸೇವೆ ಎಂದು ಕನ್ನಡ ಮಾತನಾಡುವ ಕರಾವಳಿ ಭಾಗದಲ್ಲಿ ಕರೆದಿರುವರು. ಹೆಚ್ಚಾಗಿ ಪಾಣಾರ ಜನಾಂಗದವರು ಇಂತಹ ಆಚರಣೆ ನಡೆಸಿಕೊಡುವರು, ಹೀಗಾಗಿ ಪಾಣಾರ ಆಟ ಎಂದು ಪ್ರಚಾರಿಕೆ ಪಡೆದಿದೆ.

## ಬ್ರಹ್ಮ ಮಂಡಲ

ನಾಗ ಮಂಡಲದ ಪವಿತ್ರ ವಿನ್ಯಾಸವನ್ನು ಪಂಚವರ್ಣ ಹುಡಿಯಲ್ಲಿ ರಚಿಸಿರುತ್ತಾರೆ, ಜೊತೆಯಲ್ಲಿ ಬ್ರಹ್ಮನ ಚಿತ್ರವನ್ನು ಶಿವನ ತ್ರಿಶೂಲವನ್ನು ರಚಿಸಿ ಹಾಡಿ-ಹೊಗಳಿಕೆಯನ್ನು ನಡೆಸುವ ಈ ಆಚರಣೆಯಲ್ಲೂ ನಾಗಪಾತ್ರಿ ಮತ್ತು ನಾಗಿಣಿ ಪಾತ್ರದ ಕುಣಿತ ನಾಗಮಂಡಲದಂತೆ ಜರುಗುವುದು. ಹಾಲಿಟ್ಟು ಮಂಡಲದಲ್ಲಿಯೂ ನಾಗಮಂಡಲದ ವಿನ್ಯಾಸ ರಚನೆ ಮಾಡುವರು, ಇಲ್ಲಿಯೂ ವೈದ್ಯ ಜನಾಂಗ ಹಾಗೂ ಬ್ರಾಹ್ಮಣ್ಯ ಪಾತ್ರಿಯ ಆವೇಶ, ನರ್ತನ ಕಾಣಬಹುದಾಗಿದೆ.



## ನಿಜಮಂಡಲ ಅಥವಾ ಕಾಡ್ಯನಾಟ

ಮೇರ ಜನಾಂಗದವರು ನಡೆಸಿಕೊಡುವ ನಾಗಾರಾಧನೆ, ಕಾಡ್ಯನಾಟ ಅಥವಾ ನಿಜ ಮಂಡಲ ಹರಕೆಯ ಆಧಾರದ ಮೇಲೆ ನಡೆಯುವಂತಹ ಆಚರಣೆ. ಕಾಡ್ಯನ ಆಟ ಎಂದರೆ ಕಾಳಿಂಗ ಸರ್ಪ ದೇವತೆಯನ್ನು ಪೂಜಿಸುವ ಮತ್ತು ಹೊಗಳಿ ತೃಪ್ತಿ ಪಡಿಸುವ ಆರಾಧನೆ. ನಿಜಮಂಡಲದಲ್ಲಿನ ಪ್ರದರ್ಶನದಲ್ಲಿ ದೈವ-ಭೂತಗಳ ಆರಾಧನೆ, ಹಗಣದಂತಹ (ಹಾಸ್ಯ ಸನ್ನಿವೇಷದ ಪ್ರಕರಣಗಳು) ಕಿರು ಪ್ರದರ್ಶನಗಳೂ ನಡೆಯುವುದು.

ತೀರಾ ಕೆಳವರ್ಗದವರೆಂದುಕರೆಯಲ್ಪಟ್ಟ ಮೇರ ಜನಾಂಗದವರಲ್ಲಿ ಕಾಳಿಂಗ ನಾಗ ದೈವದ ಆರಾಧನೆಯನ್ನು ವಿಶಿಷ್ಟ ವಿನ್ಯಾಸಗಳ ರಚನೆಯಲ್ಲಿ ಆರಾಧನೆ ನಡೆಸುವರು. ಈ ಆಚರಣೆಯನ್ನು ನಿಜ ಮಂಡಲ ಭೋಗ ಎಂತಲೂ ಕರೆಯಲಾಗಿದೆ. ಕಾಡ್ಯನಾಟವು ಮುಖ್ಯವಾಗಿ ಮೇರರಿಂದಲೇ ಸಂಪೂರ್ಣವಾಗಿ 4 ರಾತ್ರಿ ಮೂರು ಹಗಲು ನಡೆಯುವ ದೀರ್ಘ ಆಚರಣೆಯಾಗಿದೆ. ಕಾಡ್ಯನ ಸ್ಥಳವಿರುವಲ್ಲಿ ವಿಶೇಷವಾಗಿ ಹೊಸ ಕುಂಭಗಳನ್ನು ತಯಾರಿಸಿ ಅರ್ಪಿಸಲಾಗುತ್ತದೆ. ಈ ವಿಶೇಷ ಕುಂಭಗಳಲ್ಲಿ ನಾಗನ ಚಿತ್ರಗಳಿರುತ್ತವೆ. ನಿಜ ಮಂಡಲದಲ್ಲಿ ಪವಿತ್ರಗಳ ವಿನ್ಯಾಸ ಇರುವುದಿಲ್ಲ. ಬದಲಾಗಿ ವಿಶ್ವದ ಹುಟ್ಟು, ಬ್ರಹ್ಮಾಂಡದ ಕಲ್ಪನೆ, ಗೋವೆ ಹಕ್ಕಿ ಸಂತಾನ ಕೊಡುವ ದಂಪತಿಗಳ ಚಿತ್ರಣ, ಒಟ್ಟಾರೆ ಇಡೀ ಮಂಡಲ ಒಂದು ಸಂಕೀರ್ಣತೆಯ ಚಿತ್ರಣವನ್ನು ನೀಡುವುದು. ಕಂಬ ಹುಗಿಯುವ ಶಾಸ್ತ್ರ, ಹಗಣ, (ಹಾಸ್ಯ ಪ್ರದರ್ಶನದ ಪ್ರಕರಣ) ದೈವಗಳಿಗೆ ಕೊಡುವ ಕೋಲ, ತುಲಾಭಾರ ಹೀಗೆ ಅನೇಕ ಆಚರಣೆಗಳು ನಿಜಮಂಡಲದ ಆಚರಣೆಯ ಭಾಗವಾಗಿರುವುದನ್ನು ಗಮನಿಸಬಹುದು. ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದ ಮೂಲಕ ಪ್ರೊ. ಎ. ವಿ. ನಾವಡ ಹಾಗೂ ಶ್ರೀಮತಿ ಗಾಯತ್ರೀ ನಾವಡ ಇವರುಗಳಿಂದ ಸಂರಚಿತವಾದ ಕೃತಿ ಈಗಾಗಲೇ ಪ್ರಕಾಶನಗೊಂಡಿದ್ದು ಪ್ರದರ್ಶನಾತ್ಮಕ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕರಾವಳಿ ಕರ್ನಾಟಕದಲ್ಲಿ ಪ್ರಮುಖವಾದ ಆಚರಣಾತ್ಮಕ ಕಲೆ ಎಂಬುದು ಭೂತಾರಾಧನೆ. ಭೂ-ಎನ್ನುವ ಶಬ್ದವನ್ನು ಮತ್ತು ಇದರ ವ್ಯಾಖ್ಯೆಯನ್ನು ಮೊದಲು ಪ್ರಚಾರ ಮಾಡಿದವರು ಕ್ರೈಸ್ತ ಮಿಶನರಿಗಳು. ಇಂದಿಗೂ ಭೂತಾರಾಧನೆ ಎನ್ನುವುದು ಮೇಲ್ ನೋಟಕ್ಕೆ ರೂಢಿ ಮಾತಾಗಿದ್ದರೂ ಮೂಲತಃ ಜನಪದರು ಕರೆಯುತ್ತಿದ್ದುದು ದೈವಾರಾಧನೆ. ಇಂದಿಗೂ ಆಚರಣೆಯ ಸಂದರ್ಭದಲ್ಲಿ ದೈವಗಳು ಬರಲಿ ಎಂದು ಆವಾಹನೆ ನೀಡುತ್ತಾರೆ ಹೊರತು ಭೂತಗಳು ಎಂದು ಎಲ್ಲಿಯೂ ಸಂಭೋಧಿಸುವುದಿಲ್ಲ. ಭೂತಾರಾಧನೆಯನ್ನು ನಡೆಸಿಕೊಂಡು ಹೋಗುವವರು ಮುಖ್ಯವಾಗಿ ಮೂರು ಜನಜಾತಿಯ ವರ್ಗದವರಾಗಿದ್ದಾರೆ. ಅವರುಗಳಲ್ಲಿ ಮುಖ್ಯವಾಗಿ ಪಾಣಾರ, (ತುಳುವಿನಲ್ಲಿ ನಲಿಕೆ) ಪಂಬದ ಮತ್ತು ಪರವ - ಇವರೆಲ್ಲಾ ಭೂತಾರಾಧನೆಯ ಕೈಂಕರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಕಲಾವಿದರಾಗಿದ್ದಾರೆ. ಈ ಜನವರ್ಗದವರಿಗೆ ಭೂತಾರಾಧನೆ ನಡೆಸುವುದು ವಾಂಶಿಕವಾಗಿ ಬಂದ ಕುಲಕಸುಬು. ಇವರುಗಳು ಧಾರ್ಮಿಕ ವೃತ್ತಿ ಪ್ರದರ್ಶಕರು. ಭೂತಾರಾಧನೆಯಲ್ಲಿ ಮುಖ್ಯವಾಗಿ ಆರಾಧನೆಗೆ ಒಳಪಡುವವರು ಅತಿಮಾನುಷ ಶಕ್ತಿ ಹೊಂದಿದ ಸಾಂಸ್ಕೃತಿಕ ಪುರುಷರು, ಮಹಿಳೆಯರು ಹಾಗೂ ಪ್ರಾಕೃತಿಕವಾಗಿ ಗೋಚರಿಸಿದ ಪ್ರಾಣಿ ಚೇತನ, ಮರ-ಕಲ್ಲುಗಳಲ್ಲಿ ಕಂಡುಕೊಂಡ ಅಗೋಚರ ಶಕ್ತಿಗಳನ್ನು ದೈವಗಳೆಂದು ಜನ ಆರಾಧಿಸತೊಡಗಿದ್ದಾರೆ. ಡಾ. ಚಿನ್ನಪ್ಪಗೌಡ ಇವರು ತಿಳಿಸುವಂತೆ ತುಳುನಾಡಿನ ಜನರು 'ಭೂತಗ'-ಗಳನ್ನು 'ದೈವಿಕ ಶಕ್ತಿ' (Devine Spirit)ಗಳೆಂದು ನಂಬಿ ಆರಾಧಿಸುತ್ತಾರೆ. ಆರಾಧನೆಯ ಈ ಪದ್ಧತಿಯು ಯಾವುದೇ ಒಂದು ಜಾತಿಯ

ಜನರು ಮತ್ತು ಕುಟುಂಬಗಳಿಗೆ ಮಾತ್ರ ಸೀಮಿತವಾಗಿಲ್ಲ. ನೂರಾರು ಸಂಖ್ಯೆಯ ಭೂತಗಳು, ಅವುಗಳ ಗುಡಿಗಳು, ಆರಾಧನೆಗೆ ಸಂಬಂಧಪಟ್ಟಂತೆ ಇರುವ ಆಯುಧಗಳು, ಭೂತಗಳ ಮುಖವಾಡಗಳು ಇವೆಲ್ಲವುಗಳನ್ನು ಜನರು ಗೌರವ ಶ್ರದ್ಧೆಯಿಂದ ನೋಡಿಕೊಳ್ಳುತ್ತಾರೆ. ಈ ಆರಾಧನೆಯು ನಿರಂತರವಾಗಿ ಸಾಗಿ ಬರಲು ಜನರ ನಂಬಿಕೆಯ ಜೊತೆಗೆ ಈ ಭಯವೂ ಒಂದು ಮುಖ್ಯ ಕಾರಣವಾಗಿದೆ. ಭೂತಗಳನ್ನು ನಂಬದಿದ್ದರೆ ಅವುಗಳಿಗೆ ಕಾಲಕಾಲಕ್ಕೆ ಪೂಜೆ ಪುರಸ್ಕಾರಗಳನ್ನು ಸಲ್ಲಿಸದಿದ್ದರೆ ಅವುಗಳು ಸಿಟ್ಟುಗೊಂಡು ಕೇಡನ್ನು ತರುತ್ತವೆ. ನಂಬಿದವರಿಗೆ ಭೂತಗಳು (ದೈವಗಳೂ) ಒಳ್ಳೆಯದನ್ನು ಮಾಡುತ್ತವೆ ಎಂಬುದು ಇಲ್ಲಿನ ಜನರ ನಂಬಿಕೆಯಾಗಿದೆ. (ಚಿನ್ನಪ್ಪ ಗೌಡ ಕೆ. 1990, ಪು. 9–10) ಸಾಂಸ್ಕೃತಿಕವಾಗಿ ಹೊರಬಂದ ನಾಯಕರುಗಳ ಹುಟ್ಟು ಯಾವಾಗಲೂ ವಿಶೇಷವಾಗಿರುತ್ತವೆ. ಮುಖ್ಯವಾಗಿ ಅವಳಿಗಳು, ಅವಳಿ ಸಹೋದರರು, ಅಥವಾ ಕಾಲ್ಪನಿಕ ಕಿಂಪುರುಷರು (ಪ್ರಾಣಿ ತಲೆ ಮತ್ತು ಮನುಷ್ಯನ ದೇಹ ಹೊಂದಿದವರು) ಇವರುಗಳನ್ನು ತಮ್ಮ ಸಮುದಾಯದವರನ್ನು ಸಂರಕ್ಷಣೆ ಮಾಡಬಲ್ಲ ಹಿರಿಯ ಚೇತನಗಳೆಂದು ಮತ್ತು ಸದಾ ಫಲವತ್ತಿಕೆಯನ್ನು ಕೊಡಬಲ್ಲವರೆಂದು ಜನ ಆರಾಧನೆ ಮಾಡಿಕೊಂಡು ಬಂದಿರುವರು. ಕರಾವಳಿ ಕರ್ನಾಟಕದಲ್ಲಿ ಸುಮಾರು 400ಕ್ಕೂ ಅಧಿಕವಾಗಿ ದೈವಾರಾಧನೆ ಇದೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ. ಮುಖ್ಯವಾಗಿ ತಿಳಿಯಬೇಕಾದ ಅಂಶವೆಂದರೆ ಭೂತಾರಾದನೆಯಲ್ಲಿ ಆರಾದನೆಗೆ ಒಳಪಡುವ ಅನೇಕ ಚೇತನಗಳು ಸಹಜ ಸಾವಿನಿಂದ ಮುಕ್ತಿ ಪಡೆದವರಲ್ಲ, ಬಹುತೇಕ ಅಸಹಜ ಸಾವು ಉಂಟಾದುದರಿಂದ ಅವರುಗಳನ್ನು ದೈವಗಳೆಂದು ಭಾವಿಸಿ ಜನ ಆರಾಧನೆಯಲ್ಲಿ ತೊಡಗಿದ್ದಾರೆ. ಈ ಆರಾಧನೆಯನ್ನು ಸಾಂಗವಾಗಿ ನಡೆಸಿಕೊಡುವ ಮತ್ತು ದೈವಗಳ ಹುಟ್ಟು-ಬೆಳವಣಿಗೆಯ ಕಾವ್ಯಗಳನ್ನು ಹಾಡಬಲ್ಲವರು ನಲಿಕೆಯಾ ಪಾಣಾರ. ತುಳು ಮಾತನಾಡುವ ಭಾಗದಲ್ಲಿ ಇವರುಗಳನ್ನು ನಲಿಕೆಯವರು ಎಂದು ಕರೆಯುತ್ತಾರೆ. ಕುಂದಾಪುರ ಭಾಗದಲ್ಲಿ ತುಳು ಭಾಷೆ ಹೆಚ್ಚಾಗಿ ಪ್ರಚಲಿತದಲ್ಲಿ ಇಲ್ಲದಿರುವುದರಿಂದ ಕನ್ನಡದಲ್ಲಿ ಕಾವ್ಯಗಳನ್ನು ದೈವದ ಆರಾಧನೆಯ ಸಂದರ್ಭದಲ್ಲಿ ಡಕ್ಕೆ ಎನ್ನುವ ಚರ್ಮ ವಾದ್ಯದೊಂದಿಗೆ ಹೇಳುವ ಕ್ರಮವಿದೆ. ಈ ಕ್ರಮವನ್ನು ದೈವದ ಹೊಗಳಿಕೆ ಎಂತಲೂ ಕರೆಯಲಾಗಿದೆ. ತುಳು ಮಾತನಾಡುವ ಭಾಗದಲ್ಲಿ ದೈವಾರಾಧನೆಯ ಹುಟ್ಟು-ಕಟ್ಟು ಹೇಳುವ ಭಾಗವನ್ನು ಪಾಡ್ದನ, ಸಂಧಿ, ಬೀರ ಲೆಪ್ಪುನು ಎಂಬುದಾಗಿ ಕರೆಯುವರು.

ತುಳು ನಾಡಿನ ಭೂತಾರಾಧನೆ ಅಥವಾ ದೈವಾರಾಧನೆಯ ಪ್ರದರ್ಶನಗಳನ್ನು ನೇಮ, ಕೋಲು, ಮೆಚ್ಚಿ, ದೈವದ ಬಂಡಿ, ಆಯನ ಉತ್ಸವ ಎಂಬುದಾಗಿ ಕರೆಯುವರು. ಮೆಚ್ಚಿಯುಂತಹ ಪ್ರದರ್ಶನಗಳ ಬಹುತೇಕ ಹಗಲುವೇಳೆ ನಡೆದರೆ ಉಳಿದಂತೆ ನೇಮಕೋಲ, ಉತ್ಸವಗಳು ರಾತ್ರಿವೇಳೆಯೇ ಜರುಗುವಂತಹುದು ಇಲ್ಲಿನ ವಿಶೇಷವಾಗಿದೆ. ಐತಿಹಾಸಿಕವಾಗಿ ಇತ್ತೀಚಿಗೆ ದೊರಕಿದ ಮಂಗಳೂರು ಸಮೀಪದ ತೋಕೂರು ಶಾಸನ (ಸುಮಾರು 7ನೇ ಶತಮಾನ) ದೈವದ ಗುಡಿಯ ಸನಿಹದಲ್ಲಿ ದೊರಕಿದ್ದು ತೋಕೂರು ದೈವಕ್ಕೆ ಗದ್ದೆಯನ್ನು ಉಂಬಳಿಯಾಗಿ ಕೊಟ್ಟ ಪ್ರಸ್ತಾಪವಿದೆ. ಡಾ. ಅಶೋಕ ಆಳ್ವ ತಿಳಿಸುವಂತೆ ಪ್ರಸ್ತುತ ಈ ಶಾಸನವು ಅತ್ಯಂತ ಪ್ರಾಚೀನ ಶಾಸನವಾಗಿದ್ದು ಸುಮಾರು ಒಂದು ಸಾವಿರದ ನಾಲ್ಕುನೂರು ವರ್ಷಗಳಷ್ಟು ಪುರಾತನವಾದ



ಆಧಾರವು ದೈವಾರಾಧನೆಗೆ ಇದೆ ಎನ್ನುವುದು ಶ್ರುತಪಟ್ಟಿದೆ. ತೋಕೂರು ಶಾಸನ ಬಳಿಕ ನಮಗೆ ದೊರಕುವ ಮತ್ತೊಂದು ಶಾಸನ ನಂದಳಿಕೆಯ (11ನೇ ಶತಮಾನ) ಶಾಸನ. ಈ ಶಾಸನದಲ್ಲಿ ದೈವ ಎನ್ನುವ ಪದವಿರುವುದರಿಂದ ಭೂತಾರಾಧನೆಗೆ ಸಂಬಂಧಿಸಿದುದಾಗಿದೆ ಎಂದು ತಿಳಿಯಲಾಗಿದೆ.

ಶ್ರೀಮತಿ ಸುಶೀಲ ಉಪಾಧ್ಯಾಯ (1989 ಪು-9) ತಿಳಿಸುವಂತೆ ತುಳು ನಾಡಿನ ಭೂತಗಳ ಸಂಖ್ಯೆ ಐನೂರನ್ನು ದಾಟುತ್ತದೆ. ಅವುಗಳಲ್ಲಿ ಸುಮಾರು ಮೂವತ್ತು-ನಲವತ್ತು ಭೂತಗಳು ಹೆಚ್ಚು ಪ್ರಸಿದ್ಧವಾಗಿದ್ದು ಎಲ್ಲ ಕಡೆಗಳಲ್ಲಿ ಆರಾಧಿಸಲ್ಪಡುತ್ತವೆ ಎಂದಿರುವರು. ಸಜೀವಜೀವ ಪ್ರಭು ಕೆ. (1971) ಆಂಗ್ಲ ಕೃತಿಯಲ್ಲಿ 'Special Study on Bhuta Cult in South Kanara District' (Mysore Series-14) ಈ ಗ್ರಂಥದಲ್ಲಿ ತಿಳಿಸಿದಂತೆ ಸುಮಾರು 356 ಭೂತಗಳ ಹೆಸರಿನ ಪಟ್ಟಿಯನ್ನು ಮಾಡಿಕೊಡಲಾಗಿದೆ. ಡಾ. ಚಿನ್ನಪ್ಪ ಗೌಡ ಕೆ. ಪ್ರಕಾರ 360 ಭೂತಗಳ ಹೆಸರಿನ ಪಟ್ಟಿಯನ್ನು ಮಹಾ ಪ್ರಬಂಧದಲ್ಲಿ ನೀಡಿರುವರು, ಅಲ್ಲದೆ ಹೊಸ ಪಟ್ಟಿಯಲ್ಲಿ ಸೇರಬಹುದಾದ ಒಟ್ಟು 24 ಭೂತಗಳ ಹೆಸರಿನ ಪಟ್ಟಿಯನ್ನು ಮಹಾ ಪ್ರಬಂಧದಲ್ಲಿ ನೀಡಿರುವವರು. (ನೋಡಿ: ಚಿನ್ನಪ್ಪ ಗೌಡ ಕೆ. 1990, ಪು-39).



ಭೂತಾರಾಧನೆ ನಡೆಸಿಕೊಡುವ ಜನವರ್ಗದವರುಗಳಾದ ಪಾಣಾರ, ಪಂಬದ ಮತ್ತು ಪರವ ಈ ಕಲಾಕಾರರು ಬಹುತೇಕ ತಮ್ಮ ಆರಾಧನೆಯ ಸಂದರ್ಭದಲ್ಲಿ ತೆಂಗಿನ ತಿರಿ, ಅಡಕೆ ಹಾಳೆ, ಬಾಳೆ ದಿಂಡು, ಮತ್ತು ಪ್ರಾಕೃತಿಕವಾಗಿ ದೊರೆಯುವ ವಸ್ತುಗಳಿಂದ ದೈವಗಳನ್ನು ಅಲಂಕಾರ ಮಾಡುವುದು, ಮತ್ತು ಮುಖವಾಡಗಳನ್ನು ಶಿರೋಭೂಷಣಗಳನ್ನು ಮಾಡಿ ಧರಿಸಿಕೊಂಡು ಅವಗಾಹನೆಗೆ ಒಳಗಾಗುವುದು ಹಾಗೂ ಬೇಡಿದ ಭಕ್ತರ ಪ್ರಶ್ನೆಗಳಿಗೆ ನ್ಯಾಯ ತೀರ್ಪು ಕೊಡುವುದು ಹಾಗೂ ಆಶೀರ್ವಾದ ನೀಡುವುದು ಭೂತಾರಾಧನೆಯಲ್ಲಿ ಮುಖ್ಯವಾಗಿರುತ್ತವೆ.

ಪಾಣಾರ, ಪಂಬದ, ಪರವ ಜನವರ್ಗದವರುಗಳು ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಯಲ್ಲಿಯೂ ನಿಪುಣರು. ಭೂತಾರಾಧನೆಯಲ್ಲಿ ಧಾರ್ಮಿಕ ಆರಾಧನೆಯಾಗಿ ನಿರ್ಮಿಸುವ ಚಪ್ಪರದಲ್ಲಿ ಈ ಜನಾಂಗದವರ ಅನೇಕ ಕಲಾಗಾರಿಕೆಯನ್ನು ಗಮನಿಸಬಹುದಾಗಿದೆ. ಧಾರ್ಮಿಕ ಆಚರಣೆಯಲ್ಲಿ ನಿಶ್ಚಿತವಾದ ಅಲಂಕಾರಿಕ ವಸ್ತುಗಳ ಮೂಲಕ ದೈವ ಸಂತೃಪ್ತಿಗೊಳ್ಳುವುದೆಂದು ಭಾವಿಸಿರುವರು. ಇವರುಗಳು ಪ್ರಕೃತಿಯಲ್ಲಿ ದೊರಕುವ

ನಾರು, ಬೇರು, ಹುಲ್ಲು, ಚಿಗಿರು, ತೆಂಗಿನ ಗರಿ, ಬಾಳೆ ಪಟ್ಟೆ, ಅಡಕೆ ಹಾಳೆ ಅಲ್ಲದೆ ಕೆಲವು ಜಾತಿಯ ಮರದ ಎಲೆಗಳನ್ನು ಉಪಯೋಗಿಸಿ ಕಲಾಕೃತಿಗಳನ್ನು ರಚಿಸುವರು. ಧಾರ್ಮಿಕ ವಿಧಿಗೆ ಸಂಬಂಧಿಸಿದ ಚಪ್ಪರಗಳಲ್ಲಿ ಇಂದು ಹೆಚ್ಚಾಗಿ ವಿದ್ಯುತ್ ಅಲಂಕಾರದ ಬಣ್ಣದ ಬಲ್ಬ್‌ಗಳ ಜೋಡಣೆ ಹೊಸ ಮೆರಗನ್ನು ನೀಡಿರಬಹುದು. ಪೂರ್ವ ಪದ್ಧತಿಯಂತೆ ಎಳೆಯ ತೆಂಗಿನ ಗರಿಯನ್ನು ಹಲವು ಸೀಳುಗಳಾಗಿ ಆಕೃತಿಗಳನ್ನು ನಿರ್ಮಾಣ ಮಾಡುವುದು, ಗರಿಗಳ ಸೀಳುಗಳನ್ನು ಚಪ್ಪರದ ಅಂಚಿನಲ್ಲಿ ತೂಗು ಬಿಡುವುದು, ಅವುಗಳ ನಡುವೆ ವಿವಿಧ ರೀತಿಯ ಹಕ್ಕಿ, ಅಷ್ಟಾಕೃತಿ ಬರುವ ಆಕೃತಿ, ಕುದುರೆ, ಮೈನಾ ಹಕ್ಕಿ, ಕಲಶ ಹೀಗೆ ಅನೇಕ ಮಾದರಿಗಳನ್ನು ರಚಿಸಿ ಸಿಂಗರಗೊಳಿಸುವ ಈ ಕಲಾವಿದರ ಕಲಾ ಕೌಶಲ್ಯ ಎಲ್ಲರನ್ನು ಮೆಚ್ಚಿಸುವಂತಹದ್ದಾಗಿದೆ. ದುರಾದೃಷ್ಟವಶಾತ್ ಇಂತಹ ಸಿಂಗಾರಗಳು ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಲೋಕದ ಮೆರಗಿನಿಂದ ಧೂಳಿಪಟವಾಗಿದೆ ಮತ್ತು ಸಹಜವಾಗಿ ಕಲಾಕಾರರು ಸಣ್ಣಗುಡಿ ಕೈಗಾರಿಕೆಯ ಉತ್ಪನ್ನಗಳನ್ನು ಮಾಡುವುದರಲ್ಲಿ ನಿರಾಸಕ್ತಿ ಹೊಂದಿರುವರು. ಇವರು ತಯಾರಿಸುವ ಮುಟ್ಟಾಳೆ ಟೊಪ್ಪಿ, ಓಲೆಗರಿಯ ತತ್ರ, ಮುಂಡೋವು ಎನ್ನುವ ಸಸ್ಯ ಜಾತಿಯ ಎಲೆಯಿಂದ ನಿರ್ಮಾಣ ಮಾಡಿದ ಚಾಪೆಗಳು, ಈಚಲು ಎಲೆಯ ಚಾಪೆ, ಕಾಯಿಪಲ್ಲೆ ಶೇಖರಿಸಲು ಮಾಡಿಕೊಳ್ಳುವ 'ಚಾರಿದ ಒಲಿಬುಟ್ಟಿ' ಕಳಂಜನ ಮುಡಳೆ (ಮುಟ್ಟಾಳೆ-ಟೊಪ್ಪಿ), ಕೋಪಾಳನ (ನಲಿಕೆ ಜನವರ್ಗದವ) ಪಾಕೀಟು, ಊಟ ಮಾಡಲು ಮತ್ತು ಗಿಡಗಳಿಗೆ ನೀರು ಹಾಕಲು ಉಪಯೋಗಿಸುವ 'ಕೊಟ್ಟಂಬಾಳೆ ಚಿಳ್ಳಿ' ಮತ್ತು ಉಪ್ಪು ಅಥವಾ ಮೆಣಸಿನಕಾಯಿ ಶೇಖರಿಸಿಡಲು ಬಳಸುತ್ತಿದ್ದ ಮೂಡೆಗಳು, ಭೂತಾರಾಧನೆಯ ಅಲಂಕಾರಿಕ ವಸ್ತುಗಳಾದ 'ಕೈ ಪುಂಡಾ' (ಕೈಕಟು-ಅಲಂಕರಿಸುವ ವಸ್ತು) 'ಸೊಂಟದ ತಿರಿ' (ಸೊಂಟದ ಆಭರನ) 'ಮಂಡೆತ್ತ ಅಣಿ' (ಶಿರೋಭೂಷಣ) 'ಬೆರಿತ ಅಣಿ' (ಬೆನ್ನಿಗೆ ಅಲಂಕರಿಸುವ ಅಣಿ), ಮುಂದಲೆ (ತೆಂಗಿನ ಗರಿಯಿಂದ ಮಾಡಿದ ಅಲಂಕಾರಣ ಸಾಧನ) 'ಕೊರತಿಯ ಮುಡಿ' ಹೀಗೆ ಹಲವು ಕಲಾಗಾರಿಕೆ ಇವರಲ್ಲಿ ಅಂತರ್ಗತವಾಗಿದ್ದವು. ಆದರೆ ಇಂದು ಇವುಗಳ ಹೆಸರುಗಳನ್ನು ಅಲ್ಲಲ್ಲಿ ಕೇಳಬಹುದು ಹೊರತು ಸ್ವತಃ ನೋಡಲು ಸಿಕ್ಕುವುದು ದುರ್ಲಭವಾಗಿದೆ.

ಟಿಪ್ಪಣಿ-1 ಪ್ರಸ್ತುತ ಮಂಡಾಲ ಜನವರ್ಗದವರು ಕಂಗುಲು ಕುಣಿತ ಆರಾಧನ ಆಚರಣೆ ನಡೆಸುವುದು ತೀರಾ ಅಪರೂಪವಾಗಿದೆ. ಕಂಗುಲ-ಸಂಬಂಧವಾಗಿ ಎಸ್.ಎ. ಕೃಷ್ಣಯ್ಯ ಇವರು ಸಂಗ್ರಹಿಸಿದ ಕಥೆಯೊಂದು ಹೀಗಿದೆ. ಈ ಕಥೆಯ ಆಶಯದಂತೆ ಪ್ರಸ್ತುತ ಆಚರಣೆಯಲ್ಲಿ ಅಥವಾ ಕಂಗಿಲು ಕುಣಿತದಲ್ಲಿ ಈ ಕೆಳಗೆ ತಿಳಿಸಿದ ಕಥೆ ಅಥವಾ ಹಾಡು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಈ ಕಥೆಯು ಮುಂಡಾಲ ಜನವರ್ಗದವರಲ್ಲಿ ಪ್ರಚಲಿತವಿದ್ದುದನ್ನು ಅಧ್ಯಯನದಿಂದ ತಿಳಿಯಲಾಗಿದೆ.

**ಕಂಗುಲು ಸಿರಿ ಮಕ್ಕಳು ಹುಟ್ಟಿದ ಕಥೆ :** ಬಹಳಾ ಹಿಂದೆ ದೇಶದಲ್ಲಿ ಒಂದು ದೇವಾಲಯವಿದ್ದು ಅದರ ಪೂಜಾ ಕೈಂಕರ್ಯವನ್ನು ಭಟ್ಟರು ಮತ್ತು ಏಕಾಮಾತ್ರ ಪುತ್ರನು ನೋಡಿಕೊಳ್ಳುತ್ತಿದ್ದನು. ಅವರಲ್ಲಿ ರೆಕ್ಕೆ ಇರುವ ಕಾಮದೇನು ಆಕಳು ಇದ್ದಿತೆಂದು, ವರ್ಷದ ಪೂಜೆಯಲ್ಲಿ ಈ ಆಕಳು ಮಹಲಿಂಗೇಶ್ವರನಿಗೆ ಎಡೆಯಾಗಿ ಅರ್ಪಿಸಲು ತನ್ನ ಬಲಭಾಗದ ಮಾಂಸವನ್ನು ನೀಡುತ್ತಿತ್ತಂತೆ. ಒಮ್ಮೆ ಎಡೆಗಾಗಿ ಆಕಳು ತನ್ನ ಮಾಂಸ ನೀಡಿ ನೈವೇದ್ಯಕ್ಕೆ ಅರ್ಪಿಸುವ ಮುನ್ನ ಭಟ್ಟರ ಮಗನ ಹೆಂಡತಿ ತುಂಬು ಗರ್ಭಿಣಿಯಾಗಿದ್ದು ಈ ಎಡೆಯಲ್ಲಿ ಆಸೆ ಪಟ್ಟು ಯಾರಿಗೂ ತಿಳಿಯದಂತೆ ಭಕ್ಷಿಸುವಳು. ಆ ಬಳಿಕ ವಿಷಯ ತಿಳಿದ ಮಾವ ಸಿಡಿಮಿಡಿಗೊಂಡು ತನಗೆ ಒಲಿಯುತ್ತಿದ್ದ ಕಾಮದೇನು ಸಿಗದಂತಾಯ್ತೆಂದು ಸೊಸೆಯನ್ನು ಕಾಡಲ್ಲಿ ಕಡಿದು ಅವಳ ರಕ್ತ ತರುವಂತೆ ಮಗನಿಗೆ ಆದೇಶಿಸುವನು. ಗಂಡನಾದವನು ಹೆಂಡತಿಯನ್ನು ವಧಿಸಲು ಕಾಡಿಗೆ ಕರೆದೊಯ್ಯುವನು. ಸ್ವತಃ ಗಂಡನಾದವನಿಗೆ ತುಂಬು ಗರ್ಭಿಣಿಯಾದ ಹೆಂಡತಿಯನ್ನು ವಧಿಸಲು ಮನಸ್ಸು ಹಿಂಜರಿಯಿತು. ಬದಲಾಗಿ 'ಬೋಂಕೆ' ಮರದ ತೊಗಟೆ ರಸವನ್ನು (ರಕ್ತದ ಬಣ್ಣವಿರುವಂತಹುದು) ಹಾಗೂ ಕಾಗೆಯನ್ನು ಕೊಂದು ಅದರ ಕರುಳನ್ನು ಜೊತೆಗೂಡಿಸಿ ತನ್ನ ತಂದೆಗೆ ವಧಿಸಿ ಬಂದ ಕುರುಹನ್ನು ತಿಳಿಸುವನು. ಹೀಗೆ ಕಾಡಲ್ಲಿ ಜೀವ ಉಳಿಸಿಕೊಂಡ ಈ ಹೆಣ್ಣಿನ ಹುಟ್ಟುವ ಮಕ್ಕಳೇ ಮುಂದೆ ಕಂಗುಲು ಕುಣಿಯುವ ದೇವರ ಮಕ್ಕಳಾದರೆಂಬುದು ಒಂದು ದಂತ ಕತೆ. ಈ ಕಂಗುಲು ಕುಣಿತದ ಭಾಗದಲ್ಲಿ ಕಡೆಗಣ ಎಂಬ ವೇಷವಿದೆ. ಈತನು ಕೊರಗ ತನಿಯನ ಮತ್ತೊಂದು ರೂಪವೆಂದು ಇನ್ನು ಕೆಲವರ ಪ್ರಕಾರ ಹುಲಿಯಂತೆ ಅಬ್ಬರಿಸುವ ಹುಲಿ ಅಂಶವಿರುವ ವ್ಯಾಗ್ರದೇವತಾ ರೂಪವೆಂದು ಭಾವಿಸಿರುವರು.

ಕಥೆಯ ಅಂತ್ಯದಲ್ಲಿ ರೆಕ್ಕೆ ಇರುವ ನಂದಿ ಸಾವನ್ನಪ್ಪುವುದು. ಈ ನಂದಿಯನ್ನು ಸಂಸ್ಕಾರ ಮಾಡಿದ ಸ್ಥಳದಲ್ಲಿ ಕಾಡು ತೆಂಗಿನ ಮರ ಹುಟ್ಟುವುದು. ಇದರ ಸಿರಿಯನ್ನು ಧರಿಸಿಕೊಂಡು ಆಚರಣೆಯನ್ನು ಕಾಡಿನಲ್ಲಿ ನಡೆಸುತ್ತಿದ್ದರೆಂಬ ನಂಬಿಕೆ ಇಂದಿಗೂ ಮುಂಡಾಲ ಜನಾಂಗದವರಲ್ಲಿದೆ. ಹೀಗಾಗಿ ಇವರನ್ನು ಕಂಗುಲದ ಜೋಕುಲು ಎಂದು ತುಳುವಿನ ಪಾಡ್ದನದಲ್ಲಿ ಕರೆಯಲಾಗಿದೆ. (ಆಧಾರ: ಕ್ಷೇತ್ರಕಾರ್ಯ ಮಾಹಿತಿ 12–02–1996) ತೆಂಗಿನ ಸಿರಿಯನ್ನು ಧರಿಸಿಕೊಂಡು ಕುಣಿದುದರ ಪ್ರಯುಕ್ತ ಇವರನ್ನು ಕಂಗುಲದ ಜೋಕ್ಲು ಅಥವಾ ತೆಂಗಿನ ಸಿರಿ ಧರಿಸಿದ ಮಕ್ಕಳು ಅಥವಾ ಸಿರಿ ಮಕ್ಕಳು ಎಂದು ಕರೆದಿರುವುದು ಕಂಗುಲು ಕಣಿತದಲ್ಲಿ ಬರುವ ಪಾಡ್ದನಗಳಿಂದ ಅಭಿವ್ಯಕ್ತಗೊಂಡಿರುವುದು.

**ವಿಶೇಷ ಟಿಪ್ಪಣಿ**

1. ಕಂಗುಲು ಪಾತ್ರಧಾರಿಗಳು ತಮ್ಮ ತಿರುಗಾಟದ ವೇಳೆ ಸುಮಾರು ರಾತ್ರಿ 2ರ ಜಾಮದ ತನಕ ಮನೆ ಮನೆಗೆ ಹೋಗಿ ಪಡಿಕಾಣಿಕೆ ಪಡೆಯುವರು.

2. ಕಂಗುಲು ಪಾತ್ರಧಾರಿಗಳು ಮನೆಯ ಅಂಗಳಕ್ಕೆ ಬಂದಾಗ ಯಾರ ಅಪ್ಪಣೆಯೂ ಇಲ್ಲದೆ ತೋಟದ ಅಥವಾ ಮನೆಯ ಅಂಗಳದಲ್ಲಿನ ಹೂವು–ಹಣ್ಣು–ಕಾಯಿಗಳನ್ನು ಕೀಳುವ ಅಧಿಕಾರವಿರುತ್ತದೆ. ಈ ಒಂದು ಸಂದರ್ಭದಲ್ಲಿ ಪ್ರಶ್ನಿಸುವ ಅಧಿಕಾರವಿರುವುದಿಲ್ಲ. ಒಂದು ವೇಳೆ ಪ್ರಶ್ನಿಸಿದರೆ ಸ್ಥಳೀಯ ದೈವ ಸಾನಿಧ್ಯದಲ್ಲಿ ಒಂದು ತೆಂಗಿನಕಾಯಿ (ಇಡುಗಾಯಿ) ಒಡೆಸಬೇಕಾಗುತ್ತದೆ.

3. ಭಕ್ತಾದಿಗಳು ಕಂಗಲು ಪಾತ್ರಧಾರಿಗಳು ಬಂದಾಗ ಕೆಲವೊಮ್ಮೆ ಹರಕೆಯನ್ನು ಒಪ್ಪಿಸುತ್ತಾರೆ, ಈ ಹರಕೆಯನ್ನು ಕಡೆಗಣ–ವೇಷದಾರಿ ಸ್ವೀಕರಿಸಿ ಆರ್ಶೀವಾದ ಕೊಡುವುದು ಪದ್ಧತಿಯಲ್ಲಿರುವುದು.

4. ಕಂಗುಲು ಪಾತ್ರಧಾರಿಗಳು ಮೊದಲಾಗಿ ಆಯಾಯಾ ಸ್ಥಳದ ಗುತ್ತು, ಬರ್ಕೆ ಮನೆತನದ ಗೌರವವನ್ನು ಆಧರಿಸಿ ಪ್ರವೇಶ ಮಾಡುತ್ತಾರೆ. ಕಂಗಲು ಕುಣಿತದವರು ಬರುವ ಮುನ್ನ ಆಯಾಯಾ ಮನೆಯವರು ಅಂಗಳದಲ್ಲಿ ತುಳಸಿ ಕಟ್ಟೆಯಲ್ಲಿ ಇರಿಸಿ ಕುಣಿತ ಸಾಂಗವಾಗಿ ನೆರವೇರುವುದು. ಕುಣಿಯುವಾಗ ಹೇಳುವ ಹಾಡುಗಳು ಆ ಸ್ಥಳದಲ್ಲಿನ ಜಾತಿಗೆ ಅನುಗುಣವಾಗಿ ಹಾಡುಗಳನ್ನು ಅಥವಾ ಪಾಡ್ದವನ್ನು ಹೇಳುವರು. ಉದಾಹರಣೆಗೆ ಶೆಟ್ಟರು ಅಥವಾ ಬಂಟರ ಮನೆಯಲ್ಲಿ ಹೇಳಿದ ಜಾತಿ ಸೂಚಿತ ಹಾಡನ್ನು ಮತ್ತೊಂದು ಜಾತಿವರ್ಗದವರ ಮನೆಯಲ್ಲಿ ಹೇಳುವುದು ಇಲ್ಲ. ಪ್ರತಿಯೊಂದು ಜಾತಿಯ ಮನೆಗೆ ಹೋದಾಗ ಆಯಾಯ ಜಾತಿಯ ವಿಶೇಷಗಳನ್ನು ಪ್ರಧಾನ ಆಶಯವಾಗಿರಿಸಿಕೊಂಡು ಹಾಡು ನರ್ತನ ನಡೆಸುವರು. ಕುಣಿತದ ಬಳಿಕ ಮುಖ್ಯ ಗುತ್ತಿನ ಮನೆಯವರಾದರೆ ಅವರುಗಳಿಂದ ಹಿಡಿಸೂಡಿ ಹಾಗೂ ಒಂದು ತೆಂಗಿನಕಾಯನ್ನು ಗುತ್ತಿನ ಕಾಣಿಕೆಯಾಗಿ ಪಡೆಯುವುದು. ಈ ಎಲ್ಲಾ ಕಾಣಿಕೆಗಳನ್ನು ಪಡೆಯುವ ಉದ್ದೇಶವಾದರೂ ಊರಿನ ಮಾರಿಯನ್ನು ಅಥವಾ ಪೀಡೆ–ಅನಿಷ್ಠವನ್ನು ತೊಲಗಿಸಲು ಬಂದ ಕಂಗುಲು ಮಕ್ಕಳಿಗೆ ಕೊಡುವುದು ಒಂದು ಸಂಪ್ರದಾಯವಾಗಿದೆ ಎಂದು ಹಿರಿಯರ ಅಭಿಪ್ರಾಯವಾಗಿದೆ.

5. ಕಂಗುಲು ಕುಣಿತದವರು ಮನೆಯ ಅಂಗಳಕ್ಕೆ ಬರುವ ಮುನ್ನ ಅಂಗಳದಲ್ಲಿ ದೀಪ ಹಚ್ಚಿಡುವುದು ಸಂಪ್ರದಾಯ. ಕಂಗುಲು ಕುಣಿತದವರು ಭಕ್ತಾದಿಗಳ ಮನೆಯ ಅಂಗಳಕ್ಕೆ ಬಂದಾಗ ಬೆಲ್ಲ–ನೀರು ಕೊಟ್ಟು ಉಪಚರಿಸುವರು. ಆ ಬಳಿಕ ನೃತ್ಯ–ಹಾಡುಗಾರಿಕೆ ಸಾಗುವುದು. ಕಂಗುಲು ಕುಣಿತದ ತರುವಾಯ ಮನೆಯ ಹಿರಿಯರು ಈ ಜನವರ್ಗದವರಿಗೆ ದಾನವಾಗಿ ಒಂದು ಕಳಸಿಗೆ ಭತ್ತ ಅಥವಾ ಅಕ್ಕಿ ನೀಡಿದರೆ 'ಕಡೆಗಣ' ವೇಷಧಾರಿಗೆ ಏಳು ಸೇರು ಭತ್ತ ಒಂದು ತೆಂಗಿನಕಾಯಿ–ಕಾಣಿಕೆಯಾಗಿ ಕೊಡುವುದು ಸಂಪ್ರದಾಯದ ನಿಯಮವಾಗಿದೆ.

6. ತಿರುಗಾಟದ ಕೊನೆಯ ದಿನ, ಹಗಲಿನಲ್ಲಿ ಕಟ್ಟಿದ ತೆಂಗಿನ ಸಿರಿ ಲಂಗವನ್ನು, ಇಳೆಬಿಟ್ಟ ಶಿರಸ್ತ್ರಾಣ ಸಿರಿಯ ಟೊಪ್ಪಿಗೆ ಎಲ್ಲವನ್ನು ತೆಗೆದಿರಿಸಿ ಗುಂಪಾಗಿ ನರ್ತಿಸುವುದು ಆಚರಣೆಯ ಹಂತ. ಈ ಸಂದರ್ಭದಲ್ಲಿ ಕೆಲವರು ಆವೇಶಕ್ಕೆ ಒಳಗಾಗುವರು. ಬಳಿಕ ತಪ್ಪದೆ ಬೂಳ್ಯ ಎಡೆ ಅರ್ಪಿಸುವರು, ವಿಶೇಷವಾಗಿ ಮಾಡಿದ ರೊಟ್ಟಿಯ ಮುಖ್ಯ ಭಾಗವಾಗಿರುತ್ತದೆ. ಈ ಎಲ್ಲಾ ವಿಧಿಗಳು ಕಾನನದಲ್ಲಿ ನಡೆಸುವರು.

7. ಕಡೆಗಣ ವೇಷಧಾರಿಯ ಕೈಯಲ್ಲಿ ಒಂದು ಕೋಲು (ದಂಟೆ) ಮತ್ತು ಹೆಗಲಿಗೆ ಜೋತು ಬೀಳುವ 'ಅಜೆ–ಕುರುವೆ' (ಬುಟಿ) ಇರುತ್ತದೆ, ಮೈ–ತುಂಬಾ ಮಸಿಯನ್ನು ಬಳಿದುಕೊಂಡಿರುತ್ತಾನೆ, ತಲೆಗೆ ಉದ್ದವಾಗಿ ಇರಿಸಿದ ಮುಟ್ಟಾಳೆಯನ್ನು ಧರಿಸಿಕೊಂಡಿರುತ್ತಾನೆ. ಕೊರಗತನಿಯ ಹಾಕಿಕೊಳ್ಳುವ ಟೊಪ್ಪಿಗೆ ಎರಡೂ ಬದಿಯಲ್ಲಿ ಮಡಿಚಿದಾರದಿಂದ ಕಟ್ಟಲ್ಪಟ್ಟಿರುತ್ತದೆ. ಸೊಂಟಕ್ಕೆ ವಿಶಿಷ್ಟವಾದ ಬೆಲ್ಟ್ ಇರುತ್ತದೆ, ತೋಳಿನಲ್ಲಿ ತಾಯತ ಇಂತಿಷ್ಟು ಈತನ ವೇಷ–ಭೂಷಣವಾಗಿರುತ್ತದೆ. ಈ ಬುಟ್ಟಿಯಲ್ಲಿ ಓಲೆ–ಬೆಲ್ಲ, ಗೆಜ್ಜೆಕತ್ತಿ ಇರುವುದು ನಿಯಮ. ಕಡೆಗಣವೇಷವು ಶ್ರೀ ಕೃಷ್ಣಾಷ್ಟಮಿಗೆ ಹಾಕುವ ಕೊರಗ ತನಿಯನ ವೇಷವೇ ಆಗಿರುತ್ತದೆ. ಈತನನ್ನು ಕೊರಗ ತನಿಯ ಅಥವಾ ಕಡೆಗಣ ಎಂದು ಕರೆಯುವುದು.

8. ಕಂಗುಲು ಕುಣಿತದ ಕೊನೆಯ ದಿನ ಧರಿಸಿದ ಸಿರಿ ಎಳೆಯನ್ನು ತೆಗೆಯುವುದು ಒಂದು ವಿಧಿ. ಈ ವಿಧಿಯನ್ನು ಸಾಮಾನ್ಯವಾಗಿ ಕಾನನದಲ್ಲಿ (ಕಾಡಿನಲ್ಲಿ) ನಡೆಸುವರು. ಕಡೆಗಣ ಹಿಡಿದುಕೊಂಡ 'ಅಜೆಕುರವೆಯಲ್ಲ' ಇರುವ 'ಓಲೆ–ಬೆಲ್ಲ'ವನ್ನು ಪ್ರಸಾದವಾಗಿ ಎಡೆಯಲ್ಲಿ ಇಡಲಾಗುವುದು. ಹಣ್ಣು–ತೆಂಗಿನಕಾಯಿ ನೇವೇದ್ಯ ಸಮರ್ಪಿಸಿದ ಬಳಿಕ ಕಂಗುಲು ಪಾತ್ರಧಾರಿಗಳು ಶುದ್ಧ ಸ್ನಾನ ಮಾಡಿ ಪುನರಪಿ ಕುಟುಂಬವನ್ನು ಸೇರಿಕೊಳ್ಳುವರು.

**ಕೆಲವು ನಿಷೇಧಗಳು**

1. ಕಂಗುಲು ಕುಣಿಯುವವರು ಹೆಂಗಸರನ್ನು ಮುಟ್ಟಿಸಿಕೊಳ್ಳುವಂತಿಲ್ಲ.

2. ಕಂಗುಲು ಪಾತ್ರಧಾರಿಗಳು ಧರಿಸಿದ ತೆಂಗಿನ ಸಿರಿ ಎಳೆಯನ್ನು ಯಾವ ಕಾರಣಕ್ಕೂ ಕೆಳಗೆ ಬೀಳಿಸಬಾರದು.

3. ಕಂಗುಲು ಪಾತ್ರಧಾರಿಗಳು ಆಚರಣಾ ಸಮಯದಲ್ಲಿ ಚಹಾ ಸೇವನೆ ವಿನಃ ಬೇರೇನು ಆಹಾರ ತೆಗೆದುಕೊಳ್ಳುವಂತಿಲ್ಲ.

**ಕೃತಜ್ಞತೆ**

ಈ ಲೇಖನಕ್ಕೆ ಬಳಸಿದ ಮಾಹಿತಿಗಳನ್ನು ಉಡುಪಿಯ ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದ ಕ್ಷೇತ್ರಕಾರ್ಯ ದಾಖಲೀಕರಣ ಮಾಧ್ಯಮದಿಂದ ಆಂಶಿಕವಾಗಿ ಆಯ್ದುಕೊಳ್ಳಲಾಗಿದೆ.

ಭೂತಾರಾಧನೆಗೆ ಸಂಬಂಧಿಸಿದಂತ ಹೆಚ್ಚು ತಿಳಿಯ ಬಯಸುವವರು ಈ ಕೆಳಗಿನ ಕೃತಿಗಳನ್ನು ಪರಾಮರ್ಷನ ಮಾಡುವುದು.

ಅಮೃತ ಸೋಮೇಶ್ವರ 1978, 'ಅವಿಲು' ಕನ್ನಡ ಸಂಘ, ವಿವೇಕಾನಾಂದ ಕಾಲೇಜು, ಪುತ್ತೂರು.

ಅಮೃತ ಸೋಮೇಶ್ವರ, 1984, 'ತುಳು ಬದುಕು' ಪ್ರಕೃತಿ ಪ್ರಕಾಶನ, ಕೋಟೆಕಾರು.

ಚಿನ್ನಪಗೌಡ ಕೆ. (ಡಾ) 1985 'ಜಾಲಾಟ', ಚಿಂತನ ಪ್ರಕಾಶನ, 574 240.

ಚಿನ್ನಪ್ಪ ಗೌಡ ಕೆ. 1990, ಪುಟ 9–10 'ಭೂತಾರಾಧನೆ ಜಾನಪದೀಯ ಅಧ್ಯಯನ' ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು.

ಪೀಟರ್ ಜೆ. ಕ್ಲಾಸ್, 1987, 'ತುಳುವು ದರ್ಶನ' (ಅನುವಾದ : ಎ. ವಿ. ನಾವಡ ಮತ್ತು ಶುಭಾಶ್ಚಂದ್ರ) ಪ್ರ: ಪ್ರಾದೇಶಿಕ ಜಾನಪದ ವ್ಯಾಸಂಗ, ಕುಂದಾಪುರ.

ಪುರುಷೋತ್ತಮ ಬಿಳಿಮಲೆ (ಡ) 1990 'ಕರಾವಳಿ ಜಾನಪದ', ಮಂಗಳ ಗಂಗೋತ್ರಿ 577 199.


ರಾಷ್ಟ್ರಕವಿ ಗೋವಿಂದ ಪೈ 1953, ಪು–190 'ಜಯ ಕರ್ನಾಟಕ' 5 ಫೆಬ್ರವರಿ 1953ರಲ್ಲಿ ಜರುಗಿದ ಸಾಂಸ್ಕೃತಿಕ ಉತ್ಸವದ ಅಧ್ಯಕ್ಷ ಭಾಷಣ.

ವಿವೇಕ ರೈ (ಡಾ) 1985, ಪು–276 'ತುಳು ಜನಪದ ಸಾಹಿತ್ಯ' ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–18.

ಮದೂರಕಾನನ ಗೋಪಾಲ ಕೃಷ್ಣ ಬಟ್ಟ 1985, ಪು. 128–129 'ಜಾನಪದ ಕಾಸಾರ' (ಸಂ. ವೆಂಕಟರಾಜ ಪುಣಿಂಚಿತ್ತಾಯ) ಜಾನಪದ ಮತ್ತು ಯಕ್ಷಗಾನ ಕಲಾ ಮಹೋತ್ಸವ ಸಮಿತಿ 1984–85, ಕಾಸರಗೋಡು.

ಸುಶೀಲ ಉಪಾಧ್ಯಾಯ (ಡಾ), 'ಜನಪದ ಆರಾಧನೆ ಮತ್ತು ರಂಗ ಕಲೆ' ಪ್ರ: ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರ, ಉಡುಪಿ – 576 102.

ಎಸ್. ಎ. ಕೃಷ್ಣಯ್ಯ, 1989 (ಸಂ. ಕ. ವೆಂ. ರಾಜಗೋಪಾಲ) 'ತುಳುವರ ಆಚರಣೆಗಳಲ್ಲಿ ಕಲಾವಂತಿಕೆ' ಪ್ರ: ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.






# ಹಾಡು ಹಾಡುತ್ತಲೇ ಕಾಲವಶರಾದ ಕಲಾವಿದ ನೀಲಗಾರ ಮೋಳೆ ರಾಜಶೆಟ್ಟರ ರೋಚಕ ಕತೆ

ಡಾ.ವೆಂಕಟೇಶ ಇಂದ್ವಾಡಿ

ದಿನಾಂಕ 10.10. 1916ರ ಆಯುಧ ಪೂಜೆಯ ದಿನ, ನೀಲಗಾರ ಮೌಖಿಕ ಕಾವ್ಯ ಪರಂಪರೆಯ ಕೊನೆಯ ಕೊಂಡಿಯಂತ್ತಿದ್ದ ಕಲಾವಿದ ಮೋಳೆ ರಾಜಶೆಟ್ಟರು ವಿಧಿವಶರಾದರು. ಅವರ ನನ್ನ ಇಪ್ಪತ್ತೈದು ವರ್ಷಗಳ ಒಡನಾಟದ ಒಂದು ನೆನಪಿನ ಶ್ರದ್ಧಾಂಜಲಿ ಲೇಖನವಿದು. 1992 ನಾನು ಕನ್ನಡ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ್ದೆ. ಎಂ.ಎ ಸ್ನಾತಕೋತ್ತರ ಪದವಿ ಮುಗಿಸಿ ಪಾಠ ಮಾಡಿಕೊಂಡಿದ್ದ ನಮಗೆ ಸಂಶೋಧನೆಗೆಂದೇ ಸ್ಥಾಪನೆಯಾಗಿದ್ದ ಕನ್ನಡ ವಿ.ವಿ,ಯಲ್ಲಿ ಸಂಶೋಧನೆ ಎಂಬುದು ನಮಗೊಂದು ಸವಾಲಾಗಿತ್ತು. ನಾನು 'ಮಂಟೇಸ್ವಾಮಿಗಳ ಒಕ್ಕಲುಗಳ ಅಧ್ಯಯನ' ಎಂಬ ಪ್ರಸ್ತಾವವನ್ನು ಸಲ್ಲಿಸಿ ಉತ್ತರದೇಶ ಹಂಪಿಯಿಂದ ಕತ್ತಲರಾಜ್ಯವಾದ ಕಾವೇರಿ ತಪ್ಪಲಿನ ಚಾಮರಾಜನಗರಕ್ಕೆ ಬಂದೆ. ನನ್ನ ಮೊದಲ ಹಂತದ ಕೆಲಸ ಧರೆಗೆ ದೊಡ್ಡವರಾದ ಮಂಟೇಸ್ವಾಮಿಗಳ ಬಗ್ಗೆ ಇರುವ ಅಪಾರವಾದ ಮೌಖಿಕ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸುವುದಾಗಿತ್ತು. ಆ ಭಾಗದಲ್ಲಿ ಈಗಾಗಲೇ ನೂರಾರು ಮೇಳಗಳನ್ನು ನಡೆಸಿ ಪ್ರಸಿದ್ಧಿಯಾಗಿದ್ದ ಉಪ್ಪಿನ ಮೋಳೆ ರಾಜಶೆಟ್ಟರು 'ದೊಡ್ಡವರ ಕತೆಯಲ್ಲಿ ಅವನಿಗೆ ಸರಿಸಾಟಿ ಯಾರು ಇಲ್ಲ' ಎನ್ನುವಷ್ಟು ಅವರು ಕೀರ್ತಿ ಪಡೆದಿದ್ದರು. ನಾನು ನನ್ನ ಕ್ಷೇತ್ರಕಾರ್ಯದ ಪರಿಕರಗಳನ್ನೆಲ್ಲ ಹೊತ್ತುಕೊಂಡು ಉಪ್ಪಿನ ಮೋಳೆಗೆ ಹೋದೆ. ತುಂಬಾ ಕುಗ್ರಾಮವಾಗಿದ್ದ ಮೋಳೆ ಕೊಳಚೆ ನೀರಿನಿಂದ ನಾರುತ್ತಿತ್ತು. ನಾನು ತಂಬೂರಿ ರಾಜಶೆಟ್ಟರ ಮನೆ ಯಾವುದು ಎಂದು ಒಬ್ಬನನ್ನು ಕೇಳಿದಾಗ

ಅನತಿ ದೂರದಲ್ಲಿ ಕಿತ್ತು ತೂರಾಡುತ್ತಿದ್ದ ಗುಡಿಸಲನ್ನು ತೋರಿಸಿ ಅದೇ ಎಂದರು . ಇವನು ಕಲಾವಿದನೋ, ಜೋಗಿಯೋ, ಪರದೇಶಿಯೋ ಎಂದು ಒಂದು ಕ್ಷಣ ಗೊಂದಲವಾಯಿತು. ಆ ಗುಡಿಸಿಲಿನ ಹತ್ತಿರ ಹೆಂಗಸರು ಮಕ್ಕಳು ಎಲ್ಲರು ಇದ್ದರು. ನಾನು ನನ್ನ ಪರಿಚಯ ಮಾಡಿಕೊಂಡು, ರಾಜಶೆಟ್ಟರು ಎಲ್ಲಿ ಎಂದು ಕೇಳಿದೆ. 'ಅವರ್ಗ ಉಷಾರಿಲ್ಲ ಮೈಸೂರು ದೊಡ್ಡ ಅಸ್ಪತ್ರ ಸೇರ್ಕಂಡವ್ರ' ನಾನು ನಂತರ ಅವರನ್ನು ಹುಡಿಕಿಕೊಂಡು ಕೆ.ಆರ್. ಅಸ್ಪತ್ರೆಗೆ ಬಂದೆ, ಜನರಲ್ ವಾರ್ಡಿನಲ್ಲಿ ರಾಜಶೆಟ್ಟರು ಅನಾಥವಾಗಿ ಬಿದ್ದಿದ್ದರು, ಅವರು ನಿಸ್ತೇಜರಾಗಿ ಮಾತನಾಡಲು ಸಾಧ್ಯವಾಗದೆ ಸಾವು ಬದುಕಿನ ಜೊತೆ ಸೆಣಸಾಡುತ್ತಿದ್ದರು. ಅವರು ಕತೆ ಮಾಡುವುದು ಇರಲಿ ಬದುಕಿ ಬಂದರೆ ಸಾಕು ಎಂದು ಕೈ ಮುಗಿದು ಹಿಂತಿರುಗಿದೆ.

ಎಷ್ಟೊ ತಿಂಗಳುಗಳು ಕಳೆದ ಮೇಲೆ ಕೊಳ್ಳೇಗಾಲದ ಸ್ನೇಹಿತನ ರೂಮಿನಲ್ಲಿ ಮಲಗಿದ್ದೆ. ದೂರದಿಂದ ಧರೆಗೆ ದೊಡ್ಡವರ ಕತೆಯನ್ನು ಯಾರೋ ಸುಶ್ರಾವ್ಯವಾಗಿ ಹಾಡುತ್ತಿದ್ದದ್ದು ತಣ್ಣಗೆ ಕಿವಿ ಮುಟ್ಟಿತು. ನನ್ನ ಮೈನೆಲ್ಲಾ ಕಿವಿಮಾಡಿ ಕೇಳಿಸಿಕೊಂಡೇ ಅದು ದೊಡ್ಡವರ ಕತೆ ಎಂಬುದು ಖಚಿತವಾಯಿತು. ಆ ದನಿಯನ್ನೇ ಹುಡಿಕಿಕೊಂಡು ಆ ಸ್ಥಳವನ್ನು ತಲುಪಿದೆ. ಒಂದು ಚಪ್ಪರ ಅದರ ಕೆಳಗೆ ನೂರಾರು ಜನರು, ವೇದಿಕೆಯಲ್ಲಿ ತನ್ನ ಮೇಳದವರೊಂದಿಗೆ ರಾಜಣ್ಣ ರಾಜನಂತೆ ಕೂತು ತಂಬೂರಿ ಹಿಡಿದು ವಾಲಾಡುತ್ತಾ ಮೈ ಮರೆತಂತೆ ಹಾಡುತ್ತಿದ್ದ. ಇದು ನಿಜವೋ, ಭ್ರಮೆಯೋ ಕಣ್ಣನ್ನು ಉಜ್ಜಿ ಮತ್ತೊಮ್ಮೆ ನೋಡಿದೆ. ಆದರೂ ನಂಬಿಕೆ ಬರಲಿಲ್ಲಾ. ಪಕ್ಕದಲ್ಲಿ ಕುಳಿತಿದ್ದ ಒಬ್ಬರನ್ನು ಇಲ್ಲಿ ಹಾಡುತ್ತಿರುವವರು ಯಾರು ಎಂದು ಕೇಳಿದೆ 'ಅವ್ರು ಮೋಳೆ ರಾಜಶೆಟ್ಟರು' ಎಂದಾಗ ಖಚಿತವಾಯಿತು. ನಾನು ರಾತ್ರಿಯಲ್ಲಾ ಕತೆ ಕೇಳಿ ಆನಂದಿಸಿ ಕಳೆದು ಹೋದ ಭಾಗ್ಯ ಸಿಕ್ಕವನಂತೆ ಮನೆಗೆ ಬಂದೆ. ಇದಾದ ನಾಳೆಗೆ ಮತ್ತೆ ಅವರ ಗುಡಿಸಿಲಿಗೆ ಹೋದೆ. ರಾಜಣ್ಣ ಜಗಲಿ ಮೇಲೆ ಬೀಡಿ ಸೇದುತ್ತಾ ಕುಂತಿದ್ದರು. ನನ್ನ ಪ್ಯಾಂಟ್ ಶರ್ಟ ಬ್ಯಾಗ್ ಗಳನ್ನು ನೋಡಿ ಸ್ವಲ್ಪ ಅನುಮಾನದಿಂದಲೇ 'ನೀವ್ಯಾರ' ಎಂದರು. ನಾನು ಇಂದ್ವಾಡಿ ಮೇಸ್ತ್ರ ಮಗ ಎಂದಾಗ ಸ್ವಲ್ಪ ಸಮಾದಾನವಾದರು. 'ಏನು ಕತ ಮಾಡಕ ಕರಿಯಕಾ ಬಂದಿದ್ದರ್‍ಯಾ' ಇಲ್ಲ, ನಾನು ನನ್ನ ಯೋಜನೆಯ ಉದ್ದೇಶವನ್ನು ವಿವರಿಸಲು ಪ್ರಯತ್ನಿಸಿದೆ. ಅದರ ತಳಬುಡ ಒಂದು ಅವರಿಗೆ ಅರ್ಥವಾಗಲಿಲ್ಲ, ನೇರ ವಿಷಯಕ್ಕೆ ಬಂದೆ ನನಗೆ ನೀವು ಹಾಡುವ ಧರೆಗೆ ದೊಡ್ಡವರ ಕತೆಯ ಪೂರ್ಣಪಾಠ ಬೇಕು, ಅದನ್ನು ಪುಸ್ತಕವಾಗಿ ತರುತ್ತೇನೆ ಎಂದೆ, ತಕ್ಷಣ ಸಿಡುಕಿನಿಂದ 'ನೀವು ಪುಸ್ತಕ ಮಾಡಿ ದುಡ್ಡ ಮಾಡ್ಕಳಿ, ನಾಮು ಭಿಕ್ಷ ಮಾಡ್ಕಂಡು ಊರೂರು ತಿರುಗತ್ತಿವಿ' ಎಂದು ಕಟುವಾಗೆ ನುಡಿದರು. ರಾಜಣ್ಣ ತನಗೆ ಗೊತ್ತಿಲ್ಲಾದಗೆ, ಬಹು ದೊಡ್ಡ ತಾತ್ವಿಕ ಪ್ರಶ್ನೆಯನ್ನ ನನ್ನ ಮುಂದಿಟ್ಟಿದ್ದ, ಹೌದು ನಾವು ಇವರ ನೂರಾರು ದಿನಗಳ ಪರಿಶ್ರಮದ ಜ್ಞಾನದ ಸರಕುಗಳನ್ನು ಬರೆದುಕೊಂಡು ಸಂಪಾದಕ ಎನ್ನುವ ಹೆಸರಿನಲ್ಲಿ ನಮ್ಮ ಕಾಫಿರೈಟ್‌ನ್ನು ಸ್ಥಾಪಿಸುತ್ತೇವೆ. ಆದರೆ ಇದರ ಮೂಲ ಕರ್ತೃವಿಗೆ ಯಾವ ಕ್ರೆಡಿಟ್ ಇರುವುದಿಲ್ಲ. ಇದು ವಸಹಾತುಷಾಹಿ ಸೃಷ್ಟಿದ ಬಿಕ್ಕಟ್ಟು ನಮ್ಮ ಶಿಕ್ಷಣದಲ್ಲಾಗಲಿ, ಬರಹ ಪರಂಪರೆಯಲ್ಲಾಗಲಿ, ಯಾವುದೇ ಬರಹಕ್ಕೂ ಒಬ್ಬ ಹಕ್ಕುದಾರನನ್ನು ಕೇಳುತ್ತದೆ. ಆದರೆ ಜನಪದರು ಜ್ಞಾನ ಸಮಷ್ಟಿ ರೂಪದ್ದು.ಉದಾ: ಒಬ್ಬ ಕಲಾವಿದನ್ನು 'ನಿನಗೆ ಈ ಜ್ಞಾನ(ಹಾಡುವದು , ಪ್ರದರ್ಶನಕಲೆ ಅಥವಾ ಯಾವುದೇ ಮೌಖಿಕ ಅಭಿವ್ಯಕ್ತಿಯಾಗಿರಬಹುದು)ಹೇಗೆ ಬಂತು' ಎಂದು ಕೇಳಿದರೆ 'ಅದು ನನ್ನ ಗುರುವಿನಿಂದ' ಎಂದು ಹೇಳುತ್ತಾ. ಆ ಗುರುವನ್ನು ಕೇಳಿದರೆ ಅವನ ಗುರುವಿನ ಹೆಸರು ಹೀಗೆ ಇದು ಹಿಂದೆ ಹಿಂದೆ ಹೋಗುತ್ತದೆ. ಯಾವ ಕಲಾವಿದನು ಇದು ನನ್ನದೇ ಜ್ಞಾನ ಎಂದು ಹಕ್ಕು ಸ್ಥಾಪಿಸುವುದಿಲ್ಲ. ಜನಪದ ಕ್ಷೇತ್ರ ಈ ಬಿಕ್ಕಟ್ಟು ಇನ್ನು ಪರಿಹರಿಸಿಕೊಂಡಿಲ್ಲ. ಆದರೆ ಇವುಗಳನ್ನು ಹಾಗೇಯೇ ಬಿಟ್ಟರೇ ಈ ಜ್ಞಾನ ಮಾದರಿಗಳ ಬಗ್ಗೆ ಹೊಸತಲೆಮಾರಿನವರಿಗೆ ಯಾವ ಆಸಕ್ತಿಯೂ ಇಲ್ಲ.ಇದೊಂದು ಅವನತಿಯೇ ಸರಿ. ಈ ದೃಷ್ಟಿಯಿಂದಾದರು ಇವುಗಳ ದಾಖಲಾತಿ ಅಗತ್ಯವಿದೆ. ರಾಜಣ್ಣ ಮುಗ್ಧ ಕಲಾವಿದನಾಗಿರಲಿಲ್ಲ, ಅವನಿಗೆ ಆಧುನಿಕ ವಿದ್ಯಮಾನಗಳ ಅರಿವಿದೆ ಎಂದು ಸಂತೋಷವೇ ಆಯ್ತು. ಏಕೆಂದರೆ ಹೊಸತಲೆ ಮಾರಿನವರು ಈ ಕತೆಯ ಸಂಗೀತ ದಾಟಿಗಳನ್ನು ಮಾತ್ರ ಕಲಿತುಕೊಂಡು ಕತೆಯ ಪೂರ್ಣಪಾಠವನ್ನು ಕಲೆಯದೇ ಕ್ಯಾಸೆಟ್, ಅರ್ಕೇಟ್ರಾ ಇತ್ಯಾದಿಗಳ ಮೂಲಕ ದುಡ್ಡು ,ಕೀರ್ತಿಗಳನ್ನು ಸಂಪಾದಿಸಿ ರಾಜಣ್ಣನಂತ ಶ್ರೇಷ್ಠ ಕಲಾವಿದರನ್ನು ಹಿಂದಕ್ಕೆ ಹಾಕಿದ್ದು ಅವರಿಗೆ ಸಹಜವಾಗಿ ಬೇಸರ ತಂದಿತ್ತು. ನಾನು ರಾಜಣ್ಣನಿಗೆ ಮನದಟ್ಟು ಮಾಡಿದೆ ಈಗ ನಿಮ್ಮ ಕಾಲಕ್ಕೆ ಮುಗಿಯುತ್ತಿದೆ, ನಿಮ್ಮ ಶಿಷ್ಯರಿಗೆ ಈ ಕಲೆಯ ಬಗ್ಗೆ ಯಾವ ಆಸಕ್ತಿಯೂ ಇಲ್ಲ ಎಂಬುದು ಗೊತ್ತಾಗಿದೆ. ನಿಮ್ಮ ಹೆಸರಿನಲ್ಲೇ ಈ

ಕೃತಿ ಪ್ರಕಟಿಸುತ್ತೇನೆ ಎಂದೇ. ಅವರು ಅದರಿಂದ ಅಷ್ಟೇನೋ ಸಂತೋಷ ಪಡಲಿಲ್ಲಾ. ನಾನು ಮುಂದೆ ಅವರಿಗೆ ಅರಿವಾದಗ ಈ ಕೆಲಸ ಮಾಡಿದರಾಯಿತು ಎಂದು, ವಿಷಯ ಬದಲಿಸಿ

'ನೀವು ದೊಡ್ಡ ಅಸ್ಪತ್ರೆಯಲ್ಲಿ ಇದ್ದಾಗ ಗ್ಯಾನ ತಪ್ಪೋಗಿ ಸತ್ತೋದಗೆ ಹಾಗೆ ಬಿದ್ದೀದ್ದಿರಿ ಅದೇಗೆ ಇಷ್ಟು ಬೇಗ ಉಷಾರ್ ಆಗಿಬಿಟ್ಟಿರಿ, ಇದು ಧರೆಗೆ ದೊಡ್ಡವರ ಪವಾಡವೆನಿಸುತ್ತದಯೇ? ಎಂದೆ. ತಕ್ಷಣ ಯಾವುದೋ ಬೇರೆ ಲೋಕಕ್ಕೆ ಹೋದ ತರ ಕಣ್ಣಗಳನ್ನು ಮುಚ್ಚಿ ಕತೆಯೊಂದನ್ನು ಹೇಳಿದರು, ಇದು ಅವರು ಹೇಳಿದ ಮೊದಲ ಕತೆ ನನ್ನ ಅವರ 25 ವರ್ಷಗಳ ಓಡನಾಟದಲ್ಲಿ ಇಂಥ ನೂರಾರು ಕತೆಗಳನ್ನು ಹೇಳಿದ್ದಾರೆ.

'ನಾನು ಸತ್ತು ಯಮನ್ ಪಟ್ಣಕ್ಕ ಹೋದಿ, ಅಲ್ಲಿ ಒಂದು ಮುರ್ಕ ತಂಬೂರಿ ಇಟ್ಟಿದ್ದರು, ಬಾರಸ್ಕ ಕೂತಿರು ಅಂದರು, ಯಮಧರ್ಮನ ಮಗ ಮತ್ತನ ಗುಳ್ಗ ತಕ್ಕಂಡು ಬತ್ತಿದ್ದ, ಅವರ ಅಣ್ಣ ಎದುರಾಗಿ ಬಂದ, 'ಯಾರಿಮ' 'ಮೋಳ ರಾಜ' ಪುಸ್ತಕ ತಕಬಂದು ನೋಡದನಂಥಾ, 'ಅಯ್ಯಯೋ ಬೇಡ ಇವನ್ಗ ಇನ್ನು ಅಪಾರ ಜಿನವದ ಅವನ ವಾಪಸ್ಸು ಕಳ್ಸಬಿಡು'. ಇಲ್ಲಿ ನಮ್ಮೂರಲೀ ಮನ ಮುಂದಾ ಬೆಂಕಿ ಹಾಕಿ ನೆಂಟರಿಷ್ವರು ಬರಲಿ, ಒಪ್ಪ ಮಾಡಮು ಅಂತಾ ಹೆಣ ಕಾಯ್ಕು ಕೂತಿದ್ದರು. ಆಗ ಮದ್ಯಾನ ಹನ್ನೆರಡ ಗಂಟ್ಗ ಸೂಲ ಬಂತು.

ಕಲಾವಿದ ರಾಜಣ್ಣ ಯಾವುದೇ ಘಟನೆಯನ್ನು ಕತೆ ಮಾಡಿ ಹೇಳುವ ಶಕ್ತಿ ಪಡೆದಿದ್ದ, ಅದರಲ್ಲಿ ವಾಸ್ತವ ಂಯಾವುದು ಕಲ್ಪನೆಯಾವುದು ಎಂಬುದು ಕೇಳುಗರಿಗೆ ಗೊತ್ತಾಗುತ್ತದೆ. ಆದರೆ ಘಟನೆ ತನ್ನ ಸ್ವಾರಸ್ಯವನ್ನು ಉಳಿಸಿಕೊಳ್ಳಲು, ಪ್ರೇಕ್ಷಕರ ಲೋಕ ಜ್ಞಾನವನ್ನು ತಲಕೆಳಕು ಮಾಡಲು ಕಲಾವಿದರು ಈ ತಂತ್ರ ಬಳಸುತ್ತಾರೆ. ಅದರಲ್ಲಿ ನಮ್ಮ ರಾಜಣ್ಣ ನಿಪುಣನಾಗಿದ್ದ. ಸತ್ತವರು ಬದುಕಿ ಬಂದರು ಎಂಬುದು ಜನಪದ ಕತೆಗಳಲ್ಲಿ ಬರುವ ಆಶಯ (ಮೊಟಿಪ್) ಇದು ವಿಜ್ಞಾನಿಗಳಿಗೂ ತಲೆಕೆಡಿಸಿರುವ ಸಂಗತಿ.ಇಂಗ್ಲಿಷ ಬರೆದೇ ಇದ್ದವರು ಇಂಗ್ಲಿಷ ಮಾತನಾಡುವುದು, ಬೇರೊಲ್ಲೊ ನಡೆಯುತ್ತಿರುವ ಘಟನೆಯನ್ನು ನೋಡದೆ ಬೇರೆ ಊರಲ್ಲಿ ಕುಂತು ಕಾಮೆಂಟ್ರಿ ಕೊಡುವುದು, ಊಟ ಸೇರದ ರೋಗಿಯೊಬ್ಬ ರಾಶಿಗಟ್ಟಲೇ ಅನ್ನ ಉಣ್ಣುವುದು, ಬಲಿಬಿದ್ದ ಪುಜಾರಿ ಮೂರುಗಂಟೆ ಉಸಿರಾಡದೆ ಇರುವುದು. ಇವೆಲ್ಲ ವಿಸ್ಮಯಗಳಿಗೆ



ವಿಜ್ಞಾನದಿಂದ ಇನ್ನು ಉತ್ತರ ಸಿಕ್ಕಿಲ್ಲ. ಬಹುಶ: ರಾಜಣ್ಣ ನಾನು ಯಮಲೋಕಕ್ಕೆ ಹೋಗಿದ್ದು ಬಂದೆ ಎಂದು ಹೇಳುವ ಕತೆ ಇದಕ್ಕೆ ಹೊರತಾಗಿಲ್ಲ.

1992ರಲ್ಲಿ ಸಾವನ್ನು ಗೆದ್ದು ಬಂದ ರಾಜಣ್ಣನ ಜೀವನ ಬೇರೆಯದೇ ಆದ ವರ್ಚಸ್ಸು ಪಡೆದುಕೊಂಡಿತು. ಈ ಜೀವನ ನಶ್ವರ ಎಂತಲೋ, ಸಂಸಾರದ ಸುಖ ಕ್ಷಣಿಕ ಎಂತಲೋ, ಜೀವಕೊಟ್ಟ ಧರೆಗೆ ದೊಡ್ಡವರ ಸೇವೆಯೇ ನನ್ನ ಮುಕ್ತಿ ಎಂದು. ಹೆಂಡತಿ ಮಕ್ಕಳು ಮನೆ ಮಠಗಳಲ್ಲಿ ಆಸಕ್ತಿ ಕಳೆದುಕೊಂಡು ತಂಬೂರಿಯನ್ನು ಹೆಗಲಿಗೇರಿಕೊಂಡು ಪೂರ್ಣ ಜೀವನವನ್ನು ನೀಲಗಾರಿಕೆಗೆ ಮೀಸಲಾಗಿಸಿದ 'ಮನೆ ಮನೆ ಮುದ್ದೆ ಮಾರಿಗುಡಿ ನಿದ್ದೆ'. ತಿಂಗಳಿಗೊಂದು ಸಾರಿ, ಹದಿನೈದು ದಿನಕ್ಕೆ ಒಂದು ಸಾರಿ ಮನೆಗೆ ಬಂದು ಭಿಕ್ಷೆಯಲ್ಲಿ ಸಂಪಾದಿಸಿದ್ದ ಧಾನ್ಯಗಳನ್ನು ಮನೆಗೆ ಕೊಡುತ್ತಿದ್ದ. ಚಿಲ್ಲರೆ ಸಂಪಾದನೆಯನ್ನು ತನ್ನ ಕುಡಿತಕ್ಕೆ ಬಳಸುತ್ತಿದ್ದ. ಅಸ್ಪತ್ರೆಯಿಂದ ಬಂದ ಮೇಲೆ ಅವನು ಯಾವ ಅಭ್ಯಾಸಗಳನ್ನು ಬಿಡಲಿಲ್ಲಾ,

ನೀಲಗಾರ ಸಂಪ್ರದಾಯದಲ್ಲಿ ಕಲಾವಿದರು ಮನೆಮನೆಯಲ್ಲಿ ಭಿಕ್ಷೆಮಾಡಿ ಉಪಜೀವನ ನಡೆಸುವುದು ಒಂದು ವಿಧಾನವಾದರೆ, ಮೇಳಗಳನ್ನು ಕಟ್ಟಿಕೊಂಡು ರಾತ್ರಿಯಲ್ಲಾ ಕತೆ ಮಾಡುವುದು ಇನ್ನೊಂದು. ಒಕ್ಕಲಿನವರು ಹೊಸಮನೆಗೆ ಹೋಗುವಾಗ, ಮದುವೆಗೆ ಮುನ್ನ ಕಂಡಾಯಗಳನ್ನು ತರಿಸಿ ಮನೆ ತುಂಬಿಸಿಕೊಳ್ಳುವಾಗ, ಸತ್ತುಕೆಟ್ಟವರಿಗೆ ತಿಥಿ ಇತ್ಯಾದಿಗಳನ್ನು ಮಾಡುವಾಗ, ಮನೆಯ ಮೊದಲ ಮಗನಿಗೆ ಧಿಕ್ಷೆಯನ್ನು ಕೊಡಿಸುವಾಗ, ನೀಲಗಾರ ತಂಡಗಳನ್ನು ಕರೆಸಿ ಎರಡು ಮೂರು ರಾತ್ರಿ, (ಈಗ ಒಂದೊಂದು ರಾತ್ರಿ) ನೀಲಗಾರ ಮೇಳಗಳನ್ನು ಕರೆಸಿ ಸತ್ಕಾರಮಾಡಿ, ಕಾಣಿಕೆಕೊಟ್ಟು ರಾತ್ರಿಯೆಲ್ಲಾ ಧರೆಗೆ ದೊಡ್ಡವರ ಕತೆ ಹಾಡಿಸುವುದು ಬಹು ದೊಡ್ಡ ಸಾಂಸ್ಕೃತಿಕ ಚಟುವಟಿಕೆ. ಕಲಾವಿದರ ಆರ್ಥಿಕ ಸ್ಥಿತಿ ಇದರಿಂದ ಸ್ವಲ್ಪ ಸುಧಾರಿಸುತ್ತದೆ. ರಾಜಣ್ಣನು ಈ ತರದ ಒಂದು ತಂಡವನ್ನು ಕಟ್ಟಿಕೊಂಡಿದ್ದ. ರಾಜಣ್ಣ ಈ ವಿಷಯದಲ್ಲಿ ತುಂಬಾ ಸ್ನೇಹ ಜೀವಿ ಇವನ ತಂಡದಲ್ಲಿ ಹತ್ತಾರು ಇಮ್ಮೇಳದವರು ಇದ್ದರು. ಇವರಲ್ಲಿ ಇವನೊಟ್ಟಿಗೆ ಹೆಚ್ಚು ಕತೆಗೆ ಬರುತ್ತಿದ್ದವರು ಗುರುಸಿದ್ದ, ಮಾದಶೆಟ್ಟಿ, ನಾಗರಾಜ, ಮುಂತಾದವರು. ಅದರಲ್ಲಿ ಗುರುಸಿದ್ದ ನನಗೆ ತುಂಬಾ ಪ್ರಿಯವಾದ ವ್ಯಕ್ತಿ ಇವನ ಕಾಯಕ ಮಿಷನ್ ರೂಂನಲ್ಲಿ ಮಲಗಿದ್ದು ಕರೆಂಟು ಬಂದಾಗ ಗದ್ದೆಗಳಿಗೆ ನೀರಾಯಿಸಿ ಒಡೆಯರು ಕೊಟ್ಟ ಊಟ ಮಾಡಿ ಅಲ್ಲೇ ಮಲಗುವುದು, ಇವನು ಯಾವಾಗಲು ಒಂದು ಬಿಳಿಕೊಳೆ ದುಪ್ಪಟ್ಟಿಯಿಂದ ದೇಹವನ್ನು ಮುಚ್ಚಿರುತ್ತಿದ್ದ ಒಳಗೆ ಒಂದು ಲಂಗೋಟಿ ಬಿಟ್ಟರೇ ಬೇರೆ ಯಾವುದೇ ಬಟ್ಟೆಗಳು ಇರುತ್ತಿರಲಿಲ್ಲ, ನೀಳವಾದ ಕರಿಗಡ್ಡ, ಇವನು ರಾಜಣ್ಣನಿಗೆ ಸರಿಯಾದ ಸಾತಿಯಾಗಿದ್ದ. ಗುರುಸಿದ್ದ ಮೇಳಗಳಿಗೂ ಇದೆ ಡ್ರಸ್ಸಿನಲ್ಲಿ ಬಂದು ಯಾವುದೇ ಮುಜುಗರವಿಲ್ಲದೆ ಹಿಮ್ಮೇಳವನ್ನು ನಡೆಸಿಕೊಡುತ್ತಿದ್ದ. 1996ರಲ್ಲೇ ಇವನು ತೀರಿಕೊಂಡ, ರಾಜಣ್ಣ ಇವನ ಸಾವಿನಿಂದ ಮತ್ತಷ್ಟು ಖಿನ್ನನಾದ,

ರಾಜಣ್ಣನ ಒಂದು ವರ್ಷದ ಸಹವಾಸದಲ್ಲಿ ಎಂದು ನನ್ನ ಕಾವ್ಯ ಸಂಪಾದನೆಯ ಕೆಲಸದ ಬಗ್ಗೆ ಎಂದು ಮಾತನಾಡಲೇ ಇಲ್ಲ. ಅವರ ಊರಿಗೆ ಹೋದಾಗ ಅವನು ಹೇಳುವ ಕತೆಗಳನ್ನು ಕೇಳುತ್ತಾ, ಆ ದಿನದ ಅಭ್ಯಾಸಕ್ಕೆ ಬೇಕಾದ ಸಹಾಯ, ಇತ್ಯಾದಿಗಳಿಂದ ಅವನ ಸ್ನೇಹ ಸಂಪಾದಿಸಿದೆ. ಒಂದು ದಿನ ಹೀಗೆ ಯಾವುದೇ ಗುಡಿಸಲಿನ ಹೋಟಲ್‌ನಲ್ಲಿ ಟೀ ಕುಡಿಯುತ್ತಾ, ರಾಜಣ್ಣ ನಿನಗೆ ಕತೆ ಕಲಿಸಿದವರು ಯಾರು ಎಂದೇ? 'ಅವರು ಹರಿಜನ ಜಾತಿಯ ಎಡಗೈನವರು, ಅವರ ಹೆಸರು ಪುಟ್ಟಮಾದಯ್ಯ ನಾನು ಕತ ಕಲಿಯಕಾ ದಿನ ಅವರಿಗೊಂದು ಬಾಟಲಿ ಹೆಂಡ ಕುಡಿಸಬೇಕು, ಅವರ ಇಂಚರಿ ಸುತ್ತಬೇಕು, ಕಟ್ಟುನಿಟ್ಟನ ಆಳು ತಾಳ ತಪ್ಪಿದರಾ ,ಗಗ್ಗರದಲ್ಲೇ ಹೊಡದ ಬಿಡಮಾ, ಏನೋ ಹಾಗೂ ಈಗೂ ಮಾಡಿ ಮೂರ ತಿಂಗಳಲ್ಲೇ ಕತಾ ಕಲಿತುಬಿಟ್ಟೆ, ನಮ್ಮೂರ‍್ಲಲ್ಲಿ ಭಜನ ಮಾಡ ಮಂದಿ ತುಂಬಾ ಇದ್ದರು ಅವರನಾ ಸೇರ‍್ಸಕ್ಕಂಡು ನಾನೇ ಒಂದು ಸೆಟ್ಟ ಮಾಡ್ಕಂಡು ಕತಗಾ ಹೋಯ್ತಿದ್ದಿ'. ಒಂದು ದಿನ ಬದನವಾಳಲ್ಲಿ ಕತಾ. ಪುಟ್ಟಮಾದಯ್ಯನವರ‍್ನ ಕರೆಯೋದು ಅವರ ಜಾತಿಯವರ ವಾಡಕ. ಇವರ‍್ಗ ಉಷಾರಿರಲಿಲ್ಲಾ 'ನಿಮ್ಮ ಶಿಷ್ಯರಿದ್ದರ ಕಳುಹಿಸಿ' ಎಂದರಂತಾ 'ಪುಟ್ಟಮಾದಯ್ಯನವರು ನನ್ನೇ ಕಳುಹಿಸಿದರು' ಸಿದ್ದಪ್ಪಾಜಿ ಪವಾಡದ ಭಾಗ ಕತಾ ಮಾಡ್ದಿ. ಪುಟ್ಟಮಾದಯ್ಯನವರು ಬಂದು ತಬ್ಬಕ್ಕಂಡು ಕಣ್ಣೀರ ಹಾಕಬಿಟ್ಟರು. 'ಎಲ್ಲರೂ ಅಕ್ಕಲೂ ಆಯ್ಕಂಡ್ರು ನೀನೊಬ್ಬ ಅರಿ ತಬ್ಬಂಡ' ಅಂದರು. 'ನೋಡಿ ನಾವು ಜಾತಿಲೀ ಉಪ್ಪಾರಶೆಟ್ಟರು, ಅವರು ಹರಿಜನರು ನಮ್ಮಲ್ಲಿ ಯಾವ ಬಿನ್ನಬೇದವು ಇರಲಿಲ್ಲ' ಎಂದರು. ಸುಮಾರು ಐವತ್ತು ವರ್ಷಗಳ ಹಿಂದಿನ ಘಟನೆ ಇದು. ಅದರಲ್ಲೂ ಹಳ್ಳಿಗಳಲ್ಲಿ ಜಾತಿ ಎಷ್ಟು ಕ್ರೂರವಾಗಿರುತ್ತದೆ ಎಂಬುದು ನಮಗೆಲ್ಲ

ಗೊತ್ತಿರುವ ಸಂಗತಿ. ಕಲೆ ಹೇಗೆ ಜಾತಿ ಧರ್ಮಗಳನ್ನು ಮೀರಿ ನಿಲ್ಲುತ್ತದೆ. ರಾಜಣ್ಣ ಈಗಲೂ ಗಣಸ್ತುತಿ ಮಾಡುವಾಗ ತನ್ನ ಗುರುವಾದ ಪುಟ್ಟಮಾದಯ್ಯನವರಿಗೆ ಶರಣು ಹೇಳದೆ ಕತೆ ಮಾಡುವುದಿಲ್ಲ.

ಒಂದು ದಿನ ಇದಕ್ಕಿದ್ದ ಹಾಗೆ 'ಅದೇನೊ ಈ ಸ್ವಾಮಿ ಕತನಾ ಪುಸ್ತಕ ಮಾಡ್ತೀವಿ ಅಂದಿದ್ದರಲ್ಲಾ ನನ್ನ ಜೀವ ಇರುವಗಲೇ ಎಲ್ಲ ಹಾಡಬಿಡ್ತಿನಿ ಬರೆದು ಪುಸ್ತಕ ಮಾಡಬಿಡಿ ಮತ್ತಾ' 'ರಾಜಣ್ಣ ಒಂದು ರಾತ್ರಿ ಕತಗಾ ಜನ ಎಷ್ಟು ಕೊಟ್ಟಾರು ಅಷ್ಟನೇ ಕೊಡ್ತಿನಿ, ತಾಳಿಂದ– ತುದಿಗಂಟ ಎಲ್ಲ ಹಾಡು' 'ಅಯ್ಯೊ, ಇವರ ತಾಳು– ತುದಿ ಕಂಡ್ವರು ಯಾರ ಸ್ವಾಮಿ' ಎಂದು ನಕ್ಕ. 'ಸರಿ ಟೇಪ್ ತಕ್ಕಂಡು ಮೋಳೆಗೆ ಬನ್ನಿ ಸಟ್‌ನವರನ್ನೆಲ್ಲ ಸಿಕ್ಕತರ' ಎಂದು ಒಪ್ಪಂದಕ್ಕೆ ಬಂದ. 'ಹಗಲೊತ್ತು ಗಲಾಟಿ ಜನ ಸೇರ್ ಬಿಡ್ತರಾ ರಾತ್ರಿ ಹೊತ್ತ ಹಾಡ್ತೀವಿ ಟೇಪ ಮಾಡ್ಕಳೀ' ನಾನು ಟೇಪ್ ರೆರ್ಕಾಡರ್, ಪೆನ್ನು,ಪುಸ್ತಕ, ಅವರಿಗೆ ಬೇಕಾದ ಬೀಡಿ–ಪೆಟ್ಟಿ, ಗಂಧದಕಡ್ಡಿ, ಸರಾಯಿ, ಎಲ್ಲವನ್ನು ಸಿದ್ದಮಾಡಿಕೊಂಡು ಅವರ ಊರಿಗೆ ಹೋದೆ. ಆದರೆ ಆ ಊರಲ್ಲಿ ಯಾರ ಜಗಲಿಯ ಮೇಲೂ ಕರೆಂಟು ಪ್ಲಗ್ ಹಾಕುವ ಸ್ವಿಚ್ ಸಿಗಲಿಲ್ಲ. ಕೊನೆಗೆ ಗುರುಸಿದ್ದನ ಮಿಷನ ಬಾವಿ ಮನೆ ಹೋಗಿ ಕತೆ ಶುರು ಮಾಡಿದೆವು.ಪ್ರತಿ ದಿನ ಊಟವಾದ ಮೇಲೆ ಅಲ್ಲಿ ಸೇರುವುದು ಬೆಳಗಿನ ಜಾವ ಮಂಗಳವಾಡುವುದು, ಒಟ್ಟು ಮೂರು ರಾತ್ರಿ ಆಯ್ತು. ಅಲ್ಲಿಗೆ ಮಂಟೇಸ್ವಾಮಿಗಳು ಆಕಾಶ ಉತ್ಪತ್ತಿ ಮಾಡಿ, ಗುಡುಗು ಮಿಂಚುಗಳನ್ನುಜಗಟಾ ಮಾಡ್ಕಂಡು, ನಕ್ಷತ್ರಗಳ ಚಿತ್ರ ಮಾಡ್ಕಂಡು, ಸೂರ್ಯ ಚಂದ್ರಾದಿಗಳ ತಾಳ ಮಾಡ್ಕಂಡು, ಪಾತಾಳಬಾವಿಯಲ್ಲಿ ಯೋಗ ನಿದ್ರೆಗೆ ಹೋದರು' ಎನ್ನುವಲ್ಲಿ ಕತೆ ಮುಗಿಸಿದರು.

ಇದಾದ ಮೇಲೆ 'ಇಲ್ಲಿಗ ಮುಗಿತಾ ಇನ್ನು ಇದ್ದದಾ' ಎಂದು ಕೇಳಿದೆ. 'ದುಡ್ಡ ಕೊಡ್ತಿವಿ ಅಂದರಾ ಇನ್ನು ಮೂರ್ ರಾತ್ರಿ ಮಾಡ್ತೀವಿ' ಈ ಕತೆನೋ, ಬೇರೆಯದೋ ಎಂದೆ. ಇದೇ ಕತೆ ಎಂದರು. ನನಗೆ ತಲೆಕೆಟ್ಟುಹೊಯ್ತು ಇದನ್ನು ಪೂರ್ಣಗೊಳಿಸುವ ಬಗೆ ಹೇಗೆ ಎಂದು. 'ಮೊದಲು ಇಷ್ಟು ಪುಸ್ತಕ ಮಾಡಿ ಅಮೇಲ ನಿಮಗೆ ಗೊತ್ತಾಗುತ್ತದೆ' ಎಂದು ಸಮಾದಾನ ಪಡಿಸಿದರು. ಇದರ ಸತ್ಯ ನನಗೆ ಆಮೇಲೆ ಗೊತ್ತಾಯಿತು. ಕಲಾವಿದರು ಅನೇಕ ಸಿದ್ದವರ್ಣನೆಗಳನ್ನು ಇಟ್ಟುಕೊಂಡಿರುತ್ತಾರೆ. ಅದನ್ನು ಕತೆಯ ಯಾವ ಭಾಗಕ್ಕಾದರು ಬಳಸಬಹುದು, ಇನ್ನೊಂದು ಉಪಕತೆಗಳು, ಮತ್ತು ಪುನಾರವರ್ತನೆ, ಇದರಿಂದ ಕತೆಯನ್ನು ಹಿಗ್ಗಿಸುವ ಕುಗ್ಗಿಸುವ ತಂತ್ರವಾಗಿ ಬಳಸುತ್ತಾರೆ. ರಾಜಣ್ಣ ಎಷ್ಟು ನಿಪುಣ ಎಂದರೆ ಇದು ಪುಸ್ತಕವಾಗುವುದು, ಧರೆಗೆ ದೊಡ್ಡವರಿಗೆ ಸಲ್ಲುವ ಕತೆ ಮಾತ್ರ ಹೇಳಿ ಎಲ್ಲೂ ವರ್ಣನೆಗಳನ್ನು ಪುನರಾವರ್ತಿಸದೇ, ಒಂದು ಪರಿಪೂರ್ಣ ಪಠ್ಯವಾಗಲು ಸಹಕರಿಸಿದ. ರಾಜಣ್ಣ ಅನಕ್ಷರಸ್ಥ ಯಾವ ಪುಸ್ತಕವನ್ನು ನೋಡದೆ ಹೇಗೆ ಇದನ್ನು ನೆನಪಿನಲ್ಲಿ ಇಟ್ಟು ಕೊಂಡಿದ್ದಾನೆ ಎಂಬುದು ಪವಾಡದಂತೆ ಇತ್ತು. ಇದರ ಸಂಪಾದನೆ ಕೆಲಸಕ್ಕೆ ಕುಂತಾಗ ನನಗೆ ಗೋಚರವಾದದ್ದು. ಸ್ಥಳನಾಮಗಳು, ವ್ಯಕ್ತಿನಾಮಗಳು ಬಂದಾಗ ಕತೆಗೆ ಚಾಲನೆ ಸಿಗುತ್ತಿತ್ತು, ಕಲ್ಯಾಣ ಎಂದ ತಕ್ಷಣ ಅವನ ಭಾವಕೋಶದಲ್ಲಿ ಅನೇಕ ನೆನಪುಗಳು ಬಂದು ಸೇರುತ್ತಿದ್ದವು, ಹಾಗೆ ಚೆನ್ನಮಂಟೇಶ ಎಂದ ತಕ್ಷಣ ಬಹುದೊಡ್ಡ ವ್ಯಕ್ತಿತ್ವದ ಸ್ವರೂಪಗಳೆಲ್ಲಾ ತಾವಾಗೇ ಬಿಚ್ಚುಕೊಳ್ಳುತ್ತಿದ್ದವು. ಇದು ಮನುಷ್ಯನ ಮೆದುಳಿಗೆ ಇರುವ ಅಪರೂಪದ ಶಕ್ತಿ, ಇದಕ್ಕೆ ನೂರಾರು ಜನರ ಒಡನಾಟ, ದೇಶ ಸುತ್ತಾಟ, ಪೂರ್ವಗ್ರಹಗಳಿಲ್ಲದ ಗ್ರಹಿಕೆಯ ಶುದ್ದತೆ, ಇತ್ಯಾದಿಗಳಿಂದ ಸಾಧ್ಯ ರಾಜಣ್ಣನಿಗೆ ಅದೆಲ್ಲಾ ಇತ್ತು. ಇವನ ಕಾಲಕ್ಕಾಗಲೇ ನೀಲಗಾರರ ಕೆಲವು ತಂಡಗಳು ಈ ಕಲೆಯನ್ನು ವ್ಯಾಪಾರಿಕರಣಗೊಳಿಸಿ ಶ್ರೀಮಂತರಾಗಿದ್ದರು. ರಾಜಣ್ಣ ಎಂದು ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲಾ, ತನ್ನ ಮನೆಗೆ ಈ ವೃತ್ತಿಯಿಂದ ಒಂದು ಕಾಸನ್ನು ಸಂಪಾದಿಸಲಿಲ್ಲಾ ಕೊನೆಯ ತನಕ ಆ ದಿನದ್ದು ಆ ದಿನಕ್ಕೆ ಮಾತ್ರ ಎಂದು ಬದುಕಿ ಎಲೆ ಮರೆಯ ಕಾಯಿಯಂತೆ ಬದುಕಿದ್ದ.ರಾಜಣ್ಣನ ಬದುಕಿನ ಕೊನೆಗಾಲದಲ್ಲಿ ಕರ್ನಾಟಕ ಜಾನಪದ ಅಕಾಡಮಿ ಪ್ರಶಸ್ತಿ, ಮಂಟೇಸ್ವಾಮಿ ಪ್ರತಿಷ್ಠಾನ ಪ್ರಶಸ್ತಿ, ಜಾನಪದ ಲೋಕದ ಎಚ್.ಎಲ್. ನಾಗೇಗೌಡ ಪ್ರಶಸ್ತಿ, ಆಕಾಶವಾಣಿ ಕಲಾವಿದನಾಗಿದ್ದರು ಇವು ಯಾವುದು ಅವನ ಬಡತನವನ್ನು ನಿವಾರಿಸಲಿಲ್ಲಾ. ಬಹುಶ: ಇವನೇ ನೀಲಗಾರ ಮೌಖಿಕ ಕಾವ್ಯ ಪರಂಪರೆಯ ಕೊನೆಯ ಶ್ರೇಷ್ಠ ಗಾಯಕ. ಇವನ ಅಗಲಿಕೆ ನೀಲಗಾರ ಪರಂಪರೆಗೆ ತುಂಬಲಾರದ ನಷ್ಟವಾಗಿದೆ.



# ಮುಖ್ಯಾಮುಖ್ಯತೆಯನ್ನು ದಾಟಿದ ರೂಪಾಂತರದ ನೆಯ್ಗೆ


ಡಾ. ಜಯಪ್ರಕಾಶ್ ಶೆಟ್ಟಿ ಹೆಚ್

ಎಲ್ಲದಕ್ಕೂ ಆದಿ ಇಲ್ಲವೆ ಮೂಲವೊಂದನ್ನು ಹುಡುಕುವ ಹಿಂಪಯಣದ ಸಂಶೋಧನಾಕ್ರಮವೊಂದು ಸಮಾಜವಿಜ್ಞಾನ ಶಾಖೆಗಳಲ್ಲಿ ಹೆಚ್ಚು ಪರಿಚಿತ. ಆದರೆ ಇದೇನು ಮುಕ್ತ ಹಿಂಪಯಣವಲ್ಲ. ಅಲ್ಲೊಂದು ನಿಲುಗಡೆಯಿದೆ. ಪರಿಶುದ್ಧ ಸತ್ಯವನ್ನು ಎದುರಿಗಿಡುವುದಾಗಿ ಹೇಳಿಕೊಳ್ಳುತ್ತಾ, ಉದ್ದೇಶಿತ ಗುರಿಯಲ್ಲಿ ನಿಲ್ಲುವುದಿದೆ. ನಿರ್ದಿಷ್ಟ ತಾತ್ವಿಕತೆಯಿಂದ ನಿರ್ದೇಶಿತವಾದ ಆಯ್ಕೆ ಮತ್ತು ಪ್ರತ್ಯೇಕತೆಯಲ್ಲಿ ಮೂಲ-ಪ್ರಕ್ಷಿಪ್ತ, ಶುದ್ಧ-ಅಶುದ್ಧವೆಂಬ ವಿಂಗಡಣೆಯಿದೆ. ಈ ಹಿಂಪಯಣ, ನಿಲುಗಡೆ, ಆಯ್ಕೆ ಮತ್ತು ಪ್ರತ್ಯೇಕತೆಯ ರಾಜಕಾರಣದ ಹೂರಣವಾದ ತಾತ್ವಿಕತೆಯನ್ನು ಗುರುತಿಸಬೇಕಾದರೆ ಈ ಉದ್ದೇಶಿತ ಹಿಂಪಯಣವನ್ನು ಯಾವ ಹಂತದವರೆಗೆ ಆಗ್ರಹಿಸಲಾಗುತ್ತದೆ? ಎಲ್ಲಿ ನಿಲ್ಲುವಂತೆ ಒತ್ತಾಯಿಸಲಾಗುತ್ತದೆ? ಯಾವ ಹಂತದ ನಿಲುಗಡೆಯನ್ನು ಶಾಶ್ವತಗೊಳಿಸಲಾಗುತ್ತದೆ? ಹಾಗೆ ಇರವಾಗಿ ನೆಲೆಯಾಗಿಸುವ ಪ್ರಕ್ರಿಯೆಯು ಯಾವ (ಪ್ರ)ದೇಶ, ಲಿಂಗ, ಜಾತಿಗಳನ್ನು ಆದ್ಯತೆಯ ಸರದಿಯಲ್ಲಿ ಮುಂಚೂಣಿಗೇರಿಸುತ್ತದೆ? ಯಾವುವು ಅಧೀನ ನೆಲೆಗೆ ಸರಿಯುತ್ತವೆ? ಯಾವ ಪಠ್ಯರೂಪವನ್ನು ಅಧಿಕೃತಗೊಳಿಸಲಾಗುತ್ತದೆ ಮತ್ತು ಯಾಕೆ? ಇತ್ಯಾದಿ ಮೂಲಭೂತ ಪ್ರಶ್ನೆಗಳು ಮುಖ್ಯವಾಗುತ್ತವೆ. ಹೀಗೆ ಆ ತಾತ್ವಿಕ ಆಕೃತಿಯನ್ನು ವಿವರಿಸಿಕೊಳ್ಳದೇ ಹೋದಲ್ಲಿ ನಾವದರ ರಾಜಕಾರಣಕ್ಕೆ ಸುಲಭದ ಬಲಿಪಶುಗಳಾಗುವ ಅಪಾಯವಿದೆ. ಹಾಗಾಗಿ ಸಂಶೋಧನೆ ಹಾಗೂ ಸಂಶೋಧಿತ ಸಂಗತಿಯ ಮುಖಾಮುಖಿಯಲ್ಲಿ ವಿಧಾನ ಹಾಗೂ ವಿವೇಚನಾಕ್ರಮವನ್ನು ಸ್ಪಷ್ಟಪಡಿಸಿಕೊಳ್ಳದ ನಿರೂಪಣೆಗಳು ಗೊಂದಲದಲ್ಲಿ ಕೆಡವುತ್ತವೆ. ಈ ತೊಡಕನ್ನು ಮೀರಿ ಸತ್ಯದ ವಾರಸುದಾರಿಕೆಗೆ ಎದುರಾಗಿ ಸತ್ಯಗಳನ್ನಿಟ್ಟು 'ಸತ್ಯದ ಸಾಮಾನ್ಯ ರಾಜಕಾರಣ'ವನ್ನು ಎದುರಾಗಲು ವೈಧಾನಿಕ ಖಚಿತತೆಯ

ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ'ಗಾಗಿ ಡಾ, ಶಿವರಾಮ ಶೆಟ್ಟರು ಸಂಪಾದಿಸಿಕೊಟ್ಟ 'ಕನ್ನಡಂಗಳ ಒಗಟು' ಕೃತಿ ವಿಶೇಷವಾಗಿ ನಮ್ಮ ಗಮನಸೆಳೆಯುತ್ತದೆ. ಮುಖ್ಯವಾಗಿ ಜಾನಪದ ಅಧ್ಯಯನ ಸಂದರ್ಭದ ಈ ಮಹತ್ವದ ಕೃತಿ ವೈಧಾನಿಕ ಮತ್ತು ತಾತ್ವಿಕ ಖಚಿತತೆಯಲ್ಲಿ ಏಕರೂಪೀ ಪಠ್ಯ ಸ್ಥಾಪನೆಯ ಹಿಂಪಯಣದ ನಿಲುಗಡೆಯನ್ನು ನಿರಾಕರಿಸಿಕೊಳ್ಳುತ್ತದೆ. ಪಠ್ಯದ ಬದಲಿಗೆ ಪಠ್ಯಗಳನ್ನು ಎದುರಿಗಿಡುವ ಈ ಕೃತಿ 'ಜಾನಪದ ಅಧ್ಯಯನದ ಪಾಠಾಂತರವೆನ್ನುವ ಕಲ್ಪನೆಯಲ್ಲಿ' ಅಂತರ್ಗತವಾದ ಮೂಲಪಠ್ಯದಲಿ 'ಮೂಲಭೂತವಾದಿ' ನಿಲುವಿರುವುದನ್ನು ಗುರುತಿಸುತ್ತದೆ. ಇದನ್ನು ದಾಟಿಕೊಳ್ಳಲು ಪಾಠಾಂತರದ ಬದಲಿಗೆ ರೂಪಾಂತರವನ್ನು ಆಯ್ದುಕೊಳ್ಳುತ್ತದೆ. ಬಹುಪಠ್ಯ ಮತ್ತು ಬಹುಕನ್ನಡಂಗಳನ್ನು ಆತುಕೊಳ್ಳುವ ಕೃತಿಯ ನಿಲುವು ಕೇವಲ ಪರಿಭಾಷೆಯ ಮಟ್ಟಕ್ಕಷ್ಟೇ ಸೀಮಿತವಲ್ಲ. ಬಹುಪಠ್ಯ ಮತ್ತು ಬಹುತ್ವಪರ ತಾತ್ವಿಕ ಸಂಗತಿಗಳಾಗಿವೆ. ಹೀಗಾಗಿ ಕೃತಿ ಪಠ್ಯವೊಂದನ್ನು ಕೇಂದ್ರಕ್ಕೆ ತಂದು ಮಿಕ್ಕವುಗಳನ್ನು ಅಂಚಿಗೆ ಸರಿಸದೆ, ಪ್ರಾದೇಶಿಕ ಅಥವಾ ವಿಚಾರಾತ್ಮಕ ಏಕಸ್ವಾಮ್ಯ ಸ್ಥಾಪನೆಗೆ ದುಡಿಯದೆ ಮುಖ್ಯಾಮುಖ್ಯತೆ ದಾಟಿಕೊಳ್ಳುವ ಪ್ರಜಾಸತ್ತಾತ್ಮಕ ನಡೆಯನ್ನು ತೋರುತ್ತದೆ. ಇದಕ್ಕೆಂದೇ ಕನ್ನಡದ ಜೀವನಾಡಿಯಾದ ವೈವಿಧ್ಯವನ್ನು ಒಟ್ಟುಮಾಡಿ ಕೊಡುವಾಗ ಪ್ರಮಾಣೀಕೃತ ಏಕರೂಪೀ ಕನ್ನಡದ ಬದಲು ಭಾಷಿಕ, ಪ್ರಾದೇಶಿಕ, ಸಾಂಸ್ಕೃತಿಕ ನೆಲೆಗಳಲ್ಲಿ ನಾನಾ ರೂಪಗಳಲ್ಲಿರುವ 'ಬಹುರೂಪೀ, ವೈವಿಧ್ಯದ 'ಕನ್ನಡಂಗಳ' ಸ್ವರೂಪ ಪ್ರತಿನಿಧಿಸುವ ವಿಧಾನವನ್ನು ಒದಗಿಸಿಕೊಳ್ಳುತ್ತದೆ. 'ಕಸವರಮೆಂಬುದು ನೆಱೆಸೈರಿಸಲಾರ್ಪೊಡೆ ಪರಧರ್ಮಮುಂ ಪರವಿಚಾರಮುಂ' ಎಂದು ಸಮತ್ವ, ಸಹತ್ವದ ಧ್ಯೇಯವಾಕ್ಯ ನೆಟ್ಟುಹೋದ ಮಾರ್ಗಕಾರನನ್ನು ಅನುಸರಿಸಿ ಕೃತಿಗೆ 'ಕನ್ನಡಂಗಳ ಒಗಟು' ಎಂದೇ ಹೆಸರಿಸುತ್ತದೆ.

ಕವಿರಾಜ ಮಾರ್ಗಕಾರ ಬರೆದುಹೋದ ಕನ್ನಡದ ನಕಾಶೆಯಲ್ಲಿ ಕನ್ನಡವೆಂಬುದು ಹಲವು ಕನ್ನಡಂಗಳ ಸಮುಚ್ಚಯ. ಆದರೆ ಈ ಅನೇಕಗಳ ಭಾಷಿಕ ನಡೆ ಎಲ್ಲಿದೆ? ಅದು ಬರಹದ ಕನ್ನಡದಲ್ಲಿದೆಯೇ? ಕನ್ನಡಗಳೆಂಬ ಬಹುರೂಪಗಳಲ್ಲಿ ಜೀವಂತವಾಗಿರುವ ವಾಗ್ರೂಪದ ವಿವಿಧಾಕಾರಗಳಲ್ಲಿದೆಯೇ? ಇದು ಕೇಳಿಕೊಳ್ಳಬೇಕಾದ ಪ್ರಶ್ನೆ. ಆದರೆ ಈ ವಿವಿಧಾಕಾರಗಳ ಪರಿಚಯಕ್ಕೆ ಬರಹದ ಯಜಮಾನಿಕೆ ದಾಟಿ ಮಾತಿನ ಜಗತ್ತಿಗೆ ಇಳಿಯಲೇಬೇಕು. ಯಾಕೆಂದರೆ ಈ ಮಾತಿನ ಲೋಕವು ಜೀವಂತವಿರುವುದು ಅನೇಕಗಳು ಅನೇಕಗಳಾಗುತ್ತಲೇ ಹೋಗುವ ಭಾಷೆಯ ನಡೆಯುಳ್ಳ ಜನಪದದ ಆ ಒಳಜಗತ್ತಿನಲ್ಲೇ. ಆ ಲೋಕದೊಳಗಿನ ಬಹುತ್ವದ ದನಿಯನ್ನು ಆಲಿಸುವ ಗಂಭೀರ ಯತ್ನಗಳು ಕನ್ನಡ ಅಧ್ಯಯನಕ್ಷೇತ್ರದಲ್ಲಿ ನಡೆಯುತ್ತಲೇ ಇವೆ. ಇದು ಸಂತಸದ ಸಂಗತಿ. ಅಂತಹ ಖುಷಿಯೊಂದರ ಇತ್ತೀಚೆಗಿನ ಸಾಕ್ಷಿಯಾಗಿ ಪ್ರೊ. ಬಿ. ಶಿವರಾಮ ಶೆಟ್ಟಿ ಅವರಿಂದ ಸಂಪಾದಿತವಾದ ಈ ಕೃತಿ ಬಹುಕನ್ನಡಗಳ ಸಮೃದ್ಧಿಯ ಜಗತ್ತನ್ನು ಹೊಕ್ಕಾಡಿದೆ. ತಾನು ಪ್ರವೇಶಿಸುವ ವಸ್ತುವಿನೊಂದಿಗಿನ ಅನುಸಂಧಾನದ ವೈಧಾನಿಕಸ್ಪಷ್ಟತೆಯಲ್ಲಿ ತನ್ನನ್ನೊಂದು ಶಿಸ್ತುಬದ್ಧ ಅಧ್ಯಯನ ಮಾದರಿಯಾಗಿಯೂ ಪರಿಚಯಿಸಿಕೊಂಡಿದೆ. ಈಗಾಗಲೇ ಆಗಿಹೋದ ಸಂಕಲನಗಳಿಗಿಂತ ಭಿನ್ನವಾಗುವ ನೆಲೆಯಿಂದ, ನಿರ್ದಿಷ್ಟ ಪ್ರದೇಶವೊಂದಕ್ಕೆ ಮಿತವಾದ ಒಗಟುಗಳ ಸಂಗ್ರಹಣಾ ವಿಧಾನದಿಂದ ಬೇರೆಯಾಗುವ ಬಗೆ ಮತ್ತು ಕಾರಣಗಳನ್ನು ಸ್ಪಷ್ಟಪಡಿಸಿಕೊಂಡಿದೆ. ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗೆ ಒತ್ತುಕೊಟ್ಟು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿತವಾದ ಒಗಟು ಸಂಕಲನಗಳ ಮಿತಿಯನ್ನು ಗುರುತಿಸುವ ಮೂಲಕ ಅದನ್ನು ಸಮರ್ಥಿಸಿಕೊಂಡಿದೆ. ಈ ಕಾರಣಕ್ಕಾಗಿ ಕರ್ನಾಟಕದ ಯಾವುದಾದರೊಂದು ಪ್ರಾಂತೀಯಭಾಷೆ, ಸಂಸ್ಕೃತಿಯನ್ನು ಪ್ರತಿನಿಧಿಸುವ ಸ್ವರೂಪಕ್ಕಷ್ಟೇ ಸೀಮಿತವಾದ ಆ ಸಂಕಲನಗಳ ಚೌಕಟ್ಟಿನಿಂದ ಬೇರಾಗುವ ಅಗತ್ಯವನ್ನು ಹಂಬಲಿಸಿದೆ. ಈ ಆಶಯದೊಂದಿಗೆ 'ಜನಪದೀಯ'ವಾದ ಸಾಂಪ್ರದಾಯಿಕ ಸೀಮೆ ಅಥವಾ ಪ್ರಾಂತೀಯ ಪ್ರತಿನಿಧೀಕರಣದ ನೆಲೆಯಲ್ಲಿ ಕನ್ನಡದ ಒಗಟುಗಳನ್ನು ಒಟ್ಟಿಗೂಡಿಸಿ ಕನ್ನಡದ ಬಹುತ್ವದ ಸೊಬಗು ಪ್ರತಿಬಿಂಬಿಸುವ ಭಾಷಿಕ ಸಾಂಸ್ಕೃತಿಕ ಪ್ರಾಂತೀಯ ನಕಾಶೆಯೊಂದರ ಅನಾವರಣದ ಯತ್ನವಾಗಿ ಕೃತಿ ತನ್ನನ್ನು ಪ್ರತಿಪಾದಿಸಿಕೊಂಡಿದೆ. ಹೀಗೆ ಸಾಂಪ್ರದಾಯಿಕ ಸೀಮೆ ಅಥವಾ ಪ್ರಾಂತೀಯ ಪ್ರತಿನಿಧೀಕರಣಕ್ಕೆ ಒತ್ತುಕೊಟ್ಟ 'ಕನ್ನಡಂಗಳ ಒಗಟುಗಳು' ಈವರೆಗಿನ ಸಂಗ್ರಹಣಾ ವಿಧಾನದ ಮಿತಿಯನ್ನು ಮನವರಿಕೆ ಮಾಡಿ ಹೊಸಸಾಧ್ಯತೆಗಳ ಕಡೆಗೆ ಬೆಳಕು ಚೆಲ್ಲುವ ಅರ್ಥಪೂರ್ಣ ಪ್ರಯತ್ನ ಮಾಡಿದೆ.

ಕೆಲವೊಂದು ಮೂಲಭೂತ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳುವ ವಸ್ತುವಿಷಯವನ್ನು ಕುರಿತ ವಿಸ್ತಾರ ಪ್ರಸ್ತಾವನೆಯಲ್ಲಿ ಓದುಗರ ಪ್ರವೇಶಕ್ಕೆ ಬೇಕಾದ ಅರ್ಥಪೂರ್ಣ ಪ್ರವೇಶಿಕೆಯೊಂದು ಕೃತಿಗೆ ಸಾಧ್ಯವಾಗಿದೆ. ಅಲ್ಲಿ ಒಗಟು ಎಂದರೇನು? ಒಗಟಿನ ಭಾಷಿಕ ವ್ಯುತ್ಪತ್ತಿಯ ಸಾಧ್ಯತೆಗಳೇನು? ಒಗಟಿಗೆ ಸಮಾನವಾದ ಅನ್ಯಭಾಷಿಕ ರೂಪಗಳು ಯಾವುವು? ಸಮನಾಂತರ ಮಾದರಿಗಳ ನಡುವೆ ಒಗಟು ಎಲ್ಲಿ ಮತ್ತು ಏಕೆ ಭಿನ್ನವಾಗುತ್ತದೆ? ಒಗಟು, ಒಡಪುಗಳ ಸ್ವರೂಪ ಮತ್ತು ಪ್ರಯೋಗ ಸಂದರ್ಭಗಳಲ್ಲಿರುವ ಭಿನ್ನತೆ ಏನು? ಇತ್ಯಾದಿಗಳ ಕುರಿತ ವಿವರವಾದ ಚರ್ಚೆಯನ್ನು ಬೆಳೆಸಲಾಗಿದೆ. ಮೂಲತಃ ಮಾತೊಂದು ಏಕಕಾಲಕ್ಕೆ ಪ್ರಶ್ನೆ ಉತ್ತರ ಎರಡೂ ಆಗಿ ಇರುವ ಅನ್ಯಾದೃಶ ಸಾಧ್ಯತೆಯನ್ನು ಒಗಟುಗಳು ಮುಂದಿಡುತ್ತವೆ. ಮುಖ್ಯವಾಗಿ ಅದೊಂದು ತಾರ್ಕಿಕ ಆಟ. ಆದರೆ ಅದು ಸಾಮಾನ್ಯ ತರ್ಕ ಮತ್ತು ಭಾಷಾ ನಿಯಮಗಳನ್ನು ಮುರಿದಿಕ್ಕಿ ಅರ್ಥವನ್ನು ಹೊಸದಾಗಿ ಸೃಜಿಸುವ ಮೂಲಕ ರೂಪಕ ಶಕ್ತಿಯನ್ನು ಉದ್ದೀಪಿಸುವ ಕ್ರಮ. ಮೇಲ್ನೋಟಕ್ಕೆ ಸಾದೃಶ್ಯವನ್ನು ಕಂಡುಕೊಳ್ಳುವ ಆಟದಂತೆ ಗೋಚರವಾದರೂ ಒಗಟುಗಳು ಭಾಷಿಕ ಹಿಂಪಯಣವನ್ನು ಪ್ರಚೋದಿಸುವುದರ ಮೂಲಕ ಶಬ್ದ ಮತ್ತು ಅರ್ಥಗಳ ನಿಯತ ಸಂಬಂಧವನ್ನು ಮುರಿದುಕಟ್ಟುವ ಸಾಧ್ಯತೆಗಳನ್ನು ತೆರೆಯುತ್ತವೆ. ಕೃತಿ ರೂಪಕವನ್ನು ಕಾವ್ಯ ಮೀಮಾಂಸೆಯ ಕೋಟೆಯಿಂದ ಬಯಲಿಗೆ ಬಿಟ್ಟಂತೆ ಕಾಣುವ ಒಗಟುಗಳ ಈ ಸಾಮರ್ಥ್ಯವನ್ನು ಸೂಕ್ಷ್ಮವಾಗಿ ಗಮನಿಸಿದೆ. ತರ್ಕದ ನಡೆಯುಳ್ಳ ಲಯಬದ್ಧತೆಯ ಸೌಂದರ್ಯದೊಂದಿಗೆ, ಸಂದಿಗ್ಧವಾದ ಪ್ರಾಸಬದ್ಧ ರಚನೆಯಾಗಿ ಮನುಷ್ಯನ ಕಲ್ಪನಾ ಸಾಮಾರ್ಥ್ಯಕ್ಕೆ ವ್ಯಾಯಾಮ ಕೊಡುವ ಮೂಲಕ ಅವು ಸಾಧಿಸುವ ಪರಿಣಾಮದ ಬಗೆಗೆ ವಿಶೇಷ ಅದು ಆಸ್ಥೆ ವಹಿಸಿದೆ. ಅರ್ಥವನ್ನು ಮುಚ್ಚಿಡುವ ಕ್ರಿಯೆಯ ಮೂಲಕ ಬುದ್ಧಿಗಮ್ಯವಾದ ಶಾಬ್ದಿಕ ಸಂಕೇತಗಳನ್ನು



ಬಳಸಿ ಅನುಕ್ತ ವಸ್ತುವೊಂದರ ಅರ್ಥವಿಶದತೆಯನ್ನು ಪ್ರತಿಪಾದಿಸುವ ಈ ಭಾಷಿಕ ಸ್ವರೂಪಗಳ ವಿಶೇಷತೆಯನ್ನು ವಿಸ್ತಾರವಾಗಿ ವಿವರಿಸಿಕೊಂಡಿದೆ. ಹೀಗಾಗಿ ಸಂಕಲನಗೊಳ್ಳುವಾಗ ಒಂದೇ ಅರ್ಥದ ಬೇರೆ ಬೇರೆ ಪ್ರಾಂತೀಯ ಮಾದರಿಗಳನ್ನು ಒಟ್ಟೊಟ್ಟಿಗೆ ತಂದು ಒಗಟುಗಳ ಕಾರ್ಯವಿಧಾನದ ಸ್ವರೂಪವನ್ನೂ ಚನ್ನಾಗಿ ಪರಿಚಯಿಸಿಕೊಡುವುದು ಅದಕ್ಕೆ ಸಾಧ್ಯವಾಗಿದೆ.

ಅಪ್ಪೋತ್ಯಾ ಆಕಾಸ್ಕೆ
ಅವ್ವೋತೀದ್ಮುದೀಕೆ
ಅಣ್ಣೋತ್ಯಾ ಅಂಗ್ಡೀಗೆ
ಅಪ್ಪಾ ಉದ್ದಣಾ ಅವ್ವೆ ಸಿಂಗಾರ್ಲೂಳೆ
ಮಗಾ ಗುಡ್ಡುಗ್ಡೆಂಪಣ್ಣಾ

ಒಂಟ್ ಕಾಲ್ ಪಕ್ಷಿ ಒಂಭೈನೂರು ತತ್ತಿ
(ಅಡಕೆ ಮರ )

ಭಾಷೆಯಂತೆ ಒಗಟಿನ ಜಗತ್ತಿಗೂ ನಿಯಮವಿದೆ. ಪದರಚನೆ ಮತ್ತು ವಾಕ್ಯರಚನಾ ನಿಯಮದ ತಿಳುವಳಿಕೆಯಿಂದ ಭಾಷೆಯಲ್ಲಿ ಹೊಸಪದ ಮತ್ತು ವಾಕ್ಯಗಳ ರಚನೆ ಸಾಧ್ಯವಿದೆ. ಅಂತೆಯೇ ನಿರ್ಮಾಣದ ನಿಯಮವನ್ನು ಆಧರಿಸಿ ಹೊಸ ಒಗಟುಗಳೂ ನಿರಂತರ ಸೃಷ್ಟಿಯಾಗುತ್ತಲೇ ಇರುತ್ತವೆ ಎಂಬುದನ್ನು ಪ್ರತಿಪಾದಿಸುವ ಕೃತಿ, 'ಜನರು ಒಗಟುಗಳನ್ನು ಕಲಿತು ನೆನಪಲ್ಲಿ ಇಟ್ಟುಕೊಳ್ಳುವುದಿಲ್ಲ. ಬದಲಾಗಿ, ಒಗಟನ್ನು ಕಟ್ಟುವ ನಿಯಮಗಳನ್ನು ನೆನಪಲ್ಲಿ ಇಟ್ಟುಕೊಳ್ಳುತ್ತಾರೆ' ಎಂಬ ಎಲ್ಲಿಕೊಂಗಸ್ ಮರಾಂಡ ಅವರ ಅಭಿಪ್ರಾಯವನ್ನು ಉಲ್ಲೇಖಿಸುತ್ತದೆ. ಈ ಹಿನ್ನೆಲೆಯಲ್ಲಿ ಕೃತಿಗೆ ಒಂದು ಭಾಷಿಕ ಸಮುದಾಯದಲ್ಲಿ ಜೀವಂತವಾಗಿರುವ ಒಗಟುಗಳಿಗಿಂತಲೂ, ಒಂದು ಸಂಸ್ಕೃತಿಯಲ್ಲಿ ಒಗಟು ನಿರ್ಮಾಣದ ನಿಯಮಗಳು ಊರ್ಜಿತವಾಗಿಯೇ ಎಂಬುದೇ ಹೆಚ್ಚು ಮುಖ್ಯವಾಗುತ್ತದೆ. ವರ್ಗೀಕರಣದ ವಿಚಾರದಲ್ಲೂ ಮರಾಂಡ ಅವರ ಅಧ್ಯಯನ ಮಾದರಿಯನ್ನೇ ಅನುಮೋದಿಸುತ್ತದೆ. ಪ್ರಶ್ನೆ ಮತ್ತು ಉತ್ತರದ ಭಾಗವಾಗಿ ಒಗಟನ್ನು ವಿಂಗಡಿಸಿ ನೋಡುವುದಕ್ಕಿಂತ, ಅವುಗಳನ್ನು ಸಮಗ್ರವಾದ (ಪ್ರಶ್ನೆ ಮತ್ತು ಉತ್ತರಗಳೆರಡನ್ನೂ ಸಮಗ್ರವಾಗಿ) ಸಂರಚನಾತ್ಮಕ ಏಕಕ(ಸ್ಟ್ರಕ್ಚರಲ್ ಯುನಿಟ್)ವಾಗಿ ಗ್ರಹಿಸಿ ಅಭ್ಯಸಿಸುವ ಮರಾಂಡ ಅವರ ಮಾದರಿಯನ್ನೇ ವೈಜ್ಞಾನಿಕವಾದ ಉಪಯುಕ್ತ ಮಾದರಿಯಾಗಿ ಆಯ್ದುಕೊಳ್ಳುತ್ತದೆ. ಅದಕ್ಕೆಂದೇ ಒಗಟುಗಳ ತಾರ್ಕಿಕ ಸಂರಚನೆಯ ಗುಣಲಕ್ಷಣ ಮತ್ತು ಅಂತಹ ಸಂರಚನೆಗಳ ನಿರ್ಮಾಣ ಪ್ರಕ್ರಿಯೆಯನ್ನು ಶೋಧಿಸುವ 'ಂ ಖಿಡಿಜಜ ಉಡಿಽಾಂ: ಖಿಡಿಚಿಟಿಜಿಂಡಿಟಚಿಣುಂಟಿ ಂಜಿ ಚಿ ಖುಜಜಟಜ ಟಜಣಚಿಖಿಂಡಿ' ಎಂಬ 'ಸೊಲೊಮನ್ ದ್ವೀಪದ ಲಾವೊ ಜನಾಂಗದ ಒಗಟುಗಳ ಸಂರಚನಾತ್ಮಕ ಅಧ್ಯಯನದ' ಮೇಲಿನ ಮರಾಂಡ ಅವರ ಲೇಖನದ ತಿಳುವಳಿಕೆಯನ್ನು ಕೃತಿ ವಿಶೇಷವಾಗಿ ದುಡಿಸಿಕೊಳ್ಳುತ್ತದೆ. ಜಾನಪದ ವಿದ್ವಾಂಸ ಎಲ್ಲಿಕೊಂಗಸ್ ಮರಾಂಡರನ್ನೇ ಅನುಸರಿಸಿ ಒಗಟುಗಳನ್ನು ಪ್ರತಿಮೆ ಮತ್ತು ಉತ್ತರಗಳೆಂಬ ಎರಡು ಭಾಗಗಳಿಂದ ಕೂಡಿದ ರಚನೆಯಾಗಿ ಗ್ರಹಿಸುವ ಸಂಗ್ರಹ, ಈ ಪ್ರತಿಮೆಗಳು ಬಹುಮಟ್ಟಿಗೆ ಪ್ರಶ್ನೆಗಳಾಗಿದ್ದು, ಉತ್ತರಗಳನ್ನು ಒಳಗೊಳ್ಳುವಂತೆ ಕಟ್ಟಲಾದವುಗಳಾಗಿರುತ್ತವೆ ಎಂದು ಪ್ರತಿಪಾದಿಸುತ್ತದೆ. ಈ ಕಾರಣಕ್ಕಾಗಿ ಪ್ರತಿಮೆಯ ಕಟ್ಟುವಿಕೆಯನ್ನಾಧರಿಸಿ ರೂಪಿತವಾದ ಸಂಗ್ರಹವು ಒಗಟಿನ ಪ್ರತಿಮೆಗಳ ಕಾರ್ಯವಿಧಾನದ ಚರ್ಚೆಯನ್ನೂ ಒಳಗೊಂಡು ಬರುತ್ತದೆ. ಹೀಗಾಗಿ ಜಾನಪದ ವಿದ್ವಾಂಸ ಎಲ್ಲಿಕೊಂಗಸ್ ಮರಾಂಡ ಅವರ ಚಿಂತನೆಗಳನ್ನು ಪರಿಚಯಿಸಿ, ಅನ್ವಯಿಸಿಕೊಂಡ ನೆಲೆಯಲ್ಲಿಯೂ ಈ ಒಗಟುಗಳ ಸಂಕಲಗಳ ಅನ್ಯ ಮಾದರಿಗಳಿಗಿಂತ ಭಿನ್ನವಾಗುತ್ತದೆ. ಭಾಷೆ ನಮ್ಮ ಸಂವಹನದ ನಿತ್ಯಮಾಧ್ಯಮ. ಅಂತೆಯೇ ತರ್ಕವೂ ಕೂಡ ನಾವು ನಿತ್ಯ ಬಳಸುವ ಇನ್ನೊಂದು ಮಾಧ್ಯಮ. ತರ್ಕವು ಯಾವುದನ್ನು ಬಳಸಿ ಕಟ್ಟುತ್ತದೆಯೋ ಅದನ್ನೇ ದಾಟಿ ನೋಡಲು ಪ್ರೇರೇಪಿಸುತ್ತದೆ. ತರ್ಕ ಮತ್ತು ಭಾಷೆಗಳ ಪ್ರಾಥಮಿಕ ಉದ್ಯೋಗವೇ ಸಂರಚನೆ. ಅಂತೆಯೇ ಸಂರಚನೆಗಳನ್ನು ಆ ಮಾಧ್ಯಮಗಳನ್ನೇ ಬಳಸಿ ದಾಟಲಾಗುತ್ತದೆ. ಹೀಗೆ ಭಾಷೆಯನ್ನು ಅದರ ಮೂಲಕವೇ ದಾಟುವ, ತರ್ಕವನ್ನು ತರ್ಕದ ಮೂಲಕವೇ ದಾಟುವ ಕ್ರಮವಿದೆ. ಆದರೆ ಸಂರಚನೆಯ ಪ್ರಾಥಮಿಕ ಉದ್ಯೋಗದಲ್ಲಿ ನಿರತವಾದ ಭಾಷೆ ತನ್ನ ಅರ್ಥಕಟ್ಟುವ ಉದ್ಯೋಗಕ್ಕೆ ಬಳಸುವ ಶಾಬ್ದಿಕ ಸಂಕೇತಗಳು ಮತ್ತು ಕಟ್ಟಿದ ಅರ್ಥಗಳು ಶಾಶ್ವತವೆಂಬ ಭ್ರಮೆಯನ್ನು ಮೂಡಿಸುತ್ತವೆ. ಇದು ಕೇವಲ ಭಾಷಿಕ ಸಮಸ್ಯೆ ಅಲ್ಲ; ಬದಲಿಗೆ ಅದೊಂದು ತತ್ವಶಾಸ್ತ್ರೀಯ ಸಮಸ್ಯೆಯೂ ಹೌದು. ಯಾವುದಾದರೊಂದು ಸಂಗತಿಗೆ ನಾಮರೂಪ ಪ್ರದಾನವಾದಾಕ್ಷಣ ಅದು ಸ್ಥಿತ ಶಾಶ್ವತ ಸಂರಚನೆಯೆಂಬ ಭ್ರಮೆ ಮೂಡುತ್ತದೆ. ಭಾಷೆಯ ಗುಣವೇ ಅದು. ಒಗಟುಗಳ ವಿಶೇಷತೆ ಇರುವುದೇ ಇಲ್ಲಿ. ಯಾಕೆಂದರೆ ಅವು ಈ ಭ್ರಮೆಯನ್ನು ಒಡೆದು ಅರ್ಥದ ಉದ್ಯೋಗವನ್ನು ನಿರಂತರ ಹರಿಯುವ ಪ್ರಕ್ರಿಯೆಯನ್ನಾಗಿಸಲು ದುಡಿಯುತ್ತವೆ. ನಾ ನಿಲ್ಲುವಳಲ್ಲ ಎಂಬ ನಿಸರ್ಗಸತ್ಯವನ್ನು ಜೀವಂತಗೊಳಿಸುತ್ತವೆ. ಹಾಗಾಗಿ ಶಬ್ದಾರ್ಥಗಳು ಶಾಶ್ವತ ಸಂರಚನೆಯೆಂಬ ಭ್ರಮೆಯನ್ನು ನಿರಾಕರಿಸಿ ಭಾಷೆಯನ್ನು ಬಳಸಿಕೊಳ್ಳಲು ಮಾಡುವ ಪ್ರಯತ್ನವನ್ನಾಗಿಯೂ ಒಗಟುಗಳನ್ನು ನೋಡಬಹುದಾಗಿದೆ. ಸತ್ಯದ ಖಾತರಿಯಲ್ಲಿ ಬಳಕೆಯಾಗುವ ಇದೆ ಎಂದುಕೊಳ್ಳುವ ಪ್ರತ್ಯಕ್ಷ ಮತ್ತು ತರ್ಕಪ್ರಮಾಣ, ಇಲ್ಲವೆಂದುಕೊಳ್ಳುವ ಅನುಪಲಬ್ಧ ಪ್ರಮಾಣ ಇವುಗಳ್ಯಾವುವೂ ಆತ್ಯಂತಿಕ ಸತ್ಯವಲ್ಲ. ಒಗಟು ಇವೆರಡೂ ಪ್ರಮಾಣಗಳನ್ನು ಪ್ರಯೋಗಿಸಿ ಅವೆರಡನ್ನು ದಾಟುವಂತೆ ಮಾಡುತ್ತದೆ. ಇದಕ್ಕೊಂದು ಸುಂದರ ಉದಾಹರಣೆ ಈ ಸಂಗ್ರಹದಲ್ಲಿದೆ:

ಅತ್ತೂರು ಹೆಣ್ಣಿಗೆ ನೆತ್ತೀಲಿ ಬಸಿರು
ಕಿತ್ತೂರು ಹೆಣ್ಣಿಗೆ ಮ್ಯಾತೇಲಿ ಬಸಿರು
ಮುಂಡೆ ಬಸಿರು ಮೊಳಕೈಯಲ್ಲಿ
(ನೆವಣೆ, ಜೋಳ, ರಾಗಿ)

ನಿತ್ಯದ ಭಾಷಿಕ ರೂಪಗಳನ್ನೇ ಸಂಸ್ಕೃತಿಯ ವರಸೆಯಲ್ಲಿ ಬಳಸಿಕೊಳ್ಳುವ ಒಗಟುಗಳ ತರ್ಕದ ನಡೆ ಆ ಭಾಷಿಕ ರೂಪಗಳ ನಿತ್ಯಾರ್ಥಗಳನ್ನು ನಿರಾಕರಿಸಿ ಇನ್ನೇನನ್ನೋ ಕಟ್ಟುತ್ತವೆ. ಹಾಗೆ ಕಟ್ಟುವ ಹೊಸ ಅರ್ಥಗಳು ಸಂಸ್ಕೃತಿ ಕಥನದಲ್ಲೂ ತೊಡಗಿಕೊಳ್ಳುತ್ತವೆ. ಸಾಮಾಜಿಕ ಸತ್ಯಗಳ ಪ್ರತಿಕಥನಗಳಂತೆಯೂ ಇರುತ್ತವೆ. ಉದಾಹರಣೆಗೆ ಇಲ್ಲಿ ನೆತ್ತಿಯಲ್ಲಿ ತೆನೆ ಬಿಡುವ ನವಣೆ, ಮ್ಯಾತೆಯಲ್ಲಿ (ಗಂಟಲಿನ ಕೆಳಭಾಗ)ದಲ್ಲಿ ಗರ್ಭ ಧರಿಸುವ ಜೋಳ, ಕವಲುಗಳಲ್ಲಿ ಕದಿರಾಗುವ ರಾಗಿಗಳಿವೆ. ಎಲ್ಲವೂ ಉತ್ಪಾದಕ ಶಕ್ತಿಯಾದ ಹೆಣ್ಣಾಗಿ ರೂಪಾಂತರಗೊಂಡಿವೆ. ತೆನೆಗಳೆಲ್ಲ ಬಸಿರಾಗಿವೆ. ಆ ಹೆಣ್ಣುಗಳೂ ಹೆಸರುಳ್ಳ ಹೆಣ್ಣುಗಳಾಗಿವೆ, ಹೆಸರುಗಳಲ್ಲೇ ಸಾಮಾಜಿಕ ರೂಢಿಯ ನಕ್ಷೆಯೂ ಅಡಗಿದೆ. ಮುಖ್ಯವಾಗಿ ರಾಗಿಯ ಬಸಿರಿಗೆ ಸಂಬಂಧಿಸಿ ಬಳಸಲಾದ ಸಾದೃಶ್ಯದಲ್ಲಿ ಹೋಲಿಕೆಯನ್ನು ಮೀರಿದ ಸಾಂಸ್ಕೃತಿಕ ಮಹತ್ವ ಗಮನಿಸಬೇಕು. ರಾಗಿ ಗರ್ಭಾವಸ್ಥೆಗೆ ಬರುವ ಮುಂಚೆ ಕೆಲವು ಸಲ ದನಗಳನ್ನು ಬಿಟ್ಟು ಮೇಯಿಸುತ್ತಾರೆ(ಇದನ್ನು ಗರಿ ಮೇಯಿಸುವುದು ಎನ್ನುತ್ತಾರೆ). ಹೀಗೆ ನೆತ್ತಿ ಬೋಳಾಗಿ ಮೇಲೇರುತ್ತಿದ್ದ ಜೀವರಸ ಅತ್ತ ಇತ್ತ ನುಗ್ಗಿ ಕವಲುಗಳೊಡೆದು ಒಂದೊಂದು ಕವಲೂ ಗರ್ಭ ಧರಿಸುತ್ತವೆ. ಈ ನಿಸರ್ಗ ವ್ಯಾಪಾರವನ್ನು ಇಲ್ಲಿ ತಲೆಬೋಳಾಗಿ ಸಾಮಾಜಿಕ ಅಮಾನ್ಯತೆಯ ಕಾರಣಕ್ಕಾಗಿ ಅಸಹಜ ಎನಿಸಿಕೊಳ್ಳುವ ಮುಂಡೆ ಬಸಿರಿಗೆ ಹೋಲಿಸಿದೆ. ಜೀವದಾಯಕವಾದ ಆಹಾರದ ಕಥನವನ್ನು ನಿಷೇಧಿತ ಬಸಿರ ಕಥನವಾಗಿ ರೂಪಾಂತರಗೊಳಿಸುವ ಮೂಲಕ ಆಹಾರಧಾನ್ಯದ ಕಥನದಾಚೆದೂ ಅದನ್ನು ವಿಸ್ತರಿಸಿದೆ. ಆಹಾರಧಾನ್ಯಗಳ ಈ ತೆನೆಬಿಡುವ ಕಥನವು ತಲೆಬೋಳಿಸಿ ಹೆಣ್ಣಿನ ಸೃಷ್ಟಿಶೀಲತೆಯನ್ನು ತಡೆಯುವ ಸಾಮಾಜಿಕ ಕಟ್ಟಳೆಯ ಸೋಲನ್ನೇ ಖಾತ್ರಿಪಡಿಸಿದೆ. ಮುಂಡೆ ಬಸಿರಾಗಬಾರದೆಂಬ ಸಂಸ್ಕೃತಿಯೊಳಗೆ ಆಕೆ ಬಸಿರಾಗುವುದನ್ನೇ ಹೇಳುವ ಮೂಲಕ ಸಾಮಾಜಿಕ ಸಂರಚನೆಗೊಂದು ನೈಸರ್ಗಿಕ ಪ್ರತಿರಚನೆಯ ಎದುರುಕಥನವನ್ನೂ ಈ ಒಗಟು ಕಟ್ಟುತ್ತದೆ. ಹಾಗಾಗಿ ಈ ಸಂಗ್ರಹದಲ್ಲಿನ ಇಂತಹ ಮಾದರಿಗಳು ಒಗಟುಗಳ ಸ್ವರೂಪ ಚರ್ಚೆಯನ್ನು ದಾಟಿ ಸಾಂಸ್ಕೃತಿಕ ಚರ್ಚೆಯನ್ನು ಬೆಳೆಸಬಲ್ಲವುಗಳಾಗುತ್ತವೆ.

ನುಡಿಯೊಂದಕ್ಕೆ ಒಂದೇ ಅರ್ಥವೆನ್ನುವ ನಿಲುವು ಒಗಟುಗಳಿಗೆ ಸಮ್ಮತವಲ್ಲ. ಅವು ಏಕಾರ್ಥವನ್ನು ಪ್ರಶ್ನಿಸುತ್ತವೆ. ಇನ್ನು ಒಗಟುಗಳಿಗೆ ಪ್ರಯೋಗ ಸಂದರ್ಭ, ತೊಡಗಿಕೊಳ್ಳುವವರ ವಯೋಮಾನ ಲಿಂಗ ಮತ್ತು ಮನುಷ್ಯ ಸಂಬಂಧದ ಆಯಾಮಗಳೂ ಇವೆ. ಸಾಮಾನ್ಯವಾಗಿ ಯೌವ್ವನಸಹಜ ಸಂಯೋಗಾಪೇಕ್ಷಿತ ವಿರುದ್ಧ ಲಿಂಗಗಳ ಮುಖಾಮುಖಿಯೂ ಇದೆ. ಹಾಗಾಗಿ ಬಹುಮಟ್ಟಿಗೆ ಒಗಟುಗಳು ಪಣವಿದ್ದ ಹಾಗೆ. ಅಲ್ಲೊಂದು ಒಡ್ಡುವಿಕೆ ಇದೆ. ಒಡ್ಡಿದ್ದನ್ನು ಒಡೆಯುವುದಿದೆ. ಒಗಟೊಂದನ್ನು ಒಡ್ಡಿದಾಗ ಅದು ತೆರೆಯುವ ಅನೇಕ ಅರ್ಥಗಳ ಮೆರವಣಿಗೆಯೇ ಹೊರಡುತ್ತದೆ. ಒಂದೊಂದನ್ನೇ ತಡೆದು ನೋಡುತ್ತೇವೆ. ಅಲ್ಲಿ ಅನೇಕ ಕಿಡಿಗೇಡಿ ದ್ವಂದ್ವಾರ್ಥಗಳನ್ನೂ ಮೆರವಣಿಗೆಗೆ ತೂರಿಸಿಬಿಟ್ಟು ಆಟ ನೋಡುತ್ತಾರೆ! ಈ ಆಟದಲ್ಲಿ ತೆರೆದುಕೊಳ್ಳುವ ಸಾದೃಶ್ಯಗಳಲ್ಲಿ ಬೇರೇನೋ ಇರುತ್ತವೆ. ಆದರೆ ಕಿಡಗೇಡಿಯಾದರೂ ಅಲ್ಲಿ ಕೇಡಿಲ್ಲ. ಅದಲ್ಲದೆ ಯಾವುದನ್ನು ನಾವು ಕಿಡಿಗೇಡಿ ಎಂದು ಸಣ್ಣಗೆ ನಗುತ್ತೇವೆಯೋ ಅದಕ್ಕೊಂದು ಸಾಂಸ್ಕೃತಿಕ ಹಿನ್ನೆಲೆಯೂ ಇರುವುದನು ಮರೆಯಬಾರದು.

ಬುಡ್ಡು ಹುಡುಗಿ ಗುದ್ದಿದರೆ ಮನೆ ತುಂಬ ಮಕ್ಕಳು (ಬೆಳ್ಳುಳ್ಳಿ)

ಕುಬಸಾ ಕಳಿ
ಖೋಲ್ಯಾಗ ನಡಿ (ಬಾಳೆ ಹಣ್ಣು)


ಬಡ ಬಡ ಬಂದಾ
ಅಂಗೀ ಕಳದಾ
ಬಾವ್ಯಾಗ ಇಳಿದಾ (ಬಾಳೆ ಹಣ್ಣು)

ಕಶಾಲ ಮೂಳಾ ಕುಬಸಾ ಹರದಿ

ಅಲ್ಲದ ಮೂಳಾ ಗಲ್ಲಾ ಕಡದಿ
ಸಿಟ್ಟಿನ ಮೂಳಾ ಬಟ್ಟಿ ಹರದಿ (ಬಾಳೆ ಹಣ್ಣು-ಪೇರಲ ಹಣ್ಣು ಗ್ವಜ್ಜರಿ)
ಮಾತನಾಡುವುದು ಯಾವಾಗ
ಎದುರಿಗೆ ಕುಳಿತಾಗ
ಅಳೋದು ಕರೆಯೋದು ಯಾವಾಗ
ಅರ್ಧಂಬರ್ಧ ಒಳಗೆ ಹೋದಾಗ
ನಗೋದು ನೆಗೆಯೋದು ಯಾವಾಗ
ಪೂರ್ತಿ ಒಳಗೆ ಹೋದಾಗ
(ಬಳೆ ತೊಡಿಸುವುದು)



ಇಂತಹ ನೂರಾರು ಬಗೆಯ ಒಗಟುಗಳ ಮೂಲಕ ಕರ್ನಾಟಕದ ಬೇರೆ ಬೇರೆ ಸೀಮೆಗಳು ಕನ್ನಡವನ್ನು ಒಡನಾಡಿದ ಬಗೆಯನ್ನು ಈ ಬೃಹತ್ ಸಂಕಲನ ಯಶಸ್ವಿಯಾಗಿ ಪರಿಚಯಿಸುತ್ತದೆ. ಆದರೆ ಇದು ಪೊಳ್ಳು ಧಾರ್ಮಿಕತೆಯ ಅಬ್ಬರದಲ್ಲಿ ಕಸುಬು, ಶ್ರಮ, ನಿಸರ್ಗವಿವೇಕಗಳು ದನಿ ಕಳೆದುಕೊಳ್ಳುತ್ತಿರುವ ಕಾಲ. ಎಲ್ಲವನ್ನೂ ಏಕತ್ರಗೊಳಿಸಿ ಬಹುತ್ವವನ್ನು ಅಳಿಸಿ ಹಾಕುತ್ತಿರುವ ವ್ಯಾಪಾರೀಕರಣದ ಯಜಮಾನಿಕೆಯ ಕಾಲ. ಇಂತಹ ಸಹಜಸಂವೇದನೆಗಳನ್ನೇ ನಿರಾಕರಿಸುವ ಯುಗದ ಸಹಜತೆಯ ಪರವಾದ ಈ ಒಗಟುಗಳ ಸಂಗ್ರಹ ನಮ್ಮ ಇಂದ್ರಿಯಗಳಿಗೆ ಚೈತನ್ಯ ಒದಗಿಸುವಂತಿದೆ. ಮುಖ್ಯವಾಗಿ ಈ ಒಗಟುಗಳೆಲ್ಲವೂ ಜನಪದರ ಹತ್ತಾರು ಕಸಬುಗಳನ್ನೆ ಉಸಿರಾಡಿವೆ. ದುಡಿಮೆ, ಬೆವರು ಮತ್ತು ತೊಡಗಿಕೊಳ್ಳುವಿಕೆಯನ್ನು ಅಪಮಾನಿಸದ ಶ್ರಮಪರ ಜೀವನಮೌಲ್ಯವನ್ನು ಈ ಒಗಟುಗಳ ಜಗತ್ತು ಬಹಳ ಪ್ರೀತಿಯಿಂದ ತನ್ನದೆಂದೇ ಅಪ್ಪಿಕೊಂಡಿದೆ. ಅಲ್ಲಿ ನಮ್ಮ ಸುತ್ತಲಿನ ಗಿಡಮರ, ಪಶು ಪಕ್ಷಿಗಳೆಲ್ಲ ಸಮಾನವಾಗಿ ಪಾಲ್ಗೊಂಡಿವೆ. ಅಲ್ಲಿ 'ಕೇಡಿಲ್ಲವಾಗಿ ಒಲಿದಂತೆ ಹಾಡಿದ' ರೂಪಗಳು ತಮ್ಮ ಸಹಜರೂಪದಲ್ಲಿಯೇ ಸೇರಬೇಕಾದ ಜಾಗದಲ್ಲಿ ಸೇರಿ ಮಾಲೆಗೊಂಡಿವೆ. ಹೀಗೆ ರಾಜ್ಯದ ಹತ್ತಾರು ಮೂಲಗಳ ಸಂಗ್ರಹವನ್ನು ಸೋಸಿ ತೆಗದು ನಮ್ಮ ವಾಸನೆಗಳನ್ನು ಜಾಗೃತಗೊಳಿಸುವಂತಿರುವ ಪುಸ್ತಕವೆಂಬ ಪ್ರೀತಿಯಲ್ಲೇ ತೆರೆಯಬೇಕಾದ ಪುಸ್ತಕವೊಂದನ್ನು ಶಿವರಾಮ ಶೆಟ್ಟರು ಶ್ರಮವಹಿಸಿ ಕಟ್ಟಿದ್ದಾರೆ. ಹೀಗೆ ಕಟ್ಟಲಾದ ಈ ಕಟ್ಟುವಿಕೆ ಈಗಾಗಲೇ ಇರುವ ಹತ್ತರಲ್ಲಿಯ ಹನ್ನೊಂದರ ಸೇರ್ಪಡೆಯಲ್ಲ. ಕನ್ನಡ ಮತ್ತು ತುಳು ಜಾನಪದ ಕ್ಷೇತ್ರದಲ್ಲಿ ಸ್ಮರಣೀಯ ಕೆಲಸ ಮಾಡಿದ ಕರಾವಳಿ ಮತ್ತು ಕನ್ನಡನೆಲದ ಅನೇಕ ಜಾನಪದ ವಿದ್ವಾಂಸರ ಹಳೆಯ ಮಾದರಿಯನ್ನು ದಾಟಿ ಜಾನಪದ ಸಂಪಾದನಾ ವಿಧಾನದಲ್ಲಿ ಭಿನ್ನ ಮಾದರಿಯೊಂದನ್ನು ತೆರೆಯುವ ಸೂಚನೆಯನ್ನೂ ನೀಡಿದ ಮಹತ್ವದ ಕೃತಿಯೂ ಆಗಿದೆ.



# ಮುಕುಟವಾದ್ಯಗಳಾದ ಸೂರ್ಯವಾದ್ಯ ಮತ್ತು ಚಂದ್ರ ವಾದ್ಯ

ಪ್ರೊ. ಎಸ್.ಎ.ಕೃಷ್ಣಯ್ಯ

ಕರ್ನಾಟಕದಲ್ಲಿ ಅನೇಕ ಬಗೆಯ ಚರ್ಮ ವಾದ್ಯಗಳಿದ್ದು ಸಾಮಾಜಿಕ ಹಾಗೂ ಆಚರಣಾತ್ಮಕ ಹಿನ್ನೆಲೆಯಲ್ಲಿ ಬಳಸುವುದನ್ನು ಗಮನಿಸಬಹುದಾಗಿದೆ.

ಜನಪದ ಚರ್ಮವಾದ್ಯಗಳಾದ 'ಸೂರ್ಯವಾದ್ಯ' ಮತ್ತು 'ಚಂದ್ರವಾದ್ಯ' ಪ್ರಕಾರವು ಕರಾವಳಿ ಕರ್ನಾಟಕ ಹಾಗೂ ಉತ್ತರ ಕರ್ನಾಟಕಗಳಲ್ಲಿ ಈ ಮುಕುಟವಾದ್ಯಗಳು ಇತ್ತೆಂಬುದನ್ನು ತಿಳಿಯಬಹುದು. ಈ ವಾದ್ಯಗಳು ಹೆಚ್ಚಾಗಿ ಮಠ, ದೇವಾಲಯಗಳಲ್ಲಿನ ಉತ್ಸವದಲ್ಲಿ ಉಪಯೋಗಿಸುತ್ತಿದ್ದರು. ಸುಮಾರು 1940-ರ ದಶಕದಲ್ಲಿ ಈ ಮುಕುಟವಾದ್ಯಗಳನ್ನು ಸಾಂಪ್ರದಾಯಿಕವಾಗಿ ಪಂಚವಾದ್ಯಗಳ ಜತೆಯಾಗಿ ಸೇರ್ಪಡಿಸಿ ನುಡಿಸುವ ರೂಢಿ ಮಠ ಹಾಗೂ ದೇವಾಲಯ ಉತ್ಸವ ಸಂದರ್ಭದಲ್ಲಿ ನುಡಿಸುತ್ತಿದ್ದರೆಂಬುದಾಗಿ ತಿಳಿಯಲಾಗಿದೆ.

ಸೂರ್ಯವಾದ್ಯ: ಎಂಟು ಹತ್ತು ಇಂಚು ವ್ಯಾಸವುಳ್ಳ ಕಬ್ಬಿಣ ಅಥವಾ ಹಿತ್ತಾಳೆಯ ಬಳೆಗೆ ಆಡಿನ ಚರ್ಮದ ಹೊದಿಕೆ ಬಿಗಿಗೊಳಿಸಿ, ವಾದ್ಯಕಾರ ತನ್ನ ಹಣೆಯ ಮುಂಭಾಗಕ್ಕೆ ಬರುವಂತೆ ಧರಿಸುತ್ತಿದ್ದ. ತಲೆಯ ಮುಂಭಾಗದಲ್ಲಿ ಕಟ್ಟಿಕೊಳ್ಳಲು ಈ ವಾದ್ಯಕ್ಕೆ ತನ್ನದೇ ಆದ ವಿಶೇಷ ಕೊಂಡಿಗಳಿರುವ ವ್ಯವಸ್ಥೆ ಇರುವುದು. ಆಕಾರದಲ್ಲಿ ವೃತ್ತಾಕಾರ ಹೊಂದಿರುವ ಈ ವಾದ್ಯವನ್ನು 'ಸೂರ್ಯವಾದ್ಯ' ಎಂದು ಕರೆಯಲಾಗಿದೆ. ಇದೇ ಮುಕುಟವಾದ್ಯ ಕೊಂಚ ಭಿನ್ನವಾಗಿ ಅರ್ಧಚಂದ್ರಾಕೃತಿಯನ್ನು ಹೋಲುವಂತೆ ಆಕಾರದಲ್ಲಿ ತೋರ್ಪಡಿಸಿದ್ದರಿಂದ 'ಚಂದ್ರ ವಾದ್ಯ' ಎಂಬುದಾಗಿ ಕರೆಯಲಾಗಿದೆ. ಸೂರ್ಯ ಹಾಗೂ ಚಂದ್ರಾಕೃತಿಯ ಈ ಎರಡೂ ವಾದ್ಯಗಳನ್ನು 1982ರಲ್ಲಿ ಹುಬ್ಬಳ್ಳಿಯ ಮಠ ಪರಂಪರೆಯಲ್ಲಿ ಬಳಸುತ್ತಿದ್ದುದನ್ನು ಗಮನಿಸಲಾಗಿದೆ. (ಸಂದರ್ಶನ ಮಾಹಿತಿ- 4-4-1982).

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ದೇವಾಲಯಗಳಲ್ಲಿ ಪ್ರಚಲಿತವಿದ್ದ ಅಂಗಭೋಗ ಮತ್ತು ರಂಗಭೋಗ ಸೇವೆಗಳಲ್ಲಿ, ದೇವರ ಉತ್ಸವ ಮೂರ್ತಿ ಬಲಿ (ಪ್ರದಕ್ಷಿಣೆ) ಬರುವಾಗ ಲಘು ಕುಣಿತವು ತಂತ್ರಿಗಳಿಂದ ಜರುಗುತಿತ್ತು. ಈ ಸೇವೆಯಲ್ಲಿ ದೇವಡಿಗ ಯಾನೆ ಶೇರಿಗಾರ ವಂಶಸ್ಥರು ಅಥವಾ ಪಾಟಳಿಗಳೆಂಬ ವರ್ಗದವರು ವಾದ್ಯಗಳನ್ನು ನರ್ತನಕ್ಕೆ ಹೊಂದುವಂತೆ ನುಡಿಸುತ್ತಿದ್ದರು, ಇದರ ಜೊತೆಯಾಗಿ ಮುಕುಟವಾದ್ಯ ಬಳಸುತಿದ್ದುದು ಗಮನಾರ್ಹ. ದೇವರ ಬಲಿ-ಉತ್ಸವವನ್ನು ನೋಡುತ್ತಾ ಹಿಮ್ಮುಖವಾಗಿ ವಾದ್ಯವನ್ನು (ಸೂರ್ಯ-ವಾದ್ಯಕಾರ) ನುಡಿಸಿಕೊಂಡು ಹೋಗುವುದು ಒಂದು ಸಂಪ್ರದಾಯವಾಗಿತ್ತು. ಜೊತೆಯಲ್ಲಿ ಚಾಮರ ಸೇವೆಯ ನರ್ತಕಿಯರು ದೇವರ ಉತ್ಸವದಲ್ಲಿ ಹಿಮ್ಮುಖ ನಡಿಗೆಯಿಂದ ಪಾಲ್ಗೊಳ್ಳುತ್ತಿದ್ದರು. (ಇಂದು ಈ ಬಗೆಯ ಸೇವೆಗಳು ಹಾಗೂ ಮುಕುಟವಾದ್ಯ ನುಡಿಸುವಿಕೆ ಅಪರೂಪವಾಗಿದೆ).

'ಸೂರ್ಯವಾದ್ಯ'-ನುಡಿಸುವವರು ಮತ್ತು ಈ ವಾದ್ಯ ಪರಿಚಯ ಉಳ್ಳವರು ಇಂದು ಕಾಣ ಸಿಗುವುದೇ ಅಪರೂಪವಾಗಿದೆ. ಈ ವಾದ್ಯದ ಧ್ವನಿ ಕಂಚಿನ ಸ್ವರದಂತೆ ಹೊರ ಮೂಡಿ ಎಲ್ಲ ಚರ್ಮ ವಾದ್ಯಗಳಿಗಿಂತ ಭಿನ್ನವಾಗಿರುವುದು ಇದರ ವಿಶೇಷತೆ. ಸಧ್ಯದ ಸ್ಥಿತಿಯಲ್ಲಿ ಈ ಮುಕುಟವಾದ್ಯಗಳನ್ನು ನುಡಿಸುವವರು ಬಹು ವಿರಳವಾಗಿದ್ದು ಒಂದಲ್ಲ ಒಂದು ದಿನ '..ಇತ್ತೆಂಬ..'-ಕೋಶಕ್ಕೆ ಸೇರಿ ವಸ್ತು ಸಂಗ್ರಹಾಲಯದಲ್ಲಿಯೋ ಅಥವಾ ದಾಖಲಾತಿ ಕೇಂಧ್ರಗಳಲ್ಲಿ ಉಳಿಯುವ ಸ್ಥಿತಿಗೆ ಬರಬಹುದು ಎಂದರೂ ತಪ್ಪಾಗದು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಸೂರ್ಯವಾದ್ಯ'-ವನ್ನು ಕರಾರುವಕ್ಕಾಗಿ ನುಡಿಸುವ ಏಕೈಕ ಕಲಾವಿದ ಶ್ರೀ ದುಗ್ಗ ದೇವಡಿಗ ಇವರು ಪ್ರಸಿದ್ಧರಾಗಿದ್ದರು. ಇವರ ಕಾಲಾನಂತರ ಕೋಟೇಶ್ವರದಲ್ಲಿ ಹಾಗೂ ಉಡುಪಿಯಲ್ಲಿ 'ಸೂರ್ಯವಾದ್ಯ' ಹೊಂದಿರುವ ಕಲಾವಿದರಿದ್ದಾರೆ. ಇತ್ತಿಚಿಗೆ ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರ ಹಾಗ್ಯೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಡೆಸಿದ ವಾದ್ಯಗಳ ಸಮಗ್ರ ಮಾಹಿತಿಯನ್ನು ಸಾಕ್ಷೀಕರಣಗೊಳಿಸಿದೆ.

ಉತ್ತರ ಕರ್ನಾಟಕ ಧಾರವಾಡ-ಹುಬ್ಬಳ್ಳಿಯ ಮೂರು ಸಾವಿರ ಮಠ ಪರಂಪರೆಯಲ್ಲಿ ಈ ಮುಕುಟವಾದ್ಯಗಳು ಪಂಚವಾದ್ಯಗಳಲ್ಲಿ ಸೇರ್ಪಡೆಯಾಗಿ ನುಡಿಸುತ್ತಿದ್ದರೆಂಬುದಾಗಿ ಶ್ರೀ ವೀರಭದ್ರಪ್ಪ ಎಂಬ ಕಲಾವಿದನಿಂದ ತಿಳಿಯಲಾಗಿದೆ (ಸಂದರ್ಶನ:4-4-1982). ಶ್ರೀ ಮಠದ ಜಗದ್ಗುರುಗಳು ವಿಶೇಷವಾಗಿ ಅಡ್ಡ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೊರಟಾಗ ಈ ಮುಕುಟವಾದ್ಯಗಳನ್ನು ನುಡಿಸುವುದು ಒಂದು ಸಂಪ್ರದಾಯವಾಗಿತ್ತು. ಬುಹಶಃ ಸೂರ್ಯ-ಚಂದ್ರ-ರ ಸಾಕ್ಷಿಯೆಂದು ಅಭಿವ್ಯಕ್ತಿಸುವ ಈ ಸಂಕೇತವು ಲೋಕದೃಷ್ಟಿಯ (ಘಾಂಡಿಟಜ-ಗಿಜಿತಿ) ಪ್ರತೀಕವಾಗಿ ಬಳಕೆಯಾಗಿರುವುದನ್ನು ಇಲ್ಲಿ ಗಮನಿಸಬಹುದು. ಇಂದಿಗೂ ಸೂರ್ಯ-ಚಂದ್ರ-ರ ಚಿಹ್ನೆಗಳನ್ನು ಧರ್ಮ ಪರಂಪರೆಯ ಮೆರವಣಿಗೆಯ ಬಿರುದಾವಳಿಗಳಲ್ಲಿನ ಧ್ವಜಗಳಲ್ಲಿ ಕಾಣಬಹುದಾಗಿದೆ.



ಉತ್ತರ ಕರ್ನಾಟಕದ ಸೂರ್ಯವಾದ್ಯ ನುಡಿಸುವ ವಾದ್ಯ ಪ್ರಕಾರಗಳಲ್ಲಿ ಅಥವಾ ಮೇಳದಲ್ಲಿ ಒಟ್ಟಾಗಿ ಆರು ಜನ ಕಲಾವಿದರು ಒಂದುಗೂಡಿ ನುಡಿಸುತ್ತಿರುವುದನ್ನು ಗಮನಿಸಲಾಗಿದೆ. ಸಾಮಾನ್ಯ ಹೇಳಿಕೆಯಲ್ಲಿ ಇದನ್ನು ಪಂಚವಾದ್ಯಗಳ ಮೇಳ ಎಂಬುದಾಗಿ ಕರೆಯುವರು. ಮೇಳದಲ್ಲಿ ಬಳಸುವ ವಾದ್ಯಗಳು ಮುಖ್ಯವಾಗಿ 'ಡಮರು' 'ಸೂರ್ಯವಾದ್ಯ', 'ಚಂದ್ರವಾದ್ಯ', 'ಮುಖವೀಣೆ'(ಎರಡು ಜನ ಕಲಾವಿದರು) (ಮಹಾರಾಷ್ಟ ಕರ್ನಾಟಕ ಗಡಿಭಾಗಗಳಲ್ಲಿ 'ಮುಖವೀಣೆ'-ಗೆ 'ಸುಂದರಿ'

ವಾದ್ಯ ಎಂತಲೂ ಕರೆಯುವರು) ಮತ್ತು ಕೈ-ತಾಳ ಈ ಸಮಾಗಮದ ನಾದ ಪಂಚವಾದ್ಯದ ಸಂಗೀತವಾಗಿ ಹೊಮ್ಮುತ್ತಿತ್ತು. ಶ್ರೀ ಮಲ್ಲಿಕಾರ್ಜುನಪ್ಪ (ಸು.1894–1969) ಕಲಾಕಾರರು ಹುಬ್ಬಳ್ಳಿ ಸಂಸ್ಥಾನದ ಮಠದಲ್ಲಿ ಮುಕುಟವಾದ್ಯ ನುಡಿಸುವುದರಲ್ಲಿ ಖ್ಯಾತಿಗಳಿಸಿದ ಕಲಾವಿದರಾಗಿದ್ದರು. ಇವರ ತರುವಾಯ ಉತ್ತರ ಕರ್ನಾಟಕದಲ್ಲಿ ಮುಕುಟವಾದ್ಯ ಬಳಕೆ ಕ್ಷೀಣಿಸುತ್ತಾ ಬಂದಿರುವುದಾಗಿ ತಿಳಿಯಲಾಗಿದೆ. (ಸಂದರ್ಶನ-ಟಿಪ್ಪಣಿ-4-4-1982)

**ಮುಕುಟವಾದ್ಯದವರ ವೇಷ-ಭೂಷಣ ಮತ್ತು ಸಂಪ್ರದಾಯ**

ಮುಕುಟವಾದ್ಯ ನುಡಿಸುವವರು (ಉತ್ತರ ಕರ್ನಾಟಕ) ಲಿಂಗಧಾರಣೆಯಾಗಿರಬೇಕು. ಎರಡು ರುದ್ರಾಕ್ಷಿ ಮಣಿಯನ್ನು ಲಾಂಛನವಾಗಿ ಕೊರಳಲ್ಲಿ ಧರಿಸಿರಬೇಕು. ವೀರಶೈವ ಪಂಗಡದ ಮೊತ್ತೊಂದು ವರ್ಗ ಪಂಚಮಶಾಲಿ ಬೆಡಗಿನವರು ಒಂದು ರುದ್ರಾಕ್ಷಿಕಾಯಿ ಮಣಿಯನ್ನು ಧರಿಸಿ ಲಿಂಗಾಧಾರಣೆ ದೀಕ್ಷೆಗೆ ಒಳಗಾದರೆ ಮುಕುಟವಾದ್ಯ ನುಡಿಸಲು ಧಾರ್ಮಿಕ ಹಕ್ಕು ಹೊಂದಿದವರಾಗುತ್ತಾರೆ.

ಕಲಾವಿದರು ಶ್ವೇತವರ್ಣದ ದೋತ್ರ (ಪಂಚೆ) ಜುಬ್ಬ (ಕುರ್ತ) ಹಾಗೂ ತಲೆಗೆ ಕೆಂಪು ರುಮಾಲು ಧರಿಸಿ, ಅದರ ಮೇಲ್ಭಾಗಕ್ಕೆ ಮುಕುಟವಾದ್ಯ ಕಟ್ಟಿಕೊಳ್ಳುತ್ತಿದ್ದರು. ಮುಕುಟವಾದ್ಯಗಳಾದ 'ಸೂರ್ಯವಾದ್ಯ' 'ಚರ್ಮವಾದ್ಯ'-ಗಳಿಗೆ

ಜಿಂಕೆ ಚರ್ಮವನ್ನು ಹೊರಮೈ ಕವಚವಾಗಿ ಉತ್ತರ ಕರ್ನಾಟಕದಲ್ಲಿ ಬಳಸುತ್ತಿದ್ದುದಾಗಿ ತಿಳಿದುಬಂದಿದೆ. ಇಂದು ಜಿಂಕೆ ಚರ್ಮ ಲಭ್ಯ ಇಲ್ಲದಿರುವುದರಿಂದ ಆಡಿನ ಚರ್ಮ ಬಳಸುವುದು ಪದ್ಧತಿಯಾಗಿದೆ. ಉತ್ತರಕರ್ನಾಟಕದಲ್ಲಿ ಈ ವಾದ್ಯಗಳ ಅಲಂಕರಣಕ್ಕಾಗಿ 1962ರ ತರುವಾಯ ಕೆಂಪು, ನೀಲ, ಹಳದಿ ಬಣ್ಣದ ಕುಚ್ಚುಗಳನ್ನು ವಾದ್ಯದ ಹೊರಭಾಗಕ್ಕೆ ಸೇರ್ಪಡೆಗೊಳಿಸಿರುವರು.

ಮುಕುಟ ವಾದ್ಯ ನುಡಿಸಲು ಕೈ-ಚಳಕದ ತಂತ್ರ ಹಾಗೂ ತಾಳ ಜ್ಞಾನ ಅಗತ್ಯ. ಕಲಾಕಾರ ತನ್ನ ಹಣೆಯ ಮುಂಭಾಗಕ್ಕೆ ಧರಿಸಿದ 'ಸೂರ್ಯವಾದ್ಯ' ಅಥವಾ 'ಚಂದ್ರವಾದ್ಯ'-ದ ಎರಡೂ ಮಗ್ಗಲುಗಳಿಗೆ ತಾಡನ ಮಾಡುವ ತಂತ್ರಕ್ಕೆ ಕಿರುಬೆರಳು ಗಾತ್ರದ ಛಡಿ (ಬೆತ್ತ) ಹಾಗೂ ಬಾಗಿರುವ 'ಗುಣಿಕೆ' ಉಪಯೋಗಿಸುವರು. ವಾದ್ಯದ ಬಲಭಾಗಕ್ಕೆ ಕಲಾಕಾರ ಛಡಿ-ಯ (ಬೆತ್ತ) ಮೂಲಕ ತಾಳದ ಪೆಟ್ಟುಗಳನ್ನು (ಬೋಲ್ಸ್) ನುಡಿಸಿದರೆ, ತನ್ನ ಎಡಕೈ 'ಗುಣಿಕೆ'-ಯಿಂದ ಲಯ ಅನುಸರಿಸಿ ವಾದ್ಯದ ಮಧ್ಯಭಾಗವನ್ನು ಉಜ್ಜುತ್ತಾ ಮಂದ್ರ ಸ್ವರ ಹೊರಡಿಸುವನು. ಎಡಭಾಗದಲ್ಲಿನ ವಾದ್ಯದ ಹೊರಮೈಗೆ (ಮಧ್ಯ ಭಾಗಕ್ಕೆ) ಗೇರು ಬೀಜದ ಎಣ್ಣೆ ಹಾಗೂ ಸುಟ್ಟ ಹುಲ್ಲಿನ ಕರಿ-ಮಸಿಯನ್ನು ಮಿಶ್ರಯಿಸಿ ವಿಶೇಷವಾದ 'ಗಸಿ' (ಮಂದವಾದ ಅಂಟು) ಲೇಪಿಸಿರುತ್ತಾನೆ. ಕಲಾಕಾರಿ ಎಡಕೈ 'ಗುಣಿಕೆ'-ಯಿಂದ ಗಸಿಲೇಪಿತ ನಡುಭಾಗಕ್ಕೆ ಉಜ್ಜಿದಾಗ ಮಂದ್ರಸ್ವರ ಹೊಮ್ಮುವುದು. ಮಂದ್ರಸ್ವರದ ನಾದ ಹಾಗೂ ಬಲಕೈಯಿಂದ ಬೀಳುವ ಛಡಿ (ಬೆತ್ತದ) ಪೆಟ್ಟುಗಳ (ನುಡಿತಗಳ) ಸಮ್ಮಿಶ್ರಣದ ನಾದ ಕಂಚಿನ ಸ್ವರದ ಮಾಧುರ್ಯದಂತೆ ತೇಲಿ ಬರುವುದು. ಪ್ರತಿಬಾರಿ ಮುಕುಟವಾದ್ಯಗಳನ್ನು ಬಿಗಿಗೊಳಿಸಲು ಬೆಂಕಿಯಿಂದ ಕಾಯಿಸಿಕೊಳ್ಳುವ ಔಚಿತ್ಯ ಅವಶ್ಯವಿರುತ್ತದೆ ಹಾಗೂ ಮಂದ್ರ ಸ್ವರ ಬರುವಲ್ಲಿನ ಭಾಗಕ್ಕೆ ಒಣಹುಲ್ಲಿನ ಕರಿಯನ್ನು (ಮಸಿ) ಗಸಿ ಹಚ್ಚಿದ ಭಾಗಕ್ಕೆ ಲೇಪನ ಮಾಡಿಕೊಳ್ಳಲೇಬೇಕು, ಇಲ್ಲವಾದರೆ ಮಂದ್ರ ಸ್ವರದ ನಾದ ಸರಿಯಾಗಿ ಹೊರ ಹೊಮ್ಮಲಾರದು ಎಂದು ಕಲಾವಿದರ ಅಭಿಪ್ರಾಯ.

ಧಾರ್ಮಿಕ ಸಮಾರಂಭಗಳಲ್ಲಿ ಈ ಮುಕುಟವಾದ್ಯಗಳನ್ನು ಹೆಚ್ಚಾಗಿ ಬಳಸುತ್ತಿದ್ದು ಇತ್ತೀಚೆಗೆ ವಾದ್ಯಗಳನ್ನು ನುಡಿಸುವುದು ತೀರಾ ಅಪರೂಪವಾಗಿದೆ. ಈ ವಾದ್ಯ ಪರಂಪರೆ ಶೃಂಗೇರಿ ಮಠ ಪರಂಪರೆಯಲ್ಲಿಯೂ ಇದ್ದಿತು ಎಂಬುದು ಗಮನಾರ್ಹ. ಆಂಧ್ರ ಪ್ರದೇಶ ಹಾಗೂ ತಮಿಳು ನಾಡಿನಲ್ಲಿ ಈ ಮುಕುಟವಾದ್ಯಗಳು ಬಳಕೆಯಲ್ಲಿದ್ದುದಾಗಿ ಪುಣೆಯ ದಾಖಲತಿ ಸಂಗ್ರಹಾಲಯದ ಕೇಂದ್ರದಿಂದ ತಿಳಿಯಬಹುದಾಗಿದೆ. ತೆಲುಗಿನಲ್ಲಿ 'ಸೂರ್ಯವಾದ್ಯ'-ಕ್ಕೆ 'ಸೂರ್ಯ ಪಿರಾಯಿ'-ಎಂತಲೂ 'ಚಂದ್ರ ವಾದ್ಯ'-ಕ್ಕೆ 'ಚಂದ್ರ ಪಿರಾಯಿ' ಎಂದು ಕರೆದಿರುವರು.



# ಆದಿಜಾಂಬವ ಮಾತಂಗ ಪರಂಪರೆಯಲ್ಲಿ ವರ್ಣಸಂಕರ ಹಾಗೂ ಅಂತರ್ಜಾತಿ ವಿವಾಹಗಳು

ಡಾ. ವಡ್ಡಗೆರೆ ನಾಗರಾಜಯ್ಯ

ಕಾಡಿನಲ್ಲಿ ವಾಸಿಸುವ ಹಿಂಸ್ರ ಪ್ರಾಣಿಗಳೊಂದಿಗೆ ತಾನೂ ಕಾಡಿನಲ್ಲಿ ವಾಸಿಸುವ ಕಾಡುಮನುಷ್ಯನಾಗಿದ್ದ ಮಾನವ, ತನ್ನ ಕಾಮವನ್ನು ತೀರಿಸಿಕೊಳ್ಳಲು ಕಿರಾತಕವಾಗಿ ವರ್ತಿಸುತ್ತಿದ್ದನು. ಪ್ರಾಣಿಗಳಂತೆ ಸ್ವೇಚ್ಛೆಯಾಗಿ ಲೈಂಗಿಕತೆಯಲ್ಲಿ ಮತ್ತು ಸೃಷ್ಟಿಕ್ರಿಯೆಗಳಲ್ಲಿ ತೊಡಗಿದ್ದ ಮಾನವನು ಹಂತ ಹಂತವಾಗಿ ಬುದ್ಧಿ ವಿಕಾಸವಾದಂತೆ ಕಾಡನ್ನು ತೊರೆದು ನಾಡು ಕಟ್ಟಿ ಸಾಮಾಜಿಕ ಬದುಕನ್ನು ನಿರ್ಮಿಸಿಕೊಂಡು ಪ್ರೇಮದ ವಿನ್ಯಾಸಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಪ್ರೇಮಜೀವನದ ವಿಸ್ಮಯಗಳಿಂದ ಆಕರ್ಷಿತನಾದನು. ಕ್ರಮೇಣ ಪ್ರೇಮ ಸಂಬಂಧಗಳು ಕುಟುಂಬ ವ್ಯವಸ್ಥೆಯಾಗಿ ಮಾರ್ಪಟ್ಟು ಮದುವೆಯಂತಹ ಸಾಮಾಜಿಕ ಸಂಬಂಧಗಳನ್ನು ಬೆಸೆಯುವ ಉಪಕ್ರಮಗಳನ್ನು ಶೋಧಿಸಿದ ಮಾನವ ಕುಟುಂಬ ವ್ಯವಸ್ಥೆಯನ್ನು ಬುಡಕಟ್ಟನ್ನಾಗಿ ಜಾತಿ ಜನಾಂಗವನ್ನಾಗಿ ವಿಸ್ತರಿಸಿಕೊಂಡು ಈ ಇಪ್ಪತ್ತೊಂದನೆ ಶತಮಾನಕ್ಕೆ ಅಡಿಯಿರಿಸಿದ್ದಾನೆ.

ಸಂಘಟಿತಗೊಂಡ ಸಹಜೀವನ ಪದ್ಧತಿಯೊಳಗೆ, ಕೌಟುಂಬಿಕ ಭದ್ರತೆಯ ಅನುಕೂಲಕ್ಕಾಗಿ 'ಜಾತಿ'ಯ ಆವರಣವನ್ನು ನಿರ್ಮಿಸಿಕೊಂಡು ಮದುವೆಯ ಒಪ್ಪಂದ ಅಥವಾ ಪವಿತ್ರ ಬಂಧನದೊಳಗೆ ಸಂತಾನಶಕ್ತಿಯ ಸಿದ್ಧಿಗಳನ್ನು ದಾಂಪತ್ಯ ನಿಷ್ಠೆಯಿಂದ ಪಡೆಯಬೇಕೆಂಬುದು ಮಾನವನೇ ರೂಪಿಸಿಕೊಂಡ ಒಂದು ಪರಿಮಿತ ಸಾಮಾಜಿಕ ನಿರ್ಮಿತಿ. ಇಂತಹ ಪರಿಮಿತ ನಿರ್ಮಿತಿಗಳಲ್ಲಿ ಬಂದಿಯಾದವರು ಕಾಲ, ಪರಿಸ್ಥಿತಿ ಸನ್ನಿವೇಷಗಳಿಗನುಗುಣವಾಗಿ ತಮ್ಮ ಪ್ರೇಮ-

ಕಾಮದ ಬಗೆಯ ದೃಷ್ಟಿಕೋನಗಳನ್ನು ಕೆಲವು ಮಂದಿ ಬದಲಾಯಿಸಿಕೊಂಡು ಇಡೀ ವ್ಯವಸ್ಥೆಯನ್ನೇ ಬದಲಾಯಿಸಲು ತಮ್ಮಿಂದ ಸಾಧ್ಯವಿಲ್ಲದಿದ್ದರೂ ತಮ್ಮ ಮಟ್ಟಿಗಾದರೂ ವ್ಯವಸ್ಥೆಯು ನಿರ್ಮಿಸಿದ ಪರಿಮಿತ ಸಾಮಾಜಿಕ ರಚನೆಗಳನ್ನು ವಿವಾಹಗಳಿಂದ ಮುರಿಯಲು ಪ್ರಯತ್ನಿಸುತ್ತಾರೆ. ವ್ಯವಸ್ಥೆಯು ಒಡ್ಡುವ ಸವಾಲುಗಳನ್ನು ಹಾಗೂ ಅನ್ಯಜಾತಿಯ ದಬ್ಬಾಳಿಕೆಯನ್ನು ವಿರೋಧಿಸುವ ಮೂಲಕ ತಮ್ಮ ಪ್ರೇಮ-ಕಾಮದ ಸಂಬಂಧಗಳನ್ನು ರಕ್ಷಿಸಿಕೊಳ್ಳಲು ಪಣತೊಟ್ಟ ಪ್ರೇಮಿಗಳು ಹೋರಾಟಕ್ಕಿಳಿಯುತ್ತಾರೆ. ಸಂಪ್ರದಾಯ ನಿಷ್ಠ ಜಾತಿಮನಸ್ಸುಗಳಿಗೆ ಇದೆಲ್ಲವೂ ಸಾಮಾಜಿಕ ಕಟ್ಟುಪಾಡುಗಳ ಉಲ್ಲಂಘನೆಯಾಗಿ, ಧಾರ್ಮಿಕ ಮೌಲ್ಯಗಳನ್ನು ಪತನಗೊಳಿಸುವ ಕ್ರಿಯೆಗಳಾಗಿ ಕಾಣಿಸುತ್ತವೆ.

ಆದರೆ ಆಯಾ ಕಾಲವು ವೈಚಾರಿಕ ಕ್ರಾಂತಿ ವೈಜ್ಞಾನಿಕ ತಿಳುವಳಿಕೆ, ಪ್ರಗತಿಪರತೆಯ ಉತ್ಕರ್ಷದ ಘಟ್ಟ ತಲುಪಿದ ಪ್ರತಿಯೊಂದು ಚಾರಿತ್ರಿಕ ಸಂದರ್ಭಗಳಲ್ಲಿಯೂ ಸಮಾಜದ ಯಾವುದಾದರೊಂದು ಆವರಣದಲ್ಲಾದರೂ ವ್ಯಕ್ತಿಸ್ವಾತಂತ್ರ್ಯವನ್ನು ಎತ್ತರಿಸುವ ನಿಟ್ಟಿನಲ್ಲಿ ವ್ಯವಸ್ಥೆಯ ಕಟ್ಟುಪಾಡುಗಳನ್ನು ವಿರೋಧಿಸಿದ ಘಟನೆಗಳು ಜರುಗಿರುತ್ತವೆ.

ಜಾತಿಯ ಕಟ್ಟು ಪಾಡುಗಳನ್ನು ತಿರಸ್ಕರಿಸಿ ಜಾತಿಯಾಚೆಗಿನ ತಮ್ಮ ಪ್ರೇಮವನ್ನು ಯುವ ಜೋಡಿಯೊಂದು ವ್ಯಕ್ತಪಡಿಸಿದರೆ ಅದು ವ್ಯಕ್ತಿ ಸ್ವಾತಂತ್ರ್ಯಕ್ಕೆ ತಮ್ಮನ್ನು ತೆರೆದುಕೊಳ್ಳುವ ಪ್ರಯತ್ನವೆಂದು ಅರಿಯಬೇಕು. ಆದರೆ ಪ್ರಜಾಪ್ರಭುತ್ವ ಸರ್ಕಾರದ ನ್ಯಾಯಾಂಗ ವ್ಯವಸ್ಥೆಗೆ ಪರ್ಯಾಯವಾದ ಜಾತಿ ಪಂಚಾಯತ್‌ಗಳು ನಮ್ಮಲ್ಲಿವೆ. ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಉಲ್ಲಂಘಿಸಿ ಮದುವೆಯಾಗುವ ಯುವಕ ಯುವತಿಯರಿಗೆ ಮರಣದಂಡನೆ ಶಿಕ್ಷೆ ನೀಡುವ ಸ್ವಯಂ ಘೋಷಿತ ಅಧಿಕಾರವನ್ನು ಈ ಜಾತಿ ಪಂಚಾಯತ್‌ಗಳು ಹೊಂದಿವೆ. ಇಷ್ಟಿದ್ದೂ ಯಾವುದೇ ಕಾರಣಕ್ಕೂ ಅಂತರ್ಜಾತೀಯ, ಅಂತರ್‌ಧರ್ಮೀಯ ಅಂತರ್ವರ್ಣೀಯ, ಮುಂತಾದ ವಿವಾಹಗಳನ್ನು ಸಂಪೂರ್ಣ ತೊಡೆದು ಸಗೋತ್ರೀಯ ಹಾಕಲು ಸಾಧ್ಯವಾಗಲಾರದು. ಆಧುನಿಕ ಸರ್ಕಾರಗಳ ಇಂದಿನ ಕಾಲದಲ್ಲಿ ಗಂಡು-ಹೆಣ್ಣಿನ ನಡುವಿನ ಒಂದು ಪವಿತ್ರ ಸಂಸ್ಕಾರ, ಒಪ್ಪಂದ ಎಂದು ಹೇಳಲಾಗುತ್ತಿದ್ದ ವಿವಾಹ ಸಂಬಂಧವು ಪ್ರೀತಿ, ಸ್ವಾತಂತ್ರ್ಯ, ಪರಸ್ಪರ ಗೌರವ ಮತ್ತು ಸಮಾನತೆಯ ಅಂಶಗಳ ಮೇಲೆ ನಿಂತಿದೆ.

ಜಾತಿ ಪದ್ಧತಿಯಿಂದಾಗಿ ಬಹುಸಂಖ್ಯಾತ ಶೂದ್ರಾತಿಶೂದ್ರರು ಹಾಗೂ ವರ್ಣಬಾಹಿರ ಅಸ್ಪೃಶ್ಯ ಕುಟುಂಬಗಳಲ್ಲಿ ಹುಟ್ಟಿದ ಲಕ್ಷಾಂತರ ಪ್ರತಿಭಾವಂತ ಮಕ್ಕಳು ಶೋಷಣೆಗಳಿಗೆ ಗುರಿಯಾಗಿ ಅವರ ಪ್ರತಿಭೆಯು ಎಳವೆಯಲ್ಲಿಯೇ ಮುರುಟಿ ಹೋಗಿರುತ್ತದೆ. ಶತಶತಮಾನಗಳಿಂದ ನಡೆಯುತ್ತಿರುವ ಈ ಸಾಮಾಜಿಕ ಅನ್ಯಾಯಕ್ಕೆ ಕಾರಣವಾದ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಅಂತರ್ಜಾತಿ ವಿವಾಹವು ಮಹತ್ವದ ದಿಟ್ಟ ಹೆಜ್ಜೆಯಾಗಬಲ್ಲದು. ಅಂತರ್ಜಾತಿ ವಿವಾಹದಿಂದ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲವಾದರೂ ಜಾತಿ ಪದ್ಧತಿಯ ಬಿಗಿಕಟ್ಟುಗಳನ್ನು ಸಡಿಲಿಸಲು ಅಂತರ್ಜಾತಿ ವಿವಾಹಗಳು ನೆರವಿಗೆ ಬರುತ್ತವೆ. ಅಂತರ್ಜಾತಿ ವಿವಾಹಗಳು ಜಾತಿ ಪದ್ಧತಿಯಷ್ಟೇ ಪುರಾತನವಾದವುಗಳಾಗಿದ್ದು ದೇವರುಗಳಾದ ಶಿವ, ಬ್ರಹ್ಮ, ಕೃಷ್ಣ, ತಿರುಪತಿ ವೆಂಕಟರಮಣ, ಮೈಲಾರಲಿಂಗ ಮುಂತಾದವರು ತಮ್ಮದಲ್ಲದ ಅನ್ಯಜಾತಿಗಳಹೆಣ್ಣುಗಳನ್ನು ವರಿಸಿದರೆಂದು ಪುರಾಣಗಳಲ್ಲಿ ಹೇಳಲಾಗಿದೆ. ಬಿಳಿಗಿರಿ ರಂಗಯ್ಯನು ಸೋಲಿಗರ ಬುಡಕಟ್ಟು ಹೆಣ್ಣುಮಗಳನ್ನು ಮದುವೆಯಾದರೆ, ಮೇಲುಕೋಟೆ ಚೆಲುವನಾರಾಯಣನು ಮುಸ್ಲೀಮರ ವೈರಮುಡಿಯನ್ನು ಅಂತರ್‌ಧರ್ಮೀಯ ವಿವಾಹವಾಗುವುದರೊಂದಿಗೆ ಸ್ಥಾಪಿತ ವ್ಯವಸ್ಥೆಯನ್ನು ಮುರಿಯುವ ಪ್ರಯತ್ನ ಮಾಡಿದರೆಂಬ ಜಾನಪದ ಕತೆಗಳಿವೆ.

ಸನಾತನ ಹಿಂದೂ ಧರ್ಮದ ಹಲವಾರು ಋಷಿ-ಮುನಿಗಳು ತಮ್ಮ ಜಾತಿಯವರಲ್ಲದ ಹೆಣ್ಣುಗಳನ್ನು ಮದುವೆಯಾದರೆಂದು, ಅವರ ಪೈಕಿ ವಸಿಷ್ಠ-ಅರುಂಧತಿ, ಜಮದಗ್ನಿ - ರೇಣುಕೆ, ಪರಾಶರ-ಮತ್ಸ್ಯಗಂಧಿ ಮತ್ತು ವಿಶ್ವಾಮಿತ್ರ-ಮೇನಕೆಯರ ಮದುವೆಗಳನ್ನು ಪ್ರಮುಖ ಅಂತರ್ಜಾತಿ ಹಾಗೂ ವರ್ಣಸಂಕರ ವಿವಾಹಗಳಾಗಿ ಉದಾಹರಿಸಲಾಗುತ್ತಿದೆ.

ಮಾದಿಗರ ಕದರನು ತಾನು ಬ್ರಾಹ್ಮಣ ಜಾತಿಗೆ ಸೇರಿದವನೆಂದು ಸುಳ್ಳು ಹೇಳಿ, ತನ್ನ ನಿಜ ಗುರುತನ್ನು ಬಿಚ್ಚಿಟ್ಟು ಬ್ರಾಹ್ಮಣರ ಶ್ರೀ ಬಾಲಗೌರಿಯನ್ನು ಮದುವೆ ಮಾಡಿಕೊಂಡಂತೆಯೇ, ಮಾದಿಗರ ಜಾಂಬವತಿಯನ್ನು

ಯಾದವರ ನಾಯಕನಾದ ಶ್ರೀಕೃಷ್ಣನು ಮದುವೆಯಾಗಿರುವಂತೆಯೇ, ಬ್ರಾಹ್ಮಣರ ವಸಿಷ್ಠಮುನಿ ಮಾದಿಗರ ಆರಂಜ್ಯೋತಿಯನ್ನು ಅಂತರ್ಜಾತಿ ವಿವಾಹ ಮಾಡಿಕೊಳ್ಳುತ್ತಾನೆ. ವಸಿಷ್ಠ ಮುನಿಯು ಮಾದಿಗರ ಆರಂಜ್ಯೋತಿಯನ್ನು ಮದುವೆಯಾದನೆಂದು, ಆ ಮೂಲಕ ಬ್ರಾಹ್ಮಣರು ಮಾದಿಗರ ಬಂಧುಗಳೆಂದು ಮತ್ತು ವಸಿಷ್ಠನು ಮಾದಿಗರ ಅಳಿಯನೆಂದು ಮಾಸ್ತೀಕರು ಹೇಳುತ್ತಾರೆ. ಬಾಪೋಲ್ಲು ಬಾಪೋಲ್ಲು ಅಂದೂರಯ್ಯ ಜನಲು

ಬಾಪೋಡು ಮಾ ಬಂಧುಗುಡಯ್ಯ ॥
ಆರಂಜ್ಯೋತಿ ಮಾ ಇಂಟಿ ಆಡಾಬಿಡ್ಡ
ಬ್ರಾಹ್ಮಣುಡು ಮಾ ಇಂಟಿ ಅಲ್ಲೂಡಯ್ಯ ॥
ಬ್ರಾಹ್ಮಣ ಬ್ರಾಹ್ಮಣರು ಅನ್ನೂವರಯ್ಯ ಜನರು
ಬ್ರಾಹ್ಮಣರು ನಮ್ಮ ಮನೆ ಬಂಧುಗಳಯ್ಯ ॥
ಅರುಂಧತಿ ನಮ್ಮ ಮನೆ ಮಗಳಯ್ಯ
ಬ್ರಾಹ್ಮಣನು ನಮ್ಮ ಮನೆಯಳಿಯನಯ್ಯ ॥ತಾಲಿಲ್ಲೋ॥ (ಲಕ್ಷ್ಮೀಪತಿ ಕೋಲಾರ, ಪುಟ:262)

ಎಲ್ಲ ಜಾತಿ ಜನಾಂಗ, ಧರ್ಮಗಳಲ್ಲಿ ಸಂಭವಿಸಿರುವಷ್ಟೇ ಸಹಜವಾಗಿ ಆದಿಜಾಂಬವ ಮಾತಂಗ ಪರಂಪರೆಯ ಮಾದಿಗರಲ್ಲಿಯೂ ಸಹ ಅಂತರ್ಜಾತೀಯ ಹಾಗೂ ಅಂತರ್‌ಧರ್ಮೀಯ ವಿವಾಹಗಳು ನಡೆದಿರುತ್ತವೆ. ವರ್ಣಸಂಕರಕ್ಕೆ ಕಾರಣವಾದ ಮೊಟ್ಟಮೊದಲ ಆದರ್ಶ ಅಂತರ್ಜಾತಿ ವಿವಾಹದ ಉದಾಹರಣೆಯಾಗಿ ಬ್ರಾಹ್ಮಣ ಮಹರ್ಷಿ ವಸಿಷ್ಠ ಮತ್ತು ಮಾದಿಗರ ಆರಂಜ್ಯೋತಿ (ಅರುಂಧತಿ) ನಡುವೆ ನಡೆದ ವಿವಾಹವನ್ನು ಹೆಸರಿಸಲಾಗುತ್ತಿದೆ.

ಭಾರತೀಯ ವಿವಾಹ ಸಂಬಂಧಗಳಲ್ಲಿ ಮಹಿಳೆಯ ಪಾತ್ರವನ್ನು ಪರಿಶೀಲಿಸಿದಾಗ ಬಹುಪಾಲು ವಿವಾಹ ಸಂಬಂಧಗಳು ಪಿತೃಪ್ರಧಾನ ವ್ಯವಸ್ಥೆಯ ಆವರಣದಲ್ಲಿಯೇ ನಡೆದಿರುವುದು, ಈಗಲೂ ಹಾಗೆಯೇ ಮುಂದುವರೆಯುತ್ತಿರುವುದು ಕಂಡುಬರುತ್ತದೆ. ಮನುಸ್ಮೃತಿಯಲ್ಲಿ ಉಲ್ಲೇಖಿತವಾಗಿರುವ 'ಹುಟ್ಟಿದಾಗ ಹೆಣ್ಣು ತಂದೆಯ ಆಶ್ರಯದಲ್ಲಿರಬೇಕು. ಬೆಳೆದಾಗ ಗಂಡನ ಆಶ್ರಯದಲ್ಲಿ ವಯಸ್ಸಾದಾಗ ಮಗನ ಆಶ್ರಯದಲ್ಲಿರಬೇಕು" ಎನ್ನುವ ವಾದವು ಮಹಿಳೆಯನ್ನು ಬಂಧಿಸಿ ಅಬಲಳನ್ನಾಗಿಸಿತ್ತು. ಈ ವಾದವು 'ಸಮಾನತೆ'ಯನ್ನು ಮೂಲಭೂತ ಹಕ್ಕಾಗಿ ಅನುಚ್ಛೇದ 21ರಲ್ಲಿ ಸಂವಿಧಾನವು ಖಾತರಿಪಡಿಸಿರುವ ಮೂಲತತ್ವಕ್ಕೆ ವಿರುದ್ಧವಾಗಿದೆ. ಏಕೆಂದರೆ ಮನುವಾದದ ಅನ್ವಯ ಮಹಿಳೆಯು ಪುರುಷನ ಆಶ್ರಯದಲ್ಲಿದ್ದ ಪಕ್ಷದಲ್ಲಿ ಅವಳ ಶಿಕ್ಷಣ, ಆರ್ಥಿಕತೆ, ಪ್ರತಿಭೆ, ಲೈಂಗಿಕತೆ, ಉದ್ಯೋಗ ಎಲ್ಲವೂ ಪುರುಷನಒಡೆತನದಲ್ಲಿರುತ್ತದೆ. ಆಗ ಅವಳು ಪುರುಷನಿಗೆ ಸಮಾನಳಾಗಲಾರಳು. ಆದರೆ ಆದಿಜಾಂಬವ ಮಾತಂಗ ಪರಂಪರೆಯ ಕಥನಗಳು ನಮಗೆ ಮಾತೃ ಪ್ರಧಾನ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತವೆ.

ಆದಿಜಾಂಬವ ಮಾತಂಗ ಪರಂಪರೆಯಲ್ಲಿ ಮಹಿಳೆಯು ಪುರುಷನಿಗಿಂತಲೂ ಮೇಲು ಸ್ಥಾನವನ್ನು ಹೊಂದಿದ್ದಳೆಂಬುದು ವಸಿಷ್ಠ ಮತ್ತು ಆರಂಜ್ಯೋತಿಯರ ನಡುವೆ ನಡೆದ ಅಂತರ್ಜಾತಿ ವಿವಾಹದಿಂದ ತಿಳಿದು ಬರುತ್ತದೆ. ಶ್ರೇಣೀಕೃತ ಹಿಂದೂ ಜಾತಿ ವ್ಯವಸ್ಥೆಯಲ್ಲಿ ಅಂತರ್ಜಾತಿ ವಿವಾಹಕ್ಕೆ ಉತ್ತೇಜನವಿಲ್ಲದಾಗ ಬ್ರಾಹ್ಮಣರ ವಸಿಷ್ಠ ಮಹರ್ಷಿಯು, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹವಿದ್ದ ಮಾತೃಪ್ರಧಾನ ವ್ಯವಸ್ಥೆಯ ಮಾದಿಗರ ಬಳಿಗೆ ಬರುತ್ತಾನೆ. ಮಾದಿಗರ ಆರಂಜ್ಯೋತಿಯನ್ನು ವಿವಾಹವಾಗಿ ಅವಳೊಂದಿಗೆ ಅತ್ಯಂತ ಘನತೆಯಿಂದ ಕುಟುಂಬವನ್ನು ಸ್ಥಾಪಿಸಿ ಬದುಕುತ್ತಾನೆ. ಕೋಟಿಗಾನಹಳ್ಳಿ ರಾಮಯ್ಯನವರ 'ಸಿಂದ್ ಮಾದಿಗರ ಸಂಸ್ಕೃತಿ' ಕೃತಿಯಲ್ಲಿ ಮಾದಿಗರ ಆರಂಜ್ಯೋತಿ ಮತ್ತು ಬ್ರಾಹ್ಮಣರ ವಸಿಷ್ಠಮುನಿಯ ನಡುವೆ ನಡೆದ ಅಂತರ್ಜಾತಿ ವಿವಾಹ ಪ್ರಸಂಗವನ್ನು ಹೀಗೆ ಉಲ್ಲೇಖಿಸಲಾಗಿದೆ:

ವಾರಕಾಂತೆ ಮಗನು ವಶಿಷ್ಟನಲ್ಲವೆ
ವಶಿಷ್ಟ ನಮ್ಮನೆಯ ಸೋದರಳಿಯ ॥ತಾಲಿಲ್ಲೋ॥
ವಿಶಿಷ್ಟ ನಮ್ಮನೆಯ ಭಾರ್ಯೆಯ ಮದುವೆಯಾಗಿ
ಹೆಣ್ಣ ತಕ್ಕಂಡೋಗಿ ಕುಂತಾನಲ್ಲ ॥ತಾಲಿಲ್ಲೋ॥
ಹಳೆಯ ಗೋಡೆಗಳಲ್ಲಿ ಮಾದ್ಗಿತ್ತಿ ಇದ್ದಾರೆ

ಮನಸೋತು ಹೋದವನು ಹಾರವನು ॥ತಾಲಿಲ್ಲೋ॥ (ಕೋಟಿಗಾನಹಳ್ಳಿ ರಾಮಯ್ಯ, ಪುಟ:270,271)

ಹಿಂದೂ ವಿವಾಹ ಸಂಪ್ರದಾಯದ ಪ್ರಕಾರ "ಹಿಂದೂ ವಿವಾಹವು ಸಪ್ತಪದಿಯ ಏಳನೆ ಹೆಜ್ಜೆ ಇಟ್ಟಾಗ ಮುಕ್ತಾಯವಾಗುತ್ತದೆ." ಆದರೆ ಮಾದಿಗರು ಸಪ್ತಪದಿಯನ್ನು ವಿವಾಹ ಪದ್ಧತಿಯನ್ನಾಗಿ ಅನುಸರಿಸದೆ ವಸಿಷ್ಠನಿಗೆ 'ಗಲ್ಲೆಬಾನಿಯ ಉದಕದಲ್ಲಿ ಜಳಕ ಮಾಡಿಸಿ' 'ಚರ್ಮದ ತುಂಡನ್ನು ಕೊರಳಿಗೆ ಕಟ್ಟಿ' ಆರಂಜ್ಯೋತಿ ಕಲ್ಯಾಣ ಮಾಡಿ ಮಾದಿಗರ ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ಹಾಗೂ ವಸಿಷ್ಠನಿಂದ ವಧುದಕ್ಷಿಣೆಯಾಗಿ 'ತೆರ'ವನ್ನು ವಸೂಲಿ ಮಾಡುತ್ತಾರೆ. ಗಂಡಿಗೆ 'ವರ ದಕ್ಷಿಣೆ' ನೀಡುವುದು ಮಾದಿಗರ ಪದ್ಧತಿಯಲ್ಲ. ಬದಲಾಗಿ ಹೆಣ್ಣಿಗೆ 'ತೆರ'ವನ್ನು ವಧುದಕ್ಷಿಣೆಯಾಗಿ ನೀಡುವ ಪದ್ಧತಿಯನ್ನು ಮಾದಿಗರು ಅನುಸರಿಸುತ್ತಾರೆ. ವಸಿಷ್ಠ–ಅರುಂಧತಿಯರ ವರ್ಣಸಂಕರ ವಿವಾಹ ಅಥವಾ ಅಂತರ್ಜಾತಿ ವಿವಾಹ ಆದಿಜಾಂಬವ ಜನಾಂಗದಲ್ಲಿ ಒಂದು ಹೊಸ ಸಾಂಸ್ಕೃತಿಕ ಚಲನಶೀಲತೆಗೆ ಕಾರಣವಾಯಿತೆಂಬುದು ಹಿಂದೂ ವಿವಾಹ ಸಂಪ್ರದಾಯದಲ್ಲಿ ಅನುಸರಿಸುವ 'ಅರುಂಧತಿ ನಕ್ಷತ್ರ ದರ್ಶನ' ಪದ್ಧತಿಯಿಂದ ನಮಗೆ ಮನವರಿಕೆಯಾಗುತ್ತದೆ. ಆದಿಜಾಂಬವರ ಸಾಮಾಜಿಕ ಘನತೆಯನ್ನು ಎತ್ತರಿಸುವ ಆರಂಜ್ಯೋತಿ–ವಸಿಷ್ಠರ ಮದುವೆ ಕುರಿತಾದ ಎರಡು ಕಥೆಗಳು ಹೀಗಿವೆ.

**ಆರಂಜ್ಯೋತಿ ಕಲ್ಯಾಣ – 1**

ಬಹಳ ಹಿಂದೆ ಕೈಲಾಸ ಪರ್ವತದ ಬುಡದಲ್ಲಿದ್ದ ಗಂಗಸ್ಥಲದ ಮಾತಂಗಿಪುರದ ಗೋಸಂಗಿ ಕುಲದ ಮಾದಿಗರ ಕುಟುಂಬವೊಂದರಲ್ಲಿ ಏಳು ಜನ ಅಣ್ಣಂದಿರಿಗೆಒಬ್ಬಳೇ ತಂಗಿಯಾಗಿ ಹುಟ್ಟಿದ ಆರಂಜ್ಯೋತಿ ಬಾಲ್ಯದಲ್ಲಿಯೇ ಶಿವಧ್ಯಾನಾಸಕ್ತಳಾಗಿ ಪೂಜೆ ಪುನಸ್ಕಾರ ವ್ರತ ನೇಮಾದಿಗಳಲ್ಲಿ ತೊಡಗಿದ್ದಳು. ಆಕೆ ಸುರಸುಂದರಿ. ಆಕೆಯ ರೂಪಲಾವಣ್ಯ, ಬೆಡಗು–ಬಿನ್ನಾಣ, ಒನಪು–ವೈಯಾರ, ಹಾವಭಾವಗಳು ಎಲ್ಲರಂತಿರದೆ ಅಪ್ರತಿಮ ತೇಜಸ್ಸಿನಿಂದ ಕಂಗೊಳಿಸುತ್ತಿದ್ದಳು. ಕೈಲಾಸ ಪರ್ವತದ ಕಾಡಿನಲ್ಲಿ ಶಿವಯೋಗಿಗಳು ಸಾಧುಸಂತರು ಮುಂತಾದ ಶಿವಭಕ್ತರಿಗೆ ಹಣ್ಣು ಹಂಪಲು ಗೆಡ್ಡೆಗೆಣಸುಗಳನ್ನು ಒದಗಿಸುತ್ತಾ ಶಿವನ ಒಲುಮೆಗೆ ಪಾತ್ರಳಾಗಿದ್ದಳು. ಲೋಕಕಲ್ಯಾಣಕ್ಕಾಗಿ ಅವತರಿಸಿ ಬಂದ ಮಹಾಮಾಯಾಶಕ್ತಿಯ ಸ್ವರೂಪವೆಂಬಂತಿದ್ದ ಆರಂಜ್ಯೋತಿಯು ಪತಿವ್ರತಾ ಶಕ್ತಿಗಳನ್ನು ಬಾಲ್ಯದಲ್ಲಿಯೇ ಸಿದ್ಧಿಸಿಕೊಂಡಿದ್ದಳು. ಹಾಗಾಗಿ ಪತ್ನೀವ್ರತನಾದ ಪುರುಷನೇ ತಮ್ಮ ತಂಗಿಗೆ ಏಳೇಳು ಜನ್ಮಗಳಲ್ಲಿ ಗಂಡನಾಗಿ ದೊರಕುವಂತೆ ಅವಳ ಅಣ್ಣಂದಿರು ಶಿವನಿಂದ ವರವ ಬೇಡಿದರು. ತಂದೆ–ತಾಯಿಗಳ, ಬಂಧು–ಬಳಗದವರ, ನೆರೆಹೊರೆಯವರ ಹಾಗೂ ಎಲ್ಲರಿಗಿಂತ ಮಿಗಿಲಾಗಿ ತನ್ನ ಏಳು ಜನ ಅಣ್ಣಂದಿರ ಅಕ್ಕರೆಯ ಸಕ್ಕರೆ ಗೊಂಬೆಯಾಗಿದ್ದ ಆರಂಜ್ಯೋತಿಗೆ ಅನುರೂಪನಾದ ಗಂಡನನ್ನು ದೊರಕಿಸುವ ಜವಾಬ್ದಾರಿ ಶಿವಪಾರ್ವತಿಯರ ಮೇಲೆ ಬಿದ್ದಿತ್ತು.

ಪಾರ್ವತಿದೇವಿಯು ಅರುಂಧತಿಯ ಪಾತಿವ್ರತ್ಯ ಶಕ್ತಿಯನ್ನು ವಿವಾಹ ಪೂರ್ವದಲ್ಲಿಯೇ ಪರೀಕ್ಷಿಸಿ ಅವಳಿಗೆ ತಕ್ಕನಾದ ಸಂಪನ್ನ ಯುವಕನನ್ನು ಕರುಣಿಸುವಂತೆ ಶಿವನಿಗೆ 'ರೆಕಮೆಂಡ್' ಮಾಡಿದಳು. ಪಾರ್ವತಿಯ ಆಣತಿಯಂತೆ ಅರುಂಧತಿಯ ಪಾತಿವ್ರತ್ಯವನ್ನು ಪರೀಕ್ಷಿಸುವ ಸಲುವಾಗಿ ಶಿವನು ಜಂಗಮ ವೇಷಧಾರಿಯಾಗಿ ಮಾತಂಗಿಪುರದ ಗೋಸಂಗಿ ಕುಲದ ಮಾದಿಗರ ಆರಂಜ್ಯೋತಿಯ ಮನೆಗೆ ಬಂದನು. ಎರಡು ಉಕ್ಕಿನ ಹಣ್ಣುಗಳನ್ನು ಒಂದು ಹಿಡಿ ಕಬ್ಬಿಣದ ಕಡಲೆಯನ್ನು ಆರಂಜ್ಯೋತಿಯ ಕೈಗೆ ನೀಡಿ, ಅವುಗಳಿಂದ ಪಾನಕ ಮಾಡಿ, ಹುರಿಗಡಲೆ ಹುರಿದು ಕೊಡಬೇಕೆಂದು ಕೇಳಿದನು. ಆಗ ಆರಂಜ್ಯೋತಿಯು ಶಿವನನ್ನು ಪ್ರಾರ್ಥಿಸಿ ಉಕ್ಕಿನ ಹಣ್ಣುಗಳನ್ನು ಹೋಳುಗೊಯ್ದು ಕಿವುಚಿ ಪಾನಕ ಮಾಡಿ, ಕಬ್ಬಿಣದ ಕಡಲೆಯನ್ನು ಹುರಿದು ಹುರಿಗಡಲೆ ಮಾಡಿಕೊಟ್ಟಳು. ಮೆಚ್ಚಿದ ಶಿವನು ಆರಂಜ್ಯೋತಿಯ ಅಣ್ಣಂದಿರು ಕೋರಿದಂತಹ ಯುವಕನು ಒಲಿದು ಬಂದು ಆತನೇ ಎಲ್ಲ ಜನ್ಮಗಳಲ್ಲಿಯೂ ಅವಳಿಗೆ ಗಂಡನಾಗಲಿ ಎಂದು ಅನುಗ್ರಹಿಸಿದನು. ಆದರೂ ಅವಳ ತಂದೆ–ತಾಯಿಗಳಿಗೆ ಹಾಗೂ ಅಣ್ಣಂದಿರಿಗೆ ಮದುವೆ ಮಾಡುವ ಲೋಕವ್ಯಾಪಾರದ ದರ್ಶನವಾಗಲೆಂದು ಬಯಸಿದ 'ಜಗನ್ನಾಟ' ಆಡುವ ಶಿವನು, ಗಂಡುಗಳು ಹೆಣ್ಣು ಕೇಳಲೆಂದು ಆರಂಜ್ಯೋತಿಯ ಮನೆಗೆ ಹೋಗಿಬರುವಂತೆ 'ಮಾಯ್ಕಾರ ಇದ್ಯ' ತೋರಿಸುತ್ತಿದ್ದನು. ಹೆಣ್ಣು ಕೇಳಲು ಬಂದ ಗಂಡುಗಳೆಲ್ಲಾ ಆಕೆಯ ರೂಪುಲಾವಣ್ಯ, ಹಾವಭಾವಗಳನ್ನು ನೋಡುತ್ತಿದ್ದಂತೆಯೇ ಏನೋ ಒಂದು ರೀತಿಯ ಭಯ, ಗೌರವ, ಭಕ್ತಿಭಾವನೆ ಉಕ್ಕಿಬಂದಂತಾಗಿ ನಮಸ್ಕರಿಸಿ ಹಾಗೆಯೇ ಹಿಂತಿರುಗಿ ಹೋಗುತ್ತಿದ್ದರು.

ಹೀಗಾಗಿ ಅನೇಕ ವರ್ಷಗಳ ಕಾಲ ಆರಂಜ್ಯೋತಿಗೆ ಕಂಕಣಭಾಗ್ಯ ಕೂಡಿ ಬರಲಿಲ್ಲ. ಹೀಗಿರಲು ಒಂದು ದಿನ ಹಾರುವರ ಕೇರಿಯ ಇಬ್ಬರು ಹಾರುವಯ್ಯಗಳು ಆರಂಜ್ಯೋತಿಯ ಏಳು ಜನ ಅಣ್ಣಂದಿರಿಗೆ ಕಾಡಿಗೆ ಸೌದೆ ತರಲು ಹೋಗಿದ್ದಾಗ ದಾರಿಯಲ್ಲಿ ಎದುರಾಗುತ್ತಾರೆ. ತನ್ನ ತಪಸ್ಸಿನಿಂದ ಅನೇಕ ಸಿದ್ಧಿಗಳನ್ನು ಪಡೆದಿದ್ದ ಆರಂಜ್ಯೋತಿಯು ಕೈಲಾಸಪರ್ವತಕ್ಕೆ ತಪಸ್ಸು ಮಾಡಲು ಹೋಗುವುದನ್ನು ನಿಲ್ಲಿಸಿ ಮನೆಯಲ್ಲೇ ಕುಳಿತು ತನ್ನ ಹೆಚ್ಚಿನ ತಪಸ್ಸಾಧನೆಗಳನ್ನು ಮುಂದುವರೆಸಿರುತ್ತಾಳೆ. ಮಾತಂಗಿಪುರದ ಮಾದಿಗರನ್ನು ನೋಡಿದ ಹಾರುವಯ್ಯಗಳು ಮೈಲಿಗೆಯಾಗದಿರಲೆಂದು ತಮ್ಮ ಕೈಯಲ್ಲಿದ್ದ ಕಮಂಡಲದಿಂದ ಅಂತರಂತರವಾಗಿ ನೀರನ್ನು ಚಿಮುಕಿಸುತ್ತಾ ಒದ್ದೆಯಾದ ನೆಲದ ಮೇಲಕ್ಕೆ ಹಾರಿ ಹಾರಿ ಹೆಜ್ಜೆಯೂರಿ 'ಯಕ್ಕಾಸ'ದಿಂದ ಹೋಗುತ್ತಿದ್ದರು. ದಾರಿಯಲ್ಲಿ ಸುಗಮವಾಗಿ ನಡೆದು ಹೋಗುವುದು ಬಿಟ್ಟು ಹೆಜ್ಜೆ ಹೆಜ್ಜೆಗೂ ಹಾರುತ್ತಿದ್ದ ಬ್ರಾಹ್ಮಣಯ್ಯರನ್ನು 'ಹಾರುವರು' 'ಹಾರುವಯ್ಯ'ರೆಂದು ತಮ್ಮ ತಮ್ಮೊಳಗೇ ಹಂಗಿಸಿಕೊಂಡು ಘಕಘಕನೆ ನಗಾಡಿಕೊಂಡು ಮನೆಗೆ ಬಂದ ಆರಂಜ್ಯೋತಿಯ ಏಳು ಜನ ಅಣ್ಣಂದಿರು ತಮ್ಮ ಮನೆಯಲ್ಲಿಯೂ ಹಾರುವಯ್ಯನವರ 'ಕಕವಾಟ'ಗಳನ್ನು ಲೇವಡಿ ಮಾಡಿಕೊಂಡು ನಗುತ್ತಲೇ ಇದ್ದರು. ತಮ್ಮ ಮಾತಿನ ನಡುವೆ ಅರಿವಿಗಿಲ್ಲದಂತೆಯೇ 'ನಮ್ಮ ಗಲ್ಲೆಬಾನಿಯ ಏಳು ಕೆರಗಳ ಕರಿನೀರು ಕುಡಿದ ಮೇಲಾದರೂ ಈ ಹಾರುವರಿಗೆ ಬುದ್ಧಿ ಬರಬಹುದೇನೊ? ಅಂತಹ ಕಾಲ ಯಾವಾಗ ಬರುವುದೋ?' ಅಂದುಕೊಂಡರು. ಅಣ್ಣಂದಿರ ಮಾತುಗಳನ್ನು ಆಲಿಸಿದ ಆರಂಜ್ಯೋತಿಯ ಮನಸ್ಸಿನಲ್ಲಿ ಹಾರುವರ ಯುವಕನೊಬ್ಬ ಗಲ್ಲೆಬಾನಿಯ ನೀರು ಕುಡಿದು ಪುನೀತನಾದ ಕಲ್ಪನೆಯೊಂದು ಆಗಲೆ ಸುಳಿದು ಹೋಯಿತು.

ಚಮ್ಮಾರಿಕೆ ಕಾಯಕವನ್ನು ಮಾಡುವ ಮಾದಿಗರು ಮಣ್ಣಿನಿಂದ ಮಾಡಿದ 'ಗಲ್ಲೆಬಾನಿ'ಯಲ್ಲಿ ಚರ್ಮವನ್ನು ನೆನೆಹಾಕಿ ಹದಗೊಳಿಸುತ್ತಾರೆ. ಗಲ್ಲೆಬಾನಿಯೊಳಗೆ ಹಳೆಯ ಹರಿದ ಮೆಟ್ಟುಗಳನ್ನು ನೆನೆಯಲು ಇರಿಸಿರುತ್ತಾರೆ. ಅದರ ನೀರು ಔಷಧೀಯ ಗುಣವುಳ್ಳ ಪವಿತ್ರ ಜಲವೆಂಬುದು ಮಾದಿಗ ಜನಾಂಗದಲ್ಲಿ ಲಾಗಾಯ್ತಿನಿಂದ ಬಂದನಂಬಿಕೆ. ಆದಿಜಾಂಬವ ಮೌಖಿಕ ಪುರಾಣಗಳಲ್ಲಿ ಗಲ್ಲೆಬಾನಿ ಕುರಿತು ಇಂತಹ ಅನೇಕ ನಂಬಿಕೆಗಳು



ಬೇರುಬಿಟ್ಟಿದ್ದು ಮೌಖಿಕ ಕಾವ್ಯಗಳನ್ನೆ ಉಸಿರಾಡುವ ಮಾದಿಗರು 'ಯಾವುದೇ ರೋಗ ತಗುಲಿದವರಿಗೆ ಗಲ್ಲಿಬಾನಿ ನೀರುಕುಡಿಸಿದರೆ ಗುಣಮುಖರಾಗುತ್ತಾರೆಂದು, ಚರ್ಮರೋಗ ತಗುಲಿದವರು ಒಂದು ರಾತ್ರಿ ಒಂದು ಹಗಲು ಗಲ್ಲೆಬಾನಿಯೊಳಗೆ ತಂಗಿದ್ದು ಪೂಜೆ ಸಲ್ಲಿಸಿದರೆ ರೋಗಮುಕ್ತರಾಗುತ್ತಾರೆ' ಎಂಬುವ ಜನಪದರ ನಾಲಿಗೆ ಮೇಲಿರುವ ನಂಬಿಕೆಯನ್ನು ಕವಿ ಕೆ.ಬಿ. ಸಿದ್ಧಯ್ಯ ತಮ್ಮ 'ಗಲ್ಲೆಬಾನಿ' ಎಂಬ ಖಂಡಕಾವ್ಯದಲ್ಲಿ ದಾಖಲಿಸಿರುತ್ತಾರೆ.

ಮಾದಾರ ಹರಳಯ್ಯ ಮತ್ತು ಕಲ್ಯಾಣಮ್ಮ ತಮ್ಮ ತೊಡೆ ತೊಗಲನ್ನೇ ಸುಲಿದು ಚಮ್ಮಾಳಿಗೆ ಹೊಲಿದು ವಚನ ಚಳುವಳಿಯ ತಲೆಮಣಿಯಾಗಿದ್ದ ಬಸವಣ್ಣನಿಗೆ ಒಪ್ಪಿಸುವ ಮೂಲಕ ವ್ಯವಸ್ಥೆಗೆ ಆವರಿಸಿದ್ದ ವಿಷದ ತೊಗಲನ್ನು ಸುಲಿಯುವವರೂ ಆಗಿದ್ದರು. ಮಾದಾರ ಹರಳಯ್ಯನ ಗಲ್ಲೇಬಾನಿಯ ದಿವ್ಯೋದಕವು ಮಧುವರಸನ

ದೇಹದಲ್ಲಿ ಘನವಾಗಿ ಉರಿಯುತ್ತಿದ್ದ ಜಾತಿವ್ಯಸನದ ಮಲಿನತೆಯ ನವೆಯನ್ನು ನಂದಿಸಿ ತನುವ ಸಂತೈಸುವಂಥದ್ದೂ ಆಗಿತ್ತು. ಇಂತಹ ಗಲ್ಲೆಬಾನಿ ಮತ್ತು ಅದರ ಕರಿಜಲಕ್ಕೆ ಮಾದಿಗರಲ್ಲಿ ಪವಿತ್ರ ಸ್ಥಾನವಿದೆ.

ಔಷಧಿಯಾಗಿ ಬಳಕೆಯಾಗುವ ಗಲ್ಲೆಬಾನಿಯ ನೀರನ್ನು ಪವಿತ್ರ ಜಲವನ್ನಾಗಿ ಅಥವಾ ಶಾಸ್ತದ ನೀರನ್ನಾಗಿ ಬಳಸುವ ಬ್ರಾಹ್ಮಣರು, ಅವರಲ್ಲಿ ನಡೆಯುವ ವಿವಾಹ ಸಂದರ್ಭದಲ್ಲಿ ನವ ವಧುವರರ ನೆತ್ತಿಯ ಮೇಲೆ ಗಲ್ಲೆಬಾನಿಯ 'ಶಾಸ್ತ್ರದ ನೀರನ್ನು' ಚಿಮುಕಿಸಿ ಅರುಂಧತಿ ನಕ್ಷತ್ರ ದರ್ಶನ ಮಾಡಿಸಿದರೆ ಶುಭವಾಗುತ್ತದೆ ಎಂದು ಕಲ್ಲುನೀರು ಕರಗೋ ಹೊತ್ತಿನಲ್ಲಿ ಕಾಡಿಬೇಡಿ 'ಗಲ್ಲೆಬಾನಿ' ನೀರನ್ನು ಚಮ್ಮಾರನ ಅನುಗ್ರಹದಿಂದ ಪಡೆಯುತ್ತಾರೆಂಬ ಜನಪದರ ನಾಲಿಗೆ ಮೇಲಿನ ನಂಬಿಕೆಯನ್ನು ಸ್ವಯಂ ಮಾದಿಗ ಜನಾಂಗದಿಂದ ಬಂದ ಕವಿ ಕೆ.ಬಿ. ಸಿದ್ದಯ್ಯ ತಮ್ಮ 'ಗಲ್ಲೆಬಾನಿ' ಕಾವ್ಯದಲ್ಲಿ ಉಲ್ಲೇಖಿಸಿದ್ದಾರೆ.


ಇಂತಹ ಗಲ್ಲೆಬಾನಿಯ ಔಷಧಿಯುಕ್ತ ನೀರನ್ನು ಕುಡಿಯಲು ಬ್ರಾಹ್ಮಣ ಮಹರ್ಷಿ ವಸಿಷ್ಠನು ಗಂಗಸ್ಥಲದ ಮಾತಂಗಿಪುರದ ಗೋಸಂಗಿ ಕುಲದ ಮಾದಿಗರ ಆರಂಜ್ಯೋತಿಯ ಮನೆಗೆ ಬರುತ್ತಾನೆ. ಆರಂಜ್ಯೋತಿಯು ಹಾರುವರ ಯುವಕನೊಬ್ಬ ಗಲ್ಲೆಬಾನಿಯ ನೀರು ಕುಡಿದಂತೆ ಕಲ್ಪಿಸಿಕೊಂಡದ್ದು ಅವಳ ಕಣ್ಣೆದುರಿಗೇ ನಿಜದ ಘಟನೆಯಾಗಿ ಸಂಭವಿಸುವ ಬಗೆಯನ್ನು 'ಆರಂಜ್ಯೋತಿ ಕಲ್ಯಾಣದ ಕತೆ' ತಿಳಿಸುತ್ತದೆ.

ಬ್ರಹ್ಮನಿಗೆ ಮಗನೂ ನಾರದಮುನಿಗೆ ಭಾಮೈದನೂ ಆದ ವಸಿಷ್ಠನು ತನ್ನ ಅಮ್ಮನ ಬಳಿ ಬಂದು "ಅಮ್ಮಾ ನಾನು ಬಾಲ್ಯವನ್ನು ಕಳೆದು ಮದುವೆ ವಯಸ್ಸಿಗೆ ಬಂದಿರುವೆ. ಮಕ್ಕಳು ಎಷ್ಟೆ ದೊಡ್ಡವರಾಗಿ ಬೆಳೆದರೂ ಹೆತ್ತವರಿಗೆ ಚಿಕ್ಕ ಮಕ್ಕಳಂತೆಯೇ ಕಾಣಿಸುತ್ತಾರೆ. ನನಗೀಗ ಮದುವೆ ಆಗುವ ಬಯಕೆಯಾಗಿದೆ. ಬೇಗ ನನಗೊಂದು ಹೆಣ್ಣು ನೋಡಿ ಕೂಡಲೇ ಮದುವೆ ಮಾಡು, ಇಲ್ಲದಿದ್ದರೆ ಸತ್ತೇ ಹೋಗುತ್ತೇನೆ" ಎಂದು ಬೆದರಿಕೆ ಹಾಕಿದನು. ಮಗನ ಮಾತಿನಿಂದ ಹೆದರಿದ ತಾಯಿಯು ತನ್ನ ಅಣ್ಣನಂತಿದ್ದ ವಿಶ್ವಕರ್ಮನ ಬಳಿಗೆ ಬಂದು "ಅಣ್ಣಯ್ಯ, ನೀನು ವಿಶ್ವಬ್ರಾಹ್ಮಣರ ವಂಶದಲ್ಲಿಯೇ ತಿಳುವಳಿಕಸ್ಥನಾಗಿರುವಿ. ನಮ್ಮ ಬ್ರಾಹ್ಮಣ ಕುಲದಲ್ಲಿ ನನ್ನ ಮಗ ವಸಿಷ್ಠನೇ ಮೊದಲನೆ ಗಂಡು ಮಗ. ಅವನಿಗೆ ತಕ್ಕ ಹೆಣ್ಣು ಬ್ರಾಹ್ಮಣರಲ್ಲಿ ಇನ್ನೂ ಹುಟ್ಟಿಲ್ಲ, ಅವನಿಗೆ ಮದುವೆ ಆಗುವ ಬಯಕೆ ಹೆಚ್ಚಾಗಿದೆ. ಬೇಗ ಮದುವೆ ಮಾಡದಿದ್ದರೆ ಸಾಯುವನಂತೆ, ಯಾವುದಕ್ಕೂ ಪಂಚಾಂಗ ನೋಡಿ ಒಂದು ಮಾತು ಹೇಳು" ಎಂದು ಪಂಚಾಂಗದಯ್ಯನಿಗೆ ಕೊಡಬೇಕಾದಂಥ ದುಡ್ಡುದುಗ್ಗಾಣಿಯ ದಕ್ಷಿಣೆ ನೀಡುತ್ತಾಳೆ.

ಪಂಚಾಂಗವನ್ನು ನೋಡಿದ ವಿಶ್ವಕರ್ಮನು "ನಿಮ್ಮ ಬ್ರಾಹ್ಮಣರ ಕುಲದಲ್ಲಿ ಹೆಣ್ಣು ಇಲ್ಲದೆ ಹೋದರು ತೊಂದರೆ ಇಲ್ಲ, ನಮ್ಮ ಒಂಭತ್ತು ಪಣದಲ್ಲಿ ಹೆಣ್ಣುಗಳಿಗೆ ಬರವಿಲ್ಲ. ಯಾರೇ ಪದ್ಮಿನಿಜಾತಿ ಪತಿವ್ರತಾ ಸ್ತ್ರೀ ಸಿಕ್ಕರೂ ವಸಿಷ್ಠನಿಗೆ ಮದುವೆ ಮಾಡು ಸಾಕು. ನಿನ್ನ ಮಗ ಸಾಯಲಾರ" ಎಂದು ಉಪದೇಶಿಸಿದನು. "ಪತಿವ್ರತೆ ಅಂದರೆ ಹೇಗಿರುತ್ತಾಳೆ? ಅವಳನ್ನು ಕಂಡು ಹಿಡಿಯುವ ಬಗೆ ಹೇಗೆ? ನನ್ನ ಮಗನಿಗೆ ಹೇಳಿಕೊಡು" ಎಂದು ವಸಿಷ್ಠನ ತಾಯಿ ವಿಶ್ವಕರ್ಮನನ್ನು ಕೇಳಿಕೊಂಡಳು. ವಿಶ್ವಕರ್ಮನು ಮತ್ತೊಮ್ಮೆ ಪಂಚಾಂಗವನ್ನು ತಿರುವಿಹಾಕಿ ನೋಡಿ ಒಂದು ತೂತು ಮಡಕೆಯನ್ನು, ಒಂದು ಮರಳು ಮೂಟೆಯನ್ನು, ಕಬ್ಬಿಣದ ಕಡಲೆಕಾಳುಗಳನ್ನು, ಬಾಳೆದಿಂಡುಗಳನ್ನು, ಹುಣಸೆ ಎಲೆಗಳ ಕಟ್ಟನ್ನು ವಸಿಷ್ಠನ ಕೈಗೆ ಕೊಟ್ಟು "ಅಯ್ಯಾ, ಬ್ರಾಹ್ಮಣ ಕುಲದ ಬ್ರಹ್ಮನ ಮಗನೇ ನೀನು ಬ್ರಹ್ಮಕರ್ಮ, ಕುಲಪದ್ಧತಿ, ಧರ್ಮಮಾರ್ಗ, ವ್ರತಾಚಾರಣೆ, ವೇದ ವ್ಯಾಕರಣ ಎಂಬುದೆಲ್ಲವನ್ನು ತಾತ್ಕಾಲಿಕವಾಗಿ ತೊರೆದು ನಾನು ಕೊಟ್ಟಿರುವ ಈ ಸಾಮಾನುಗಳ ಗಂಟು ಹೊತ್ತು 'ಬಡಗಲ ಮುಖನಾಗಿ' (ದಕ್ಷಿಣಾಭಿಮುಖವಾಗಿ) ಹೊರಡುವಂತವನಾಗು. ಯಾವ ಹೆಣ್ಣು ಮಗಳು ಸರುಪನ ಸಿಂಬೆ ಮಾಡಿ ಈ ತೂತು ಕರಗದಲ್ಲಿ ನೀರು ತಂದು ಒಲೆ ಮೇಲಿರಿಸಿ ಅದಕ್ಕೆ ಮರಳು ಸುರಿದು ಬಾಳೆದಿಂಡುಗಳನ್ನೇ ಉರಿಸಿ ಅನ್ನ ಮಾಡುವಳೊ, ಕಬ್ಬಿಣದ ಕಡಲೆಕಾಳು ಬೇಯಿಸಿ ಸಾರುಮಾಡಿ ಹುಣಸೆ ಎಲೆಗಳನ್ನು ಹೊಲಿದುಊಟದೆಲೆ ಮಾಡಿ ನಿನಗೆ ಉಣಬಡಿಸುವಳೋ ಅವಳೇ ಪತಿವ್ರತೆ. ಅವಳನ್ನು ಮದುವೆಯಾಗು ಸಾಯುವ ಮಾತು ಒಳ್ಳೆಯದಲ್ಲ." ಎಂದು ಆಶೀರ್ವದಿಸಿ ದಕ್ಷಿಣಾಭಿಮುಖವಾಗಿ ಕಳುಹಿಸುತ್ತಾನೆ.

ಬಡಗಲ ದಿಕ್ಕು ಅಥವಾ ದಕ್ಷಿಣ ದಿಕ್ಕಿನಲ್ಲಿ ಊರ ಹೊರಭಾಗದಲ್ಲಿ ಹೊಲೆಮಾದಿಗರು ನೆಲೆಸಿರುತ್ತಾರೆ.

ಪೂರ್ವದ ಪಣ ಸಮಾಜದಲ್ಲಿ ಹೊಲೆಯರು ಹದಿನೆಂಟು ಪಣಕಟ್ಟಿಗೆ ಸೇರಿದವರಾಗಿ ಮಾದಿಗರು ಒಂಭತ್ತು ಪಣಕಟ್ಟಿನ ಜಾತಿಯಲ್ಲಿ ಸೇರಿರುವುದರಿಂದ ವಿಶ್ವಕರ್ಮ ಹೇಳಿದ ಪ್ರಕಾರ ವಸಿಷ್ಠನು ಎಡಗೈ ಪಣದ ಜಾತಿಗಳ ಹಟ್ಟಿಗಳಲ್ಲಿ ಕನ್ಯೆಗಾಗಿ ಹುಡುಕುತ್ತಾ ತಿರುಗುತ್ತಾನೆ. ಭಾರತದ ಮೂಲ ನಿವಾಸಿಗಳಾದ ದ್ರಾವಿಡರು ಒಂದು ಕಾಲದಲ್ಲಿ ಆರ್ಯರ ದಾಳಿಗೆ ಸಿಕ್ಕಿ ದಕ್ಷಿಣ ಭಾರತದ ಕಡೆ ಹಿಮ್ಮೆಟ್ಟಲ್ಪಟ್ಟು ದಕ್ಷಿಣ ಭಾರತದಲ್ಲಿ ಸಾಂದ್ರವಾಗಿ ನೆಲೆಸುತ್ತಾರೆ. ಅಂದಿನಿಂದ ದಕ್ಷಿಣ ದಿಕ್ಕು, ದಕ್ಷಿಣ ಭಾರತಗಳೆಂದರೆ ಮ್ಲೇಚ್ಛರ ನಾಡು, ದ್ರಾವಿಡ ದೇಶವೆಂದು ಹೆಸರಾಯಿತು. ದ್ರಾವಿಡ ಜನಾಂಗಕ್ಕೆ ಸೇರಿದ ಆದಿಜಾಂಬವರನ್ನು ಅಸ್ಪೃಶ್ಯರೆಂದು ಕರೆದು ಅವರನ್ನು ಊರ ಹೊರಗಿಡಲಾಗಿದೆ ಎಂಬುದು ಮಾನವ ಶಾಸ್ತ್ರಜ್ಞರ ಅಭಿಪ್ರಾಯ. ಆದಿಜಾಂಬವರು ಊರ ಹೊರಗೆ ದಕ್ಷಿಣ ದಿಕ್ಕಿನಲ್ಲಿ ನೆಲೆಸಿರುತ್ತಾರೆ. ದ್ರಾವಿಡ ದೇವರಾದ ಶಿವನನ್ನು ದಕ್ಷಿಣಾಮೂರ್ತಿ ಎಂದೂ ಕರೆಯುತ್ತಾರೆ. ಆದಿಜಾಂಬವರ ವಸತಿಗಳು ಊರ ಹೊರಗೆ ಪೂರ್ವದಿಕ್ಕಿನಲ್ಲಿದ್ದರೆ ಬೆಳಗಿನ ವೇಳೆ ಊರ ಮೇಲೆ ಅವರ ಉದ್ದನೆಯ ನೆರಳು ಬೀಳುತ್ತದೆ. ಪಶ್ಚಿಮಕ್ಕಿದ್ದರೂ ಸಂಜೆವೇಳೆ ಅವರ ಉದ್ದನೆಯ ನೆರಳು ಊರ ಮೇಲೆ ಬಿದ್ದು ಇಡೀ ಊರಿಗೆ ಮೈಲಿಗೆಯಾಗುತ್ತದೆ. ಇನ್ನು ಉತ್ತರ ದಿಕ್ಕು ಆರ್ಯರ ದಿಕ್ಕು ಶ್ರೇಷ್ಠವಾದ ದಿಕ್ಕು ಆದ್ದರಿಂದ ದಕ್ಷಿಣ ದಿಕ್ಕಿನಲ್ಲಿ ಮೂಲನಿವಾಸಿ ದ್ರಾವಿಡರನ್ನು ಇರಿಸಲಾಗಿದೆಯೆಂದು ಹೇಳಲಾಗುತ್ತದೆ.



ವಸಿಷ್ಠನು ಕನ್ಯಾಶೋಧನೆಗಾಗಿ ದಕ್ಷಿಣಾಭಿಮುಖವಾಗಿ ಮ್ಲೇಚ್ಛನಾಡಿಗೆ ಬಂದನೆಂದು ಈ ಕಥೆಯಿಂದ ವ್ಯಕ್ತವಾಗುತ್ತದೆ. ಈ ರೀತಿಯ ವಸತಿ ವ್ಯವಸ್ಥೆ ಈಗಲೂ ಮುಂದುವರೆದಿದ್ದು ಆರ್ಯದ್ರಾವಿಡ ಸಂಘರ್ಷ ಕುರಿತ ಇತಿಹಾಸದ ನೆನಪನ್ನು ಜೀವಂತವಿರಿಸುವ ಹಾಗೂ ಆ ಮೂಲಕ ಮೇಲು-ಕೀಳೆಂಬ ತಾರತಮ್ಯವನ್ನು ದೃಢವಾಗಿ ಸ್ಥಿರೀಕರಿಸಿರುವ ಧಾರ್ಮಿಕ ರಾಜಕಾರಣ ಇಲ್ಲಿ ವ್ಯಕ್ತವಾಗುತ್ತದೆ.

ಅಂತೂ ಮಾದಿಗರ ಕೇರಿಗಳಲ್ಲಿ ವಸಿಷ್ಠನು ಮರಳಿನ ಮೂಟೆ, ಕಬ್ಬಿಣದಕಡಲೆಕಾಳು, ಹುಣಸೆ ಎಲೆ ಕಟ್ಟು, ಬಾಳೆದಿಂಡು, ತೂತು ಮಡಕೆ ಮುಂತಾದ ಹೊರಲಾರದಷ್ಟು ಭಾರವಾದ ಗಂಟು ಹೊತ್ತುಕೊಂಡು ಕನ್ಯೆಯ ಶೋಧಕ್ಕಾಗಿ ಅಲೆಯತೊಡಗಿದನು. ಎಲ್ಲಿ ಅಡ್ಡಾಡಿದರೂ ಅವನ ಸವಾಲನ್ನು ಸ್ವೀಕರಿಸಿ ಅನ್ನ ಮಾಡಿ ಉಣಬಡಿಸಬಲ್ಲ ಪತಿವ್ರತಾ ಸ್ತ್ರೀ ದೊರಕಲಿಲ್ಲ. ಹಸಿವೆಯಿಂದ ಬಳಲಿ ಏದುಸಿರು ಬಿಡುವ ನಾಯಿಪಾಡು ಅವನದಾಗುತ್ತದೆ. ಎಲ್ಲ ಕಡೆ ಸುತ್ತಾಡಿ ದಾವಾರಿದ್ದ ವಸಿಷ್ಠನು ವಿಶ್ವಕರ್ಮ ಹೇಳಿದ್ದ ಪ್ರಕಾರ ಪತಿವ್ರತೆಯೊಬ್ಬಳು ಅಡುಗೆ ಮಾಡಿ ಉಣಬಡಿಸುವವರೆಗೆ ಉಪವಾಸ ವ್ರತದಲ್ಲಿಯೇ ಇರಬೇಕಾದ ನಿಯಮವನ್ನು ಪಾಲಿಸಬೇಕಾಗಿ ಬಂದು ಮತ್ತಷ್ಟು ಹಸಿದು ಒದ್ದಾಡುತ್ತಾ ಮಾತಂಗಿಪುರದ ಮಾದಿಗರ ಆರಂಜ್ಯೋತಿಯ ಮನೆ ಮುಂದೆ ಬಂದು 'ಅಮ್ಮಾ ಕಾಪಾಡಿ' ಎಂದು ಪ್ರಲಾಪಿಸುತ್ತಾ ಕುಸಿದು ಬಿದ್ದ.

ಪುರುಷನೊಬ್ಬನ ಪ್ರಲಾಪವನ್ನು ಕೇಳಿಸಿಕೊಂಡ ಆರಂಜ್ಯೋತಿಯು ಕುತೂಹಲದಿಂದ ಹೊರಗೆ ಬಂದು ಅವನನ್ನು ನೋಡಲಾಗಿ ಅವಳ ತೇಜಸ್ಸಿನ ಪ್ರಭೆಗೆ ಸಿಕ್ಕು ವಸಿಷ್ಠ ಮೂರ್ಛೆ ಹೋಗುತ್ತಾನೆ. ಅಲ್ಲಿಯೇ ಹೊರಗೆ ಇರಿಸಲಾಗಿದ್ದ ಗಲ್ಲೆಬಾನಿಯಿಂದ ನೀರು ತೆಗೆದುಕೊಂಡು ಆರಂಜ್ಯೋತಿಯು ವಸಿಷ್ಠನ ಮುಖದ ಮೇಲೆ ರಾಚಲು ಅವನು ಪ್ರಜ್ಞೆ ಬಂದು ಎದ್ದು ಕುಳಿತುಕೊಳ್ಳುತ್ತಾನೆ. ಗಲ್ಲೆಬಾನಿಯ ನೀರು ಗುಟುಕರಿಸಿ

ಲವಲವಿಕೆಯಾಗುತ್ತಾನೆ.

"ಛೇ! ಹಾರುವನೆ, ಮಾತಂಗಿಪುರದ ಮಾದಿಗರ ಕೇರಿಗೆ ನೀನೇಕೆ ಬಂದೆ? ಹಾರುವರು ಇತ್ತ ಸುಳಿಯಬಾರದು. ಇಲ್ಲಿಂದ ತೊಲಗಾಚೆ" ಎಂದು ಆಗ್ರಹಿಸುತ್ತಾಳೆ. ಅದಕ್ಕೆ ವಸಿಷ್ಠನು "ಏಳೇಳು ದಿನಗಳಿಂದ ಅನ್ನ ನೀರುಗಳಿಲ್ಲದೆ ಹಸಿವೆಯಿಂದ ಬಳಲಿ ಬಂದಿದ್ದೇನೆ. ಊಟಕ್ಕೆ ನೀಡಿ ನನ್ನನ್ನು ಬದುಕಿಸಿಕೊಳ್ಳಿ. ಇಲ್ಲದಿದ್ದರೆ ಸತ್ತೇ ಹೋಗುತ್ತೇನೆ" ಎಂದು ಅಂಗಲಾಚಿ ಬೇಡುತ್ತಾನೆ. ತಾನು ಹೊತ್ತು ತಂದಿದ್ದ ಗಂಟನ್ನು ಅವಳಿಗೆ ನೀಡುತ್ತಾನೆ.

ಆಗ ಆರಂಜ್ಯೋತಿಯು "ನೀನು ಹಾರುವರ ಹುಡುಗ, ನಾವು ಮಾದಿಗರು, ದನದ ಬಾಡು ತಿಂಬುವ ನಮ್ಮ ಮನೆಯಲ್ಲಿ ನಿನಗೆ ಸಿಗುವುದು ದನದ ಬಾಡಿನ ಅಡುಗೆ, ಅದನ್ನೇ ತಿನ್ನುವೆಯೇನು? ಬಡಿಸಲು ನನಗೆ ಅಭ್ಯಂತರವಿಲ್ಲ" ಎಂದು ಪ್ರಶ್ನಿಸುತ್ತಾಳೆ. "ಹಸಿವೆಯಿಂದ ಸಾಯುತ್ತಿರುವ ನನಗೆ ಕುಲ ನೆಲ ಯಾವುದೂ ಅರ್ಥವಾಗುವುದಿಲ್ಲ. ದನದ ಬಾಡು ತಿನ್ನಲು ನನಗೆ ಒಗ್ಗುವುದಿಲ್ಲ, ನನ್ನ ಬಳಿಇರುವ ಈ ಗಂಟಿನಲ್ಲಿರುವ ಪದಾರ್ಥಗಳಿಂದಲೇ ಅಡುಗೆ ಮಾಡಿ ಉಣಬಡಿಸು" ಎಂದು ಮತ್ತೊಮ್ಮೆ ಭಿನ್ನವಿಸಿಕೊಳ್ಳುತ್ತಾನೆ.

'ನೋಡು ಹಾರುವಯ್ಯ, ನನ್ನ ಏಳು ಜನ ಅಣ್ಣಂದಿರು ಕಾಡಿಗೆ ತಂಗಡಿ ಚಕ್ಕೆ ತರಲು ಹೋಗಿದ್ದಾರೆ. ಅಪ್ಪನೂ ಮನೆಯಲಿಲ್ಲ. ನಾನು ಒಬ್ಬಂಟಿ ಹೆಣ್ಣಂಗ್ಸು. ಉಂಡ ತಕ್ಷಣ ನಿನ್ನ ಹೆಜ್ಜೆ ಗುರುತುಗಳನ್ನು ನೀನೇ ಅಳಿಸಿಕೊಂಡು ಇಲ್ಲಿಂದ ಹೊರಟು ಬಿಡು' ಎಂದು 'ಕಂಡೀಷನ್' ಹಾಕಿದಳು. ಅದಕ್ಕೆ ಅವನೂ ಒಪ್ಪಿಕೊಂಡು ವಿಶ್ವಕರ್ಮ ತಿಳಿಸಿದ ಪ್ರಕಾರವೇ ಅಡುಗೆ ಮಾಡಲು ಹೇಳುತ್ತಾನೆ. ಅವನನ್ನು ನೇರಳೆ ತೋಪಿಗೆ ಕರೆದುಕೊಂಡುಹೋದ ಆರಂಜ್ಯೋತಿಯು, ಹುತ್ತದಿಂದ ಹತ್ತಿ ಹರಿದು ಕ್ವಾವೆಯಿಂದ ಹೊರಗೆ ಬರುತ್ತಿದ್ದ ಸರುಪನ ಹಿಡಿದು ಸಿಂಬೆಮಾಡಿ ತೂತು ಮಡಕೆಯನ್ನು ನೆತ್ತಿಮೇಲೆ ಹೊತ್ತು ನೀರುತಂದು ಅದರೊಳಕ್ಕೆ ಮರಳು ಸುರಿದು ಬಾಳೆದಿಂಡುಗಳನ್ನು ಉರಿಸಿ ಅನ್ನಮಾಡುತ್ತಾಳೆ. ಕಬ್ಬಿಣದ ಕಡಲೆ ಕಾಳಿನಿಂದ ಸಾರುಮಾಡಿ ಹುಣಸೆ ಎಲೆಗಳ ಹೊಲಿದು ಊಟದೆಲೆ ಮಾಡಿ ಉಣಬಡಿಸಲು ಸಿದ್ಧಳಾಗುತ್ತಾಳೆ.

ಬ್ರಾಹ್ಮಣ ವಸಿಷ್ಠನು ಇವಳೇ ನಿಜವಾದ ಪತಿವ್ರತಾ ಕನ್ಯೆ ಇವಳೇ ನನ್ನ ಹೆಂಡತಿ ನಾನೇ ಇವಳ ಗಂಡ ಎಂದು ಆಲೋಚಿಸಿ 'ತಾನ-ಜಪ-ತಪ' ಮಾಡಿ ಬಂದು ಇಡೀ ಅಡುಗೆಯನ್ನು ಮೂರೇ ಗುಕ್ಕಿಗೆ ಉಂಡೆದ್ದು ಆರಂಜ್ಯೋತಿಯ ಸೆರಗಿಗೆ ಕೈ ಹಾಕಿದನು.

'ಛೇ ಹಾರುವರ ಮಗನೆ! ನಿನ್ನ ಬುದ್ಧಿ ತೋರಿಸಿದೆಯಲ್ಲ. ಅನ್ನವಿಕ್ಕಿದ ನನ್ನನ್ನೇ ಹಿಡಿದುಕೊಳ್ಳಲು ಬರುತ್ತಿದ್ದೀಯಲ್ಲಾ ಮೋಸಗಾರ ವಂಚಕ ಕಪಟಿ, ಇಲ್ಲಿಂದ ತೊಲಗಿ ಹೋಗು' ಎಂದು ಹೀನಮಾನ ಬೈಗುಳಗಳಿಂದ ವಸಿಷ್ಠನ ಜಲ್ಮ ಜಾಲಾಡಿದಳು.

ಆಗ ವಸಿಷ್ಠನು "ಮಾವನ ಮಗಳೆ, ಮಲ್ಲಿಗೆ ಹೆರಳೆ, ಮುತ್ತಿನ ಚೆಂಡೆ, ಮುದ್ದು ಮೊಖದವಳೆ, ನನ್ನ ಬಳಗ ಸಂಪನ್ನೆ, ನನ್ನ ಭಾಗ್ಯ ಸಂಪನ್ನೆ, ಅಷ್ಟ ಐಶ್ವರ್ಯ ಸಂಪನ್ನೆ, ನನ್ನ ಮೇಲೆ ರೇಗದಿರೆ. ನೀನೆ ಹೆಂಡತಿ ನಾನೇ ಗಂಡ, ಚಿಂತಿಸ ಬೇಡ" ಎಂದು ಪರಿಪರಿಯಾದ ಮಾತುಗಳಿಂದ ಹೊಗಳಿ ಅಟ್ಟಕ್ಕೇರಿಸಿಸಮಾಧಾನಪಡಿಸಿದನು.

ವಸಿಷ್ಠನ ಹೊಗಳಿಕೆ ಮಾತುಗಳಿಂದ ಉಬ್ಬಿಹೋದ ಆರಂಜ್ಯೋತಿಯು "ಅತ್ತೆ ಮಗನೆ ಮುತ್ತಿನ ಚಂಡೆ ಮಾವನ ಮಗನೆ ಮಲ್ಲಿಗೆ ಹೆರಳೆ ನಿನ್ನ ಹಾರುವರ ಕೇರಿ ಬಿಟ್ಟು ನಮ್ಮ ಮಾದಿಗರ ಮನೆಗೆ ಬಾ" ಎಂದು ತನ್ನ 'ಹಿಂದಗೂಟೆ' ವಸಿಷ್ಠನನ್ನು ಕರೆದುಕೊಂಡು ಮನೆಗೆ ಹೋಗುತ್ತಾಳೆ.

ಅಷ್ಟರಲ್ಲಿ ತಂಗಡಿ ಚಕ್ಕೆ ತರಲೆಂದು ಕಾಡಿಗೆ ಹೋಗಿದ್ದ ಅವಳ ಏಳು ಜನ ಅಣ್ಣಂದಿರು ಮನೆಗೆ ಬಂದಿರುತ್ತಾರೆ. ತಂಗಿಯು ಹಿಂದಿಟ್ಟುಕೊಂಡು ಕರೆತಂದ ಹಾರುವರ ಹುಡುಗನನ್ನು ನೋಡಿದ ಅಣ್ಣಂದಿರು "ಬ್ರಾಹ್ಮಣರು ಮಾದಿಗರ ಕೇರಿಗೆ ಸುಳಿಯಬಾರದು. ಅವನನ್ನೇಕೆ ನಿನ್ನ ಜೊತೆಯಲ್ಲಿ ಕರೆತಂದಿರುವೆ?" ಎಂದು ಪ್ರಶ್ನಿಸುತ್ತಾರೆ. ಅರುಂಧತಿಯು ನಡೆದ ಘಟನೆಯನ್ನು ವಿವರಿಸಿ "ಅವನು ನನ್ನ ಗಂಡ, ನಾನು ಅವನಿಗೆ ಹೆಂಡತಿ" ಎನ್ನುತ್ತಾಳೆ. ವಸಿಷ್ಠನೂ ಹೌದೆಂದು ತಲೆಬಾಗಿ ನಿಲ್ಲುತ್ತಾನೆ. "ನಿಮಗೆ ನೀವೇ ಗಂಡ-ಹೆಂಡತಿ ಎಂದು ಹೇಳಿಕೊಂಡ ಮಾತ್ರಕ್ಕೆ ಮದುವೆ ಮಾಡಿದಂತಾಗುವುದಿಲ್ಲ. ನಾಲ್ಕು ಜನ ಹಿರೀಕರನ್ನು ಸೇರಿಸಿ ಮಾದಿಗ ಮತಾಚಾರದ ಪ್ರಕಾರ ಹೆಂಡಬಾಡು ಸರಂಪಳಿ ಮಾಡಬೇಕು" ಎನ್ನುತ್ತಾರೆ.

ಒಂದು ದಿನ ಎಲ್ಲರನ್ನೂ ಹಟ್ಟಿಯಲ್ಲಿ ಕಲೆಹಾಕಿದ ಆ ಏಳೂ ಜನ ಅಣ್ಣಂದಿರು ಕುಲಸ್ವಾಮಿ ಜಾಂಬವತಾತನ ಸಮ್ಮುಖದಲ್ಲಿ 'ಆರಂಜ್ಯೋತಿ ಕಲ್ಯಾಣ' ಏರ್ಪಡಿಸುತ್ತಾರೆ. ಮೊದಲಿಗೆ ವಸಿಷ್ಠನನ್ನು ಮಾದಿಗ ಕುಲಕ್ಕೆ ಸೇರಿಸಿಕೊಳ್ಳುವ ಸಲುವಾಗಿ ಅವನನ್ನು ಶುದ್ಧ ಮಾಡುವ ಆಚರಣೆ ಕೈಗೊಳ್ಳಲಾಗುತ್ತದೆ. ಹಾರುವಯ್ಯನ ನಾಮವನ್ನು ಗಲ್ಲೆಬಾವಿಯ ಜಲದಲ್ಲಿ ಕೆಡಿಸಿ ತೊಳೆಯಲಾಗುತ್ತದೆ. ಚಿಂಪರಿಕೆ(ರಂಪಿಗೆ)ಯಿಂದ ಅವನ ಜುಟ್ಟು ಜನಿವಾರಗಳನ್ನು ಕತ್ತರಿಸಿ ತೆಗೆಯಲಾಗುತ್ತದೆ. ನಾಲಿಗೆಯನ್ನು ಕಬ್ಬಿಣ ಕಾಯಿಸಿ ಸುಡಲಾಗುತ್ತದೆ. ತಂಗಡಿ ಚಕ್ಕೆ ಮತ್ತು ಸುಣ್ಣದ ತಿಳಿ ನೀರಿನಿಂದ ತುಂಬಿದ್ದ ಗಲ್ಲೆಬಾನಿಯ ಪವಿತ್ರ ಜಲದಲ್ಲಿ 'ಶಾನ' ಮಾಡಿಸಲಾಗುತ್ತದೆ. ಎಮ್ಮೆಯ ಚರ್ಮದಿಂದ ಹೊಲೆದ ಅಂಗಿ ತೊಡಿಸಿ ಚರ್ಮದ ಜನಿವಾರ ಹಾಕಲಾಗುತ್ತದೆ. ಬೆರಣಿಯ ಕುಳ್ಳು ಸುಟ್ಟು ಬೂದಿಯ ವಿಭೂತಿ ಹಚ್ಚಲಾಗುತ್ತದೆ. ದನದ (ಗೋವಿನ) ಬಾಡಿನ ಒಂದು ಚಿಕ್ಕ ತುಂಡನ್ನು ಮೆಲ್ಲಲು ಕೊಡಲಾಗುತ್ತದೆ. ಹೀಗೆ ವಸಿಷ್ಠನನ್ನು ಶುದ್ಧಮಾಡಿ ಮಾದಿಗ ಕುಲದೊಳಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಜಂಬುನೇರಳೆ ಮರದ ಕೆಳಗೆ ಅವರೆಲ್ಲರೂ ಸೇರಿ ಎರಡುಚರ್ಮದ ತುಂಡುಗಳನ್ನು ಮಧುವರರ ಕೈಗಳಿಗೆ ಕೊಟ್ಟು ಪರಸ್ಪರ ಕುತ್ತಿಗೆಗಳಿಗೆ ಕಟ್ಟಿಸಲಾಗುತ್ತದೆ. ಇದಿಷ್ಟೂ ಮಾದಿಗ ಕುಲದ ಹಿರೀಕ ಆದಿಜಾಂಬವನ ನೇತೃತ್ವದಲ್ಲಿ ನಡೆದು 'ಆರಂಜ್ಯೋತಿ ಕಲ್ಯಾಣ' ಆನಂದದಿಂದ ನಡೆಯುತ್ತದೆ. ಶಿವಪಾರ್ವತಿಯರೂ ಬಂದು ಅರುಂಧತಿ-ವಸಿಷ್ಠರ ಮದುವೆಮಾಡಿ ಆರಂಜ್ಯೋತಿಗೆ ನಿತ್ಯ ಮುತ್ತೈದೆತನವನ್ನು ನೀಡಿ ಇಬ್ಬರಿಗೂ ನಕ್ಷತ್ರಗಳ ಮಧ್ಯೆ ಸ್ಥಾನವನ್ನು ನೀಡಿ ಇನ್ನು ಮುಂದೆ ನವ ವಧುವರರು 'ಅರುಂಧತಿ ನಕ್ಷತ್ರ ದರ್ಶನ' ಮಾಡಿ ತಮ್ಮ ಸಿರಿಸೌಭಾಗ್ಯಗಳನ್ನು ಸ್ಥಿರಗೊಳಿಸಿಕೊಳ್ಳಲೆಂದು ವರವ ಕೊಟ್ಟು ಕೈಲಾಸ ಪರ್ವತಕ್ಕೆ ಹೋದರು. ಇಲ್ಲಿಗೆ 'ಆರಂಜ್ಯೋತಿ ಕಲ್ಯಾಣ'ದ ಕಥೆ ಮುಗಿಯುತ್ತದೆ.

**ಆರಂಜ್ಯೋತಿ ಕಲ್ಯಾಣ – 2**

ಆರ್ಯ ಸಾಹಿತ್ಯದ ಪ್ರಕಾರ ಮಾದಿಗರ ಪುರಾಣ ಪ್ರತಿಭೆಯಾಗಿರುವ ಆರಂಜ್ಯೋತಿಯು ಬ್ರಾಹ್ಮಣ ಮಹರ್ಷಿ ವಸಿಷ್ಠನ ಹೆಂಡತಿ ಅರುಂಧತಿ.ಅರುಂಧತಿಯು ಕರ್ದಮ ಪ್ರಜಾಪ್ರತಿಯ ಮಗಳು.ಕರ್ದಮ ಪ್ರಜಾಪತಿಯ ಹೆಂಡತಿ ದೇವಹುತಿ, ಕಪಿಲನು ಸಹ ಕರ್ದಮನ ಮಗ, ಕಪಿಲ ಮತ್ತು ಅರುಂಧತಿ ಒಡಹುಟ್ಟಿದವರು.ಆದರೆ ಮಾದಿಗರಲ್ಲಿ ಪ್ರಚಲಿತದಲ್ಲಿರುವ ಆರಂಜ್ಯೋತಿಯ ಕಥೆಯ ಪ್ರಕಾರ, ಆರಂಜ್ಯೋತಿಯು ಮಾದಿಗರ ಮಗಳು.

'ಆರಂಜ್ಯೋತಿ ಕಲ್ಯಾಣ' ಎಂದೇ ಪ್ರಚಲಿತವಾಗಿರುವ ಮಾದಿಗರ ಒಂದು ಪುರಾಣಿಮ ಕಥನ ಕಾವ್ಯದ ಪ್ರಕಾರ ಬ್ರಾಹ್ಮಣನಾದ ವಸಿಷ್ಠ ಮಾದಿಗ ಕನ್ಯೆಯಾದ ಆರಂಜ್ಯೋತಿಯನ್ನು ದುಂಬಾಲು ಬಿದ್ದು ಮದುವೆಯಾಗುತ್ತಾನೆ. ಕವಿ ಕೋಟಿಗಾನಹಳ್ಳಿ ರಾಮಯ್ಯನವರು ಸಿಂದ್‌ಮಾದಿಗ ಕಲಾವಿದರಿಂದ ಹಾಡಿಸಿ ಸಂಗ್ರಹಿಸಿರುವ ಈ ಕಥನ ಕಾವ್ಯದ ಯಥಾ ಸಂಕ್ಷಿಪ್ತ ಸಾರಾಂಶ ಕೆಳ ಕಂಡಂತಿದೆ.

ಬ್ರಾಹ್ಮಣ ಸ್ತ್ರೀ ವಾರಕಾಂತೆಯು ಪುತ್ರಸಂತಾನಕ್ಕಾಗಿ ಬ್ರಹ್ಮದೇವನನ್ನು ಕುರಿತು ಯಾಗ ಮಾಡುತ್ತಾಳೆ. ಅವಳ ಭಕ್ತಿಗೆ ಮೆಚ್ಚಿದ ಬ್ರಹ್ಮದೇವನು ಪುತ್ರವತಿಯನ್ನಾಗಿ ಅನುಗ್ರಹಿಸಲು ವಾರಕಾಂತೆಗೆ ವಸಿಷ್ಠನು ಜನಿಸುತ್ತಾನೆ. ಯೌವನಕ್ಕೆ ಕಾಲಿರಿಸಿದ ವಸಿಷ್ಠನು ತನಗೆ ಹೆಣ್ಣು ನೋಡಿ ಮದುವೆ ಮಾಡುವಂತೆ ತಾಯಿಯನ್ನು ಒತ್ತಾಯಿಸುತ್ತಾನೆ. ಅದಕ್ಕೆ ತಾಯಿ "ಹೆತ್ತ ಮಗನೆ ಬ್ರಾಹ್ಮಣಯ್ಯ ಪ್ರಪಂಚದ ಮೇಲಿನ್ನೂ ಬ್ರಾಹ್ಮಣ ವಂಶ ಇಲ್ಲವಯ್ಯ ಯಾರನ್ನು ಕೊಟ್ಟು ಮದುವೆ ಮಾಡಲಪ್ಪ" ಎಂದು ಸಮಾಧಾನ ಹೇಳುತ್ತಾಳೆ. ಕೋಟಿಗಾನಹಳ್ಳಿ ರಾಮಯ್ಯ ಹೇಳುವ ಪ್ರಕಾರ "ಆರಂಜ್ಯೋತಿ ಕಲ್ಯಾಣ"ವೆಂಬ ಈ ಕಥನಕಾವ್ಯ ಕಟ್ಟುತ್ತಿರುವವರಿಗೆ 'ಬ್ರಾಹ್ಮಣ ಕುಲ' ಈ ನೆಲದ ಮೂಲದ್ದಲ್ಲವೆಂದೂ ಕಾಲಾನಂತರದಲ್ಲಿ ಹುಟ್ಟಿಕೊಂಡ ಹೊಸವಂಶವೆಂದೂ, ಆ ವಂಶದ ಮೊದಲ ಯುವಕನೇ ವಸಿಷ್ಠ ಎಂದು ಮನದಟ್ಟಾಗಿರುವಂತಿದೆ ಎಂದು ರಾಮಯ್ಯನವರಿಗೆ ಅನ್ನಿಸಿದೆ.

ಎಷ್ಟು ಹೇಳಿದರೂ ಸಮಾಧಾನವಾಗದ ವಸಿಷ್ಠ 'ನನಗೆ ಮದುವೆಬೇಕೇ ಬೇಕು. ಇಲ್ಲದೆ ಹೋದರೆ ಸತ್ತು ಹೋಗುತ್ತೇನೆ' ಎಂದು ಪಟ್ಟು ಹಿಡಿಯುತ್ತಾನೆ. ವಾರಕಾಂತೆ ವಿಧಿಯಿಲ್ಲದೆ ಅಣ್ಣನಂತಿರುವ ವಿಶ್ವಬ್ರಹ್ಮನ ಬಳಿ ಬಂದು ಪಂಚಾಂಗ ಕೇಳುತ್ತಾಳೆ. ಸೂಕ್ತ ಹೆಣ್ಣು ಸಿಕ್ಕದಿದ್ದರೆ ತನ್ನ ಮಗ ಸತ್ತೇ ಹೋಗುವುದಾಗಿ

ಸಂಕಟ ತೋಡಿಕೊಳ್ಳುತ್ತಾಳೆ. ವಿಶ್ವಬ್ರಹ್ಮ ಪಂಚಾಂಗ ನೋಡಿ ಯಾರೇ ಪತಿವ್ರತೆ ಸಿಕ್ಕರೂ ವಸಿಷ್ಠನಿಗೆ ಮದುವೆ ಮಾಡಬೇಕೆಂದು ಹೇಳುತ್ತಾನೆ. 'ಪತಿವ್ರತಾ ಕನ್ಯೆಯನ್ನು ಹುಡುಕುವ ಬಗೆ ಹೇಗೆ? ಪತಿವ್ರತಾ ಗುಣವನ್ನು ಶೋಧಿಸುವ ವಿಧಾನ ಯಾವುದು? ವಿವರವಾಗಿ ತಿಳಿಸಿರಿ" ಎಂದು ವಾರಕಾಂತೆ ಒತ್ತಾಯಿಸಲು ವಿಶ್ವಬ್ರಹ್ಮನು ಒಂಭತ್ತು ಪಣ 1. ಮಾದಿಗರು, 2. ಜ್ಯೋತಿ ನಗರ್ತ ಶೆಟ್ಟಿ, 3. ಗೊಲ್ಲಗೌಡ, 4. ವಿಶ್ವಬ್ರಾಹ್ಮಣ ಪಾಂಚಾಳ ಆಚಾರಿಗಳು, 5. ವಾಲ್ಮೀಕಿ, 6. ನಗರ್ತ ವಶಿಷ್ಠರು, 7. ಏಕಲಿಯವರು, 8. ಕಮ್ಮಾಕಾಪು ದೊರೆಗಳು, 9. ಚಂದ್ರವಂಶದ ಕ್ಷತ್ರಿಯ ವಹ್ನಿ ಕುಲದವರೆಲ್ಲರನ್ನು ಒಟ್ಟುಗೂಡಿಸಿಕೊಂಡು ಪಂಚಾಂಗ ನೋಡಲಾಗಿ, ಆ ಪ್ರಕಾರ ಮರಳು ಒಂದು ಮೂಟೆ ಕಟ್ಟಿ, ಕಬ್ಬಿಣದ ಬೇಳೆ ಒಂದು ಮೂಟೆ ಕಟ್ಟಿ, ಮೇಣದ ಮುದ್ದೆ ಕಟ್ಟಿ, ಜ್ಯಂಬಲೆ ಕಟ್ಟು ಕಟ್ಟಿ ವಸಿಷ್ಠನಿಗೆ ಕೊಟ್ಟು ಪತಿವ್ರತಾ ಕನ್ಯೆಯನ್ನು ಶೋಧಿಸುವ ವಿಧಾನವನ್ನು ವಿವರಿಸಿ ಹೇಳಿದರು.

ಆ ಪ್ರಕಾರ ಬ್ರಾಹ್ಮಣನಾದ ವಸಿಷ್ಠನು ಈ ಎಲ್ಲಾ ವಸ್ತುಗಳನ್ನು ಹೊತ್ತುಕೊಂಡು ಕನ್ಯಾ ಶೋಧನೆಗಾಗಿ ತಿರುಗುವ ಕಾಲದಲ್ಲಿ ಮೇಣದ ಕುಂಭವ ಮಾಡಿ ಆದಿಶೇಷನ ಸಿಂಬೆಯ ಮಾಡಿ ನೆತ್ತಿಯ ಮೇಲೆ ಹೊತ್ತುಕೊಂಡು ಮೇಣದ ಕುಂಭದಲ್ಲಿ ನೀರುತಂದು ಮರಳಿನಿಂದ ಅನ್ನವ ಮಾಡಿ, ಕಬ್ಬಿಣದ ಬೇಳೆ ಬೇಯಿಸಿ ಸಾರು ಮಾಡಿ ಜ್ಯಂಬಲೆ ಹೊಲಿದು ಊಟದೆಲೆ ಮಾಡಿ ಯಾವ ಹೆಣ್ಣು ವಸಿಷ್ಠನಿಗೆ ಊಟ ಬಡಿಸುತ್ತಾಳೆಯೋ ಅವಳೇ ಅವನಿಗೆ ಹೆಂಡತಿಯಾಗತಕ್ಕ ಪತಿವ್ರತಾ ಕನ್ಯೆಯೆಂದು ತಿಳಿಸುತ್ತಾರೆ. ಒಂಭತ್ತು ಪಣಕಟ್ಟಿನವರು ಪಂಚಾಂಗ ನೋಡಿ ತೀರ್ಮಾನ ಮಾಡಿದ ಪ್ರಕಾರ ವಸಿಷ್ಠನು ಮರಳು ಮತ್ತು ಕಬ್ಬಿಣದ ಬೇಳೆಯ ಮೂಟೆಯನ್ನು ಬೆನ್ನಿಗೇರಿಸಿ, ಮೇಣದ ಮುದ್ದೆ ಮತ್ತು ಜ್ಯಂಬಲೆ ಕಟ್ಟನ್ನು ಕಂಕುಳಿಗೆ ಸಿಗಿಸಿ ಕನ್ಯೆಯ ಶೋಧದ ಮೇಲೆ ದೇಶಾಂತರ ಹೊರಟ.

ದೇವಲೋಕ, ನಾಗಲೋಕ, ಭೂಲೋಕ ಇಂತೀ ತ್ರಿಲೋಕಗಳಲ್ಲಿ ತಿರುಗಾಡಿದರೂ ಮೇಣದ ಕುಂಬ ಮಾಡಿ, ಆದಿಶೇಷನ ಸಿಂಬೆ ಮಾಡಿ ನೀರುತಂದು ಮರಳು ಅನ್ನಮಾಡಿ, ಕಬ್ಬಿಣ ಬೇಳೆಯ ಸಾರು ಮಾಡಿ, ಜ್ಯಂಬಲೆಯಿಂದ ಊಟದಎಲೆ ಹೊಲಿದು ಉಣಬಡಿಸುವ ಪತಿವ್ರತಾ ಕನ್ಯೆಯು ಸಿಕ್ಕದೆ ಹಸಿವೆಯಿಂದ ಬಳಲಿ ಬೆಂಡಾಗಿ ಹೋದ ವಸಿಷ್ಠ ದಾರಿಯಲ್ಲಿ ಸಿಕ್ಕ ಸಿಕ್ಕ ಹುಡುಗಿಯರನ್ನೆಲ್ಲಾ ಕೇಳಿದರು ಸಹ ಯಾರೂ ಈ ಸವಾಲನ್ನು ಸ್ವೀಕರಿಸದಾಗಿ ಅನ್ನ ನೀರು ಕಾಣದೆ ಕಂಗಾಲಾದನು. ಒಕ್ಕಲಿಗರ ಕೇರಿ, ಕ್ವಾಮಿಟಿಕೇರಿ, ಬಲಿಜಿಗರ ಕೇರಿ, ನಗರ್ತರ ಬೀದಿ, ಅರಸರ ಬೀದಿ, ನಾಯಿಂದರ ಬೀದಿ ಹೀಗೆ ಎಲ್ಲಾ ಬೀದಿ ಕೇರಿಗಳನ್ನು ಸುತ್ತಾಡಿಕೊಂಡು ಕಡೆಗೆ ಮಾತಂಗವಾಡಿಯ ಜಾಂಬವನ ಮನೆ ಮುಂದೆ ಬಂದು ನಿಂತು "ಯಾರಮ್ಮ ಮನೆಯೊಳಗೆ? ಹೊರಗೆ ಬಂದು ನನ್ನ ಜೊತೆ ಮಾತಾಡಿ ಹೋಗಮ್ಮ" ಎಂದು ಕೂಗಿ ಕರೆಯಲು ಮನೆಯೊಳಗಿದ್ದ ಆರಂಜ್ಯೋತಿ ಹೊರಗೆ ಬರುತ್ತಾಳೆ.

ಅವಳ ಏಳು ಜನ ಅಣ್ಣಂದಿರು ತಂಗಡಿ ಸೌದೆ ತರಲು ಬೆಟ್ಟಕ್ಕೆ ಹೋಗಿದ್ದು ಅಪ್ಪ ಜಾಂಬವನು ದೇವಲೋಕಕ್ಕೆ ಹೋಗಿರುತ್ತಾನೆ. ಹೀಗೆ ಏಕಾಂತವಾಗಿದ್ದ ಹೊತ್ತಿನಲ್ಲಿ ಹೊರಗೆ ಬಂದ ಆರಂಜ್ಯೋತಿ ಬಾಗಿಲಲ್ಲಿ ನಿಂತಿದ್ದ ಯುವಕನನ್ನು ಬ್ರಾಹ್ಮಣ ಎಂದು ಗುರುತಿಸಿ "ನೀನು ಬ್ರಾಹ್ಮಣ, ನಾವು ಮತಂಗರು, ನಮ್ಮ ಕೇರಿಗೆ ಯಾಕೆ ಬಂದೆಯೋ ಬ್ರಾಹ್ಮಣಯ್ಯ?" ಎಂದು ಪ್ರಶ್ನಿಸುತ್ತಾಳೆ. ಅವಳ ರೂಪಲಾವಣ್ಯಗಳನ್ನು ಕಂಡು ಬೆರಗಾಗಿ ಅವಳು ಯಾರ ಮಗಳೆಂದು ಪ್ರಶ್ನಿಸುತ್ತಾನೆ. ಮಾತಂಗವಾಡಿಯ ಮತಂಗ ಕುಲದ ಜಾಂಬವನ ಮಗಳು ಎಂದು ತಿಳಿದ ಕೂಡಲೇ ಬ್ರಾಹ್ಮಣ ಕುಲದ ವಸಿಷ್ಠ ಅಲ್ಲಿಯೆ ಮೂರ್ಛೆ ಹೋಗುತ್ತಾನೆ. ತಕ್ಷಣವೇ ಸುಧಾರಿಸಿಕೊಂಡು ಸಾವಕಾಶವಾಗಿ ನಿಂತು "ಏಳೇಳು ದಿವಸಗಳಿಂದ ಅನ್ನ ನೀರು ಕಂಡಿಲ್ಲ, ಹಸಿವು ತಾಳಲಾರೆ, ಹಸಿದು ಬಂದಿರುವೆ. ಇವುಗಳಿಂದ ನನಗೆ ಅನ್ನ ಬೇಯಿಸಿ ಹಾಕು" ಎಂದು ಮರಳು, ಮೇಣ, ಕಬ್ಬಿಣ ಬೇಳೆ ಮತ್ತು ಜ್ಯಂಬಲೆಗಳನ್ನು ಅವಳ ಮುಂದಿಡುತ್ತಾಳೆ. ಆರಂಜ್ಯೋತಿಗೆ ಮನಕರಗಿ ವಸಿಷ್ಠನ ಸವಾಲನ್ನು ಸ್ವೀಕರಿಸಿ "ಆಯ್ತು, ಅಡುಗೆ ಮಾಡಿ ಊಟಕ್ಕೆ ಬಡಿಸುತ್ತೇನೆ. ಊಟ ಮುಗಿದ ಕೂಡಲೇ ನೀನು ಹೇಳಿದ ಪ್ರಕಾರವೇ ವಾಪಸ್ಸು ಕಾಶಿಗೆ ಹೋಗುವೆ ತಾನೆ?" ಎಂದು ಸ್ಪಷ್ಟಪಡಿಸಿಕೊಳ್ಳುತ್ತಾಳೆ. ವಸಿಷ್ಠ ಹೌದೆನ್ನುತ್ತಾನೆ. ಸದ್ಯಕ್ಕೆ ಹೊಟ್ಟೆ ಹಸಿವು ತೀರಿದರೆ ಸಾಕು ಮುಂದಿನದು ಬೇರೆ ಮಾತು ಎಂಬುದು ಅವನ ಹಂಚಿಕೆ!

ಊಟ ಮುಗಿದ ಮೇಲೆ ವಾಪಸ್ಸು ಹೋಗಬೇಕೆಂಬ ಷರತ್ತಿನ ಮೇಲೆ ಅರುಂಧತಿ ಅಡುಗೆ ಸಿದ್ಧಪಡಿಸುವ

ಸಲುವಾಗಿ ಎಲ್ಲ ಸಾಮಗ್ರಿಯೊಂದಿಗೆ ಸಮುದ್ರತೀರಕ್ಕೆ ಬಂದು ಅಲ್ಲಿದ್ದ ನೇರಳೆ ಮರದ ಕೆಳಗೆ ಒಲೆ ಹೂಡಿ ಮೇಣದ ಕುಂಭ ಮಾಡಿ, ಆದಿಶೇಷನ ಸಿಂಬೆಮಾಡಿ ನೆತ್ತಿ ಮೇಲೆ ಹೊತ್ತುಕೊಂಡು ನೀರು ತರುತ್ತಾಳೆ. ಮರಳು ಅನ್ನ ಮಾಡಿ ಕಬ್ಬಿಣ ಬೇಳೆ ಸಾರು ಮಾಡಿ ಜ್ಯಂಬೆಲೆಗಳಿಂದ ಊಟದೆಲೆ ಹೊಲಿದು ವಸಿಷ್ಠನಿಗೆ ಉಣಲಿಕ್ಕಲು ಅಣಿಯಾಗುತ್ತಾಳೆ. ಇದನ್ನೆಲ್ಲಾ ಕಣ್ಣಾರೆ ಕಂಡ ಬ್ರಾಹ್ಮಣಯ್ಯ ಆನಂದದಿಂದ ಕೇಕೆ ಹಾಕಿ ನಗುತ್ತಾ ನನಗಿನ್ನು ಮದುವೆ ಪ್ರಾಪ್ತಿಯಾಯಿತೆಂದು ಹಿಗ್ಗುತ್ತಾನೆ.

ಈ ಅರುಂಧತಿಯೇ ತನಗೆ ತಕ್ಕನಾದ ಕನ್ಯಾರತ್ನ. ಈಕೆಯೇ ನಿಜವಾದ ಪತಿವ್ರತಾ ಸ್ತ್ರೀ. ಇವಳನ್ನೇ ಮದುವೆಯಾಗಬೇಕು ಎಂದು ನಿಶ್ಚಯಿಸಿ ಸಮುದ್ರ ಸ್ನಾನ ಮಾಡಿ, ಜಪತಪ ಮುಗಿಸಿ ಬಂದು ಊಟ ಮಾಡಲು ಚಕ್ಕಂಬಕ್ಕಾಲು ಹಾಕಿ ಕುಳಿತುಕೊಳ್ಳುತ್ತಾನೆ. ಮೊದಲ ಕವಳ ಎತ್ತಿ ಮೂರು ತುತ್ತು ಉಂಡು ಮಿಕ್ಕಿದ್ದನ್ನು ಗಂಟುಕಟ್ಟಿ ಬೆನ್ನಿಗೇರಿಸಿಕೊಂಡು ಮೋಹ ವಾಂಛೆಯಿಂದ ಆರಂಜ್ಯೋತಿಯ ಸೆರಗಿಗೆ ಕೈ ಹಾಕುತ್ತಾನೆ.

ಈ ಅನಿರೀಕ್ಷಿತ ಆಘಾತದಿಂದ ಬೆಚ್ಚಿ ಸಿಟ್ಟಿಗೆದ್ದ ಆರಂಜ್ಯೋತಿ "ನನ್ನ ಕೈ ಅನ್ನ ತಿಂದು ನನ್ನ ಸೆರಗಿಗೆ ಕೈ ಹಾಕಿದೆ. ನನ್ನ ವ್ರತ ಭಂಗವಾಯಿತು" ಎಂದು ರೇಗಾಡಲು, ಆ ಬ್ರಾಹ್ಮಣಯ್ಯ "ನಾನೆ ಗಂಡ ನೀನು ಹೆಂಡತಿ, ಚಿಂತಿಸಬೇಡ" ಎಂದು ಸಮಾಧಾನಪಡಿಸಿದನು.

ಕೇಳು ಕೇಳೆ ಆರಂಜ್ಯೋತಿ
ಕೇಳೆ ಓ ಮತಂಗ ಕನ್ಯೆ
ನಿನ್ನ ಕೈಯ ಅನ್ನ ತಿಂದೆ
ನಿನ್ನ ಸೆರಗೆ ನಾನು ಹಿಡಿದೆ
ನಾನೇ ಗಂಡ ನೀನೆ ಭಾರ್ಯೆ
ನನ್ನ ನೀನು ಲಗ್ನವಾಗೆ ಬಾರೇ
ಕಾಶಿಯಾತ್ರೆ ತೆರಳಿ ಹೋಗೋಣ
ಓ ಆರಂಜ್ಯೋತಿ.....|| (ಸಿಂದ್ ಮಾದಿಗರ ಸಂಸ್ಕೃತಿ, ಪು:300)



ವಸಿಷ್ಠನ ಮಾನಗೆಟ್ಟ ಭಂಡ ಮಾತುಗಳನ್ನು ಕೇಳಿ ಮತ್ತಷ್ಟು ಕೋಪಗೊಂಡು ನಿನ್ನ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಬೇಕು. ಆ ಬೂದೀನ ತಗಂಡ್ಹೋಗಿ ಗಂಗೇಲಿ ಕಲ್ಸಬೇಕು" ಎಂದು ಹೀನಮಾನ ಬೈಯುತ್ತಾಳೆ.

ಆರಂಜ್ಯೋತಿಯ ಈ ಪರಿ ಬೈಗುಳಗಳನ್ನು ಈ ಕಾವ್ಯವನ್ನು ಕಟ್ಟುತ್ತಿರುವವರು ಸಿಂದ್ ಕಾವ್ಯದಲ್ಲಿ ಬಳಸಿರುವುದನ್ನು ವಿಶ್ಲೇಷಿಸಿರುವ ಕೋಟಿಗಾನಹಳ್ಳಿ ರಾಮಯ್ಯ 'ಇಲ್ಲಿ ಕಾವ್ಯ ಕಟ್ಟುತ್ತಿರುವ ಜನಾಂಗಕ್ಕೆ ಬ್ರಾಹ್ಮಣರನ್ನು ಹೊಸದಾಗಿ ಹುಟ್ಟಿದ ಕುಲ ಎಂದಿದ್ದರೂ ಅವರ ರೀತಿ ನೀತಿಗಳ ಅರಿವು ಚೆನ್ನಾಗಿಯೇ ಇರುವಂತಿದೆ. ಮುಖ್ಯವಾಗಿ ಬ್ರಾಹ್ಮಣರು ಸತ್ತ ನಂತರ ಕೈಗೊಳ್ಳುವ ಕ್ರಿಯೆಗಳ ಪರಿಚಯವಿದೆ. ಇಲ್ಲದೇ ಹೋಗಿದ್ದರೆ ಬ್ರಾಹ್ಮಣಯ್ಯನನ್ನು ಆರಂಜ್ಯೋತಿ 'ನಿನ್ನನ್ನು ಬೆಂಕಿ ಇಟ್ಟು ಸುಟ್ಟು ಬೂದಿಮಾಡಬೇಕು ಆ ಬೂದೀನ ತಗಂಡ್ಹೋಗಿ ಗಂಗೇಲಿ ಬೆರಸ ಬೇಕು' ಎಂಬುದಾಗಿ

ಬಯ್ಯುವ ಅಗತ್ಯವೇ ಬೀಳುತ್ತಿರಲಿಲ್ಲ ಎಂದು ವಿಶ್ಲೇಷಿಸಿರುತ್ತಾರೆ. ಜೊತೆಗೆ ಮಾದಿಗರು ತಮ್ಮ ಕುಲಾಚಾರದಲ್ಲಿ ಸತ್ತಹೆಣಗಳನ್ನುಊಳುತ್ತಾರೆ. ವಸಿಷ್ಠನು ಬ್ರಾಹ್ಮಣನಲ್ಲದೆ ಕೆಳಜಾತಿಯವನಾಗಿದ್ದಿದ್ದರೆ ತಮ್ಮ ಬೈಗುಳಗಳನ್ನು ಊಳುವ ಸಂಸ್ಕೃತಿಗೆ ತಕ್ಕಂತೆಯೇ 'ನಿನ್ನ ಮೊಖ ಮುಚ್ಚ, ನಿನ್ನ ಮೊಖದ ಮ್ಯಾಗ ಮಣ್ಣಾಕ' ಎಂಬುದಾಗಿ ಅರುಂಧತಿಯು ಜೋಡಿಸುತ್ತಿದ್ದ ಹಾಗೆ ಕಾವ್ಯ ಕಟ್ಟುತ್ತಿದ್ದರು ಎಂದು ಹೇಳುವ ಕೋಟಿಗಾನಹಳ್ಳಿ ರಾಮಯ್ಯ ದಲಿತ ಹೆಂಗಸರ ಸಂಸ್ಕೃತಿ ನಿಷ್ಠ ಬೈಗುಳದ ಮಾದರಿಯನ್ನು ಇಲ್ಲಿ ದಾಖಲಿಸಿದ್ದಾರೆ.

ಲಜ್ಜೆಗೇಡಿ ಬ್ರಾಹ್ಮಣ ವಸಿಷ್ಠನನ್ನು ಬೈದುಕೊಂಡು ಆರಂಜ್ಯೋತಿಯು ಸಮುದ್ರ ತೀರವ ತೊರೆದು ಸರಸರ ನಡೆದು ಬಂದು ಮನೆ ಸೇರಿಕೊಳ್ಳುತ್ತಾಳೆ. ವಸಿಷ್ಠ ಬಿಡದೆ ಬೆನ್ನಾಡಿ ಬಂದು ತಾನೂ ಅವಳ ಮನೆ ತೂರಿಕೊಂಡು ಪದ್ಮಾಸನ ಹಾಕಿ ಪಟ್ಟು ಹಿಡಿದು ಕುಳಿತುಬಿಡುತ್ತಾನೆ. ಆರಂಜ್ಯೋತಿ ಮತ್ತೆ ಮತ್ತೆ ಮನೆಬಿಟ್ಟು ಹೋಗುವಂತೆ ಒತ್ತಾಯಿಸುತ್ತಾಳೆ. ಕಿವಿ ಮೇಲೆ ಹಾಕಿಕೊಳ್ಳದ ವಸಿಷ್ಠ, ಬ್ರಾಹ್ಮಣರಿಗೆ ತಕ್ಕ ಹುಸಿಶ್ರೇಷ್ಠತೆಯಿಂದಾಗಿ ಅಲ್ಲಿಂದ ಕದಲಲಿಲ್ಲ. ಆಗ ಆರಂಜ್ಯೋತಿ ಬ್ರಹ್ಮದೇವನನ್ನು ಪ್ರಾರ್ಥಿಸಿ ಮನೆ ತುಂಬಾ ದನದ ಮಾಂಸವನ್ನು ಕರುಣಿಸುವಂತೆ ಕೇಳಿಕೊಳ್ಳುತ್ತಾಳೆ. ಮನೆ ತುಂಬಾ ದನದ ಮಾಂಸ ಉದ್ಭವವಾಗುತ್ತದೆ! ಪಡಸಾಲೆಯಲ್ಲಿ ಗಲ್ಲೆಬಾನಿಯು, ಹೊರಗೆ ಗೋವಿನ ಚರ್ಮ ಎಮಕೆಗಳ ಗುಡ್ಡೆಯೂ, ನಡುಮನೆಯಲ್ಲಿ ಈಲಿ ದೊಮ್ಮೆಗಳ ತೋರಣವೂ, ಗುಂಡಿಗೆಗಳ ಗುತ್ತಿಗಳೂ, ಎಮಕೆಗಳ ರಾಶಿ, ಬಾಡುಗಡ್ಡೆ, ಪಚ್ಚಿಪಂಡೆಗಳೂ, ಕರುಳುಗಳ ಸರಮಾಲೆಯೂ ಹೀಗೆ ತುಂಬಿಕೊಳ್ಳುತ್ತವೆ. ಮಾದಿಗರು ದನಗಳ ಚರ್ಮ ಸುಲಿದು ಮಾಂಸವನ್ನು ಸಿಗಿದು ತೋರಣ ಕಟ್ಟಿರುವ ವರ್ಣಮಯ ದೃಶ್ಯಾವಳಿಗಳಿಂದ ಆ ಮನೆ ತುಂಬಿರುತ್ತದೆ. ಸುಗ್ಗಿಕಾಲದಲ್ಲಿ ರೈತರ ಮನೆಗಳಲ್ಲಿ ಎಲ್ಲೆಂದರಲ್ಲಿ ದವಸ ಧಾನ್ಯ ಹುಲ್ಲು ಕಾಳು ಕಡ್ಡಿ ಕಂಡುಬರುವಂತೆ ದನದ ಬಾಡು ತಿನ್ನುವ ಮಾದಿಗರ ಆ ಮನೆಯಲ್ಲಿ ಎಲ್ಲೆಂದರಲ್ಲಿ ಮಾಂಸದ ಭಾಗಗಳು ಕಂಡು ಬರುತ್ತವೆ. ಆದರೆ ಇದು ನಿಜವಲ್ಲ; ಬ್ರಹ್ಮದೇವನ ಕರುಣೆಯಿಂದ ಪತಿವರತಾ ಧರ್ಮದಿಂದ ಆಗಿರುವ ಮಾಂಸ, ಇದನ್ನು ತನ್ನ ದಿವ್ಯದೃಷ್ಟಿಯಿಂದ ಕಂಡುಕೊಂಡ ವಸಿಷ್ಠ ಹುಸಿನಗುತ್ತಾ 'ಇವೆಲ್ಲ ಇರ್ಲಿ ಬಿಡು ಪರವಾಗಿಲ್ಲ. ನೀನು ನನ್ನ ಹೆಂಡತಿಯಾಗದ ಹೊರತು ಇಲ್ಲಿಂದ ಕದಲೋದಿಲ್ಲ' ಎಂದು ಹಟಬಿಡದೆ ಪಟ್ಟಾಂಗ ಕುಳಿತುಕೊಳ್ಳುತ್ತಾನೆ.

ಕೋಟಿಗಾನಹಳ್ಳಿ ರಾಮಯ್ಯ ಹೇಳುವ ಪ್ರಕಾರ "ಸಮಾಜದ ಮೇಲೆ ಬ್ರಾಹ್ಮಣರ ಮೌಲ್ಯಗಳು ತುಂಬಾ ಪ್ರಭಾವ ಬೀರಿರುವುದರಿಂದ 'ಆರಂಜ್ಯೋತಿ ಕಲ್ಯಾಣ' ಎಂಬ ಮೌಖಿಕ ಕಾವ್ಯವನ್ನು ನಿರೂಪಿಸುತ್ತಿರುವವರು ಕಾವ್ಯದಲ್ಲಿ ಬ್ರಹ್ಮನ ಕರುಣೆಯಿಂದ ಕೃತಕ ಮಾಂಸ ಸೃಷ್ಟಿಸಿಕೊಂಡಿರುತ್ತಾರೆ." ಆದರೆ ಇದೇ ಕತೆಯನ್ನುಭಿನ್ನ ಪಾಠವಾಗಿ ನಿರೂಪಿಸುವ ಸಿಂದ್ ಮಾದಿಗರ ಶಿಷ್ಯರೆಂದು ಹೇಳಿಕೊಳ್ಳುವ ಮಾಸ್ತೀಕರ ಕತೆಯಲ್ಲಿ ಆರಂಜ್ಯೋತಿಯು ವಸಿಷ್ಠನಿಗೆ ನಿಜವಾದ ದನದ ಮಾಂಸವನ್ನೇ ಉಣಬಡಿಸುತ್ತಾಳೆ. ಅದನ್ನು ತಿಂದ ವಸಿಷ್ಠ ಹಾಲಿನ ಕೆನೆಯಿಂದ ಮಾಡಿದ ಕೋವಾ ಇದ್ದಂತಿದೆ ಎಂದು ಪ್ರಶಂಸಿಸಿ ದನದ ಚರ್ಮವನ್ನೆ ಹೊದ್ದು ಮಲಗುತ್ತಾನೆಂದೂ ದಾಖಲಿಸಿರುವ ರಾಮಯ್ಯ ಮಾಸ್ತೀಕರ ಈ ಕಥೆಯೂ ಕೂಡ ಬ್ರಾಹ್ಮಣರು ತಮಗೆ ಬಹು ಪ್ರಿಯವಾಗಿದ್ದ ಗೋಮಾಂಸ ಭಕ್ಷಣೆಯನ್ನು ಕೈಬಿಟ್ಟ ನಂತರದ ಕಾಲದಲ್ಲಿ ಕಟ್ಟಿರುವ ಕತೆ ಎಂದು ಅಭಿಪ್ರಾಯಪಡುತ್ತಾರೆ.

ವಸಿಷ್ಠನು ಆರಂಜ್ಯೋತಿಯ ಮನೆಯಲ್ಲಿಯೇ ಪಟ್ಟಾಗಿ ಪದ್ಮಾಸನ ಹಾಕಿ ಕುಳಿತುಕೊಂಡಿದ್ದಾಗಲೇ ತಂಗಡಿ ಸೌದೆಗೆಂದು ಬೆಟ್ಟಕ್ಕೆ ಹೋಗಿದ್ದ ಅಣ್ಣಂದಿರು ಮನೆಗೆ ಬರುತ್ತಾರೆ. ಬರಬಾರದ ಕಡೆ ಬಂದು ಕುಳಿತಿದ್ದ ಆ ಹಾರುವ ಯುವಕನ ಹೊಟ್ಟಾರಿಸಿದ (ತರಾಟೆಗೆ ತೆಗೆದುಕೊಂಡ) ಬಳಿಕ, ಬಂದ ಕಾರಣವನ್ನು ಕೇಳಲಾಗಿ "ನನ್ನ ಮುದ್ದು ಭಾವಂದಿರೇ, ನನಗೆ ನಿಮ್ಮ ತಂಗಿಯನ್ನು ಕೊಟ್ಟು ಮದುವೆ ಮಾಡಿಕೊಡಿರಿ" ಎಂದು ತನ್ನ ನೇರ ಬೇಡಿಕೆಯನ್ನೆ ಮುಂದಿಡುತ್ತಾನೆ. ಅನ್ನ ಹಾಕಿದವಳ ಸೆರಗಿಗೆ ಕೈ ಹಾಕಿದ ಘಟನೆಯನ್ನು ಅರುಂಧತಿಯಿಂದ ತಿಳಿದುಕೊಂಡ ಅಣ್ಣಂದಿರು ಮತ್ತಷ್ಟು ಕೋಪಾವಿಷ್ಟರಾಗಿ ಗಂಡುಗೊಡಲಿಗಳನ್ನಿಡಿದು ಅವನನ್ನು ಕತ್ತರಿಸಿ ಹಾಕಲು ಮುನ್ನುಗ್ಗುತ್ತಾರೆ. ಆಗ ಅವರಿಗೆ ಅಡ್ಡ ಬಂದ ಆರಂಜ್ಯೋತಿಯು 'ಅವನು ನನ್ನ ಸೆರಗು ಮುಟ್ಟಿರುವುದರಿಂದ ಅವನು ನನ್ನ ಗಂಡ. ನೀವು ಅವನನ್ನು ಕೊಂದರೆ ನಾನು ಮುಂಡೆಯಾಗುತ್ತೇನೆ. ನಿಮಗೆ ಬ್ರಹ್ಮಹತ್ಯಾದೋಷ ತಗಲುತ್ತದೆ. ಅವನದೇನೂ ತಪ್ಪಿಲ್ಲ ತಪ್ಪೆಲ್ಲ ನನ್ನದೆ. ಬೇಕೆಂದರೆ ನನ್ನನ್ನು ಕೊಂದು ಹಾಕಿ, ಅವನನ್ನು ಬಿಟ್ಟು ಬಿಡಿ' ಎಂದು ಅಂಗಲಾಚಿ ಬೇಡುತ್ತಾಳೆ. "ಯಾರನ್ನು ಕೊಂದರು ದೋಷವಿಲ್ಲ ಆದರೆ ಬ್ರಾಹ್ಮಣನನ್ನು ಕೊಂದರೆ ಮಾತ್ರ ಬ್ರಹ್ಮನನ್ನೆ ಕೊಂದ ದೋಷ ತಗಲುತ್ತದೆ" ಎಂಬ ದೃಷ್ಟಿಕೋನವುಳ್ಳ ಈ ಕಥೆಯೂ ಕೂಡ ಸಮಾಜದಲ್ಲಿ ಬ್ರಾಹ್ಮಣ ಮೌಲ್ಯಗಳು

ಬೇರುಬಿಟ್ಟ ನಂತರದಲ್ಲಿಯೇ ಸೃಷ್ಟಿಯಾಗಿರುವುದೆಂದು ಕೋಟಿಗಾನಹಳ್ಳಿ ರಾಮಯ್ಯ ಅಭಿಪ್ರಾಯಪಡುತ್ತಾರೆ.

ರಾಮಯ್ಯ ಇಲ್ಲಿ ಉಲ್ಲೇಖಿಸಲು ಮರೆತ ಮತ್ತೊಂದು ಸಂಗತಿಯೆಂದರೆ ತನ್ನ ಗಂಡನಾದ ವಸಿಷ್ಠನ ಮರಣಾಂತರ ತಾನು ಮುಂಡೆಯಾಗುತ್ತೇನೆಂಬ ಅರುಂಧತಿಯ ದೃಷ್ಟಿಕೋನವೂ ಸಹ ಬ್ರಾಹ್ಮಣ ಮೌಲ್ಯಗಳ ಉತ್ಪನ್ನವೇ ಸರಿ. ಏಕೆಂದರೆ ಪೂರ್ವಿಕ ಮಾದಿಗ ಕುಲದಲ್ಲಿ ಕೂಡಿಕೆ ವಿವಾಹಗಳು ಇದ್ದುದರಿಂದ ಯಾವ ಹೆಣ್ಣು ಮಗಳೂ ವೈಧವ್ಯದಿಂದ ನರಳುವಂತಿರಲಿಲ್ಲ. ವಿಧವೆ-ರಂಡೆ-ಮುಂಡೆಯೆನ್ನಿಸಿಕೊಂಡು ಸತ್ತ ಗಂಡನ ಹೆಸರಿನಲ್ಲಿ ಜೀವಚ್ಛವವಾಗಿ ಬದುಕುವುದು ಈ ಸಮಾಜಕ್ಕೆ ಬ್ರಾಹ್ಮಣರು ನೀಡಿದ ಅನಿಷ್ಟ ಪದ್ಧತಿಯೇ ಹೊರತು ಇದು ದಲಿತರ ಮೂಲ ಸಂಸ್ಕೃತಿಯಲ್ಲಿಲ್ಲ.

ಮನೆಯಲ್ಲಿ ಯಾರೊಬ್ಬರೂ ಇರದ ಹೊತ್ತಿನಲ್ಲಿ ವಸಿಷ್ಠನನ್ನು ಮನೆಯೊಳಗೆ ಬಿಟ್ಟುಕೊಂಡದ್ದು ಸಾಲದೆ ಅವನಿಗೆ ಅಡುಗೆಮಾಡಿ ಊಟ ಬಡಿಸಿ, ಅವನನ್ನು ಏಕಾಏಕಿ ಗಂಡನನ್ನಾಗಿ ಸ್ವೀಕರಿಸಿರುತ್ತಾಳೆಂದು ಕ್ರೋಧಗೊಂಡ ಆ ಏಳು ಜನ ಅಣ್ಣಂದಿರು ಸಿಟ್ಟಿನಿಂದ ಅರುಂಧತಿಯನ್ನು ಮತ್ತು ವಸಿಷ್ಠನನ್ನು ಕತ್ತುಹಿಡಿದು ಹೊಸಿಲಾಚೆ ತಳ್ಳುತ್ತಾರೆ. ಕುಪಿತಳಾದ ಆರಂಜ್ಯೋತಿಯು ತನ್ನ ತವರಿನವರಿಗೆ ಏನೇ ಭಾಗ್ಯವಿದ್ದರೂ "ಪುಲ್ಲೆಲುಗು ಉಲ್ಲಿಗಿಂಜಲು, ಅಂಗಡಿ ಭೀಮು-ತಂಗಡಿ ಕಟ್ಟ" (ಪುಳ್ಳೆಬೆಳಕು-ಉರುಳಿ ಕಾಳು, ಅಂಗಡಿ ಅಕ್ಕಿ-ತಂಗಡಿ ಚಕ್ಕೆ) ಗತಿಯಾಗಲೆಂದು ಶಪಿಸಿ ಅಲ್ಲಿಂದ ನಿರ್ಗಮಿಸುತ್ತಾಳೆ. ಆದುದರಿಂದಲೇ ಇಂದಿಗೂ ಮಾದಿಗರು ಕಡುಬಡತನದಿಂದ ದೀಪಕ್ಕೆ ಎಣ್ಣೆಯು ಗತಿ ಇಲ್ಲದೆ ಕಡ್ಡಿಪುಳ್ಳೆ ಬೆಳಕೆ ಗತಿಯಾಗಿ ಬಳ್ಳರಾಗಿಯು ಗತಿ ಇಲ್ಲದೆ ಗುನುಗುರಾಗಿ ಗಂಜಿಯೇ ಗತಿಯಾಗಿ ಬದುಕುತ್ತಿದ್ದು ತಮ್ಮ ದಾರಿದ್ರ್ಯಕ್ಕೆ ಆ ತಾಯಿ ಆರಂಜ್ಯೋತಿ ಅಂದು ಇತ್ತ ಶಾಪವೇ ಕಾರಣವೆಂದು ಹೇಳಿ ಕೊಳ್ಳುತ್ತಾರೆ. ಎಂದು ಕೋಟಿಗಾನಹಳ್ಳಿ ರಾಮಯ್ಯ ಮಾದಿಗರು ಆರಂಜ್ಯೋತಿಯ ಶಾಪವನ್ನು ಸ್ಮರಿಸುವ ಕುರಿತು ದಾಖಲಿಸಿದ್ದಾರೆ.

ವಸಿಷ್ಠನೊಂದಿಗೆ ಆರಂಜ್ಯೋತಿಯು ಹೊರಟಾಗ "ನಾವೂ ನಿಮ್ಮ ಜತೆ ಬರುತ್ತೇವೆ" ಎಂದು ಬಂದ ಕ್ವಾಮಟಿಗ ಅಣ್ಣಂದಿರ ಬಗ್ಗೆ ಮಾತ್ರ ಒಲವು ತಾಳಿದ ಆರಂಜ್ಯೋತಿ "ನಿಮ್ಮ ವಂಶ ಇರುವವರೆಗೆ ಕಾಸಿಗೆ ಕಾಸು ಕೂಡಿ ಕೋಟಿಯಾಗಿ ಹೆಡೆಬಿಚ್ಚಲಿ" ಎಂದು ಹಾರೈಸುತ್ತಾಳೆ. ಆದ್ದರಿಂದಲೇ ಕೋಮಟಿಗರು ಕೋಟ್ಯಾಧೀಶರಾಗಿದ್ದಾರೆ; ಮಾದಿಗರು ಬಡವರಾಗಿದ್ದಾರೆ ಎಂಬ ನಂಬಿಕೆ ಮಾದಿಗರಲ್ಲಿದೆ. ಕಥಾಂತ್ಯದಲ್ಲಿ ವಸಿಷ್ಠ ಆರಂಜ್ಯೋತಿಯರ ವಿವಾಹವನ್ನು ವಿಶ್ವಬ್ರಹ್ಮ ಕಾಶಿಯಲ್ಲಿ ನೆರವೇರಿಸುತ್ತಾನೆ.

ಕಾಶಿದಾರಿ ಬೆನ್ನ ಬಿದ್ದು
ಹಿಂದು ಮುಂದು ಬರುತಿರಲವರು
ಮಲತಾಯಿ ಮಕ್ಕಳು ಅವರು
ಕೋಮಟಿ ಅಣ್ಣಂದಿರು ಅವರು
ಅಡ್ಡ ಬಂದು ನಿಂತಾರಲ್ಲಯ್ಯಾ.......॥
ಏನಮ್ಮಾ ಆರಂಜ್ಯೋತಿ
ಪತಿವರತಾ ಮುದ್ದು ತಂಗಿ
ಬ್ರಾಹ್ಮಣನ ಹಿಂದೆ ಹೊರಟಿರುವೆ ತಾಯಿ
ನಿನ್ನ ಹಿಂದೆ ನಾವು ಬರುವೆವೋ
ಓ ಆರಂಜ್ಯೋತಿ........॥
ಹಿಂದೆ ಹುಟ್ಟಿದ ಅಣ್ಣಗಳು
ಇಷ್ಟು ಮಾತ್ರಕು ಬರದೆಹೋದರು
ಮಲತಾಯಿ ಮಕ್ಕಳು ನೀವು
ನಮ್ಮ ಹಿಂದೆ ಬರಬ್ಯಾಡದಣ್ಣ
ನಿಮ್ಮ ವಂಶ ಇರುವತಂಕ
ಕಾಸು ಕಾಸು ಕೂಡಿಬಂದು ಕೋಟೀಗೆ ಹಡೆಬಿಚ್ಚಲಿ ಅಣ್ಣ
ನನ್ನ ಹಿಂದೆ ನೀವು ಬರಬ್ಯಾಡದೋ
ಓ ಅಣ್ಣಗಳಿರಾ.........॥

ಆಗ ಆ ಗಳಿಗೆಯಲ್ಲಿ ಕಾಶಿವರೆಗೂ ಹೋದರಣ್ಣ
ವಿಶ್ವನಾಥನ ಗುಡಿಯ ಮುಂದೆ
ದ್ವಾರ ಬಾಗಲಲಿ ನಿಂತರಲ್ಲಯ್ಯೋ.........॥ (ಸಿಂದ್ ಮಾದಿಗರ ಸಂಸ್ಕೃತಿ ಪು:208,209)

ಬ್ರಾಹ್ಮಣರ ವಾರಕಾಂತೆಯ ಮಗನಾದ ವಸಿಷ್ಠ ಮಾತಂಗವಾಡೆಯ ಮತಂಗ ಕನ್ಯೆ ಅರುಂಧತಿಯನ್ನು ಮದುವೆಯಾಗುವ ಮೂಲಕ ಮಾದಿಗರ ಅಳಿಯನಾಗುವುದರೊಂದಿಗೆ 'ಆರಂಜ್ಯೋತಿ ಕಲ್ಯಾಣ' ಎಂಬ ವರ್ಣಸಂಕರ ಕುರಿತ ಮೌಖಿಕ ಕಥನಕಾವ್ಯವು ಮುಕ್ತಾಯವಾಗುತ್ತದೆ. ಮೇಲೆ ಹೇಳಲಾದ ಇದಿಷ್ಟುಕೋಟಿಗಾನಹಳ್ಳಿ ರಾಮಯ್ಯ ಸಂಗ್ರಹಿಸಿರುವ ಸಿಂದ್‌ಮಾದಿಗರ ಮೌಖಿಕ ಕಥನ ಕಾವ್ಯ.

ಎಮ್ಮಾ ರೋಶಾಂಬು ಕ್ಲೌ ಅವರು ಅರುಂಧತಿ ತನ್ನ ಮಾದಿಗ ಕುಲಸ್ಥರಿಗೆ ನೀಡಿದ ಶಾಪವನ್ನು ಕುರಿತು ಹೀಗೆ ಹೇಳಿದ್ದಾರೆ :"Then it was that Arunzodi, before the eyes of all, rose to heaven. And she cursed them saying you shall be slaves of all. Though you work and toil, it shall not raise your condition. Unclothed and untaught you shall be, ignorant and despised from henceforth!' Thus Arunzodi cursed her people as she rose up, and they and the brahmin were left standing and gazing after her.

The Madigas can not forget Arunzodi.The dasulu often tell the story of her faith, and of the curse with which she cursed her people, which, alas! Has been fulfilled. And as the Dasulu recite they acompany themselves with instruments". (Emma Raushenbusch Clough, While Sewing Sandals, 1899. Pg.54-55)

ಅರುಂಧತಿಯ ಶಾಪ ಎಂಬ ಅಧ್ಯಾಯದಲ್ಲಿ ಎಮ್ಮಾ ಕ್ಲೌ 53ನೇ ಪುಟದಿಂದ 56ನೇ ಪುಟದವರೆಗೆ ಅರುಂಧತಿಯು ಬ್ರಾಹ್ಮಣರ ವಸಿಷ್ಠನನ್ನು ಮದುವೆಯಾಗಿ ಮಾದಿಗರ ಪಾಲಿನ ಅಮರಜ್ಯೋತಿಯಾದ ಬಗೆಯನ್ನು ವಿವರಿಸಿದ್ದಾರೆ.

ಆದಿಜಾಂಬವ ಜನಾಂಗದಲ್ಲಿರುವ ಸೃಜನಶೀಲ ಮೌಖಿಕ ಸಾಹಿತ್ಯ ಹಲವಾರು ಭಿನ್ನ ಪಾಠಗಳನ್ನು ಒಳಗೊಳ್ಳುತ್ತಾ ಬಹುರೂಪಿಯಾಗಿ ವ್ಯಾಪಿಸಿದೆ. ಮಾದಿಗರ ಮೌಖಿಕ ಸಾಹಿತ್ಯದ ಜನಪ್ರಿಯತೆ ಮೇಲ್ಜಾತಿಯ ಮನಸ್ಸುಗಳನ್ನು ಪ್ರಭಾವಿಸಿರುವುದರಲ್ಲಿ ಅನುಮಾನವಿಲ್ಲ. ಅಂತಹ ಮನಸ್ಸುಗಳು ಅರುಂತಿಯು ಮೇಲ್ಜಾತಿಯಲ್ಲಿ ಹುಟ್ಟಿದವಳೆಂದು ಮತ್ತು ಅವಳಲ್ಲಿ ನೀತಿ ಯುಕ್ತವಾದ ಸಾಮಾಜಿಕ ಮೌಲ್ಯಗಳಿದ್ದವೆಂದು ನಿರೂಪಿಸಲು ಪ್ರಯತ್ನಿಸಿವೆ. ಈ ನಿಟ್ಟಿನಲ್ಲಿ ತಿಯೊಡೊರ್ ಎಲ್ಮೋರ್ ಸಂಗ್ರಹಿಸಿರುವ ಅರುಂಧತಿ ಕುರಿತ ಭಿನ್ನ ಪಾಠವೊಂದು ನಮ್ಮ ಗಮನ ಸೆಳೆಯುತ್ತದೆ.

ಭಾರತಕ್ಕೆ ಅಮೇರಿಕಾದ ಬಾಪ್ಟಿಸ್ಟ್ ಮಿಷನರಿಯಾಗಿ ಬಂದು 1900 ರಿಂದ 1915ರವರೆಗೆ ಆಂಧ್ರದ ನೆಲ್ಲೂರು ಸೀಮೆಯ ರಾಮಪಟ್ಟಣದಲ್ಲಿ ಕೆಲಸ ಮಾಡಿದ ಪಿಲ್ಬರ್ ತಿಯೊಡೊರ್ ಎಲ್ಮೋರ್, ಮಾದಿಗರನ್ನು ಕುರಿತು 1911 ರಿಂದ 1913 ರವರೆಗೆ ಕ್ಷೇತ್ರಕಾರ್ಯ ನಡೆಸಿ ಅನೇಕ ಸಂಗತಿಗಳನ್ನು ಕಲೆ ಹಾಕುತ್ತಾನೆ. ಅವನು ಕಲೆ ಹಾಕಿದ ಗಣನೀಯ ಪ್ರಮಾಣದ ಮಾಹಿತಿಗಳಿಗೆ ಆಧಾರಮೂಲವಾಗಿ ಪೂರ್ವಸೂರಿ ಅಧ್ಯಯನಕಾರನಾದ ಮೋರ್ಚೆರ್ಲ ರಾಬರ್ಟ್‌ನ ಆಕರಗಳಿಗೆ ಋಣಿಯಾಗಿದ್ದಾನೆ. "through whose untiring efforts a considerable portion of the material has been secured" ಎಂದು ಮೋರ್ಚೆರ್ಲ ರಾಬರ್ಟ್‌ನನ್ನು ಸ್ಮರಿಸಿರುವ ತಿಯೊಡೊರ್ ಎಲ್ಮೋರ್ "Dravidian Gods in Modern Hinduism; A study of the local and village deities of Southern India" ಎಂಬ ಗ್ರಂಥದ ಪುಟ ಸಂಖ್ಯೆ 16 ರಿಂದ 18ರವರೆಗೆ ಅರುಂಧತಿಯನ್ನು ಕುರಿತು ನೀಡಿರುವ ಜಾನಪದ ಕಥೆ ಒಂದು ವಿಶಿಷ್ಟ ಭಿನ್ನ ಪಠ್ಯವಾಗಿದೆ. ಅವನು ಆಂಗ್ಲಭಾಷೆಯಲ್ಲಿ ನೀಡಿರುವ ಕಥೆಯನ್ನು ಕನ್ನಡದಲ್ಲಿ ಸಾರಾಂಶ ರೂಪದಲ್ಲಿ ಹೇಳುವುದಾದರೆ–

ಒಂದಾನೊಂದು ಕಾಲದಲ್ಲಿ ಕೆಳಜಾತಿಯ ವ್ಯಕ್ತಿಯನ್ನು ಮದುವೆಯಾದ ಮೇಲ್ಜಾತಿಯ ಮಹಿಳೆಯೊಬ್ಬಳು ತನ್ನ ಹೆತ್ತವರೊಂದಿಗೆ ತವರು ಮನೆಯಲ್ಲಿಯೇ ವಾಸವಿದ್ದಳು.ಒಂದು ರಾತ್ರಿ ತಿಳಿಸದೆಯೇ ಮನೆಗೆ ಬಂದ ಗಂಡನು ಹೆಂಡತಿಯ ಮಗ್ಗುಲಲ್ಲಿ ಮಲಗಿಕೊಂಡನು.ತನ್ನ ಗಂಡನೆಂದು ಗುರುತಿಸಲಾರದ ಅವಳು

ಜಾಡಿಸಿ ಒದೆಯುತ್ತಾಳೆ. ಒದೆಸಿಕೊಂಡ ಅವನು ತನ್ನ ಹೆಂಡತಿ ಮಾದಿಗಳಾಗಿ ಹುಟ್ಟುವಂತೆ ಶಪಿಸುತ್ತಾನೆ. ಈ ವಿಷಯ ತಿಳಿದ ಆ ಮಹಿಳೆಯ ಅಪ್ಪ, ರಾಜರ ದೊಡ್ಡ ಸಭೆಯನ್ನೇ ಕರೆಯುತ್ತಾನೆ. ಹೆಂಡತಿಯ ಸದ್ಗುಣಪೂರಿತ ಕೃತ್ಯವನ್ನು ಗುರುತಿಸಲಾರದ ಅಳಿಯನ ಮೇಲೆ ಸಿಟ್ಟಾದ ಅವರೆಲ್ಲರೂ ಅವನು ವೇಶ್ಯೆಯ ಮಗನಾಗಿ ಜನ್ಮಿಸುವಂತೆ ಪ್ರತಿಶಾಪ ಹಾಕುತ್ತಾರೆ.

ಕಾಲಾಂತರದಲ್ಲಿ ಇಬ್ಬರ ಶಾಪವೂ ಫಲಿಸುತ್ತದೆ.ಆರಂಜ್ಯೋತಿ ಮಾದಿಗರ ಹೆಣ್ಣಾಗಿ ಹುಟ್ಟುತ್ತಾಳೆ.ಅದೇ ಕಾಲಕ್ಕೆ ವಿಶ್ವಬ್ರಹ್ಮ ಎಂಬ ಹೆಸರಿನ ಗುರುವು ಇರುತ್ತಾನೆ. ಅವನ ಆರಾಧಕರು, “ನೀವು ತೀರ್ಥಯಾತ್ರೆಯ ಮೇಲೆ ಯಾವಾಗಲೂ ಹೋಗುತ್ತಿರುತ್ತೀರಿ.ಆದುದರಿಂದ ನಿಮ್ಮ ಪ್ರತಿರೂಪವೊಂದನ್ನು ನಮಗೆ ಮಾಡಿಕೊಡಿ.ನೀವು ನಮ್ಮೊಂದಿಗಿಲ್ಲದಾಗ ಇಲ್ಲಿ ನಾವು ಅದನ್ನೇ ಪೂಜಿಸುತ್ತೇವೆ” ಎಂದು ಕೇಳಿಕೊಂಡರು.ಒಪ್ಪಿದ ಅವನು ತನ್ನದೇ ಪಂಚಮುಖಿ ಪ್ರತಿರೂಪವನ್ನು ಮಾಡಿಕೊಡುತ್ತಾನೆ. ಗುರುವಿನ ಪ್ರತಿರೂಪದ ಆ ಪ್ರತಿಮೆಯ ಪಕ್ಕದಲ್ಲಿ ಹೆಂಡತಿಯೂಇರಬೇಕೆಂದು ತೀರ್ಮಾನಿಸಿಕೊಂಡ ಶಿಷ್ಯರು ವೇಶ್ಯೆಯೊಬ್ಬಳನ್ನು ಕರೆತಂದು ಆ ಪ್ರತಿಮೆಯ ಎದುರು ನಿಲ್ಲಿಸಿದರು.ಪ್ರತಿಮೆಯು ತದೇಕ ದೃಷ್ಟಿಯಿಂದ ಅವಳ ಮೇಲೆ ದೃಷ್ಟಿ ಬೀರುತ್ತಿದ್ದುದರಿಂದಾಗಿ ಅವಳು ಗರ್ಭವತಿಯಾಗಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ.ಆ ಹುಡುಗನೇ ಆರಂಜ್ಯೋತಿಯ ಹಿಂದಿನ ಜನ್ಮದ ಗಂಡನ ಪುನರಾವತಾರ.

ಹೀಗೆ ಜನ್ಮಿಸಿದವನು ಸ್ವರ್ಗಕ್ಕೆ ಹೋಗುವುದು ಯೋಗ್ಯವೆಂದು ಜನ ಅವನಿಗೆ ಹೇಳತೊಡಗುತ್ತಾರೆ.ತನ್ನನ್ನು ಜನರು ಪೂಜಿಸದ ಹೊರತು ಸ್ವರ್ಗಕ್ಕೆ ಹೋಗಲಾರೆನೆನ್ನುತ್ತಾನೆ. ಒಂದು ವೇಳೆ ತಾನು ಅಕ್ಕಿಯ ಬದಲಾಗಿ ಮರಳನ್ನು, ಬೇಳೆ ಬದಲಾಗಿ ಕಬ್ಬಿಣದ ಕಡಲೆಯನ್ನು ತೆಗೆದುಕೊಂಡು ಅವುಗಳನ್ನು ಬೇಯಿಸಿ ಅಡುಗೆ ಮಾಡಿಕೊಂಡು ಜಂಬೆಲೆಯಲ್ಲಿ ಉಣ್ಣುವವನಾದರೆ ಅವನನ್ನು ಪೂಜಿಸುವುದಾಗಿ ಅವರೆಲ್ಲರೂ ವಚನ ನೀಡುತ್ತಾರೆ. ಅಡುಗೆ ಮಾಡಿಕೊಡಬಲ್ಲ ಸೂಕ್ತ ಹೆಣ್ಣನ್ನು ಹುಡುಕುವ ಪ್ರಯತ್ನದಲ್ಲಿ ಮರಳು ಮತ್ತು ಕಬ್ಬಿಣದ ಕಡಲೆಯನ್ನು ಹೊತ್ತುಕೊಂಡು ಭೂಮಂಡಲವನ್ನೆಲ್ಲಾ ಸುತ್ತಿದ ಆ ಹುಡುಗ, ಕಷ್ಟಸಾಧ್ಯವಾದ ಈ ಕಟ್ಟಳೆಗಳನ್ನು ಈಡೇರಿಸಬಲ್ಲ ಹೆಣ್ಣು ಸಿಗದೆ ಕಂಗಾಲಾಗಿ ಕಡೆಗೆ ಆರಂಜ್ಯೋತಿಯು ವಾಸವಿದ್ದ ಮಾದಿಗರ ಕೇರಿಗೆ ಬರುತ್ತಾನೆ. ಅವನು ಬಂದ ವೇಳೆಯಲ್ಲಿ ಅವಳು ಶಿವಪೂಜೆಯಲ್ಲಿ ನಿರತಳಾಗಿರುತ್ತಾಳೆ. ಅವನ ಬೇಡಿಕೆಯನ್ನು ಮನ್ನಿಸಿ ಮರಳು ಮತ್ತು ಕಬ್ಬಿಣದ ಕಡಲೆಯಿಂದ ಪಾಕವಾಗಿ ಅನ್ನ ಮತ್ತು ಸಾರು ತಯಾರಿಸಿ ಅವಳೇ ಹೆಣೆದ ಜಂಬೆಲೆ ಇಸ್ತ್ರದ ಮೇಲೆ ಉಣಬಡಿಸುತ್ತಾಳೆ.


ಈಗ ಆರಂಜ್ಯೋತಿ ತನ್ನನ್ನು ಮದುವೆಯಾಗಬೇಕೆಂದು ಕೇಳುತ್ತಾನೆ. ತಾನು ಮಾದಿಗ ಜಾತಿಯವಳಾಗಿರುವುದರಿಂದ ಬ್ರಾಹ್ಮಣನಾದ ಅವನನ್ನು ವರಿಸುವುದು ಯೋಗ್ಯವಲ್ಲವೆಂದು ಉತ್ತರಿಸುತ್ತಾಳೆ.ಅವಳ ನಿರಾಕರಣೆಯನ್ನು ಒಪ್ಪಿಕೊಳ್ಳದೆ, ಆ ಮನೆಯನ್ನು ಬಿಟ್ಟು ಹೋಗದೆ ಅಲ್ಲಿಯೇ ಅಂಗಳದಲ್ಲಿ ಕುಳಿತುಬಿಡುತ್ತಾನೆ. ಆರಂಜ್ಯೋತಿಯ ಅಣ್ಣಂದಿರು ಬಂದು ಅವನ ಕೈ ಹಿಡಿದು ಹೊರಗೆಳೆದು ಗುಂಡಿಯೊಳಕ್ಕೆ ನೂಕಿಬಿಟ್ಟು ಅದೇ ಅಂಗಳದಲ್ಲಿ ಕುಳಿತುಕೊಳ್ಳುತ್ತಾರೆ.ಆರಂಜ್ಯೋತಿಯು ಅವನೇ ತನಗೆ ಜೋಡಿಯೆಂದು ಅರಿತು ತನ್ನ ಜನರ ಇಷ್ಟದ ವಿರುದ್ಧವಾಗಿ ಮದುವೆಯಾಗುತ್ತಾಳೆ.

ಈಗ ಆರಂಜ್ಯೋತಿಯ ಅಪ್ಪ ತನ್ನ ಮಗಳ ಮೇಲೆ ಕೋಪಗೊಂಡು ಈಶಾನ್ಯ ಆಕಾಶದಲ್ಲಿ ನಕ್ಷತ್ರವಾಗುವಂತೆ ಶಪಿಸುತ್ತಾನೆ. ಕಡೇಪಕ್ಷ ತನಗೆ ಆಶೀರ್ವಾದ ಮಾಡೆಂದು ಅಪ್ಪನನ್ನು ಕೇಳಿಕೊಳ್ಳಲು, ಮುಂದೆ ಇನ್ನೆರಡು ಯುಗಗಳ ನಂತರ ಕಲಿಯುಗ ಬಂದಾಗ ಎಲ್ಲರೂ ಅವಳನ್ನು ಪೂಜಿಸುವಂತಾಗಲೆಂದುಅನುಗ್ರಹಿಸುತ್ತಾನೆ. ಆರಂಜ್ಯೋತಿಯ ಗಂಡನಿಗೂ ಸಹ ಆಗ್ನೇಯ ಆಕಾಶದಲ್ಲಿ ನಕ್ಷತ್ರವಾಗುವಂತೆ ಶಪಿಸಿ, ಪರಿಹಾರ ಕ್ರಮವಾಗಿ ಜನ ಅವನನ್ನು ಖುಷಿಯೆಂದು ಸ್ವೀಕರಿಸಿ ಆರಾಧಿಸುವಂತಾಗಲೆಂದು ಅನುಗ್ರಹಿಸುತ್ತಾನೆ. ಆದರೆ ಜನರ ನಡುವೆ ಅವನ ಆರಾಧನೆ ಮುಂದುವರೆದಂತೆ ಕಾಣುತ್ತಿಲ್ಲ. ತಂದೆಯ ಶಾಪಕ್ಕೆ ಪ್ರತಿಯಾಗಿ ಮಾದಿಗರು ನಿರಂತರ ದಾರಿದ್ರ್ಯ, ಅಜ್ಞಾನ ಮತ್ತು ದಾಸ್ಯದ ಬದುಕು ನಡೆಸುವಂತಾಗಲಿ ಎಂದು ಶಾಪ ಹಾಕುತ್ತಾಳೆ ಆರಂಜ್ಯೋತಿ.

ಬ್ರಾಹ್ಮಣ ಜಾತಿಯ ಹೆಣ್ಣುಮಗಳನ್ನು ಬ್ರಾಹ್ಮಣ ಜಾತಿಯಿಂದ ಅಪಹರಿಸುವ ಹುನ್ನಾರದಿಂದ ಇಂತಹ ಕಥೆಯೊಂದನ್ನು ನೇಯಲಾಗಿದೆಯೆಂದು ಬ್ರಾಹ್ಮಣರು ದೂರುತ್ತಾರೆ.ಹೀಗಿದ್ದೂ ಈ ಕಥೆಯಲ್ಲಿರುವ ಸತ್ಯವನ್ನು

ನಿರಾಕರಿಸಲಾರದ ಬ್ರಾಹ್ಮಣರು ಈ ಕಥೆ ಕೇಳತೊಡಗಿದಂತೆ ಬೆನ್ನು ತಿರುಗಿಸುತ್ತಾರೆ. ಆರಂಜ್ಯೋತಿ ಎಂಬ ದ್ರಾವಿಡ ಹೆಸರನ್ನು ಬ್ರಾಹ್ಮಣರು ಅರುಂಧತಿ ಎಂಬ ಸಂಸ್ಕೃತ ಹೆಸರಿನಿಂದ ಕರೆಯುತ್ತಿದ್ದಾರೆಂದು ವಿಲ್ಬರ್ ತಿಯೊಡೊರ್ ಎಲ್ಮೋರ್ ಹೇಳುತ್ತಾನೆ. "The name, Aranjyothi, is Dravidian, while the Brahmans call her by her Sanskrit name, Arundhathi". (Wilber Theodore Elmore, 1915. Dravidian Gods in Modern Hinduism; A study of the local and village deities of Southern India. Hamilton, NY: The Author).

ಭಾರತೀಯ ಜಾತಿಗ್ರಸ್ತ ಸಮಾಜದಲ್ಲಿ ಅಂತರ್ಜಾತಿ ವಿವಾಹ ಅಷ್ಟು ಸುಲಭವಾಗಿ ನಡೆಯುವುದು ಸಾಧ್ಯವಿರಲಿಕ್ಕಿಲ್ಲ. ಹಾಗೊಂದು ವೇಳೆ ಅಂತಹ ವಿವಾಹಗಳು ಜರುಗಿದ್ದ ಪಕ್ಷದಲ್ಲಿ ಮೇಲ್ಜಾತಿಯ ಗಂಡುಗಳು ಕೇಳಜಾತಿಯ ಹೆಣ್ಣುಗಳನ್ನು ಕಾಮವಾಂಛೆಯಿಂದ ಬಳಸಿಕೊಂಡಿರುತ್ತಾರೆ.ಕೆಲವೊಮ್ಮೆ ತಮ್ಮ ಜಾತಿಗಳಲ್ಲಿ ಸೂಕ್ತ ಹೆಣ್ಣುಗಳೇ ಇಲ್ಲದಿರುವಾಗ ಕೆಳಜಾತಿ ಹೆಣ್ಣುಗಳನ್ನು ಮದುವೆಯಾಗಿರುತ್ತಾರೆ. ಆದಾಗ್ಯೂ ಮೇಲ್ಜಾತಿ ಹೆಣ್ಣುಮಗಳನ್ನು ಕೆಳಜಾತಿ ಯುವಕನು ಮದುವೆಯಾಗಲು ತಾನು ಹುಟ್ಟಿದ ಜಾತಿಯನ್ನು ಮರೆಮಾಚಿ ಮೇಲು ಜಾತಿಯವನೆಂದು ಸುಳ್ಳು ಹೇಳಿರಬೇಕು ಅಥವಾ ಮೇಲು ಜಾತಿಯವರೇ ವರನ ಗುಣಸ್ವಭಾವ ಸಾಧನೆಗಳನ್ನು ತಿಳಿದು ಅವನು ಮೇಲ್ಜಾತಿಯವನೇ ಎಂದು ತಪ್ಪು ಭಾವಿಸಿ ವಧುವನ್ನು ನೀಡಲು ಮುಂದೆ ಬಂದ ಸಂದರ್ಭದ ಲಾಭವನ್ನು ವರನೇ ತನಗೆ ಅನುಕೂಲಕರವಾಗಿ ಬಳಸಿಕೊಂಡಿರಬೇಕು. ಅಥವಾ ಮೇಲ್ಜಾತಿ ಹೆಣ್ಣು ತನ್ನ ಜಾತಿಯೊಳಗೆ ಇರುವ ಪುರುಷ ದಬ್ಬಾಳಿಕೆ, ಶೋಷಣೆಗಳಿಂದ ಬಿಡುಗಡೆಹೊಂದಲು ಕೆಳಜಾತಿಯವನೊಂದಿಗೆ ಅನುರಕ್ತಳಾಗಿರಬೇಕು.ಅಥವಾ ಕೆಳಜಾತಿಯ ವ್ಯಕ್ತಿ ತನ್ನ ವೈಯಕ್ತಿಕ ಸಾಧನೆಗಳಿಂದ ಮೇಲ್ಜಾತಿ ಹೆಣ್ಣುಮಗಳನ್ನು ತನ್ನೆಡೆಗೆ ಸೆಳೆದಿರಬೇಕು.ಇವುಗಳ ಹೊರತಾಗಿ ಅನ್ಯಜಾತಿಗಳ ನಡುವೆ ಸುಗಮ ಮದುವೆಗಳಿಗೆ ಅವಕಾಶವಿರಲು ಸಾಧ್ಯವಿಲ್ಲ. ಅಂತರ್ಜಾತಿ ಅಥವಾ ವರ್ಣಸಂಕ ವಿವಾಹಗಳನ್ನು ತಡೆಯುವ ಮತ್ತು ಅಂತಹ ಪ್ರಗತಿಪರ ಮನಸ್ಸುಗಳನ್ನು ದಮನ ಮಾಡುವ ಸಂಪ್ರದಾಯವಾದಿಗಳ ಕ್ರೌರ್ಯ ಹನ್ನೆರಡನೇ ಶತಮಾನದ ಶರಣರ ವಿರುದ್ಧ ನಡೆಯಿತು.



ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಚಳುವಳಿಯನ್ನು ಮುನ್ನಡೆಸಿದ ಶರಣರು ಅಂತರ್ಜಾತಿ ವಿವಾಹಗಳಿಗೆ ಹೆಚ್ಚಿನ ಮಾನ್ಯತೆ ನೀಡಿದ್ದರು. ಪರಧನ ಪರಸ್ತ್ರೀಯರನ್ನು ಒಲ್ಲೆನೆಂಬ ಛಲ ಶರಣರಲ್ಲಿರಬೇಕು ಎಂಬುದನ್ನು ಒತ್ತಿ ಹೇಳಿದ ವಚನಕಾರರು ಪರಜಾತಿಯ ಸ್ತ್ರೀಪುರುಷರ ನಡುವೆ ನಡುವೆಯುವ ವಿವಾಹಗಳನ್ನು ಸಮಷ್ಟಿಯ ಹಿತಸಾಧನೆಗಾಗಿ ಮಾನ್ಯ ಮಾಡಿದ್ದರು ಅಂತರ್ಜಾತಿ ವಿವಾಹಗಳಿಂದ ಸಾಮಾಜಿಕ ಸಮಾನತೆ ತರುವುದಕ್ಕೆ ಸಾಧ್ಯವೆಂದು ವಚನಕಾರರು ನಂಬಿದ್ದರು. ಇಂತಹ ನಂಬಿಕೆಯನ್ನು ಸಾಕಾರಗೊಳಿಸಲೆಂದೇ ಬಸವಣ್ಣನವರ ನೇತೃತ್ವದಲ್ಲಿ ಅಂತರ್ಜಾತಿ ವಿವಾಹ ನೆರವೇರಿದ್ದವೆಂಬುದಕ್ಕೆ ಬ್ರಾಹ್ಮಣರ ಮಧುವರಸನ ಮಗಳು ಲಾವಣ್ಯವತಿ ಮತ್ತು ಮಾದಿಗರ ಹರಳಯ್ಯನ ಮಗ ಶೀಲವಂತನ ವಿವಾಹವು ಉತ್ತಮ ಸಾಕ್ಷಿಯಾಗಿ ನಿಂತಿದೆ. ಲಾವಣ್ಯವತಿ ಮತ್ತು ಶೀಲವಂತ ಒಬ್ಬರನೊಬ್ಬರು ಪ್ರೀತಿಸಿ ಮದುವೆಯಾಗಲು ಇಚ್ಚಿಸಿದಾಗ ಅಂದಿನ ಅನುಭವ ಮಂಟಪದಲ್ಲಿ ಶಿವಶರಣರ ಸಮ್ಮುಖದಲ್ಲಿ ಅವರ ಅಂತರ್ಜಾತಿ ಪ್ರೇಮವಿವಾಹ ಬಸವಣ್ಣನ ನೇತೃತ್ವದಲ್ಲಿ ನೆರವೇರಿತು. ಆದರೆ ಈ ಅಂತರ್ಜಾತಿ ವಿವಾಹವು ಮುಂದೆ ಚಾಡಿಕೋರರ ಕುತಂತ್ರಗಳಿಂದ ಬಿಜ್ಜಳನ ಕೋಪಕ್ಕೆ ದಾರಿಮಾಡಿಕೊಟ್ಟು ಮತೀಯ ಸಂಘರ್ಷಕ್ಕೂ ಅಂದಿನ ಸಮಾಜವನ್ನು ಹೊಯ್ದು ಮುಟ್ಟಿಸಿತು. ಬಿಜ್ಜಳನ ಕೋಪಕ್ಕೆ ಗುರಿಯಾದ ಬಸವಣ್ಣ ತನ್ನ ಅಧಿಕಾರವನ್ನೇ ತ್ಯಜಿಸಿದನು. ಶರಣರು ಕಲ್ಯಾಣವನ್ನು ತೊರೆಯಬೇಕಾಯಿತು. ನವ ವಿವಾಹಿತರಾದ ಲಾವಣ್ಯವತಿ ಮತ್ತು ಶೀಲವಂತರನ್ನು ಹಾಗೂ ಅವರ ತಂದೆತಾಯಿಂದಿರನ್ನು ಎಳೆಹೂಟೆ ಶಿಕ್ಷೆ ನೀಡಿ ಆನೆಗಳಿಂದ ಎಳೆಸಿ ಕೊಲ್ಲಲಾಯಿತು. ಅದು ಪರೋಹಿತರುಗಳು ಜಾತಿ ಜಾತಿಗಳ ನಡುವೆ ನಡೆಯುವ ವರ್ಣಸಂಕರವನ್ನು ತಡೆಗಟ್ಟಲು ಮಾಡಿದ ಪ್ರಯತ್ನವೇ ಆಗಿತ್ತು. ಇಂದಿಗೂ ಹಳ್ಳಿಗಳಲ್ಲಿ ಅಂತರ್ಜಾತಿಯ ವಿವಾಹಗಳು ನಡೆಯದಂತೆ ಕಟ್ಟುನಿಟ್ಟಾದ ಸಾಮಾಜಿಕ ನಿಯಮಗಳನ್ನು ಸಂಪ್ರದಾಯನಿಷ್ಠ ಜಾತಿ ಮನಸ್ಸುಗಳು ಪಾಲಿಸುತ್ತಲಿವೆ. ಅಂತರ್ಜಾತಿ ಪ್ರೇಮ ವಿವಾಹವಾಗುವ ಮೂಲಕ ಸಾಮಾಜಿಕ ಕಟ್ಟುಪಾಡುಗಳನ್ನು ಉಲ್ಲಂಘಿಸುವವರಿಗೆ ಮರ್ಯಾದಾ ಹತ್ಯೆಯಂತಹ ದೊಡ್ಡಪ್ರಮಾಣದ ಶಿಕ್ಷೆ ನೀಡಲು ಈ ದೇಶದ ಪುರೋಹಿತ ವ್ಯವಸ್ಥೆ ಸದಾ ಸಿದ್ಧವಾಗಿರುತ್ತದೆ.

ಕೆಳಜಾತಿ ಹುಡುಗರು ಮೇಲ್ಜಾತಿ ಹುಡುಗಿಯರನ್ನು ಮದುವೆಯಾಗುತ್ತಿರುವಷ್ಟು ಪ್ರಮಾಣದಲ್ಲಿ ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು ಮದುವೆಯಾಗುತ್ತಿಲ್ಲ. ಸಜಾತಿಯಲ್ಲಿಯೇ ಒಳಬಾಂಧವ್ಯ ವಿವಾಹ ಜಾತಿಯ ಮುಖ್ಯಲಕ್ಷಣವಾಗಿ ಆಯಾ ಜಾತಿವಂದಿಗರ ಬೆಂಬಲ ಮತ್ತು ಸಾಮಾಜಿಕ ಒಪ್ಪಿಗೆ ಗಳಿಸಿಕೊಳ್ಳುತ್ತದೆ. ಜಾತಿಯನ್ನು ಪೋಷಿಸುವ ಹಲವಾರು ವ್ಯವಸ್ಥೆಗಳಲ್ಲಿ ವಿವಾಹವೆಂಬ ವ್ಯವಸ್ಥೆ ಪ್ರಧಾನವಾದುದು. ಜಾತಿ ವಿನಾಶ ಮಾಡಲು ಅಂತರ್ಜಾತಿ ವಿವಾಹ ಬಹುಮುಖ್ಯ ಸಾಧನವೆಂದು ಬಸವಣ್ಣ, ಅಂಬೇಡ್ಕರ್, ಗಾಂಧೀಜಿ, ಲೋಹಿಯಾ ಮುಂತಾದವರು ಭಾವಿಸಿದ್ದರು. ಬಸವಣ್ಣನು ಅಂತರ್ಜಾತಿ ವಿವಾಹವನ್ನು ಸಮಗಾರ ಹರಳಯ್ಯ ಮತ್ತು ಬ್ರಾಹ್ಮಣರ ಮಧು ವರಸನ ಕುಟುಂಬಗಳ ಮಕ್ಕಳ ನಡುವೆ ಏರ್ಪಡಿಸಿದ್ದರು ಅಂಬೇಡ್ಕರ್ ಸ್ವತ: ಅಂತರ್ಜಾತಿ ವಿವಾಹ ಮಾಡಿಕೊಂಡಿದ್ದರು, ಗಾಂಧೀಜಿ ಅಂತರ್ಜಾತಿ ವಿವಾಹಗಳಿಗೆ ಹೊರತಾದ ಮದುವೆಗಳಿಗೆ ಹೋಗುವುದನ್ನು ನಿಲ್ಲಿಸಿದ್ದರು ಲೋಹಿಯಾ ಅವಿವಾಹಿತರಾಗಿದ್ದರೂ ಸಹ ಅಂತರ್ಜಾತಿ ವಿವಾಹಗಳಿಗೆ ಮನ್ನಣೆ ನೀಡಿ ಸಮಾಜವಾದಿಗಳನ್ನು ಆ ನೆಲೆಯಲ್ಲಿ ತೀವ್ರವಾಗಿ ತೊಡಗಿಸಿದ್ದರು. ಜಾತಿಯೊಳಗೇ ಮದುವೆಯಾಗುವುದು ಜಾತಿ ನಿಷ್ಠೆ ಪ್ರಕಟಿಸುವ ಏಕೈಕ ವಿಧಾನವಾಗಿ ಶಿಕ್ಷಿತ ಸಮೂಹದಲ್ಲಿಯೂ ಪ್ರಜ್ಞೆಯ ಭಾಗವಾಗಿ ಸೇರಿಕೊಂಡಿತು. ಅಂತರ್ಜಾತಿ ವಿವಾಹವಾಗಿಯೂ ತನ್ನ ಮೂಲಜಾತಿಗೆ ಅಂಟಿಕೊಳ್ಳುವ ಜಾಯಮಾನದಿಂದ ಆಧುನಿಕ ಮನುಷ್ಯ ಮುಕ್ತನಾಗಿಲ್ಲ. ಪ್ರಗತಿಪರ ಮನಸ್ಸುಗಳ ನಡುವೆ ಸಂಪ್ರದಾಯವಾದಿಗಳೂ ಇದ್ದಾರೆ. ಅಂತರ್ಜಾತಿ ವಿವಾಹವಾದವರಿಗೆ ಶಿಕ್ಷೆ ನೀಡುವ, ಮಾತ್ರವಲ್ಲದೆ ಅಂತರ್ಜಾತಿ ವಿವಾಹಗಳನ್ನು ತಡೆಗಟ್ಟುವ ಪ್ರಯತ್ನಗಳು ಪ್ರಾಚೀನ ಕಾಲದಿಂದಲೂ ಮುಂದುವರೆದಿರುವುದನ್ನು ಮಾರಮ್ಮನ ಪುರಾಣ ತಿಳಿಸಿಕೊಡುತ್ತದೆ.



# ಬಾಲ ಬಸಪ್ಪಗಳ ಸಂಪ್ರದಾಯ ವಚನ ಪರಂಪರೆಯ ವಿಭಿನ್ನ ದಾರಿಗಳು

ಡಾ.ವೆಂಕಟೇಶಇಂದ್ವಾಡಿ

ಹನ್ನೆರಡನೆ ಶತಮಾನದ ಶರಣ ಚಳುವಳಿಯ ಜನಪರ ಆಶಯಗಳು, ಅವರು ರಚಿಸಿದ ವಚನಗಳು ಹದಿನೈದನೇ ಶತಮಾನದ ಹೊತ್ತಿಗೆ ಸಾಂಸ್ಥಿಕ ರೂಪ ಪಡೆದು, ಧಾರ್ಮಿಕ ಆಚರಣಾ ಪದ್ಧತಿಯಾಗಿ ವೀರಶೈವ ಧರ್ಮ ಎನ್ನುವ ಹೆಸರಿನಲ್ಲಿ ಒಂದು ಹೊಸ ರೂಪವನ್ನು ಪಡೆಯಿತು. ವಚನಗಳಿಗೆ ಧಾರ್ಮಿಕ ಟೀಕುಗಳು, ವ್ಯಾಖ್ಯಾನಗಳನ್ನು ಸೃಷ್ಟಿಸಿ ಅದರ ಆಶಯಗಳನ್ನು ತಿರುಚಿ ವಚನಗಳನ್ನು ವೀರಶೈವ ಧರ್ಮದ ಧಾರ್ಮಿಕ ಕೈಪಿಡಿಗಳಾಗಿ ಮಾರ್ಪಡಿಸಿಕೊಂಡು ಒಂದು ವರ್ಗದ ಅಥವಾ ಒಂದು ಜಾತಿಯ ಸ್ವತ್ತಾಗುವಂತೆ ಮಾಡಿದರು. ಕಲೇಳು-ಹದಿನೆಂಟು ಜಾತಿಗಳು ಒಂದೇ ಎನ್ನುವ ಶರಣ ಆಶಯಕ್ಕೆ ಬಹುದೊಡ್ಡ ದಕ್ಕೆ ಉಂಟಾದದ್ದು ಹದಿನೈದನೇ ಶತಮಾನದ ವಿಜಯನಗರದ ಅರಸ ಪ್ರೌಢದೇವರಾಯನ ಕಾಲದಲ್ಲಿ. ಪ್ರಭುತ್ವದ ನೆರವಿನಿಂದ ಶರಣ ಧರ್ಮ ಸಾಂಸ್ಥಿಕ ರೂಪ ಪಡೆಯಿತು. ಪ್ರೌಢದೇವರಾಯ ವೀರಶೈವ ಧರ್ಮದ ಸಾಂಘಿಕತೆಗೆ ತನ್ನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಲಕ್ಕಣ್ಣ ದಂಡೇಶನನ್ನು ಬಳಸಿಕೊಂಡು ನೂರೊಂದುಯತಿಗಳ ಒಂದು ಪಡೆಯನ್ನೇ ಸೃಷ್ಟಿಮಾಡಿ ಎಲ್ಲ ಕಡೆ ಮಠ ಪರಂಪರೆಗಳನ್ನು ಸ್ಥಾಪನೆಮಾಡಿ ವಚನಗಳನ್ನು ವೀರಶೈವದ ಧಾರ್ಮಿಕ ಆಕರವಾಗಿ ಮಾರ್ಪಡಿಸುವಲ್ಲಿ ಯಶಸ್ವಿಯಾದ. ಇವರ ನಂತರದಲ್ಲಿ ಸಿದ್ಧಲಿಂಗಯತಿಗಳು ಇದರ ಮುಂದಾಳತ್ವವನ್ನು ವಹಿಸಿ ಮಠಗಳಲ್ಲಿ ಅವುಗಳ ಪ್ರತಿಗಳನ್ನು ಬರೆಸಿ ಎಲ್ಲ ಮಠಗಳಿಗೂ ತಲುಪುವಂತೆ ಮಾಡಿ ಅದರ ಸಾಂಸ್ಥಿಕತೆಗೆ ಮತ್ತಷ್ಟು ಉತ್ತೇಜಕೊಟ್ಟ. ಬಹುಶ: ಇಲ್ಲಿಂದ ವಿರಕ್ತ ಮಠಗಳು ಪ್ರಾರಂಭವಾಗಿ ಸಂನ್ಯಾಸವನ್ನು ಸ್ವೀಕರಿಸಿ, ಧರ್ಮವನ್ನು ಉಳಿಸಿಕೊಂಡು ಹೋಗುವ ಪ್ರಯತ್ನ ಮಾಡಿದವು, ಆದರೆ ಶರಣ ಚಳುವಳಿಯಲ್ಲಿ ಸನ್ಯಾಸಕ್ಕೆ ಅಷ್ಟು ಮಹತ್ವ ಇರಲಿಲ್ಲ. ಕರ್ನಾಟಕದಲ್ಲಿರು ಬಹುಪಾಲು ಮಠಗಳ

ಸಂಸ್ಥಾಪಕರು ಸಿದ್ಧಲಿಂಗ ಯತಿಗಳ ಶಿಷ್ಯರಾಗಿದ್ದಾರೆ. ಅವರೆಲ್ಲ ಖಾವಿ ಧರಿಸಿದ ಸನ್ಯಾಸಿಗಳಾಗಿರುವುದಕ್ಕೆ ಕಾರಣ ಶರಣ ಚಳುವಳಿಯಲ್ಲ, ಹದಿನೈದನೇ ಶತಮಾನದಲ್ಲಿ ನಡೆದ ವೀರಶೈವ ಧರ್ಮದ ಸಾಂಸ್ಥಿಕತೆಯೇ ಕಾರಣವಾಗಿದೆ.

ಮಧ್ಯಕಾಲೀನ ಚರಿತ್ರೆಯಲ್ಲಿ ಈ ಪ್ರಕ್ರಿಯೆ ಒಂದು ಕಡೆ ನಡೆಯುತ್ತಿದ್ದಾಗಲೇ ಶರಣ ಧರ್ಮವನ್ನು ಅನುಸರಿಸುತ್ತಿದ್ದ ಕೆಳವರ್ಗದವರು, ವೃತ್ತಿನಿರತ ಕುಶಲಕರ್ಮಿಗಳು, ಶೂದ್ರಾತಿ ವರ್ಗದವರು, ಇದರಿಂದ ಹೊರಗುಳಿಯಬೇಕಾಯಿತು. ಅವರು ತಮ್ಮ ಜೀವನ ವಿಧಾನದಲ್ಲಿದ್ದ ಆಚಾರ, ಆಚರಣೆ, ಆಹಾರ ಪದ್ಧತಿ ಇವುಗಳನ್ನೆಲ್ಲ ತೊರೆದು ಯಾವುದು ಒಂದು ಏಕರೂಪ ಆಚರಣೆಗೆ ಒಗ್ಗಿಸಿಕೊಳ್ಳಲು ಒಪ್ಪದೆ ಪ್ರತಿರೋಧವನ್ನು ವ್ಯಕ್ತಪಡಿಸಿ ಶರಣ ಧರ್ಮವನ್ನೇ ತಮ್ಮ ಸಾಂಸ್ಕತಿಕ ಆಕರವಾಗಿಸಿಕೊಂಡು ಹೊಸ ಪಂಥ ಪರಂಪರೆಗಳನ್ನು ಹುಟ್ಟಾಕಿದರು. ಅಲ್ಲಿ ಯಾವುದೇ ಜಾತಿ, ವರ್ಗ,ನಿಬಂಧನೆ, ನಿಗ್ರಹಗಳು ಇಲ್ಲದೆ ಮನುಷ್ಯ ಸಹಜವಾದ ಸರ್ವರು ಒಂದೇ ಸರ್ವರಲ್ಲೂ ಚೈತ್ಯನ್ಯವಿದೆ. ಅದನ್ನು ದುಡಿಮೆಯಿಂದ ಪಡೆದು ಬದುಕುವುದೇ ಶ್ರೇಷ್ಠ. ಬಸವಣ್ಣ ಹೇಳಿದ ಕಾಯಕವೇ ಕೈಲಾಸ ಎಂಬ ತತ್ವವನ್ನು ಎತ್ತಿ ಹಿಡಿದರು.ಇವರುಗಳಲ್ಲಿ ಮುಖ್ಯವಾದವರು ಮಂಟೇಸ್ವಾಮಿ, ಮಾದಪ್ಪ, ಗೋಣಿಬಸಪ್ಪ, ನಾಯಕನಟ್ಟಿ ತಿಪ್ಪೇಸ್ವಾಮಿ, ತಿಂಥಿಣಿಮೋನಪ್ಪ, ಸಾವಳಗಿಶಿವಲಿಂಗ, ಎರನಾಳಸ್ವಾಮಿ, ಮರಳುಸಿದ್ಧ, ನಿರ್ವಾಣಯ್ಯ, ಕೋಡೇಕಲ್ಲು ಬಸವಣ್ಣ. ರಾಚಪ್ಪಾಜಿ, ಸಿದ್ಧಪ್ಪಾಜಿ, ಮದ್ದಾನೇಶ್ವರ, ಹುಣಸನಾಳಯ್ಯ, ಶಿರಹಟ್ಟಿ ಫಕೀರಪ್ಪ, ಗೋನಾಳ ಭೀಮಪ್ಪ ಮುಂತಾದವರು ವಚನ ಚಳುವಳಿಯ ನಂತರ ಮಧ್ಯಕಾಲೀನ ಚರಿತ್ರೆಯಲ್ಲಿ ಜೀವಿಸಿದ್ದ ಚಾರಿತ್ರಿಕ ವ್ಯಕ್ತಿಗಳು. ಇವರು ಜನರ ಕಷ್ಟಗಳಿಗೆ ಸ್ಪಂದಿಸಿ ತಮ್ಮ ಜೀವನದಲ್ಲಿ ಅನೇಕ ಸಾಧನೆಗಳನ್ನು ಮಾಡಿ, ಜನಸೇವೆ ಮಾಡಿ ಒಂದೊಂದು ಪಂಥ ಪರಂಪರೆಯನ್ನು ಹುಟ್ಟಾಕಿ ಸರ್ವರು ಸಮಾನರು ಎಂಬ ತತ್ವವನ್ನು ಎತ್ತಿ ಹಿಡಿದರು. ದುಡಿವ ವರ್ಗದ ಜನರ ಪರವಾಗಿದ್ದ ಇವರು ಮೇಲು-ಕೀಳು ಮಡಿ-ಮೈಲಿಗೆ ಎನ್ನುವ ಅಜ್ಞಾನವನ್ನು ಹೊಗಲಾಡಿಸುವ ಪ್ರಯತ್ನ ಮಾಡಿದರು. ಇವರು ಸಮಾಧಿಯಾದ ನಂತರ ಇವರ ಗದ್ದುಗೆಗಳೇ ಭಕ್ತರ ಧಾರ್ಮಿಕ ಕೇಂದ್ರಗಳಾದವು ಮತ್ತು ಇವರ ಜೀವನ ವಿಧಾನವನ್ನು ಹಾಡುವ ಮೌಖಿಕ ಕಥನಗಳು ಹುಟ್ಟಿಕೊಂಡವು. ಈ ಚಳುವಳಿಯ ಸಾಂಸ್ಕೃತಿಕ ಆಕರಗಳು ಮೌಖಿಕ ಆಕರಗಳು,ಇವುಗಳನ್ನು ಹಾಡುವ ಒಂದು ವರ್ಗವಿದ್ದರೆ,ಇವುಗಳನ್ನು ನಡಸಿಕೊಳ್ಳುವ ಜವಬ್ದಾರಿ ಒಕ್ಕಲಿನವರದು ಇವರು ಮನೆಯ ಮೊದಲ ಮಗನನ್ನು ಗುಡ್ಡನಾಗಿಯೋ, ತಮ್ಮಡಿಯಾಗಿಯೋ, ಪೂಜಾರಿಯಾಗಿಯೋ, ನೀಲಗಾರಯೋ ದೇವರಗುಡ್ಡನಾಗಿಯೋ ದೇವರಿಗೆ ಮೀಸಲಾಗಿಟ್ಟು ಮನೆಯ ಹಬ್ಬ ಹರಿದಿನಗಳಲ್ಲಿ ಅವನ ನೇತೃತ್ವದಲ್ಲಿ ಪೂಜೆ ಪುನಸ್ಕಾರಗಳನ್ನು ಜಾತ್ರೆಗಳನ್ನು ಮಾಡುತ್ತಾರೆ. ಇದನ್ನು ವಚನ ಪರಂಪರೆಯ ವಿಭಿನ್ನ ದಾರಿಗಳು ಎಂದು ಕರೆಯಬಹುದು.

**ಬಾಲಬಸವರು ಯಾರು?**

ಬಾಲಬಸವರು ಮೂಲತ: ಮಾದಿಗ ಕುಲದವರು. ಬಸವಣ್ಣನ ದತ್ತು ಪುತ್ರರೆಂದು ಕರೆದುಕೊಳ್ಳುತ್ತಾರೆ.ಇವರು ಯಾವ ಕಾಲಘಟ್ಟದಲ್ಲಿ ವೀರಶೈಧರ್ಮಕ್ಕೆ ಸೇರಿಕೊಂಡರು ಎಂಬುದು ತಿಳಿದು ಬಂದಿಲ್ಲ. ಕಲ್ಯಾಣದ ಕ್ರಾಂತಿಯ ನಂತರ ಅದರ ಪ್ರಭಾವಕ್ಕೆ ಒಳಗಾದ ಮಾದಿಗರ ಒಂದು ಕುಲ ತನ್ನ ಜೀವನ ಕ್ರಮದಲ್ಲಿ ವೀರಶೈವರನ್ನು ಅನುಸರಿಸಿಕೊಂಡು ತಾವೇ ಲಿಂಗಧಾರಣೆಯನ್ನು ಮಾಡಿಕೊಂಡು ಮಾಂಸಾಹಾರವನ್ನು ತ್ಯಜಿಸಿ ಮಾದಿಗರ ಮನೆಯಲ್ಲಿ ಉಣ್ಣುವುದನ್ನು ಬಿಟ್ಟು, ಕೊಡುವ-ತರುವ ವೈವಾಹಿಕ ಜೀವನವನ್ನು ಸಂಬಂಧಗಳನ್ನು ತೊರೆದುಬಿಟ್ಟರು. ಈ ಪ್ರಕ್ರಿಯೆಯಿಂದ ಒಂದು ಇಕ್ಕಟ್ಟನ್ನು ಅವರು ಅನುಭವಿಸಬೇಕಾಯಿತು. ಈ ಕಡೆ ಅವರ ವಂಶದವರಿಗೆ ಲಿಂಗಾಯತರು ಗಂಡು-ಹೆಣ್ಣುಗಳನ್ನು ಕೊಡುವುದನ್ನು ನಿರಾಕರಿಸಿಬಿಟ್ಟರು, ಮಾದಿಗ ಕುಲದವರು ಗುರುಗಳೆಂದು ಅವರು ವೈವಾಹಿಕ ಸಂಬಂಧಗಳನ್ನು ನಿರಾಕರಿಸಿಬಿಟ್ಟರು. ಇದಕ್ಕೆ ಅವರು ಒಂದು ಪರಹಾರ ಸೂತ್ರವನ್ನು ಹುಡುಕಿ ಮಾದಿಗ ಕುಲದಿಂದ ಗಂಡಿಗೆ ಹೆಣ್ಣನ್ನು ತಂದು ಅವಳಿಗೆ ಲಿಂಗಾಯತ ಧೀಕ್ಷೆಕೊಟ್ಟು ಮನೆ ತುಂಬಿಸಿಕೊಂಡರು, ಗಂಡಸಿಗೆ ಏನೋ ಒಂದು ಪರಿಹಾರ ಸೂತ್ರ ಸಿಕ್ಕಿತು. ಆದರೆ ಹೆಣ್ಣು ಮಕ್ಕಳನ್ನು ಮಾದಿಗ ಕುಲದವರಾಗಲೀ, ಲಿಂಗಾಯತ ಕುಲದವರಾಗಲೀ, ಧೀಕ್ಷೆಕೊಟ್ಟು ಮದುವೆ ಮಾಡುವಕೊಳ್ಳಲು ನಿರಾಕರಿಸಿಬಿಟ್ಟರು. ಆದ್ದರಿಂದ ಬಾಲಬಸಪ್ಪಗಳ ಮನೆತನದ ಹೆಣ್ಣು ಮಕ್ಕಳು ದೇವದಾಸಿಯರಾಗುವ ನಿಕೃಷ್ಟ ಸನ್ನಿವೇಶ-ಪದ್ಧತಿ ಉಂಟಾಯಿತು. ಹೀಗೆ ಈ ಸಂಪ್ರದಾಯ ಎರಡು ಜಾತಿಗಳಿಂದ ಬೇರ್ಪಟ್ಟ ಇವರು ವಂಶಾಭಿವೃದ್ದಿಯಲ್ಲಿ ಇಕ್ಕಟ್ಟಿಗೆ ಸಿಕ್ಕಿಕೊಂಡು ಈ ಸಂಪ್ರದಾಯವನ್ನು

ಬಿಡುವುದೋ, ಕಟ್ಟಿಕೊಳ್ಳುವುದೋ ಎನ್ನುವ ಕಷ್ಟಕ್ಕೆ ಸಿಕ್ಕಿಕೊಂಡರು. ಯಾವುದೋ ಒಂದು ಸಂಪ್ರದಾಯವನ್ನು ಸಮುದಾಯಗಳು ಬಿಟ್ಟು ಸಾಂಸ್ಕೃತಿ ಶೂನ್ಯತೆಯನ್ನು ಅನುಭವಿಸುವುದು ಅಷ್ಟು ಸರಳವಾದ ಸಂಗತಿಯಲ್ಲ. ಏಕೆಂದರೆ ಇದರ ಹಿಂದೆ ಒಂದು ಆರ್ಥಿಕ, ಸಾಮಾಜಿಕ ರಚನೆಗಳು ಇರುತ್ತವೆ, ಇವರು ವೃತ್ತಿಯಿಂದ ಕಾಲಜ್ಞಾನ ಸಾರುವ, ಸಾಂಸ್ಕೃತಿಕ ಕಥನಗಳನ್ನು ಹಾಡುವ, ಆ ಮೂಲಕ ತಮ್ಮ ಜೀವನವನ್ನು ನಿರ್ವಹಣೆ ಮಾಡುತ್ತಿದ್ದವರು. ಬಸವ ಪೂರ್ವದ ಇದೇ ವೃತ್ತಿಯನ್ನು ಅನುಸರಿಸುತ್ತಿದ್ದರು.ಇವರ ಕುಲದೇವತೆ ಕಂಬದಮ್ಮ ಇವರು ಹಾಡುವ ಕುಲದವರು. ಬಸವಣ್ಣನ ಕಲ್ಯಾಣ ಕ್ರಾಂತಿಯ ನಂತರ ಇವರು ತಮ್ಮ ಕುಲವೃತ್ತಿಯನ್ನು ಉಳಿಸಿಕೊಳ್ಳಲು ಅನಿವಾರ್ಯವಾಗಿ ಜೀವನ ಕ್ರಮವನ್ನು ಬದಲಿಸಿಕೊಳ್ಳಬೇಕಾದ ಒತ್ತಡ ಬಂದಾಗ ವೀರಶೈವರಂತೆ ಧೀಕ್ಷಿತರಾಗಿ ತಾವೇ ವೀರಶೈವೀಕರಣಗೊಂಡಿದ್ದಾರೆ, ಇದಕ್ಕೆ ಬಹಳ ಮುಖ್ಯವಾದ ಕಾರಣ ಇವರಿಗೆ ದಾನ,ಧರ್ಮಭಿಕ್ಷೆಗಳನ್ನು ನೀಡುತ್ತಿದ್ದವರು ಅವರ ಕಾಲಜ್ಞಾನಗಳಿಗೆ ಮನ್ನಣೆಕೊಡುತ್ತಿದ್ದವರು ಮತ್ತು ಅವರ ಜೀವನ ನಿರ್ವಹಣೆಗೆ ಒತ್ತಾಸೆಯಾಗಿದ್ದರಲ್ಲಿ ವೀರಶೈವರೇ ಹೆಚ್ಚು, ಈತರದ ಒಂದು ಜೀವನ ಕ್ರಮಕ್ಕೆ ಪರಿವರ್ತನೆಗೊಂಡರು, ಈಗ ಅವರು ತಮ್ಮ ಸಂಪ್ರದಾಯದಲ್ಲಿ ವೈವಾಹಿಕ ಜೀವನಕ್ಕೆ ಬೆಲೆಕೊಟ್ಟರೇ ಹೊಟ್ಟೆಪಾಡಿನ ಗತಿಯೇನು ಎನ್ನುವ ಸಾಂಸ್ಕೃತಿಕ ಬಿಕ್ಕಟ್ಟಿನಲ್ಲಿದ್ದಾರೆ.

ಬಾಲಬಸವ ಸಂಪ್ರದಾದ ಹೊಸತಲೆಮಾರಿನವರು ಈಗ ತಮ್ಮ ಸಂಪ್ರದಾಯವನ್ನು ಬಿಟ್ಟು ಮತ್ತೆ ಮಾದಿಗ ಕುಲಕ್ಕೆ ಸೇರಿಕೊಳ್ಳುವ ಕಡೆ ಆಸಕ್ತರಾಗಿದ್ದರೆ. ಆದರೆ ಅವರ ಕುಲವೃತ್ತಿಯಾದ ಕಾಲಜ್ಞಾನ, ಕಥನಗಳನ್ನು ಹಾಡುವವುದರಿಂದ ಬರುತ್ತಿದ್ದ ಆದಾಯವಿಲ್ಲ. ಅವರಿಗೆ ಹೊಲಮನೆಗಳು ಇಲ್ಲ. ಬೇಸಾಯ,ಕೂಲಿ ಮಾಡುವುದು ಸಾಧ್ಯವಾಗುತ್ತಿಲ್ಲ.ಆದರೂ ಅವರು ತಮ್ಮ ಮೂಲ ಆಚಾರ ಸಂಪ್ರದಾಯಕ್ಕೆ ಹಿಂತಿರುಗುವ ಮನಸ್ಸಿಲ್ಲ. ಈ ಕಾರಣದಿಂದ ಬಾಲಬಸಪ್ಪಗಳು ಅನುಭವಿಸುತ್ತಿರುವ ಈ ಸಾಂಸ್ಕೃತಿಕ ಬಿಕ್ಕಟ್ಟು ನಮ್ಮ ನಡುವಿನ ಬಹುದೊಡ್ಡ ಸಾಂಸ್ಕೃತಿಕ ಪ್ರಶ್ನೆಯಾಗಿದೆ.

**ಬಾಲಬಸಪ್ಪರ ವಾಸಸ್ಥಾನಗಳು ಮತ್ತು ಸಾಂಸ್ಕೃತಿಕ ತಾಣಗಳು;**

ಇವರು ಉತ್ತರ ಕರ್ನಾಟಕದ ಬಳ್ಳಾರಿ,ದಾವಣಗರೆ, ಹಾವೇರಿ, ಗದಗ, ಧಾರವಾಡ, ಶಿವಮೊಗ್ಗ,ಚಿತ್ರದುರ್ಗ, ಜಿಲ್ಲೆಗಳಲ್ಲಿರುವ ನೂರೊಂದು ಹಳ್ಳಿಗಳಲ್ಲಿ ಇವರು ಊರಾಡುತ್ತಿದ್ದ ಸ್ಥಳಗಳು, ಈ ಜಿಲ್ಲೆಯ ನೂರೊಂದು ಹಳ್ಳಿಗಳು ನಮ್ಮವೇ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಊರಾಡುವುದು ಎಂದರೆ ಅವರ ಸಾಂಸ್ಕೃತಿ ಹಕ್ಕುದಾರಿಕೆ ಸ್ಥಳಗಳು. ಇಲ್ಲಿ ಇವರು ಕಿವಿಗೆ ಕರ್ಣಕುಂಡಲಗಳನ್ನು ಧರಿಸಿ,ಕೆಂಪು ಪೇಟವನ್ನು ತಲೆಗೆ ಕಟ್ಟಿಕೊಂಡು, ರುದ್ರಾಕ್ಷಿಮಾಲೆ ಮತ್ತು ಲಿಂಗಧಾರಣೆ ಮಾಡಿಕೊಂಡು, ತಂಬೂರಿಯನ್ನು ಹೆಗಲಿಗೆ ಹಾಕಿಕೊಂಡು ಕಾಲಜ್ಞಾನ ಸಾರುತ್ತಾರೆ. ಕಾಲಜ್ಞಾನ ಮದ್ಯಾನದವರೆಗೆ ಮಾತ್ರ ಸಾರುತ್ತಾರೆ ಬೇರೆ ಯಾವ ಸಂದರ್ಭದಲ್ಲೂ ಇದನ್ನು ಸಾರುವ ಹಾಗಿಲ್ಲ. ಸಾಮಾನ್ಯವಾಗಿ ಸುಗ್ಗಿಕಾಲದಲ್ಲಿ ವರ್ಷಕ್ಕೊಮ್ಮೆ ಈ ಆಚರಣೆ ಇರುತ್ತದೆ. ಬಾಲಬಸಪ್ಪಗಳ ಭಕ್ತರು, ಒಕ್ಕಲಿನವರು ಇವರಿಗೆ ಧವಸಧಾನ್ಯಗಳ ಭಿಕ್ಷೆ ನೀಡುತ್ತಾರೆ, ಇದರ ಪ್ರಮಾಣ ಎಷ್ಟು ಇರುತ್ತದೆ ಎಂದರೆ ಅದನ್ನು ಬಂಡಿಗಳಲ್ಲಿ ತಮ್ಮ ತಮ್ಮ ಊರುಗಳಿಗೆ ಸಾಗಿಸುತ್ತಾರೆ. ಇದು ಅವರ ಒಂದು ವರ್ಷದ ಅವರ ಜೀವನ ನಿರ್ವಹಣೆಗೆ ಸಕಾಗಿ ಮಿಗುವಷ್ಟು ಇರುತ್ತದೆ. ಇದಲ್ಲದೆ ಪಂಚಾಂಗ ನೋಡಿ ಮಳೆಬೆಳೆ ಬಗ್ಗೆ ತಿಳಿಸುವು, ಕಾಯಿಲೆ-ಕಾಸಾಲೆಗೆ ಮದ್ದುಕೊಡುವುದು, ಮಾನಸಿಕ ರೋಗಪೀಡಿತರಿಗೆ ಅಂತ್ರ ತಂತ್ರ ಕಟ್ಟುವುದು, ಮದುವೆ ಮುಂಜಿಗಳಿಗೆ ಕಾಲ ನಿರ್ಧಾರ ಮಾಡುವುದು, ಒಟ್ಟು ಊರಿನ ಜನಗಳ ಸಂಕಷ್ಟಗಳಿಗೆ ಸ್ಪಂದಿಸುವುದು ಇವರ ಸಾಂಸ್ಕೃತಿಕ ಕರ್ತವ್ಯವಾಗಿದೆ. ಈ ಕಾರಣ ಊರವರೆಲ್ಲಾ ಇವರನ್ನು ಭಯಭಕ್ತಿಗಳಿಂದ ನಡೆಸಿಕೊಳ್ಳುತ್ತಾರೆ. ಮೇಲ್ಜಾತಿಯವರಿಂದ ಹಿಡಿದು ಕೆಳಜಾತಿಯವರಗೆ ಎಲ್ಲರು ಇವರ ಪಾದಮುಟ್ಟಿ ನಮಸ್ಕರಿಸುತ್ತಾರೆ. ಈ ಸಾಂಸ್ಕೃತಿಕ ಸಂದರ್ಭದಲ್ಲಿ ಜಾತಿವ್ಯವಸ್ಥೆ ಎನ್ನುವುದು ಹೇಳ ಹೆಸರಿಲ್ಲದಂತೆ ತೂರಿ ಹೋಗುತ್ತಿರುತ್ತದೆ. ಬಹುಶ: ಕರ್ನಾಟಕದ ಯಾವ ಸಂಪ್ರದಾಯಗಳಲ್ಲೂ ದಲಿತರ ಕಾಲಿಗೆ ಬ್ರಾಹ್ಮಣ, ಲಿಂಗಾಯತ, ಒಕ್ಕಲುಗೌಡ ಪಾದಮುಟ್ಟಿ ನಮಸ್ಕರಿಸುವುದು ನಾನು ಎಲ್ಲೂ ಕಂಡಿಲ್ಲ. ಆದ್ದರಿಂದ ಈ ಪರಂಪರೆ ಸಂಪ್ರದಾಯ ಕರ್ನಾಟಕಕ್ಕೆ ಒಂದು ಆದರ್ಶ ಸಂಪ್ರದಾಯವೆಂದೇ ನನ್ನ ಭಾವನೆ.

ಇವರ ಪೂರ್ವದ ಊರುಗಳು ಕನಕಗಿರಿ, ಆಂಧ್ರಪ್ರದೇಶದ ರಾಯಲು ಸೀಮೇ,ಮೊಣಕಾಲ್ಮೂರು ತಾಲೂಕು ಕರೆಕೊಂಡಪುರ, ಕೂಡ್ಲಗಿ ತಾಲೂಕು ಭೈರದೇವರಗುಡ್ಡ, ಗದಗ ತಾಲೂಕಿನ ಹರಳಪುರ, ಹಾವೇರಿ

ಜಿಲ್ಲೆಯ ಹೀಲದಳ್ಳಿ, ಹರಿಹರ ತಾಲೂಕಿನ ದುಗ್ಗಳಿ, ಹೊನ್ನಾಳಿ ತಾಲೂಕಿನ ಗಂಜನಳ್ಳಿ, ಇದು ಇವರ ಮೂಲ ನೆಲೆಗಳಾದರು, ಅರೆಅಲೆಮಾರಿಗಳಾದ ಇವರು ತಮ್ಮ ಭಿಕ್ಷಾವೃತ್ತಿಗಾಗಿ ಬಳ್ಳಾರಿ,ಹಾವೇರಿ,ಚಿತ್ರದುರ್ಗ,ಧಾರವಾಡ,ದಾವಣಗೆರೆ,ಶಿವಮೊಗ್ಗ, ಜಿಲ್ಲೆಯ ನೂರೊಂದು ಊರುಗಳಲ್ಲಿ ತಮ್ಮ ಸಾಂಸ್ಕೃತಿಕ ಹಕ್ಕುಗಳನ್ನು ಇಟ್ಟುಕೊಂಡಿದ್ದಾರೆ.

ಇವರ ವಾಸ ಸ್ಥಾನಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಎಂಟು ಮನೆಗಳಿವೆ.ಹಾವೇರಿ ಜಿಲ್ಲೆಯ ಹೀಲದಳ್ಳಿ ಹದಿನೆಂಟು ಮನೆಗಳಿವೆ. ಗದಗ ಜಿಲ್ಲೆ ಹರಳಪುರದಲ್ಲಿ ಇಪ್ಪತ್ತೈದು ಮನೆಗಳಿವೆ.ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕು ಭೈರದೇವರಗುಡ್ಡದಲ್ಲಿ ಆರು ಮನೆಗಳಿವೆ.ಶಿವಮೊಗ್ಗಜಿಲ್ಲೆಯ ಹೊನ್ನಾಳಿ ತಾಲೂಕಿನ ಗಂಜನಳ್ಳಿಯಲ್ಲಿ ಒಂದು ಮನೆತನವಿದೆ.ದಾವಣೆಗೆರೆ ಜಿಲ್ಲೆಯ ಹರಿಹರ ತಾಲೂಕಿನ ದುಗ್ಗಳ್ಳಿಯಲ್ಲಿ ಎರಡು ಮನೆತನಗಳಿವೆ.ಈಗ ಇರುವ ಬಾಲಬಸಪ್ಪಗಳ ತಾಣದಲ್ಲಿ ಸಂಖ್ಯೆಯ ದೃಷ್ಟಿಯಿಂದ ಹರಳಪುರದಲ್ಲಿ ಹೆಚ್ಚಿದ್ದಾರೆ. ಹೀಲದಲ್ಲಿಯಲ್ಲಿ ಹದಿನೆಂಟು ಮನೆಗಳಿವೆ.

**ಉಳಿದಿರುವನೊಬ್ಬನೇ ಬಾಲಬಸವ ತುಮುನೆಪ್ಪ;**

ಕಲಾವಿದ ತುಮುನೆಪ್ಪ ಬಳ್ಳಾರಿಜಿಲ್ಲೆಯ ಕೂಡ್ಲಿಗಿ ತಾಲೂಕಿನ ಭೈರದೇವರಗುಡ್ಡದ ನಿವಾಸಿ ಸುಮಾರು ಎಂಭತ್ತೆರಡು ವರ್ಷ ವಯಸ್ಸಾಗಿದೆ. ಈತ ಈಗಲೂ ಕರ್ಣಕುಂಡಲ ಧರಿಸಿ ತಂಬೂರಿ ಹೇರಿಸಿಕೊಂಡು ಸುಗ್ಗಿಕಾಲದಲ್ಲಿ ಕಾಲಜ್ಞಾನ ಸಾರಲು ಊರೂರಿಗೆ ಹೋಗುತ್ತಾನೆ.ಇವನು ಹಾಡುವ ಮೌಖಿಕ ಕಾವ್ಯಗಳು,ಗೋಣಿಬಸಪ್ಪನಕಾವ್ಯ, ಮರಳುಸಿದ್ದನಕಾವ್ಯ, ಶೀಲವತಿ,ಲಕ್ಷಪತಿರಾಜನಕತೆ, ಸಂಡೂರು ರಾಜನಕತೆ ಮುಂತಾದವು.ಇವನ ಮೇಳದಲ್ಲಿ ಇವನ ಮಗ ಬಸವರಾಜ, ಪತ್ನಿ ಬಸವರಾಜಮ್ಮ ಇರುತ್ತಾರೆ. ಈ ಕಾವ್ಯವನ್ನು ಸಂಗ್ರಹಿಸಿ ಸಂಪಾದಿಸಿ ಕನ್ನಡವಿಶ್ವವಿದ್ಯಾಲಯ ಪ್ರಕಟಿಸಿದೆ.ಇದೊಂದು ಕಾವ್ಯದಲ್ಲಿ ಮಾತ್ರ ಬಾಲಬಸವನ ಬಗ್ಗೆ ಕ್ವಚಿತ್ತಾದ ಉಲ್ಲೇಖ ಬರುತ್ತದೆ. ಆದರೆ ಚಾರಿತ್ರಿಕವಾಗಿ ಸಮರ್ಥನೆ ಸಿಗುವಷ್ಟು ಆಕರಗಳು ಇಲ್ಲ. ಈ ಕಾವ್ಯ ಮುಖ್ಯವಾಗಿ ಮಧ್ಯಕರ್ನಾಟಕದ ಬಹುದೊಡ್ಡ ಪರಂಪರೆಯಾಗಿದ್ದ ಪಂಚಗಣಾಧೀಶ್ವರಲ್ಲಿ ಒಬ್ಬನಾಗಿದ್ದ ಮದ್ದಾನೇಶ್ವರನ ಮಗನಾದ ಗೋಣಿ ಬಸಪ್ಪನನ್ನು ಕುರಿತ ಕಾವ್ಯವಾಗಿದೆ. ಬಳ್ಳಾರಿ,ದಾವಣಗರೆ, ಹಾವೇರಿ, ಗದಗ, ಧಾರವಾಡ, ಶಿವಮೊಗ್ಗ,ಚಿತ್ರದುರ್ಗ, ಜಿಲ್ಲೆಗಳಲ್ಲಿ ಗೋಣಿ ಬಸಪ್ಪನಿಗೆ ನಡೆದುಕೊಳ್ಳುವ ಅನೇಕ ಭಕ್ತರು ಇದ್ದಾರೆ. ಕೂಲಳ್ಳಿಯಲ್ಲಿ ಪ್ರತಿವರ್ಷ ಫೆಬ್ರವರಿ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ.ಕೂಲಳ್ಳಿಯಲ್ಲಿ ಮದ್ದಾನೇಶ್ವನ ಗದ್ದುಗೆ ಇದೆ. ಅನತಿ ದೂರದ ಗುಮ್ಮಗೋಳದಲ್ಲಿ ಗೋಣಿ ಬಸಪ್ಪನ ಗದ್ದುಗೆ ಇದೆ. ಈ ಎರಡು ಗದ್ದುಗೆಗಳ ವಾಸ್ತು ತುಂಬಾ ವಿಶೇಷವಾಗಿದೆ. ಬಹುಶ: ಕರ್ನಾಟಕದಲ್ಲಿ ಯಾವ ದೇವಾಲಯ ಗದ್ದುಗೆಗಳು ಈ ರೀತಿ ವಾಸ್ತುಶೈಲಿಯನ್ನು ಇಳಗೊಂಡಿಲ್ಲ.


ಲಿಂಗಪೂಜೆಯಲ್ಲಿ ಬಾಲಬಸವರು.

ತುಮುನೆಪ್ಪ ಮೂಲತ: ಮಾದಿಗರ ಗುರುಕುಲದವನು ಅವನು ಮತ್ತು ಅವನ ವಂಶಜರು ಬಸಣ್ಣನ ಹೆಸರೇಳುವ ಯಾವ ಕಥನವನ್ನು ಹಾಡುವುದಿಲ್ಲ ಆದರೆ ಗೋಣಿ

ಬಸಪ್ಪನ ಕತೆಯನ್ನು ಅವನ ಜೀವನ ವಿಧಾನವನ್ನು ದೈವಿಕರಿಸಿಕೊಂಡು ಹಾಡುವುದರಲ್ಲಿ ಇಂದು ಆಶಕ್ತಿದಾಯಕವಾದ ಆಶಯವಿದೆ. ಕತೆಯ ಮೊದಲ ಭಾಗ ಈ ಅಸ್ಪೃಶ್ಯ ಕುಲದ ಸಂಕಷ್ಟಗಳನ್ನು ಬೆಡಗುಗಳ ಮೂಲಕ ತಿಳಿಸುತ್ತದೆ. ಶಿವ ಭಿಕ್ಷೆಗಾಗಿ ಅರಳಯ್ಯನ ಮನೆಗೆ ಬರುತ್ತಾನೆ ಅರಳಯ್ಯ ಮನೆಯಲ್ಲಿ ದಾನ ಕೊಡಲು ಏನು ಇಲ್ಲ ತನ್ನಲಿದ್ದ ಕರುವೊಂದನ್ನು ಅವನ ಜೋಳಿಗೆ ಹಾಕುತ್ತನೆ.ಆ ಕರುವಿಗೆ ಶುಂಟಿ,ಅರಿಸಿಣ,ಬಜೆ, ಮೂರು ಕೊಡುಗಳು ಇರುತ್ತವೆ. ಪರುಮಾತ್ಮನ ಜೋಳಿಗೆಗೆ ಸತ್ತ ಕರುವನ್ನು ನೀಡುವುದು, ಅದನ್ನು ಪರುಮಾತ್ಮ ಪೈನಾಗಿ ಜಿಗಿದು ಆಹಾರ ಮಾಡುವುದು, ಮಾಂಸದಡುಗೆಯ ವಿಧಾನಗಳೆಲ್ಲ ಅವನಿಗೆ ಗೊತ್ತಿರುವುದು.ಅದರ ಕಸರೆಯನ್ನೆಲ್ಲ ತೆಗೆದು ಮೈ ಕೈಗೆ ಸವರಿಕೊಳ್ಳುವುದು,ಕರುಳನ್ನು ಜನಿವಾರ ಮಾಡಿಕೊಳ್ಳುವುದು, ಸಿಹಿ ಊಟವೆಂದು ಬರುವ ಜಂಗಮರೆಲ್ಲ ಮೂಗು ಮುಚ್ಚಿಕೊಂಡು ಪೇರಿ ಕೀಳುವುದು.ಸಕ್ಕರೆ ಊಟ ರಕ್ತಮಾಂಸದ ಊಟವಾಗುವುದು.ಅವನು ಕಥಲಾಸಕ್ಕೆ ಬಂದರೆ ಅರಳಯ್ಯನ ಮನೆಯಲ್ಲಿ ವಸತಿ ಮಾಡುವುದು. ಮಲಿನವೇ ಮಹತ್ವವಾಗುವ ಹಸಿವಿನ ಮಹಾಕಥನವಿದು. ಮುಂದೆ..

ಪಂಚಗಣಾಧೀಶ್ವರಲ್ಲಿ ಒಬ್ಬನಾಗಿದ್ದ ಮದ್ದಾನೇಶ್ವರ ಬೇಡರ ಹೆಣ್ಣುಮಗಳು ಕನಕಮ್ಮನಿಗೆ ಒಲಿದು ಮದುವೆಯಾದನೋ ದೇವದಾಸಿಯಾಗಿ ಇಟ್ಟುಕೊಂಡನೋ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ ಆದರೆ ಕಲಾವಿದ ಕನಕಮ್ಮನನ್ನು ಮದ್ದಾನೇಶನ ಹೆಂಡತಿಯೆಂದೆ ಕರೆಯುತ್ತಾನೆ. ಮಧ್ಯಕಾಲೀನ ಸಂದರ್ಭದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ದೇವದಾಸಿ ಪದ್ಧತಿಗೆ ಸಾಮಾಜಿಕ ಅಡಚಣೆಗಳು ಇದ್ದಹಾಗೆ ಕಾನುವುದಿಲ್ಲ. ಈ ಕಾರಣದಿಂದ ಮದ್ದಾನೇಶ್ವರ ಪಂಚಾಗಣಾಧೀಶ್ವರರಿಂದ ಹೊರಗಗುತ್ತಾನೆ. ಅವನಿಗೆ ಕನಕಮ್ಮ ಮದ್ದಾನೇಶ್ವರರಿಂದ ಗೋಣಿ ಬಸಪ್ಪ ಹುಟ್ಟುತ್ತಾನೆ. ಇಬ್ಬ ದೇವದಾಸಿಯ ಮಗನಾಗಿ ಹುಟ್ಟಿದ ಕಾರಣಕ್ಕಾಗಿ ಅವನು ಅನೇಕ ತೊಂದರೆಗಳನ್ನು ಅವರ ಮಾವನಿಂದಲೇ ಅನುಭವಿಸಬೇಕಾಗುತ್ತದೆ. ದೇಸಿದಾಸಿ ಮಗನೊಬ್ಬನ ಸಂಕಷ್ಟಗಳು ಮೇಲ್ಜಾತಿಯ ಘೋರ ಸಂಘರ್ಷಗಳ ಕಥನವಿದು. ಕತೆ ಇಷ್ಟಕ್ಕೆ ನಿಲ್ಲುವುದಿಲ್ಲ ಮುಂದೆ ಗೋಣಿ ಬಸಪ್ಪ ಕುರುಬರ ವಡ್ಡಟ್ಟವೆಯನ್ನು ಮದುವೆಯಾಗುತ್ತಾನೆ. ತಂದೆ ಮದ್ದಾನೇಶ್ವರನಿದ್ದ ಯಾವ ಕೀಳಿರಿಮೆಯು ಗೋಣಿ ಬಸಪ್ಪನನ್ನು ಕಾಡುವುದಲ್ಲ. ಮುಂದೆ ಅವನು ಅನೇಕ ಪವಾಡಗಳನ್ನು ಮಾಡಿ ದೈವೀಕರಣಗೊಂಡು ಆಭಾಗದ ಎಲ್ಲ ಭಕ್ತರ ಪೂಜೆಗೆ ಅರ್ಹನಾಗಿ ಗುಮ್ಮಗೋಳದಲ್ಲಿ ಹೋಗಿ ಸಮಾಧಿಯಾಗುತ್ತಾನೆ. ಅಂದರೆ ಮಧಯಕಾಲೀನ ಈ ಕಥನ ಮೂರು ಜಾತಿಗಳ ಸಮ್ಮಿಲನದ ಕತೆಯಾಗಿದೆ.

ಗೋಣಿಬಸಪ್ಪನ ಕಾವ್ಯದಲ್ಲಿ ಬಾಲಬಸಪ್ಪನ ಪಾತ್ರ ಕ್ವಚಿತ್ತಾಗಿ ಬಂದರು ಈಡೀ ಕಾವ್ಯದ ಆಶಯವೇ ಸಂಕ್ಷಿಪ್ತವಾಗಿ ಅದರಲಲ್ಲಿ ಅಡಗಿದೆ. ಕತೆಯ ನಾಯಕನಿಗೆ ವಿಷ ಪ್ರಹಸನವಾಗುತ್ತದೆ. ಯಾರಿಂದಲೂ ಅದನ್ನು ತೆಗೆಯಲು ಸಾಧ್ಯವಾಗದ ಸ್ಥಿತಿಯಲ್ಲಿ ಇನ್ನೋನೊ ಸಾಯುವ ಗಳಿಗೆಯಲ್ಲಿರುವಾಗ, ಹರಪನಹಳ್ಳಿತೋಟದ ಸಂನ್ಯಾಸಿ ಮಠದಿಂದ ಬಾಲಬಸಪ್ಪ ಕೂಲಳ್ಳಿಗೆ ಬರುತ್ತಾನೆ.ಬಹಳ ಸೂಕ್ಷ್ಮವಾದ ಒಂದು ರೂಪಾಂತರ ಇಲ್ಲಿ ನಡೆಯುತ್ತದೆ.ಅವನು ತನ್ನ ತಲೆಯನ್ನು ಚಚ್ಚಿಕೊಂಡು ಹಾವಾಗಿ ರೂಪಾಂತರಗೊಳ್ಳುತ್ತಾನೆ.(ಅಸ್ಪೃಶ್ಯನಾದ ಬಾಲಬಸಪ್ಪನಿಗೆ ಲಿಂಗಾಯತ ಮಠಕ್ಕೆ ಮನುಷ್ಯನಾಗಿ ಪ್ರವೇಶವಿಲ್ಲ) ವಿಷಯುಕ್ತನಾಗಿದ್ದ ಗೋಣಿ ಬಸಪ್ಪನ ಹೆಬ್ಬೆರಳನ್ನು ಕಚ್ಚಿ ಅವನದೇಹ ವಿಷತೆಗೆದು ಬದುಕಿಸಿ ಬಿಡುತ್ತಾನೆ. ಗೋಣಿಬಸಪ್ಪ ನಿನಗೇನು ವರಬೇಕು ಎಂದು ಕೇಳುತ್ತಾನೆ. ನಿನ್ನ ಮಠದ ಒಂದು ತೊಲೆಯಲ್ಲಿ ನನಗೆ ಹಲ್ಲಿಯಾಗಿ ವಾಸಮಾಡಲು ಅವಕಾಶ ಕೊಡು ಎಂದು ಕೇಳುತ್ತಾನೆ. ಅವನ ಬೇಡಿಕೆ ವಿಚಿತ್ರ ಹಾಗು ತುಂಬ ಸರಳ ಗೋಣಿ ಬಸಪ್ಪ ಒಪ್ಪಿಗೆ ನೀಡುತ್ತಾನೆ. ಕತೆಯ ಕೊನೆ ಬಾಗದಲ್ಲಿ ಗೋಣಿಬಸಪ್ಪ ತನ್ನೆಲ್ಲ ಕೆಲಸಗಳನ್ನು ಮುಗಿಸಿ ಮಠದ ಪಟ್ಟಕ್ಕೆ ಏರಲು ಬರುತ್ತಾನೆ. ಆಗ ತೊಲೆಯಲ್ಲಿ ಅಡಗಿದ್ದ ಬಾಲಬಸಪ್ಪ ಒಂದು ಸಾರಿ ನೀನು ನನಗೆ ಮಠ ಸೇರುವ ಹಕ್ಕುಕೊಟ್ಟ ಮೇಲೆ ನಿನಗೆ ಈ ಮಠದ ಅಧಿಕಾರವಿಲ್ಲ ಎಂದು ಗೌಳಿ ನುಡಿಯುತ್ತಾನೆ. ಇದು ಅಸ್ಪೃಶ್ಯತೆಯ ವಿರುದ್ಧ ನಡೆಯುವ ಪ್ರತಿಭಟನೆಯ ಕಾವ್ಯತ್ಮಕ ರೂಪಕದ ಕತೆಯಾಗಿದೆ.




**ಸಂ: ಎಸ್ ನಟರಾಜ ಬೂದಾಳು /ಉಜ್ಜಜ್ಜಿ ರಾಜಣ್ಣ**

1

ಜಾತಿಸೂತಕವೆಂಬ ಮಾತಿಲ್ಲ । ಸುಜ್ಞಾನ ಮಾರ್ಗದಿ
ಜಾತಿ ಕರ್ಮಾದಿಗಳು ಮೊದಲಿಲ್ಲ
ಜಾತಿಗೋತ್ರಕೆ ಬದ್ಧರಾಗುತ ಆತ್ಮನರಿಯದ ಕರ್ಮಿಗಲ್ಲದೆ
ಜಾತಿಕಲ್ಪನೆಯಳಿದು ಆತ್ಮಜ್ಯೋತಿಯಲಿ ಮುಳುಗಿದ ಮಹಾತ್ಮಗೆ ॥ಜಾತಿ॥

ಬ್ರಹ್ಮ ಬೀಜವೇ ಸರ್ವಯೋನಿಯೊಳು । ಪುಟ್ಟಿರುವದೆಂಬುದ
ಮರ್ಮವರಿಯದ ಮೂಢಜನರುಗಳು
ನಮ್ಮ ಕುಲ ಮೇಲೆನುತ ವಂದಿಸಿ
ನಿಮ್ಮ ಕುಲ ಕೀಳೆನುತ ನಿಂದಿಸಿ
ಹಮ್ಮು ಮದ ಮತ್ಸರದಿ ಸಾಯುತ
ವೊಮ್ಮೆ ನರಕಕ್ಕೆ ಇಳಿವರಲ್ಲದೆ ॥ಜಾತಿ॥

ಕರದಿ ಕುಂಭವು ಕುಂಭದೊಳು ಕ್ಷೀರ । ಪ್ರತ್ಯೇಕವಾಗಿ
ಇರುವ ಪರಿಯಾತ್ಮನಿಗೆ ಬೇರಾಗಿ
ಶರೀರ ಕುಲ ವರ್ಣಾಶ್ರಮಂಗಳು
ಬರಿದೆ ತೋರಿಯಡಗುವವು ಅಲ್ಲದೆ
ಪರಮಗುರು ಮಹಲಿಂಗರಂಗನೊಳ್
ಪರಿಕಿಸಲು ಲವಮಾತ್ರವಿಲ್ಲವು ॥ಜಾತಿ॥

2
ರಾಗ: ಕೇದಾರಗೌಳ ದ್ವಿಪದೆ

ಸರ್ವರಧಿಕಾರಿಗಳು ಎನಿಸಿಕೊಂಬರು ಮಗನೆ
ಉರ್ವಿಗತಿಶಯವಾದ ಮುಕ್ತಿ ಹೊಂದಲಿಕೆ ||ಪ||

ನೆರೆಜಾಣನಾಗಿರಲಿ ಮೂರ್ಖನಾಗಿರಲಿ
ಸಿರಿವಂತನಾಗಿರಲಿ ದಾರಿದ್ರನಾಗಿರಲಿ
ಹಿರಿಯನೆಂದೆನಿಸಿರಲಿ ಕಿರಿಯನೆಂದೆನಿಸಿರಲಿ
ಉರುನಿರಕ್ಷರಕುಕ್ಷಿ ಶಾಸ್ತ್ರಿಯಾಗಿರಲಿ ||ಸರ್ವ|| ||1||

ಆದಿವರ್ನದ ಕ್ಷತ್ರಿ ವೈಶ್ಯನಾಗಿರಲಿ
ಶೂದ್ರ ಹೂಣ ಕಿರಾತ ಮ್ಲೇಂಛನಾಗಿರಲಿ
ಭೇದ ಮತ ಚಾರ್ವಾಕ ಕಾಳನಾಗಿರಲಿ
ವ್ಯಾಧ ಕಟುಕಾಂಬಷ್ಟ ಭ್ರಷ್ಟನಾಗಿರಲಿ ||ಸರ್ವ|| ||2||

ಕುಲದಿ ಹೊಗಳಿಸಿಕೊಳಲಿ ಕುಲಗೇಡಿಯಾಗಿರಲಿ
ಇಳೆಯೊಳಗೆ ಪಾಷಾಂಡಿ ಪಾಪಿಯಾಗಿರಲಿ
ಬಲುಕೃಪಣನಾಗಿರಲಿ ಧರ್ಮಿಯಾಗಿರಲಿ
ಹೆಳವ ಕುಂಟ ಕುರೂಪಿ ಚಲುವನಾಗಿರಲಿ ||ಸರ್ವ|| ||3||

ಬಲುಶೂರನಾಗಿರಲಿ ರಣಹೇಡಿಯಾಗಿರಲಿ
ಬಲವಂತನಾಗಿರಲಿ ಬಲಹೀನನಾಗಿರಲಿ
ಲಲನೆ ಪುಂಶ್ಚಲಿಂಗ ರತಿವೇಶ್ಯಳಾಗಿರಲಿ
ಇಳೆಯೊಳೆಲ್ಲರಮನೆಯ ದಾಸನಾಗಿರಲಿ ||ಸರ್ವ|| ||4||

ಮೇದಿನಿಯ ಭೋಗಾಭಿಲಾಷೆಯನು ನೀಗಿ
ಸಾದರದಿ ಮೋಕ್ಷಾಭಿಲಾಷೆಯುತನಾಗಿ
ಸಾಧುಸಂಗವ ಬೆರೆತು ಅರಿವರ್ಗವಳಿದು
ಆದಿಗುರು ರಂಗನಡಿ ಭಕ್ತಿಯೊಂದಿರಲು
ಸರ್ವರಧಿಕಾರಿಗಳೆನಿಸಿಕೊಂಬರು ಮಗನೆ ||5||

3
ನೋಡಿದೇನೆ ಪ್ರೌಢಸುಂದರೀ । ಆ ।
ಜಾಡತಿಳಿದು । ನೋಡಿದೇನೆ ಪ್ರೌಢಸುಂದರೀ ||ಪ||

ರೂಢಮಾಗಿ ಮೂರು ನದಿಯು ।
ಕೂಡಿಯಿರುವ ಠಾವಿನಲ್ಲಿ ।
ಆಡಿ ಬಂದು ಜೋಡುಗಿಳಿಯು ।
ಕೂಡಿ ಮಾತಾಡುವದನು ||ನೋಡಿ || ಅ||

ಹೋಗಿನಿಂತು ಬಾಗಿಲಲ್ಲಿ ।
ನಾಗಕಾಂತೆ ರಾಗವನ್ನು ।
ಬೇಗಕೇಳಿ ಭೋಗಪದವಿ ।
ಸಾಗಿ ಬೆರಗಾಗಿ ನಿನ್ನಾ ॥ ನೊಡಿದೇನೆ ॥ 1॥

ದ್ವಾರನಾಲ್ಕು ತೂರಿದಾಂಟಿ ।
ಸೇರಿ ಗಗನ ಮೇರುಸಿಖರ ।
ವೇರಿಪಡದ ಭೂರಿಸುಖವ ।
ಸಾರಿಮೀರಿ ತೋರುವದನು ॥ ನೋಡಿದೇನೆ॥ 2॥
ವುರಿವ ಗಿರಿಯ ತುದಿಯ ಮೆರದು ।
ಸುರಿವ ಸುಧೆಯ ಭರದಿ ಸವಿದು ।
ಗುರುತನರಿತು ಶರಿರಮರತು ।
ಹರಿಹರ ಗುರುವರನ ಬೆರೆತು ॥ನೋ॥ 3॥


4
ಯಾವ ದೇಶದ ಗೆಳಿಯ ಬಂದು । ಯೇನು ಮೋಜು ಮಳಿಡಿದಾ ।
ಬೆಲ್ಲದಂಥ ಮಾತನಾಡಿ । ಬೆಳಗ ಮುಂಜೆಲಿ ಕೂಡಿದಾ । ಯಾವ ॥ಪ॥

ಆರುವರ್ಣದ ಕುದುರೆ ನೇರಿ । ಪೇರಿ ಮಾಡಿ ನಿಲಿಸಿದಾ ।
ಆರುಬಾಗಿಲ ದಾಂಟಿ ಆ ಚೆಲಿ । ವಾರೆಗಂಣಿಲಿ ನೋಡಿದಾ ॥ ಯಾವ ॥1॥

ಸುಮನೆಯೆಂಬೊ ಕಮಚಿಪಿಡಿದು । ಗಮಕದಿಂದಲಿ ಕುಣಿಸಿದಾ ।
ಕಮಲಸಾಸಿರ ಮಧ್ಯದೊಳಗೆ । ವಿಮಲ ಹಯವನಿಲಿಸಿದ ॥ಯಾವ ॥2॥

ಸದನವಾದ ಸಂಗಸ್ಥಳದ । ನದಿಯ ದಾರಿಯ ಹಿಡಿಸಿದಾ ।
ಮುದದಿ ಮನವೆರಡಾಗದೆಳೆಮರಿ । ಕುದರಿ ಗುಟಕವ ಕುಡಿಸಿದಾ ॥ಯಾವ ॥4॥

ಸತ್ತು ಹುಟ್ಟದ ಹಾಂಗೆ ಕುದುರೆ । ಕದ್ದಕಳ್ಳನ ಹಿಡಿಸಿದಾ ।
ಸದ್ದು ಅಡಗದ ಹಾಂಗೆ ಸದರದ । ಸಿದ್ಧಲಿಂಗದೋಳ್ ಬೆರೆಸಿದಾ ॥ ಯಾವ ದೇಶದ ॥5॥



5
ಬಿಡು ಬಾಹ್ಯದೊಳು ಡಂಭವ । ಮಾನಸದೊಳ
ಗೆಡೆವಿಡದಿರುವ ಶಂಭುವ
ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೆ ಮರುಳೆ ॥ಪ॥

ಜನ ಮೆಚ್ಚಿ ನಡೆಕೊಂಡರೇನುಂಟು ಲೋಕದಿ
ಮನ ಮೆಚ್ಚಿ ನಡೆಕೊಂಬುವುದೆ ಚೆಂದವು ।
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕಳ್ಳತನವಿಲ್ಲವಲ್ಲಾ ॥1॥
ಜನರು ಮೆಚ್ಚುತೆ ನಿನ್ನ ಕೈಲಾಸಕೊಯ್ವರೆ
ಜನ ಮೆಚ್ಚದಿರೆ ಶಿವ ಬಿಡುತಿಹನೇ ।
ಜನರಲ್ಲಿ ನಿನ್ನನ್ನು ದೊಡ್ಡಾತನೆಂದರೆ
ಚಿನುಮಯ ಶಿವನಲ್ಲಿ ಅರಿಯನೆ ಮರುಳೇ ॥2॥

6
ಮನದೊಳು ಶಿವ ತಾನು ಮನೆಮಾಡಿಕೊಂಡಿಹ
ಮನ ಮೆಚ್ಚಿ ನಡೆದರೆ ಶಿವ ಮೆಚ್ಚುವ ।
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗೊನಲ್ಲ ॥3॥

ದೀಪ ಮುಟ್ಟಿಸೆ ಅಕ್ಕ
ದೀಪ ಮುಟ್ಟಿಸೆ ಅಕ್ಕ
ದೀಪ ಮುಟ್ಟಿಸೆ ಮನೆಗೆ
ಈಗ ದೇವರು ನಿನಗೆ ಕಾಣಬಹುದು ॥ಪ॥

ದೇಶಿಕ ಕರುಣೆಂಬೆ ಅಕ್ಕ
ದಿಟ್ಟದ ಬೆಂಕಿಯು ಅಕ್ಕ
ನಾಸಿಕ ಕೊನೆ ಭ್ರೂಮಧ್ಯದ ಒಲೆಯು
ನಂದದ ತೆರದಲಿ ವೈನದಲಿಡು॥1॥

ಕಾಮ ಕ್ರೋಧವೆಂಬುವ ಅಕ್ಕ
ಕರಡನೆ ಹಾಕಿ ಅಕ್ಕ
ಸೋಮ ಸೂರ್ಯಸ್ವರ ಕೊಳವಿಯಲೂದಿ
ಸೂರಿಯ ಕೋಟಿ ಎಂಬ ಉರಿಯನೆ ಮಾಡಿ ॥2॥

ಜ್ಞಾನ ಜ್ಯೋತಿಯು ಅಕ್ಕ
ಘನವಾಗಿ ಮುಟ್ಟಿಸೆ ಅಕ್ಕ
ತಾನು ತಾನಾದ ಮನೆಮನೆ ಹೊಕ್ಕು
ತಾನಾದ ಚಿದಾನಂದ ಬ್ರಹ್ಮವ ಕಾಣುವ ॥3॥

7
ಮುಟ್ಟು ಮುಟ್ಟೆನ್ನುತ ಮೂರ್ಮಾರು ಹೊರಳುವೆ
ಮುಟ್ಟೆಲ್ಲಿ ಬಂತೆ ಬಿಕನಾಶಿ ॥ಪ॥

ಮುಟ್ಟೊ ನೀನೇ ಮಡಿಯೂ
ನೀನೇ ಕೆಟ್ಟಿತು ನಿನಮಡಿ ॥ಅ.॥

ಮೊದಲೇ ಜಲದಲಿ ನೀ ಮುಳುಗಿ
ಕಡೆಯಲಿ ಆ ಉದಕವನೇ ತರುವೆ
ದೇವರಿಗೆಂದಭಿಷೇಕವ ಮಾಡುವೆ
ಅಹಂನ ಬಿಡು ನಿನ್ನ ಬಿಕನಾಶಿ ॥1॥
ಎಲುಬು ಚರ್ಮದಿ ಮಲಮೂತ್ರದ ಗೂಡಲಿ
ನಲಿಯುತಲಿದ್ದೆ ಬಿಕನಾಶಿ
ನೆಲೆಗೊಂಡಾ ನವ ದ್ವಾರದ ಜಲದೊಳು
ತೊಳಲುತ ಬಿಕನಾಶಿ ॥2॥

ಹುಟ್ಟುತ ಸೂತಕ ಹೊಂದುತ ಸೂತಕ
ನಟ್ಟ ನಡುವೆ ಬಿಕನಾಶಿ
ಪಟ್ಟಣವಾ ಕಾವೇರಿ ಮುಳುಗಲು
ಮುಟ್ಟು ತೇಲಿಸೀತೆ ಬಿಕನಾಶಿ ॥3॥

ನಾನಾ ಶಾಸ್ತ್ರವನೋದಿ ನಾ ನಿನ್ನ ಮರೆವೆನು
ಹೀನವ ಬಿಡು ನಿನ್ನ ಬಿಕನಾಶಿ
ನಾನಾ ಶಾಖದಲಿ ಇರಲಾದರೂರ್ವಿ
ಅದು ರುಚಿ ತಿಳಿವುದೆ ಬಿಕನಾಶಿ ॥5॥

ಚರ್ಮವು ತೊಳೆದರೆ ಕರ್ಮವು ಹೋಯಿತೆ
ಕರ್ಮವು ಬಿಡದು ನಿನ್ನ ಬಿಕನಾಶಿ
ಒಮ್ಮೆ ಚಿದಾನಂದನ ಪಾದವ ಸ್ಮರಿಸಲು
ನಿರ್ಮಲವಾದೆಯ ಬಿಕನಾಶಿ ॥6॥

8
ರಾಗ–ಸಾರಂಗ–ಆಟತಾಳ

ಬಿಡುಬಿಡಿನ್ಯಾತರ ಜ್ಞಾನ । ನಿನ್ನ ನಡೆ
ನುಡಿಯೊಂದಾಗದಿಹುದೆ । ಅಜ್ಞಾನ ॥ಬಿಡುಬಿಡಿನ್ಯಾತರಜ್ಞಾನ ॥ಪಲ್ಲವಿ॥

ಗುರುಭಕ್ತಿ ನೆಲೆಯಾಗಿಲ್ಲ । ನಾನೇ ।
ಗುರುವೆಂದು ಹಮ್ಮಿನಿಂದುರಿಯುವೆಯಲ್ಲ ।
ಕರುಣ ಶಾಂತಿಯು ಸತ್ವವಿಲ್ಲ । ಕೆಟ್ಟ

ಅರಿವರ್ಗ ಮದ ಹೆಚ್ಚಿ ಮೊರೆಯುವೆಯಲ್ಲ ॥ಬಿಡು॥1॥

ಚದುರನೆಂದೆನಿಸಿಕೊಂಡಿರುವೆ ।ದಿವ್ಯ
ಪದುಮದಂತೊಪ್ಪುವ ಮುಖದಿ ಶೋಭಿಸುವೆ।
ಮಧುರವಾಕ್ಯವನಾಡುತಿರುವೆ । ನಿನ್ನ
ಹೃದಯದಿ ಕ್ಷತ್ರಿಯನ್ನಿಟ್ಟುಕೊಂಡಿರುವೇ ॥ಬಿಡು॥2॥

ತನುವಿನಾಶೆಯ ಬಿಡಲಿಲ್ಲ ।ಹೇಸಿ
ಮನದ ಸಂಕಲ್ಪಾಗಳ್ ಬೋಳಾಗಲಿಲ್ಲ ।
ಅನುಮಾನವನು ಬಿಡಲಿಲ್ಲ । ನಮ್ಮ ಗುರುರಂಗಲಿಂಗನೋಳ್ । ಸಮರಸವಿಲ್ಲ ॥ಬಿಡು॥3॥

9
ನಮ್ಮ ಕೋಳಿಯ ಕಂಡಿರೇನಮ್ಮಾ ।
ನಿಮ್ಮಂಗಳದೊಳಿಳಿದು । ಮರ್ಮ ಬಿಟ್ಟೇ ಕೂಗಿತಲ್ಲಮ್ಮಾ ॥ಪ॥

ಒಮ್ಮೆ ಕೇಳಿದ ಪುಣ್ಯವಂತರು । ನಿರ್ಮಲಾತ್ಮಜ್ಞಾನವಾಂತರು ।
ರಮ್ಯವಾಗಿಹ ಮೂರು ವರ್ಣವೆ ।
ಬ್ರಹ್ಮ ಸಾಕ್ಷಾತ್ಕಾರವೆನ್ನುವ ॥ಅ.ಪ॥
ಕಾಲಜ್ಞಾನವ ತೋರಿ ಕೂಗುವುದು । ತಾನಾಗಿಯೆಚ್ಚರ ।
ತಾಳಿ ಎಲ್ಲರನೆಚ್ಚರಿಸುತಿಹುದು ॥ ಕೇಳಿಯೆಚ್ಚರ
ತಾಳಿದವರು । ಕಾಲ ವ್ಯರ್ಥವ ಮಾಡಲಾರರು ।
ಬಾಳುವೆಯನೇ ಹಸನು ಮಾಳ್ಪರು । ಮೂಲ ಹಂಸನ ಉದಯ ತಿಳಿವರು ॥1॥

ಮೂರು ನದಿಗಳ ಸಂಗಮದೊಳಿಹುದು ।
ಹಾರಾಡಲೊಲ್ಲದೆ । ಮೀರಿದಚ್ಚ ಸ್ವರದಿ ಕೂಗುವುದು ॥
ಏರಿಮೇಲಕ್ಕಾಸುಷುಮ್ನಾ ।ದ್ವಾರದಲ್ಲಿಯೆ ನಿಂತು ಬ್ರಹ್ಮಾ ।
ಗಾರವೆಲ್ಲವ ತುಂಬಿ ಜ್ಞಾನದ । ಸಾರವೆಲ್ಲವ ತೋರಿ ಕೂಗಿದ ॥2॥

ಸಪ್ತಕೋಟಿ ಸುಮಂತ್ರ ದೊಡಲಮ್ಮಾ ।ನಮ್ಮ ಕೋಳಿಗೆ
ಸಪ್ತ ಚಕ್ರದ ಸೂತ್ರ ಬಿಡದಮ್ಮಾ ॥ ಗುಪ್ತ ದ್ವಾರವಸೇರಿಹುದ ನಿ ।
ರ್ಲಿಪ್ತವಾಗಿಯೇ ಕೂಗು ತಿರ್ಪುದು ॥ ತೃಪ್ತಿಯಲಿ ನರಹರಿಯ ಪಾದದ ।
ಪ್ರಾಪ್ತಿ ಮುಕ್ತಿಗೆಯೆಂದು ಕೂಗುವ ॥3॥

10
ಕುಣಿಯುತಾಳೆ ಕುಣಿಯುತಾಳೆ । ಯಲ್ಲಮ್ಮ ದೇವಿ ।
ಕುಣಿಯುತಾಳೆ ಕುಣಿಯುತಾಳೆ ॥ಪ॥
ಕುಣಿಯುತಾಳೆ ಜಗದೊಳೆಲ್ಲ । ಕುಣಿಸುತಾಳೆ ಜಗವನೆಲ್ಲ ॥
ಎಣಿಸುತಾಳೆ ಎಲ್ಲವನ್ನು । ಮಣಿಸಿತಾನೆ ಥೈ ಥೈ ಎಂದು ॥ ಅ.ಪ ॥

ಶರೀರ ಚೌಡಿಕೆಯಮಾಡಿ । ಅದರಲ್ಲೆ ಹುಟ್ಟಿ ।

ಬರುವನಾದ ತಂತಿಮಾಡಿ ॥ಕರಣವೆಂಬ ಗೆಜ್ಜೆಕಟ್ಟಿ ।
ಸ್ಮರಣೆಯೆಂಬ ಬೆರಳುಮುಟ್ಟಿ ॥ ಧರಣಿಯೆಲ್ಲವನ್ನು ಮೆಟ್ಟಿ ॥
ಹರುಷಹುಟ್ಟಿ ಥೈ ಥೈ ಎಂದು ॥1॥

ಜಗವನೆಲ್ಲ ಹೆತ್ತಿದಾಳೆ ।ಜಾಗ್ರವನು ಕೂಡಿ ।
ಜಗವತಾನೆ ಹೊತ್ತಿದಾಳೆ ॥ ಮಿಗಿಲುಮಾಯೆ ಸ್ವಪ್ನ ಕೂಡಿ ।
ಹಗರಣಕ್ಕೆ ತಾನೆಹೂಡಿ ॥ ಹಗಲುರಾತ್ರಿವೊಂದೆಮಾಡಿ ।
ಸೊಗಸಿನಿಂದ ಥೈ ಥೈ ಎಂದು॥2॥

ನಿದ್ರೆಯೆನಿಸಿ ಬಂದಿದಾಳೆ ।ಜಗಕೆಲ್ಲ ಬೀಗ ।
ಮುದ್ರೆ ಹಾಕಿನಿಂದಿದಾಳೆ ॥ ಇದ್ದು ಇಲ್ಲವಾಗಿ ಲೋಕ ।
ಬಿದ್ದುಹೋಯಿತೆಲ್ಲ ಮೂಕ ॥ ಶುದ್ಧನರಹರೀಂದ್ರಪಾದ ।
ಹೊದ್ದಿನಿಂತು ಥೈ ಥೈ ಎಂದು ॥3॥
ಕುಣಿಯುತ್ತಲಿರುವಂಥ ನವಿಲೇ । ನಿನ್ನ ।
ಕುಣಿತಕ್ಕೆ ಸಾಲದು ಬ್ರಹ್ಮಾಂಡ ಬಯಲೇ ॥ಪ॥

ದಣಿವಿಲ್ಲದೊಲು ಕುಣಿವ ಲೀಲೆ । ನೋಡಿ ।
ಮಣಿದಿತ್ತು ಜಗವೆಲ್ಲ ಬೆರಗಾದ ಮೇಲೆ ॥ಅ.ಪ॥

11
ಮೈಯೆಲ್ಲ ಕಣ್ಣಾದ ನವಿಲೆ ।ಸರ್ವ ।
ಕಾಯ ಕರ್ಮಕ್ಕೆಲ್ಲ ನೀನಾದೆ ಕೀಲೆ ॥
ಮಾಯೆಗಾಶ್ರಯದ ಸಂಕೋಲೆ ।ಕಂಡ ।
ಛಾಯೆಗೆ ಮರುಳಾಗಿ ಕುಣಿವಂಥ ನವಿಲೆ ॥1॥

ಸೌಂದರ್ಯ ನಿಧಿಯಾಗಿ ಮೆರೆವೆ । ಲೋಕ ।
ಬಾಂಧವ್ಯಕೆಲ್ಲ ಕಾರಣವಾಗುತಿರುವೇ ॥
ಆಂದೋಲನವನೆಬ್ಬಿಸಿರುವೇ । ನಿನ್ನ ।
ಮುಂದೆ ಕಾಮನು ಕುಣಿಯಲಾಗ ಮೈಮರೆವೆ ॥ 2 ॥

ಮೂರುರೂಪಾಗುತ್ತ ಬಂದೇ ।ಜಾಗ್ರ ।
ತೋರಿ ಕುಣಿದಾಟಕ್ಕೆ ಮೊದಲಾಯಿತೆಂದೇ ॥
ಮೀರಿ ಸುಪ್ತಿಯ ಕೂಡಿನಿಂದೇ । ಸ್ವಪ್ನ ॥
ಸೇರಿ ಸುಮ್ಮನೆ ಯಿದ್ದು ನರಹರಿಯೊಂದೇ ॥3॥



12
ಹರಗಿ ಬಿತ್ತಲಿಲ್ಲ ಮೊಳದುದ್ದ ತೆನೆಯಾಯ್ತು ಶಂಭುಲಿಂಗ।
ತಿನಬಂದ ಗಿಳಿಗಳು ಬೆದರಿ ಪೋಗುತಲಿವೆ ಶಂಭುಲಿಂಗ
॥ಪ.॥

ಹುಲ್ಲಾನೆ ಮೆಯ್ಯೋದು ನೀರಾನೆ ಕುಡಿಯೋದು ಶಂಭುಲಿಂಗ।
ಹಿಡಿದಾರೆ ಮೊಲೆಯಿಲ್ಲ ಹಾಲನೆ ಕರೆವುದು ಶಂಭುಲಿಂಗ ॥1॥

ಕರಿಯ ಹೆಂಟೆಯ ಮೇಲೆ ಬಿಳಿಯ ಬೀಜವ ಬಿತ್ತಿ ಶಂಭುಲಿಂಗ॥
ಕೊಂಬುವರುಂಟಿನ್ನು ತಿಂಬುವರಾರಿಲ್ಲ ಶಂಭುಲಿಂಗ ॥2॥

ಮೂರು ಕಾಲಿನ ಪಕ್ಷಿ ನೀರೊಳು ನಿಂತಿದೆ ಶಂಭುಲಿಂಗ ।
ಪಕ್ಷಿಗೆ ರೆಕ್ಕಿಲ್ಲ ಹಾರಿತೋ ಗಗನಕೆ ಶಂಭುಲಿಂಗ ॥3॥

ಇಬ್ಬರು ಸ್ತ್ರೀಯರಿಗೊಬ್ಬನೆ ಪುರುಷನು ಶಂಭುಲಿಂಗ।
ಪುರುಷಾಗೆ ರೂಪಿಲ್ಲ ಗುರುಪೂಜೆ ಸ್ವರಬಲ್ಲ ಶಂಭುಲಿಂಗ ॥4॥

ಹಾವು ಕುಣಿದಾಡಿತು ಚೇಳು ಕುಣಿದಾಡಿತು ಶಂಭುಲಿಂಗ।
ಚೇಳು ಹಾವನು ನುಂಗಿ ಕೋಳಿ ಕೂಗುವಾಗ, । ಶಂಭುಲಿಂಗ । ॥5॥

ದೇವ ದೇವತೆಗಳಿಗೆ ಬ್ರಹ್ಮನ ಕಾವಲು ಶಂಭುಲಿಂಗ।
ಅಕ್ಕರಿಲ್ಲದ ಶಿವ ತಾನೋಡಿ ನಗುತಿಹ ಶಂಭುಲಿಂಗ ॥6॥
ಈ ಗುರುಮಂತ್ರ ಬಲದಿಂದ ಈ ಭವ ತಿಳಿಬೇಕು ಶಂಭುಲಿಂಗ॥7॥

13

ಊರು ದೇವರ ಮಾಡಬೇಕಣ್ಣ ಈ।
ಊರವಳಗೆ ಗಂಗದೇವರ ನಿಲಿಸಬೇಕಣ್ಣ ॥ಪ॥
ಊರು ದೇವರ ಮಾಡಬೇಕು। ಗಂಗದೇವರ ನಿಲಿಸಬೇಕು।
ಗಂಡದೀಪಗಳುರಿಯಬೇಕು। ಘಂಟೆನಾದವು ಕೇಳಬೇಕು॥ 1॥

ಪಂಥವೆಂಬೊ ಪತ್ರೆ ತಂದು । ಗುಪ್ತವೆಂಬೊ ಗುಡಿಯ ಕಟ್ಟಿ ।
ಜ್ಞಪ್ತಿಯೆಂಬೊ ಗಂಗದೇವಿಗೆ। ಆತ್ಮಯೆಂಬೊ ಪೂಜೆ ಮಾಡಿ॥2॥

ಕೋಪವೆಂಬೊ ಕೋಣ ತಂದು। ಗಂಗದೇವಿ ಮುಂದೆ ನಿಂದು।
ಜ್ಞಾನಯೆಂಬೊ ಖಡ್ಗದಿಂದ । ಆಲಿಅಲಿ ಬಲಿ ನರಕಬೇಕು॥3॥

ತಾಮಸೆಂಬೊ ಟಗರು ತಂದು। ಕಾಮಕ್ರೋಧ ನುಗ್ಗುಮಾಡಿ।
ನೆಮ್ಮ ಕಲ್ಪದ ಮದಗಳನ್ನು । ಸುಮ್ಮನಿರದೆ ಚೂರು ಮಾಡಿ॥4॥

ಭಕ್ತಿಯೆಂಬೊ ಬತ್ತಿನಿಡದು। ತೂರ್ಯಯೆಂಬೊ ತುಪ್ಪನಟ್ಟಿ।
ಅಂಗದಿಂದ ಲಿಂಗನೋಡಿ। ಗಂಗದೇವಿ ಪೂಜೆಮಾಡಿ॥5॥

ಕ್ರೂರಗುಣ ಕುಂದಾಡಿನಿಡದು। ಕರದು ಬೆಣಕಿನ ನಿಡದು ನೋಡಿ।
ಭಕ್ತಿಯಿಂದಾ ಭಳಿರೇ ಎಂದು। ಭಕ್ತಜನರು ಭಕ್ತಿನೊಂದೊ॥6॥

ಏಳು ಅಂಕಣ ತೇರು ಮೇಲೆ। ನಿಂತು ನೋಡೋ ಕುಂತು ಇರುವಳು।
ಮ್ಯಾಳ ತಾಳ ಮೃದಂಗ ಘನತರ। ವೇಣುನಾದ ವಿನೋದ ಘರ್ಜನ॥6॥

ಆತ್ಮದಲ್ಲಿ ಗಂಗ ಜಾತರೆ। ಮಾಡಿ ಮುಕ್ತಿಯೊಂದಬೇಕು।
ಭಕ್ತ ಜನರು ಬನ್ನಿರಣ್ಣ । ಮುಕ್ತಿಮಾರ್ಗ ಸೇರಿರಣ್ಣ॥8॥

ಧರೆಯೊಳು ನಂಬಳ್ಳಿ ಪುರವು। ಶ್ರೀ ರಾಮಕೃಷ್ಣಾರ್ಯುಲು ಗುರುವು।
ಆಂಜನೇಯದಾಸು ಆತ್ಮಾ । ನಂದವಾಯಿತು ಈ ದಿನವು॥9॥

14

ಕೋಲು ಕೋಲೆನ್ನಿರೇ । ಸದ್ಗುರುವಿನ । ಕೀಲು ಮೇಲನ್ನಿರೇ ॥ ಪ॥

ಅತ್ತೆ ಹೆಸರು ಹಳೆಯ ಚಾಪಿ । ಮಾವನ ಹೆಸರು ಮಂಚದ ಕಾಲು ।
ಯನ್ನ ಹೆಸರು ಕಲ್ಲಬಿಲ್ಲಿ । ಗಂಡನ ಹೆಸರು ಟಕ್ಕ ಟಿಕ್ಕಿ ॥ ಕೋಲು॥ 1॥

ಹತ್ತಿ ಬಿತ್ತಿ ಬತ್ತಿ ಕಾಣೆ । ಬತ್ತ ಬಿತ್ತಿ ಬಾನ ಕಾಣೆ ।
ಮನೆಯ ತುಂಬ ಮಕ್ಕಳಡದು । ಗಂಡ ಸುಖವ ಕಾಣಲಿಲ್ಲ ॥ ಕೋಲು॥ 2॥

ಗಂಡ ದಂಡಿಗೋಗುವಾಗ । ಅರಗಿನ ಮುದ್ರೆ ಮಾಡಿಹೋದ ।
ಅರಗಿನ ಮುದ್ರೆ ಹಾರಿಹೊಡದು । ಆರು ಮಕ್ಕಳಡದೆನವ್ವಾ ॥ ಕೋಲು॥ 3॥

ದಂಡಿಗೋಗೊ ಅಪ್ಪಗಳಿರಾ । ದಂಡಿಗೋಗೊ ಅಂಣಗಳಿರಾ ।
ದಂಡಿನಾಗೆ ನನ್ನ ಗಂಡನ ಕಂಡರೆ । ಮಿಂಡನ ಕಟ್ಟಿಕೊಂಡು ಹೋದಳೆನ್ನಿರಿ ॥ ಕೋಲು॥ 4॥


ಗುಡ್ಡಕೆ ನೆರಳಿಲ್ಲ । ಗುರುವಿಗೆ ಸಮಾನಿಲ್ಲ ।
ಸ್ವಾಮಿ ಚಿದಾನಂದನ । ಮಹಿಮೆಯ ತಿಳಿಯಲಿಲ್ಲ । ಕೋಲು ಕೋಲೆನ್ನಿರೇ ॥ 5॥

15

ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಎನುತೀರ
ಮಡಚಟ್ಟ ಎಲ್ಯಾದ್ದೇಳಣ್ಣ
ಮುಟ್ಟಾದ ಮೂರು ದಿನಕಿ ಹುಟ್ಟಿ ಬಂದೀದಿ ನೀನು
ಮುಡಚಟ್ಟ ಎಲ್ಯಾದ್ದೇಳಣ್ಣ ॥ ಪ ॥

ತೊಗಲೊಳು ತೊಗಲೊಕ್ಕು ತಗಲಿ ಬಂದವ ನೀನು
ತಗಲ ಮಾತಾಡುವದೇನಣ್ಣ
ಇದರ ಬಗಿಯ ತಿಳಿಯದೆ ವಗದು ಮಾತನಾಡಿದರೆ
ನಗೆಗೇಡಿ ಕಾಣುತಾದಣ್ಣ ॥ 1 ।

ಎಲುವಿನಾಲಯದೊಳು ಒಳಗ್ಹೊಕ್ಕು ನೀ ಕುಂತು
ಓಡ್ಯಾಡಬೇಡ ನೀ ಕೇಳಣ್ಣ




ಎಲವು ತೊಗಲ ಮಲಮೂತ್ರ ಮಾಂಸವು
ನಿನ್ನಲ್ಲಿ ಕಾಣುತಾದಣ್ಣ ॥ 2 ॥

ಊರ ನರಕವ ತಿಂದು ಬೋರ್‍ಯಾಡ್ಡಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ
ಅದರ ಸ್ವಾದ್ಹತ್ತಿ ನೀ ಉಂಡು ಗಂಡಾಗಿ ಕುಂತೀದಿ
ಶೀಲ ಎಲ್ಲಿ ಉಳಿತ್ತೇಳಣ್ಣ ॥ 3 ॥

ಊರಬಾವಿಯ ನೀರ ದಾರಾದರು ತರುವರು
ನಿನ್ನ ನೀರ ಬ್ಯಾರ್‍ಯಾವೇನಣ್ಣ
ಲಂಡೇನ್ಹಳ್ಳ ಬಂದು ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣ ॥ 4 ॥

ಸೂಸಲಾಡುವ ದೇಹ ಸೋಸಿ ನೀರವ ಮಾಡಿ
ಮಡಿ ಮಾಡಿಕೊಳ್ಳಬೇಕಣ್ಣ
ನಮ್ಮ ಧೀರ ಮಹಾಂತೇಶನ ಬಿಡದೆ ಕೊಂಡಾಡಿದರೆ
ಕಡಿತನಕ ಮಡಿಯಾಗುವದಣ್ಣ



16

ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೊ ।
ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದ ಮೇಲೆ ॥ಪಲ್ಲ॥

ತಾನೆ ಪೃಥ್ವಿ ಅಪ್ಪು ತೇಜ ತಾನೆ ವಾಯು ಆಕಾಶಾತ್ಮ ।
ತಾನೆ ಸೂರ್ಯ ಚಂದ್ರ ತಾರೆ ತಾನೆ ಬ್ರಹ್ಮಾಂಡಾದ ಮೇಲೆ ॥1॥

ತಾನೆ ಘ್ರಾಣ ಜಿಹ್ವೆ ನೇತ್ರ ತಾನೆ ತ್ವಕ್ಕು ಶ್ರೋತೃ ಹೃದಯ ।
ತಾನೆ ಕಾಯ ಕರಣ ಹರಣ ತಾನೆ ಪಿಂಡಾಂಡಾದ ಮೇಲೆ ॥2॥

ತಾನೆ ಹೆತ್ತ ಸತ್ತ ಅತ್ತ ತಾನೆ ನಿತ್ಯ ನುತ್ಯ ಸತ್ಯ ।
ತಾನೆ ಅರ್ತ ಬೆರ್ತ ಮರ್ತ ತಾನೆ ಸರ್ವನಾದ ಮೇಲೆ ॥3॥

ತಾನೆ ಲಕ್ಷ ಸಾವಿರ ನೂರು ತಾನೆ ಹತ್ತೊಂಬತ್ತೆಂಟೇಳು ।
ತಾನೆ ಆರೈದು ನಾಲ್ಕು ಮೂರು ತಾನೆ ಎರಡೊಂದಾದ ಮೇಲೆ ॥4॥

ತಾನೆ ನೀನು ನೀನೆ ತಾನು ತಾನೆ ಅಲ್ಲ ತಾನೆ ಇಲ್ಲ ।
ತಾನೆ ಮಹಾಂತ ತಾನೆ ತಾನು ಏನೊ ಏನೊಂದಾದ ಮೇಲೆ ॥5॥

17

ನಿಶ್ಚಿಂತನಾಗ ಬೇಕಂತಿ । ಬಹಳ
ದುಶ್ಚಿಂತಿ ಒಳಗೆ ನೀ ಕುಂತಿ
ಯಾಕೊ ಎಲೋ ನಿನಗೆ ಈ ಭ್ರಾಂತಿ
ಆಗಾಗುವದೀಗ ಆಗಂತಿ ॥ ಪಲ್ಲ ॥

ಅವರು ಕಂಡರವರವರಂತಿ
ಇವರು ಕಂಡರಿವರಿವರಂತಿ
ಅವರಿವರ ತಿಳಿಯದೇ ನೀ ಕುಂತಿ
ಬಹಳವಿರಲಿ ಗುರುವಿನ ನೆನಿಯಂತಿ ॥

ಆಶಿಪಾಶಿ ಮಾತು ಬ್ಯಾಡಂತಿ । ಒಳ್ಳೇ
ಮೀಸಲ ನುಡಿ ಮಾತಾಡಂತಿ
ಭಾಷೆ ಕೊಟ್ಟು ತಪ್ಪ ಬ್ಯಾಡಂತಿ ಒಳ್ಳೆಯ
ಈಶನ ಪಾದವು ಕಾಣಂತಿ ॥

ಪೊಡವಿಯೊಳಗ ಕಡಕೋಳಂತಿ ಅಲ್ಲಿ
ದೃಢ ಮಡಿವಾಳಯೋಗಿ ಹಾನಂತಿ
ಬಿಡದೆ ಪಾದ ಸೇವೆ ಮಾಡಂತಿ
ಆತನ ಪಾದಕ್ಕೆ ನಮೋ ನಮೋ ಬಾಗಂತಿ ॥

18

ಎಷ್ಟೂ ಬೇಡಿಕೊಂಡರೊಲಿವಳಲ್ಲ ಕಾಣೋ ।ಬಹಳ ।
ಕಷ್ಟವೈತೆ ಜ್ಞಾನಶಕ್ತಿ ।ಮುಟ್ಟಿ ಪೂಜೆ ಮಾಡುವರಿಗೆ ।
ಯೆಷ್ಟು ಬೇಡಿಕೊಂಡರೊಲಿವಳಲ್ಲ ॥ ಪ॥

ತುಂಟರೈವರ ಸಂಗವ ಬಿಡೆಂಬುತಾಳೆ ।ನಿನ್ನ ।
ಕಂಟಕನಾರನು ಕಳಿಯೆಂಬುತಾಳೆ ।
ನೀಲಕಂಠನಂಘ್ರಿ ಸ್ಮರಣೆಯಲ್ಲಿ ।
ಜಂಟಿಯಾಗಿದ್ದರೆ ನಿನ್ನ ।
ಭಂಟೆಯಾಗಿ ಹಗಲು ಯಿರುಳು ।
ವುಂಟುಮಾಡೆನೆಂಬುತಾಳೆ ॥ಯೆಷ್ಟೂ ॥ 1॥

ಜಲಧಿ ಸಾಗರದಾಟವ ಬಿಡೆಂಬುತಾಳೆ । ನಿನ್ನ ।
ಜಲವನ್ನೆಲ್ಲ ಹೀರೆನೆಂದೆಂಬುತಾಳೆ ।
ಲಲನೆಯೋರ್ವಳ ಸಂಗದಲ್ಲಿ ।
ಲಲನನಾಗಿಯಿದ್ದರೆ ನಿನ್ನ ।
ಲಲನೆಯಾಗಿ ಹಗಲುಯಿರುಳು ।
ವಲಿದುಯಿದ್ದೇನೆಂಬುತಾಳೆ ॥ಯೆಷ್ಟೂ॥ 2॥

ಆರುಲಿಂಗದ ಪೂಜೆಮಾಡೆಂಬುತಾಳೆ ।ಅಲ್ಲಿ ।
ಆರುವುಂಟು ಆರುಯಿಲ್ಲೆಂಬುತಾಳೆ ।
ಆರುಲಿಂಗಕ್ಕಾರುಶಕ್ತಿ ।
ಆರು ಪ್ರಸಾದವ ಕೊಟ್ಟರೆ ನಿನ್ನ ।
ನಾರಿಯಾಗಿ ಹಗಲು ಯಿರುಳು ।
ಸೇರಿಯಿದ್ದೇನೆಂಬುತಾಳೆ ॥ ಯೆಷ್ಟೂ॥ 3॥

ಅಷ್ಟಾದಳದ ಮಂಟಪವ ರಚಿಸೆಂಬುತಾಳೆ ।ಅಲ್ಲಿ ।
ನಿಷ್ಟೆಯೆಂಬೊ ಹಾಸಿಗೆ ಹಾಸೆಂಬುತಾಳೆ ।
ಯಿಷ್ಟ ಪ್ರಾಣ ಭಾವದಲ್ಲಿ ।
ಘಟ್ಟಿಯಾಗಿ ಯಿದ್ದರೆನಿನ್ನ ।
ಪಟ್ಟದರಾಣಿಯಾಗಿ ನಾನು ।
ಮುಟ್ಟಿಕೊಂಬೆನೆಂಬುತಾಳೆ ॥ ಯೆಷ್ಟೂ॥ 4॥

ಅಂಗಲಿಂಗದಸಂಗವ ಮಾಡೆಂಬುತಾಳೆ ।ನೀನು ।
ಲಿಂಗವಂತನಾಗಿ ನಡಿಯೆಂಬುತಾಳೆ ।
ಹಿಂಗದೆ ಗುರುಲಿಂಗಸ್ವಾಮಿಯ ।
ಸಂಗವ ನೀ ಮಾಡಿದೆ ಯಾದರೆ । ನಿಂ ।
ನಂಗನೆಯಾಗಿ ಹಗಲುಯಿರಳು ।
ಹಿಂಗದಿರುವೆನೆಂಬುತಾಳೆ ॥ ಯೆಷ್ಟೂ ಬೇಡಿ॥ 5॥

19
ಬಾರೋ ಬಾ ಮಳೆ ದೇವನೇ । ದಯ ।
ತೋರು ದೇವರ ದೇವನೆ ॥ಪ॥
ಧಾರಿಣಿಗೆ ಸುಖಜೀವನೇ । ನಿ ।
ರ್ಧಾರವಾಗಿಯೆ ಕಾವನೇ ॥ ಅಪ ॥

ಹಸಿವು ಎನ್ನುವ ಭೂತವು । ಬಾ ।
ಧಿಸಲು ಮರಣಕೆ ಹೇತುವು ॥
ಕುಸಿದು ಜೀವವು ಸೋತವು । ಇದು ।
ವಸುಧೆಯೊಳಗಪಘಾತವು ॥ 1 ॥

ಮಸಣವಾಯಿತು ಲೋಕವು । ನಿ ।
ಟ್ಟುಸಿರು ಕೂಡಿದ ಶೋಕವು ॥
ಮಸೆದು ನಿಂತಿದೆ ಕ್ಷಾಮವು । ದು ।
ರ್ದಶೆಗೆ ಜಗವೆ ವಿರಾಮವು ॥ 2 ॥

ಬಡವರಿಗೆ ದಿಕ್ಕಿಲ್ಲವು । ಬಾ ।
ಯ್ಬಿಡಲು ಕೊಡುವವರಿಲ್ಲವು ॥
ಪೊಡವಿ ಜೀವರಿಗೆಲ್ಲವು । ನೀ ।
ಕೊಡುವ ದಾನಿಯು ಬಲ್ಲೆವು ॥ 3 ॥

ಪಶುಗಳಂಬಾ ಎಂಬವು । ಎಳೆ ।
ಶಿಶುಗಳಮ್ಮಾ ಎಂಬವು ॥
ಹಸಿದು ಆತುರಗೊಂಬವು । ಜೀ ।
ವಿಸುವ ಆಸೆಯ ನಂಬವು ॥ 4 ॥

ಎತ್ತ ನೋಡಲು ಕುತ್ತವು । ಕುಣಿ ।
ಯುತ್ತ ಬರುತಿದೆ ಮೃತ್ಯುವು ॥
ಬತ್ತಿದುದು ಸಮಚಿತ್ತವು । ನಿ ।
ನ್ನತ್ತ ನರಹರಿ ಸತ್ಯವು ॥ 5 ॥



ಲೇಖಕರ ವಿಳಾಸ

**ಆರ್.ವಿಜಯರಾಘವನ್**
ಮುಖ್ಯ ವ್ಯವಸ್ಥಾಪಕರು (ನಿವೃತ್ತ) ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ಡಬ್ಲ್ಯು 14, 526, ಜಯನಗರ ಬಿ ಬ್ಲಾಕ್
ಕೋಲಾರ – 563102
99010263178

**ಪ್ರೊ.ಎಸ್.ಎ.ಕೃಷ್ಣಯ್ಯ**
(ಸಿಂಡಿಕೇಟ್ ಸದಸ್ಯರು: ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ)
ಪ್ರಾಚ್ಯಸಂಚಯ ಸಂಶೋಧನ ಕೇಂದ್ರ–ನಿರ್ದೇಶಕರು
7–22–ಸಿ "ಸುಮುಖಪ್ರಿಯ" ಪುರುಷೋತ್ತಮನಗರ
ಕುಂಜಿಬೆಟ್ಟು ಅಂಚೆ, ಉಡುಪಿ 576102, ಕರ್ನಾಟಕ
email: jiivaka@gmail.com

**ಡಾ.ವೆಂಕಟೇಶಇಂದ್ವಾಡಿ**
ಸಹ ಪ್ರಾಧ್ಯಾಪಕ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ ಹಂಪಿ


**ಡಾ. ಜಯಪ್ರಕಾಶ್ ಶೆಟ್ಟಿ ಹೆಚ್**
ತೆನೆ, ಸರ್ವಪ್ರಕಾಶನಗರ ಕುಂದಾಪುರ

**ಎಚ್.ದಂಡಪ್ಪ**
41, ಗೋಕುಲ, 6ನೇ ಕ್ರಾಸ್, 6ನೇ ಬ್ಲಾಕ್,
2ನೇ ಹಂತ, ನಾಗರಬಾವಿ
ಬೆಂಗಳೂರು 560072
9481485109
ಇ ವಿಳಾಸ : hdandappa@gmail.com

**ವಡ್ಡಗೆರೆ ನಾಗರಾಜಯ್ಯ**
ನಂ.388, ಬುದ್ಧಭೂಮಿ, 1ನೇ ಮುಖ್ಯರಸ್ತೆ, ಜಗಜ್ಯೋತಿನಗರ,
ಜ್ಞಾನಭಾರತಿ ಅಂಚೆ, ಬೆಂಗಳೂರು-560056
9448538412, 8722724174


**ಡಾ.ಎಸ್.ನಟರಾಜ ಬೂದಾಳು**
'ಗೌರಿ' ಶ್ರೀನಿಧಿ ಲೇಔಟ್, ಸಪ್ತಗಿರಿ ಬಡಾವಣೆ, ನಳಂದ ಶಾಲೆ ಹಿಂಬದಿ,
ತುಮಕೂರು-572102
9844387175
ಇ ವಿಳಾಸ : natarajbudal@gmail.com

**ಡಾ.ಹಿ.ಚಿ.ಬೋರಲಿಂಗಯ್ಯ**



ಕರ್ನಾಟಕ ಜಾನಪದ ಅಕಾಡೆಮಿ ತ್ರೈಮಾಸಿಕ ಪತ್ರಿಕೆ
ಏಪ್ರಿಲ್-ಜೂನ್ ೨೦೧೫ - ಸಂಪುಟ ೦೨ : ಸಂಚಿಕೆ ೦೨
ಬೆಂಬಲಬೆಲೆ : ರೂ.೨೫
'ಖಾಸಗಿ ಪ್ರಸಾರಕ್ಕಾಗಿ ಮಾತ್ರ'

# ಲೋಕ ಜಾನಪದ



karnataka jaanapada academy
Kannadabhavana, J.C Road, Bengaluru 560002 Chief Editor : Pichalli Srinivas. Publisher : B.N.Paraddi, Editor : Lakshmipathy Kolara